ಭಾನುವಾರ, ಆಗಸ್ಟ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 216 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ರಾಜಧಾನಿಯ ಈ ಹೂವಿನ ಮಾರುಕಟ್ಟೆಯಲ್ಲಿ ಅದೆಷ್ಟು ಬಗೆಯ ಹೂವುಗಳು, ಬದುಕುಗಳು, ಭಾವನೆಗಳು...

ಕೋಲ್ಕತ್ತ, ದೆಹಲಿ, ರಾಂಚಿಯಲ್ಲಿ ಮಳೆ ಆರ್ಭಟ 8
ಮೌಂಟ್ ಎವರೆಸ್ಟ್: 'ಭೂಮೇಲ್ಮೈ– ವಾಯುಮಂಡಲ ಸ್ಪಂದನೆ' ಅಧ್ಯಯನ 6
ಮನಮಿಡಿದ ನಾಡಿನಲ್ಲಿ ಸೌಹಾರ್ದದ 'ಸಂಸ್ಕಾರ' 10
ಕನ್ನಡದಲ್ಲೂ ರೈಲ್ವೆ ಪರೀಕ್ಷೆ ಬರೆಯಲು ಅವಕಾಶ: ಸೋಮಣ್ಣ 5

ಪಿಎಸ್ಐ ಪರಶುರಾಮ್ 'ಶಂಕಾಸ್ಪದ ಸಾವು'; ₹30 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟ ಆರೋಪ

ಶಾಸಕ, ಪುತ್ರನ ಮೇಲೆ ಎಫ್ಐಆರ್

ಪ್ರಜಾವಾಣಿ ವಾರ್ತೆ

ಯಾದಗಿರಿ: ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಹಾಗೂ ಅವರ ಪುತ್ರ ಪಂಪನಗೌಡ (ಸನ್ನಿಗೌಡ) ಅವರು ₹30 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಜಾತಿ ನಿಂದನೆ ಮಾಡಿರುವುದರಿಂದ ಪತಿ ಪಿಎಸ್ಐ ಪರಶುರಾಮ್ ಖಿನ್ನತೆಗೊಳಗಾಗಿ ಸಾವಿಗೀಡಾಗಿದ್ದಾರೆ ಎಂದು ಅವರ ಪತ್ನಿ ಶ್ವೇತಾ ಆರೋಪಿಸಿದ್ದಾರೆ. ಅವರು ನೀಡಿದ ದೂರಿನಂತೆ ನಗರ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ಪರಶುರಾಮ್

ಪರಿಶಿಷ್ಟ ಜಾತಿಗೆ ಸೇರಿದವರಾದ ಪರಶುರಾಮ್ (34) ಅವರು ಶುಕ್ರವಾರ ರಾತ್ರಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದರು. ಆದರೆ, ಪಿಎಸ್ಐ ಸಾವಿನ ಪ್ರಕರಣ ತಿರುವು ಪಡೆದಿದ್ದು, ಅವರ ಕುಟುಂಬದವರು ಹಾಗೂ ಪರಿಶಿಷ್ಟ ಜಾತಿಯ ಸಮುದಾಯದವರು ಸೇರಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಶನಿವಾರ ಪ್ರತಿಭಟಿಸಿ, ಸಾವಿಗೆ ಕಾರಣರಾದವರ ಮೇಲೆ ಕ್ರಮಕ್ಕೆ ಒತ್ತಾಯಿಸಿದ್ದಾರೆ.

'ನನ್ನ ಪತಿ ಕಳೆದ 7 ತಿಂಗಳಿಂದ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈಗ ಮತ್ತೆ ಅವರನ್ನು ಸಿಇಎನ್ (ಸೆನ್) ಠಾಣೆಗೆ ವರ್ಗಾವಣೆ ಮಾಡಿದ್ದರು. ನಗರ ಠಾಣೆಯಲ್ಲಿ ಮುಂದುವರಿಯಲು ₹30 ಲಕ್ಷ ನೀಡುವಂತೆ ಶಾಸಕರು ಹಾಗೂ ಅವರ ಪುತ್ರ ಬೇಡಿಕೆ ಇಟ್ಟಿದ್ದರು. ಇದರಿಂದ ಪತಿ ಮನನೊಂದಿದ್ದರು' ಎಂದು ಪತ್ನಿ ಶ್ವೇತಾ ದೂರಿನಲ್ಲಿ ತಿಳಿಸಿದ್ದಾರೆ.

'ಅವಧಿ ಮುಗಿಯುವವರೆಗೂ ನಗರ ಠಾಣೆಯಲ್ಲೇ ಮುಂದುವರಿಸುವಂತೆ ಹೇಳಿದಾಗ, ಶಾಸಕರು ಹಾಗೂ ಅವರ ಪುತ್ರ ಹಣ ಕೊಡದಿದ್ದರೆ ಇಲ್ಲಿ ಯಾಕೆ ಇರುತ್ತೀಯಾ ಎಂದು ಬೈದು ಜಾತಿ ನಿಂದನೆ ಮಾಡಿದ್ದಾರೆ. ಇದರಿಂದ ಪತಿ ಖಿನ್ನತೆಗೆ ಒಳಗಾಗಿದ್ದರು' ಎಂದು ಪತ್ನಿ ದೂರಿದ್ದಾರೆ.

10ನೇ ಪುಟ ನೋಡಿ

ಪ್ರಕರಣ ಸಿಐಡಿಗೆ ವಹಿಸಲು ರಾಜ್ಯ ಸರ್ಕಾರ ತೀರ್ಮಾನ

ಬೆಂಗಳೂರು: 'ಯಾದಗಿರಿ ಪಿಎಸ್ಐ ಸಾವಿನ ಪ್ರಕರಣದಲ್ಲಿ ಕೇಳಿಬರುತ್ತಿರುವ ಆರೋಪಗಳ ಬಗ್ಗೆ ತನಿಖೆ ನಡೆಸಲಾಗುವುದು. ಯಾರಿಗೂ ಅನ್ಯಾಯ ಆಗಲು ಅವಕಾಶ ಕೊಡುವುದಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಪಿಎಸ್ಐ ಪರಶುರಾಮ್ ಅವರಿಂದ ಶಾಸಕ ಚನ್ನಾರೆಡ್ಡಿ ಪಾಟೀಲ, ಅವರ ಪುತ್ರ ₹30 ಲಕ್ಷ ಲಂಚ ಕೇಳಿದ್ದರು ಎಂಬ ಆರೋಪದ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಅದು ಆರೋಪವಷ್ಟೆ. ತನಿಖೆಯಿಂದಷ್ಟೇ ನಿಜ ಗೊತ್ತಾಗಬೇಕಿದೆ' ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಶನಿವಾರ ಸಂಜೆ ಗೃಹಸಚಿವರು ಚರ್ಚೆ ನಡೆಸಿದರು. ಚರ್ಚೆಯ ಬಳಿಕ ಈ ಪ್ರಕರಣವನ್ನು ಸಿಐಡಿಗೆ ವಹಿಸಲು ನಿರ್ಧರಿಸಲಾಗಿದೆ.

ಡಿವೈಎಸ್‌ಪಿ ನೇತೃತ್ವದ ತಂಡ ರಚನೆ

'ಪಿಎಸ್ಐ ಪರಶುರಾಮ್ ಸಾವಿನ ವಿಚಾರವಾಗಿ ಪತ್ನಿ ನೀಡಿದ ದೂರಿನ ಬಗ್ಗೆ ತನಿಖೆ ನಡೆಸಲು ಡಿವೈಎಸ್‌ಪಿ ಜಾವೇದ್ ಇನಾಮ್ದಾರ್ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಮೂರು ದಿನಗಳ ಒಳಗೆ ಮರಣೋತ್ತರ ಪರೀಕ್ಷೆ ವರದಿ ಬರುವ ಅಂದಾಜು ಇದೆ. ಆ ಬಳಿಕ ಆರೋಪಿಗಳನ್ನು ಬಂಧಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ಚನ್ನಾರೆಡ್ಡಿ ಅವರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಪಡೆಯಬೇಕು ಮತ್ತು ಪಿಎಸ್ಐ ಸಾವಿನ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಚನ್ನಾರೆಡ್ಡಿ

ಪಂಪನಗೌಡ

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿದ್ದ 'ಮೈಸೂರು ಚಲೋ' ಪಾದಯಾತ್ರೆಗೆ ಕೆಂಗೇರಿಯಲ್ಲಿ ಶನಿವಾರ ಚಾಲನೆ ನೀಡಿದ ಬಿಜೆಪಿ–ಜೆಡಿಎಸ್ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಸಿ.ಎಂ ರಾಜೀನಾಮೆ, 10 ತಿಂಗಳಿಗೆ ಸರ್ಕಾರ ಪತನದ ಭವಿಷ್ಯ

'ಮಿತ್ರ'ರ ನಡೆ ಮೈಸೂರು ಕಡೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ನಿಮ್ಮ (ಕಾಂಗ್ರೆಸ್) ಭ್ರಷ್ಟಾಚಾರವನ್ನು ಬುಡ ಸಮೇತ ಕಿತ್ತೊಗೆಯಲು ನಾವು ಒಟ್ಟಾಗಿದ್ದೇವೆ' ಎಂದು ರಣಕಹಳೆ ಮೊಳಗಿಸಿ, ನಗಾರಿ ಬಾರಿಸುವ ಮೂಲಕ ಬಿಜೆಪಿ ಮತ್ತು ಜೆಡಿಎಸ್ ಮಿತ್ರಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಶನಿವಾರ 'ಮೈಸೂರು ಚಲೋ' ಆರಂಭಿಸಿದರು. 'ಯಾತ್ರೆ ಮೈಸೂರು ತಲುಪುವುದರ ಒಳಗೆ ಮುಖ್ಯಮಂತ್ರಿ ರಾಜೀನಾಮೆ ನೀಡುತ್ತಾರೆ. 10 ತಿಂಗಳ ಒಳಗೆ ಸರ್ಕಾರ ಪತನ ಖಚಿತ' ಎಂದೂ ಸಾರಿದರು.

ಪಾದಯಾತ್ರೆ ಸಂಬಂಧ ಕೊನೆಯ ಕ್ಷಣದಲ್ಲಿ ಸೃಷ್ಟಿಯಾಗಿದ್ದ ಮಿತ್ರ ಪಕ್ಷಗಳ ನಡುವಿನ ಗೊಂದಲ, ಮುನಿಸು ತಿಳಿಗೊಂಡ ಬಳಿಕ ನಿಗದಿಯಂತೆ ಕೆಂಗೇರಿಯ ಜೆ.ಕೆ ಗ್ರ್ಯಾಂಡ್ ಅರೆನಾ ಸೆಂಟರ್‌ನಿಂದ ಪಾದಯಾತ್ರೆ ಆರಂಭಗೊಂಡಿತು. ಎರಡೂ ಪಕ್ಷಗಳ ನಾಯಕರು ಒಗ್ಗಟ್ಟಿನಿಂದ ಹೆಜ್ಜೆ ಹಾಕಿದರು.

'ಮುಡಾ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿರುವ ಆರೋಪದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲೇಬೇಕು' ಎಂದು ಒತ್ತಾಯಿಸುವ ಮೂಲಕ ಕಾಂಗ್ರೆಸ್ ನಾಯಕರ ವಿರುದ್ಧ ತೊಡೆ ತಟ್ಟಿದರು. 'ತೊಲಗಲಿ, ತೊಲಗಲಿ ಕಾಂಗ್ರೆಸ್ ತೊಲಗಲಿ', 'ಧಿಕ್ಕಾರ, ಧಿಕ್ಕಾರ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಘೋಷಣೆಗಳನ್ನು ಮೊಳಗಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಅಕ್ರಮವಾಗಿ ಹಣ ವರ್ಗಾವಣೆಯ ನೈತಿಕ ಹೊಣೆ ಮುಖ್ಯಮಂತ್ರಿಯವರೇ ಹೊರಬೇಕು. ಪರಿಶಿಷ್ಟರ ಹಣವನ್ನು ದುರ್ಬಳಕೆ ಮಾಡಲಾಗಿದೆ.

> ಭ್ರಷ್ಟಾಚಾರದಲ್ಲಿ ಸಿಲುಕಿದ ಸಿದ್ದರಾಮಯ್ಯ ಅವರು ಪಾದಯಾತ್ರೆ ಮುಗಿಯುವ ಮೊದಲೇ ಗೌರವಯುತವಾಗಿ ರಾಜೀನಾಮೆ ಕೊಡುತ್ತಾರೆ ಎನ್ನುವ ವಿಶ್ವಾಸವಿದೆ
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ

> ರಾಹುಲ್ ಗಾಂಧಿ ಸೂಚನೆಯಂತೆ ಈ ಹಗರಣ ನಡೆದಿದೆ. ಹಣವನ್ನು ಚುನಾವಣೆಗೆ ಬಳಸಿದ್ದಾರೆ. ಸಿ.ಎಂ.ಗೆ ನೋಟಿಸ್ ಕೊಟ್ಟಿದ್ದು ಸರಿಯಿದೆ
> **ರಾಧಾಮೋಹನ್‌ದಾಸ್ ಅಗರ್‌ವಾಲ್,** ರಾಜ್ಯ ಬಿಜೆಪಿ ಉಸ್ತುವಾರಿ

8ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 8

'ಕಪ್ಪು–ಬಿಳುಪು ಟಿ.ವಿಯವರ ಆಸ್ತಿ ₹1,400 ಕೋಟಿ'

'ದೇವೇಗೌಡರು ಎಷ್ಟು ಆಸ್ತಿ ಮಾಡಿದ್ದಾರೆ ಎಂದು ಪ್ರಶ್ನೆ ಕೇಳುವ ಮೊದಲು ಕಪ್ಪು–ಬಿಳುಪು ಟಿ.ವಿ, ಡಿವಿಡಿ ಇಟ್ಟುಕೊಂಡು ಜನರಿಗೆ ಸಿನಿಮಾ ತೋರಿಸುತ್ತಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ₹1,400 ಕೋಟಿ ಆಸ್ತಿಯ ಒಡೆಯರು ಹೇಗಾದರು ಎಂದು ಹೇಳಲಿ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಪಾದಯಾತ್ರೆಗೆ ಚಾಲನೆ ನೀಡಿದ ನಂತರ ಮಾತನಾಡಿದ ಅವರು, 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನೆಗಳಿಗೆ ಬಿಡದಿ, ರಾಮನಗರದಲ್ಲೇ ಉತ್ತರ ಕೊಡುತ್ತೇನೆ. ಅವರ ಆಸ್ತಿ ಎಷ್ಟಿದೆ ಎನ್ನುವುದರ ಲೆಕ್ಕ ಕೊಡುತ್ತೇನೆ' ಎಂದರು.

'ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರ ಆಸ್ತಿ, ಅಕ್ರಮಗಳ ದಾಖಲೆ ಪತ್ರಗಳನ್ನು ನಾನೇ ಕೇಂದ್ರ ಸರ್ಕಾರಕ್ಕೆ ಕೊಟ್ಟಿದೇನೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಅಂದರೆ ಅವರು ಜೈಲಿಗೆ ಹೋಗುವುದು ಮನವರಿಕೆಯಾಗಿದೆ. ಇನ್ನೂ ಹತ್ತು ವರ್ಷ ನಮ್ಮದೇ ಅಧಿಕಾರ ಎಂದು ಬೀಗುತ್ತಿದ್ದಾರೆ. ಹತ್ತು ವರ್ಷದ ಮಾತಿರಲಿ, ಹತ್ತು ತಿಂಗಳು ಅಧಿಕಾರದಲ್ಲಿ ಇರಲಿ ನೋಡೋಣ' ಎಂದು ಸವಾಲೆಸೆದರು.

'ಹಿಂದುಳಿದ ವರ್ಗಗಳ ನಾಯಕರು ಎರಡನೇ ಬಾರಿ ಮುಖ್ಯಮಂತ್ರಿ ಆಗಿರುವುದಕ್ಕೆ ಕೆಲವರಿಗೆ ಹೊಟ್ಟೆ ಉರಿ ಎನ್ನುತ್ತಾರೆ. ಒಳ್ಳೆಯ ಕೆಲಸ ಮಾಡಿದರೆ ಯಾರಿಗೆ ಹೊಟ್ಟೆ ಉರಿ ಏಕೆ ಬರುತ್ತದೆ? ಹಣ ಕೊಳ್ಳೆ ಹೊಡೆಯೋದು ಸಾಮಾಜಿಕ ನ್ಯಾಯವೇ. ಯಾದಗಿರಿಯಲ್ಲಿ ಪೊಲೀಸ್ ಅಧಿಕಾರಿ ಏಕೆ ಜೀವ ಕಳೆದುಕೊಂಡರು' ಎಂದು ಪ್ರಶ್ನಿಸಿದರು.

8ನೇ ಪುಟ ನೋಡಿ

ಒಳನೋಟ
ಕೋಚಿಂಗ್ ಕೇಂದ್ರ: ಸೌಲಭ್ಯಗಳೇ ಇಲ್ಲ! 4

ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಮೂವರ ಸಾವು: ಎರಡು ತುಂಡಾದ ಕಾರು

ಪ್ರಜಾವಾಣಿ ವಾರ್ತೆ

ಕೋಲಾರ: ನಗರ ಹೊರವಲಯದ ಕೋಲಾರ-ಬಂಗಾರಪೇಟೆ ಮುಖ್ಯ ರಸ್ತೆಯ ಸಹಕಾರ ನಗರ ಬಳಿ ಶನಿವಾರ ನಸುಕಿನಲ್ಲಿ ಸಂಭವಿಸಿದ ಔಡಿ ಕಾರು ಅಪಘಾತದಲ್ಲಿ ಇಬ್ಬರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಗೂ ಅವರ ಸ್ನೇಹಿತ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಾಸನದ ಹರ್ಷವರ್ಧನ್, ಬಳ್ಳಾರಿಯ ಬಸನಗೌಡ ಹಾಗೂ ಕೋಲಾರ ಜಿಲ್ಲೆ ಬಂಗಾರಪೇಟೆಯ ಪ್ರಜ್ವಲ್ ಮೃತರು. ಕಾರಿನಲ್ಲಿದ್ದ ಮತ್ತೊಬ್ಬ ವಿದ್ಯಾರ್ಥಿ, ಬಂಗಾರಪೇಟೆಯ ಸಾಯಿ ಗಗನ್ ಅಪಾಯದಿಂದ ಪಾರಾಗಿದ್ದಾರೆ. ಈ ಎಲ್ಲರೂ 22–23 ವರ್ಷದವರು ಎಂದು ಪೊಲೀಸರು ತಿಳಿಸಿದ್ದಾರೆ.

ಹರ್ಷವರ್ಧನ್, ಬಸನಗೌಡ ಹಾಗೂ ಸಾಯಿ ಗಗನ್ ಈ ಮೂವರೂ ಬೆಂಗಳೂರಿನ ರೇವಾ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಗಳು. ಇವರ ಸ್ನೇಹಿತ ಪ್ರಜ್ವಲ್ ಬಂಗಾರಪೇಟೆಯಲ್ಲಿ ಹಣಕಾಸು ವ್ಯವಹಾರ ನಡೆಸುತ್ತಿದ್ದ.

ವೇಗವಾಗಿ ಬಂದ ಕಾರು ಆರ್‌.ವಿ. ಕಾಲೇಜು ಬಳಿ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಔಡಿ ಕಾರು ಸಂಪೂರ್ಣ ನಜ್ಜುಗುಜ್ಜಾಗಿ ಎರಡು ತುಂಡಾಗಿದೆ. ಅತಿ ವೇಗವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಲಾರದಲ್ಲಿ ಶನಿವಾರ ನಸುಕಿನಲ್ಲಿ ನಡೆದ ಅಪಘಾತದಲ್ಲಿ ಸಂಪೂರ್ಣ ನಜ್ಜುಗುಜ್ಜಾಗಿರುವ ಔಡಿ ಕಾರು

ಹರ್ಷವರ್ಧನ್

ಬಸನಗೌಡ

ಪ್ರಜ್ವಲ್

ಕಾಲೇಜಿಗೆ ರಜೆ ಇದ್ದ ಕಾರಣ ಬಂಗಾರಪೇಟೆ ಸ್ನೇಹಿತನ ಮನೆಗೆ ಹೋಗುವುದಾಗಿ ಪೋಷಕರಿಗೆ ತಿಳಿಸಿ ಬೇರೊಬ್ಬ ಸ್ನೇಹಿತನೊಬ್ಬನ ಔಡಿ ಕಾರು ತೆಗೆದುಕೊಂಡು ಬಂದಿದ್ದರು ಎಂಬುದು ಗೊತ್ತಾಗಿದೆ. ತಡರಾತ್ರಿ ಬಂಗಾರಪೇಟೆಯಿಂದ ಬೆಂಗಳೂರು ಕಡೆಗೆ ಹೊರಟಿದ್ದರು. ಭಾನುವಾರ ಹರ್ಷವರ್ಧನ್ ಜನ್ಮದಿನ ಆಚರಣೆಗೆ ಸಿದ್ಧತೆ ನಡೆದಿತ್ತು.

'ಅಕ್ಕನ ಮದುವೆಗೆ ಸಿದ್ಧತೆ ನಡೆಯುತ್ತಿದ್ದು ಅವರೆಲ್ಲಾ ಬಂಗಾರಪೇಟೆಯ ನನ್ನ ಮನೆಗೆ ಬಂದಿದ್ದರು. ಬೆಂಗಳೂರಿನಲ್ಲಿ ಮದುವೆ ಆಮಂತ್ರಣ ಪತ್ರಿಕೆ ಹಂಚಿ ಬೇಗನೆ ವಾಪಸ್ ಬರಲು ಹೊರಟಿದ್ದೆವು. ಓವರ್‌ಟೇಕ್ ಮಾಡುವಾಗ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿತು. ಓವರ್ ಸ್ಪೀಡ್ ಇರಲಿಲ್ಲ. ನಾವೆಲ್ಲಾ ಎಂಜಿನಿಯರಿಂಗ್ ಸಹಪಾಠಿಗಳು. ನಾನು ಹಿಂಬದಿಯಲ್ಲಿ ಕುಳಿತಿದ್ದೆ' ಎಂದು ಅಘಾತದಲ್ಲಿ ಬದುಕುಳಿದ ಸಾಯಿ ಗಗನ್ ಪ್ರತಿಕ್ರಿಯಿಸಿದರು.

ಬಸನಗೌಡ ಪೋಷಕರು ಬಳ್ಳಾರಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಹರ್ಷವರ್ಧನ್ ಹಾಗೂ ಪ್ರಜ್ವಲ್ ಪೋಷಕರು ಅವರ ಊರಿನಲ್ಲಿ ಹಣಕಾಸು ವ್ಯವಹಾರ ಮಾಡುತ್ತಾರೆ ಎಂದು ತಿಳಿದು ಬಂದಿದೆ.

> ವಾಹನವೊಂದನ್ನು ಹಿಂದಿಕ್ಕಲು ಹೋಗಿ ಮರಕ್ಕೆ ಕಾರು ಡಿಕ್ಕಿಯಾಗಿದೆ. ಅತಿ ವೇಗವೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಕಾರಿನಲ್ಲಿದ್ದವರ ರಕ್ತ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿದ್ದೇವೆ
> **ನಿಖಿಲ್ ಬಿ.,** ಎಸ್‌ಪಿ

ಗೃಹ ಸಚಿವಾಲಯದ ಕಾರ್ಯವೈಖರಿ: ಚರ್ಚೆಗೆ ಪಟ್ಟು ಸಿದ್ಧತೆ

ನವದೆಹಲಿ: ಗೃಹ ಸಚಿವಾಲಯದ ಕಾರ್ಯವೈಖರಿ ಕುರಿತು ರಾಜ್ಯಸಭೆಯಲ್ಲಿ ಚರ್ಚಿಸಬೇಕು ಎಂಬ 'ಇಂಡಿಯಾ' ಬೇಡಿಕೆಯನ್ನು ನಿರಾಕರಿಸಲಾಗಿದೆ. ಇದನ್ನೇ ಮತ್ತೆ ಪ್ರಸ್ತಾಪಿಸಲು 'ಇಂಡಿಯಾ' ಸಿದ್ಧತೆ ನಡೆಸಿದೆ. 9

ಕಲಾವಿದೆ ಯಾಮಿನಿ ಕೃಷ್ಣಮೂರ್ತಿ ನಿಧನ

ನವದೆಹಲಿ (ಪಿಟಿಐ): ಭರತನಾಟ್ಯ ಮತ್ತು ಕೂಚುಪುಡಿಯ ಹೆಸರಾಂತ ನೃತ್ಯ ಕಲಾವಿದೆ ಯಾಮಿನಿ ಕೃಷ್ಣಮೂರ್ತಿ (84) ಅವರು ಇಲ್ಲಿನ ಅಪೊಲೊ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. 9

ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲು

ಇಂಫಾಲ (ಪಿಟಿಐ): ಮೈತೇಯಿ ಮತ್ತು ಹಮಾರ್ ಸಮುದಾಯದ ನಡುವೆ ಒಪ್ಪಂದವಾಗಿ 24 ಗಂಟೆ ಕಳೆಯುವ ಮೊದಲೇ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ನಡೆದಿದ್ದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮಣಿಪುರದ ಜಿರಿಬಾಮ್‌ನಲ್ಲಿ ಗುಂಡಿನ ದಾಳಿ ನಡೆಸಿ, ಮನೆಯೊಂದಕ್ಕೆ ಬೆಂಕಿ ಹಚ್ಚಲಾಗಿದೆ. ಲಾಲ್ಪಾನಿ ಗ್ರಾಮದಲ್ಲಿ ನಿವಾಸಿಗಳು ತ್ಯಜಿಸಿದ್ದ ಮನೆಯನ್ನು ಶಸ್ತ್ರಸಜ್ಜಿತ ವ್ಯಕ್ತಿಗಳು ಶುಕ್ರವಾರ ರಾತ್ರಿ ಸುಟ್ಟು ಹಾಕಿದ್ದಾರೆ. ಅಲ್ಲದೆ, ಗ್ರಾಮವನ್ನು ಗುರಿಯಾಗಿಸಿ ಹಲವು ಸುತ್ತು ಶೆಲ್ ಮತ್ತು ಗುಂಡಿನ ದಾಳಿ ನಡೆಸಿದರು. ಘಟನೆಯ ನಂತರ ಭದ್ರತಾ ಪಡೆಗಳು ಈ ಪ್ರದೇಶಕ್ಕೆ ದೌಡಾಯಿಸಿವೆ ಎಂದು ಅವರು ಹೇಳಿದರು.

'ಈ ಪ್ರದೇಶದಲ್ಲಿ ಮೈತೇಯಿ ಸಮುದಾಯದ ಕೆಲವರು ವಾಸಿಸುತ್ತಿದ್ದರು. ಜಿಲ್ಲೆಯಲ್ಲಿ ಹಿಂಸಾಚಾರ ಭುಗಿಲೆದ್ದ ನಂತರ ಮೈತೇಯಿ ಸಮುದಾಯದವರು ಈ ಪ್ರದೇಶ ತೊರೆದಿದ್ದರಿಂದ ಮನೆಗಳು ಖಾಲಿ ಬಿದ್ದಿವೆ. ಈ ಭಾಗದಲ್ಲಿನ ಭದ್ರತಾ ಲೋಪಗಳ ಲಾಭ ಪಡೆದ ದುಷ್ಕರ್ಮಿಗಳು ಮನೆಗೆ ಬೆಂಕಿ ಹಚ್ಚಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ನೆರೆಯ ಅಸ್ಸಾಂನ ಕ್ಯಾಚಾರ್‌ನಲ್ಲಿರುವ ಸಿಆರ್‌ಪಿಎಫ್ ಕೇಂದ್ರದಲ್ಲಿ ಗುರುವಾರ ನಡೆದ ಸಭೆಯಲ್ಲಿ ಮೈತೇಯಿ ಮತ್ತು ಹಮಾರ್ ಸಮುದಾಯಗಳ ಪ್ರತಿನಿಧಿಗಳು ಶಾಂತಿ ಒಪ್ಪಂದಕ್ಕೆ ಬಂದಿದ್ದರು.

ಜಿರಿಬಾಮ್ ಜಿಲ್ಲಾಡಳಿತ, ಅಸ್ಸಾಂ ರೈಫಲ್ಸ್ ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಸಮ್ಮುಖದಲ್ಲಿ ಸಭೆ ನಡೆದಿತ್ತು. ಜಿಲ್ಲೆಯ ತಾಡೌ, ಪೈಟೆ ಮತ್ತು ಮಿಜೋ ಸಮುದಾಯದ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಮುಂದಿನ ಸಭೆ ಆಗಸ್ಟ್ 15 ರಂದು ನಡೆಯಲಿದೆ.

ಮುಖ್ಯಾಂಶಗಳು
- ಗುಂಡಿನ ದಾಳಿ, ಮನೆಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು
- ಮೈತೇಯಿ ಸಮುದಾಯ ವಾಸವಿದ್ದ ಗ್ರಾಮದಲ್ಲಿ ಘಟನೆ
- ಭದ್ರತಾ ಲೋಪ: ಆರೋಪ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳಪುಟಗಳಲ್ಲಿ

ಪರಿಸರ ಪ್ರಕರಣಗಳ ಇತ್ಯರ್ಥಕ್ಕೆ 'ಹಸಿರು ಪೀಠ' ಸ್ಥಾಪಿಸಲು ಮನವಿ 9
ಬೇಳೆಕಾಳು ಆಮದು ದುಪ್ಪಟ್ಟು 6
ಭಾಕರ್ ಕೈತಪ್ಪಿದ ಮೂರನೇ ಪದಕ: ಮನ ಗೆದ್ದ ಮನು 11

ಬಿಬಿಎಂಪಿಯ ಜಾಹೀರಾತು ನೀತಿ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕೃತ ಜಾಹೀರಾತು ಏಜೆನ್ಸಿಗಳಿಂದ ಬಾಕಿ ಇರುವ ₹646 ಕೋಟಿ ಶುಲ್ಕವನ್ನು ಬಿಬಿಎಂಪಿ ವಸೂಲಿ ಮಾಡಬೇಕು. ಹೊಸ ಜಾಹೀರಾತು ನೀತಿಯನ್ನು ಹಿಂಪಡೆಯಬೇಕು' ಎಂದು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್. ಆರ್. ರಮೇಶ್ ಆಗ್ರಹಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ರಮೇಶ್, 'ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಅಳತೆಗಳ ಜಾಹೀರಾತು ಫಲಕಗಳನ್ನು ಅಳವಡಿಸುವ ಗುತ್ತಿಗೆಯನ್ನು ಪಡೆದಿರುವ ಒಟ್ಟು 110 ಅಧಿಕೃತ ಜಾಹೀರಾತು ಏಜೆನ್ಸಿಗಳು ಮತ್ತು 2,621 ಅನಧಿಕೃತ ಜಾಹೀರಾತು ಏಜೆನ್ಸಿಗಳು ಇವೆ. ಅಧಿಕೃತ ಏಜೆನ್ಸಿಗಳಿಂದಲೇ ₹331 ಕೋಟಿ ಶುಲ್ಕ ಬಾಕಿ ಇದೆ. ಪಿಪಿಪಿ ಮಾದರಿಯ ಸ್ಕೈವಾಕ್, ಬಸ್ ತಂಗುದಾಣ, ಹೈಟೆಕ್ ಶೌಚಾಲಯಗಳ ಮೇಲಿನ ಜಾಹೀರಾತು ಶುಲ್ಕದಿಂದ ₹314 ಕೋಟಿ ಬಾಕಿ ಇದೆ' ಎಂದಿದ್ದಾರೆ.

'ಎಲ್ಲ ರೀತಿಯ ಜಾಹೀರಾತು ಫಲಕಗಳನ್ನು ನಿಷೇಧಿಸಬೇಕೆಂದು ಹೈಕೋರ್ಟ್ ಮಧ್ಯಂತರ ಆದೇಶವನ್ನೂ ನೀಡಿದೆ. ವಾಹನಗಳ ಮೇಲೆ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ ಎಂದು 2009ರ ಸೆಪ್ಟೆಂಬರ್ 1ರಂದು ಸರ್ಕಾರಿ ಆದೇಶವೂ ಆಗಿದೆ. ಇಷ್ಟಾದರೂ ಹೊಸ ಜಾಹೀರಾತು ನೀತಿ ಜಾರಿಗೆ ತರಲು ಮುಂದಾಗಿರುವುದು ಸರಿಯಲ್ಲ' ಎಂದು ಹೇಳಿದ್ದಾರೆ.

'ರಸ್ತೆ ಬದಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸುವುದರಿಂದ ಅಪಘಾತಗಳು ಸಂಭವಿಸುವ ಅವಕಾಶಗಳೇ ಅಧಿಕವಾಗಿರುತ್ತದೆ ಎಂಬ ಬೆಂಗಳೂರು ಸಂಚಾರ ಪೊಲೀಸರ ಅಭಿಪ್ರಾಯವನ್ನೂ ಸರ್ಕಾರ ಮತ್ತು ಬಿಬಿಎಂಪಿ ಕಡೆಗಣಿಸಿದೆ' ಎಂದು ದೂರಿದ್ದಾರೆ.

'ವಂಚಕ ಜಾಹೀರಾತು ಏಜೆನ್ಸಿಗಳು ಮತ್ತು ಪ್ರಭಾವಶಾಲಿ ರಾಜಕಾರಣಿಗಳು, ಅಧಿಕಾರಿಗಳಿಗೆ ಮಾತ್ರ ಹತ್ತಾರು ಕೋಟಿ ರೂಪಾಯಿ ಅಕ್ರಮ ಸಂಪಾದನೆಗೆ ದಾರಿ ಮಾಡಿಕೊಡುವ ಏಕೈಕ ದುರುದ್ದೇಶದಿಂದ 'ಹೊಸ ಜಾಹೀರಾತು ನೀತಿ - 2024' ಜಾರಿ ಮಾಡಲಾಗುತ್ತಿದೆ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ಅಭಿವೃದ್ಧಿ ಸಚಿವ ಡಿ. ಕೆ. ಶಿವಕುಮಾರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಗಾರರು, ಮುಖ್ಯ ಆಯುಕ್ತರು ಪರಿಗಣಿಸಿ, ನೀತಿಯನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

ಡಿಡಿಯುಟಿಟಿಎಲ್ ಅಕ್ರಮ: ಎಂಟು ಖಾತೆದಾರರು ಪತ್ತೆ

30ಕ್ಕೂ ಹೆಚ್ಚು ಖಾತೆಗೆ ಹಣ ವರ್ಗ

• ಕೆ.ಎಸ್.ಸುನಿಲ್

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ (ಡಿಡಿಯುಟಿಟಿಎಲ್) ನಡೆದಿರುವ ಅಕ್ರಮದ ತನಿಖೆ ಚುರುಕುಗೊಳಿಸಿರುವ ಸಿಐಡಿ ಪೊಲೀಸರು, ಆರೋಪಿಗಳು 30ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿ, ನಗದೀಕರಿಸಿರುವುದನ್ನು ಪತ್ತೆ ಹಚ್ಚಿದ್ದಾರೆ.

ಹಣ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವ್ಯಕ್ತಿಯೊಬ್ಬ ತಲೆ ಮರೆಸಿಕೊಂಡಿದ್ದು, ಆತನ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

30 ಬ್ಯಾಂಕ್ ಖಾತೆಗಳ ಪೈಕಿ ಎಂಟು ಬ್ಯಾಂಕ್ ಖಾತೆದಾರರನ್ನು ಸಿಐಡಿ ಕಚೇರಿಗೆ ಕರೆಯಿಸಿ ವಿಚಾರಣೆ ನಡೆಸಲಾಗಿದೆ. ವಿಚಾರಣೆ ವೇಳೆ ಹಲವು ಮಾಹಿತಿಗಳು ಲಭ್ಯವಾಗಿವೆ. ಮೇಲ್ನೋಟಕ್ಕೆ ಕೋಟ್ಯಂತರ ರೂಪಾಯಿ ವರ್ಗಾವಣೆ ಆಗಿರುವುದು ಕಂಡುಬಂದಿದೆ. ಹಣದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಕೋಟ್ಯಂತರ ರೂಪಾಯಿ ವರ್ಗಾವಣೆ ಶಂಕೆ
- ಕಾಮಗಾರಿ ನಡೆಯದಿದ್ದರೂ ಬಿಲ್ ಪಾವತಿ ಕುರಿತು ಸಿಐಡಿ ತನಿಖೆ
- 22 ಖಾತೆದಾರರ ವಿಚಾರಣೆ ಬಳಿಕ ಮಾಹಿತಿ ಆಧರಿಸಿ ಮುಂದಿನ ಕ್ರಮ

ನಿಗಮದ ಮಾಜಿ ಅಧ್ಯಕ್ಷ ಡಿ.ಎಸ್. ವೀರಯ್ಯ ಅವರ ಖಾತೆಗೆ ಗುತ್ತಿಗೆದಾರರಿಂದ ₹3 ಕೋಟಿ ಸಂದಾಯ ಆಗಿರುವುದಕ್ಕೆ ಸಿಐಡಿಗೆ ಪುರಾವೆಗಳು ಸಿಕ್ಕಿದ್ದವು. ಈ ಜಾಡು ಬೆನ್ನು ಹತ್ತಿದ್ದ ತನಿಖಾ ತಂಡಕ್ಕೆ ಅನ್ಯ ವ್ಯಕ್ತಿಗಳ ಹಲವು ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಿಕೊಂಡು, ಆರೋಪಿಗಳು ಹಣ ಡ್ರಾ ಮಾಡಿರುವುದು ಗೊತ್ತಾಗಿದೆ. ಉಳಿದ 22 ಖಾತೆದಾರರನ್ನು ಕರೆಯಿಸಿ ವಿಚಾರಣೆ ನಡೆಸಲಾಗುವುದು. ಅವರು ನೀಡುವ ಮಾಹಿತಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

'ಅಕ್ರಮದಿಂದ ಬಂದ ಹಣವನ್ನು ಆರೋಪಿಗಳು ಮನೆ ನಿರ್ಮಾಣ ಹಾಗೂ ನಿವೇಶನ ಖರೀದಿಗೆ ಬಳಕೆ ಮಾಡಿರುವುದನ್ನೂ ಈಗಾಗಲೇ ಪತ್ತೆ ಮಾಡಲಾಗಿದೆ. ಎಲ್ಲೆಲ್ಲಿ ಹಣ ಹೂಡಿಕೆ ಮಾಡಿದ್ದಾರೆ ಎಂಬುದರ ಮಾಹಿತಿಯನ್ನೂ ಕಲೆ ಹಾಕಲಾಗುತ್ತಿದೆ' ಎಂದು ಅವರು ಹೇಳಿದರು.

ಡಿಡಿಯುಟಿಟಿಎಲ್‌ನಲ್ಲಿ 2021ರಿಂದ 2023ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಸಿ.ಎನ್. ಶಿವಪ್ರಕಾಶ್ ಅವರು ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. 2023ರ ಸೆಪ್ಟೆಂಬರ್ 23ರಂದು ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವಹಿಸಿತ್ತು.

'ಎಂ.ಡಿಗೆ ಕಮಿಷನ್ ರೂಪದಲ್ಲಿ ಹಣ'

'ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಎಸ್. ಶಂಕರಪ್ಪ ಅವರ ಬ್ಯಾಂಕ್ ಖಾತೆಯನ್ನು ಪರಿಶೀಲಿಸಲಾಗಿದೆ. ಶಂಕರಪ್ಪ ಅವರು ಅಕ್ರಮಕ್ಕೆ ಸಹಕಾರ ನೀಡಿರುವುದು ಗೊತ್ತಾಗಿದೆ. ಅವರು ತಮ್ಮ ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಂಡಿಲ್ಲ. ಆದರೆ, ಪ್ರತಿ ಬಿಲ್‌ಗೆ ನಿಗದಿತ ಮೊತ್ತದ ಕಮಿಷನ್ ಪಡೆದಿರುವುದು ತನಿಖೆಯಿಂದ ಗೊತ್ತಾಗಿದೆ. ಎಲ್ಲ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸಿದ ನಂತರ ಶಂಕರಪ್ಪ ಅವರು ಎಷ್ಟು ಹಣ ಪಡೆದಿದ್ದರು ಎಂಬುದು ಗೊತ್ತಾಗಲಿದೆ' ಎಂದು ಮೂಲಗಳು ಹೇಳಿವೆ.

'₹ 47.10 ಕೋಟಿ ಹಣ ವರ್ಗಾವಣೆ ಕಡತಗಳಿಗೆ ಶಂಕರಪ್ಪ ಅವರೇ ಸಹಿ ಮಾಡಿದ್ದಾರೆ. 600ಕ್ಕೂ ಅಧಿಕ ಕಾಮಗಾರಿಗಳು ನಡೆದಿಲ್ಲವಾದರೂ ಬಿಲ್ ಮಾಡಿ, ಹಣ ಪಡೆದುಕೊಳ್ಳಲಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ರಾಜಕಾಲುವೆ ಬಫರ್ ಝೋನ್‌ನಲ್ಲಿ ರಸ್ತೆ: ಪ್ರಕ್ರಿಯೆ ಆರಂಭ

ಬೆಂಗಳೂರು: ಥಣಿಸಂದ್ರದಿಂದ ಹೆಣ್ಣೂರು ಮುಖ್ಯ ರಸ್ತೆಯ ನಡುವಿರುವ ರಾಜಕಾಲುವೆಯ ಬಫರ್ ಝೋನ್‌ನಲ್ಲಿ ಸರ್ವೀಸ್ ರಸ್ತೆ ನಿರ್ಮಿಸಲು ಬಿಬಿಎಂಪಿ ಅಧಿಕೃತ ಪ್ರಕ್ರಿಯೆ ಆರಂಭಿಸಿದೆ.

ಹೆಬ್ಬಾಳ ರಕ್ಷಣಾ ಪ್ರದೇಶದಿಂದ (ಸರೋವರ ಲೇಔಟ್) ಥಣಿಸಂದ್ರ ಮುಖ್ಯ ರಸ್ತೆವರೆಗಿನ ರಾಜಕಾಲುವೆ ಬಫರ್ ಝೋನ್‌ನಲ್ಲಿ ಸರ್ವೀಸ್ ರಸ್ತೆ ನಿರ್ಮಾಣ, ಥಣಿಸಂದ್ರ ಮುಖ್ಯರಸ್ತೆಯಿಂದ ಹೆಣ್ಣೂರು ಮುಖ್ಯರಸ್ತೆವರೆಗಿನ ರಾಜಕಾಲುವೆಯ ರಕ್ಷಣೆ, ಮರು ಅಭಿವೃದ್ಧಿ ಹಾಗೂ ಸರ್ವೀಸ್ ರಸ್ತೆ ನಿರ್ಮಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಆಹ್ವಾನಿಸಲಾಗಿದೆ.

ಒಟ್ಟಾರೆ 7.75 ಕಿ.ಮೀ ಉದ್ದವಿರುವ ರಾಜಕಾಲುವೆ ಅಭಿವೃದ್ಧಿ, ಸರ್ವೀಸ್ ರಸ್ತೆ ನಿರ್ಮಾಣ ಸೇರಿದಂತೆ ಟಿಡಿಆರ್ ಸೇರಿದಂತೆ ಯೋಜನೆಯ ಒಟ್ಟು ವೆಚ್ಚವನ್ನು ಒಳಗೊಂಡ 3ಡಿ ಪರಿಕಲ್ಪನೆಯ ಡಿಪಿಆರ್ ವರದಿ ಸಲ್ಲಿಸಲು ಸೂಚಿಸಲಾಗಿದೆ.

ಯಲಹಂಕ ವಲಯದ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ಆಗಸ್ಟ್ 1ರಂದು ಟೆಂಡರ್ ಆಹ್ವಾನಿಸಿದ್ದಾರೆ. ಆಗಸ್ಟ್ 12ರವರೆಗೆ ಬಿಡ್ ಸಲ್ಲಿಸಲು ಅವಕಾಶವಿದ್ದು, ಆರು ತಿಂಗಳಲ್ಲಿ ಡಿಪಿಆರ್ ಪೂರ್ಣಗೊಳಿಸಬೇಕು ಎಂದು ಹೇಳಲಾಗಿದೆ.

ಹಕ್ಕುಪತ್ರ ನೀಡಲು ಆಗ್ರಹ

ಕೆ.ಆರ್.ಪುರ: ನಿವೇಶನ ರಹಿತ ಬಡವರಿಗೆ ಹಕ್ಕುಪತ್ರ ನೀಡುವಂತೆ ಹಾಗೂ ಅವರು ವಾಸಿಸುವ ಪ್ರದೇಶದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಪ್ರಜಾ ವಿಮೋಚನಾ ಚಳವಳಿಯ ನೂರಾರು ಕಾರ್ಯಕರ್ತರು ಬೊಮ್ಮನಹಳ್ಳಿ ಸಮೀಪವಿರುವ ಕಾರ್ಯನಿರ್ವಹಣಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಬೈಯಪ್ಪನಹಳ್ಳಿ ಮತ್ತು ಚಿಕ್ಕಬನಹಳ್ಳಿ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ವಾಸಿಸುವ ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿಲ್ಲ. ಇವರು ವಾಸಿಸುವ ಪ್ರದೇಶದಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು. ಸಂಘಟನೆಯ ರಾಜ್ಯಾಧ್ಯಕ್ಷ ಆನೇಕಲ್ ಕೃಷ್ಣಪ್ಪ ರಾಜ್ಯ ಕಾರ್ಯದರ್ಶಿ ಆದೂರು ದೇವರಾಜ್, ಸಂಘಟನೆಯ ಎಸ್. ಕೆ.ಮಾದೇಶ್, ಗಣೇಶ್, ವಿಜಯ್ ಕುಮಾರ್, ಗುಲ್ಫ್ ಜಾನ್, ರಾಜೇಶ್, ರವಿ, ಪರಶುರಾಮ್ ಇದ್ದರು.

ಬಿಡಿಎ: ₹57 ಕೋಟಿ ಮೌಲ್ಯ ಆಸ್ತಿ ಮರುವಶ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 1ರಿಂದ 8ನೇ ಬ್ಲಾಕ್‌ನಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿದ ಬಿಡಿಎ, ಸುಮಾರು ₹57 ಕೋಟಿ ಮೌಲ್ಯದ ಆಸ್ತಿಯನ್ನು ಮರುವಶಪಡಿಸಿಕೊಂಡಿದೆ. ಬಡಾವಣೆಯ ಸುಮಾರು 7 ಕಿ.ಮೀ. ಉದ್ದದ ಪಾದಚಾರಿ ಮಾರ್ಗದ ಮೇಲೆ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್‌ಗಳು, ಅಂಗಡಿಗಳು ಮತ್ತು ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲಾಯಿತು ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

'ದಲಿತ ಅಧಿಕಾರಿ ಸಾವು, ಸಿಬಿಐ ತನಿಖೆ ಆಗಲಿ'

ಬೆಂಗಳೂರು: 'ಪ್ರಾಮಾಣಿಕ, ದಕ್ಷ ಅಧಿಕಾರಿಗಳಿಗೆ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರದಲ್ಲಿ ಉಳಿಗಾಲವಿಲ್ಲ. ಪಿಎಸ್‌ಐ ಪರಶುರಾಮ್ ಸಾವಿನ ಪ್ರಕರಣದಲ್ಲಿ, ಚೆನ್ನಾರೆಡ್ಡಿ ಅವರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಪಡೆಯಬೇಕು ಮತ್ತು ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

'ಮುಖ್ಯಮಂತ್ರಿ ಮತ್ತು ಸಚಿವರೇ ಭ್ರಷ್ಟಾಚಾರಕ್ಕೆ ಇಳಿದಿರುವಾಗ ಇನ್ನು ಶಾಸಕರು ಸುಮ್ಮನಿರುತ್ತರೆಯೇ? ಒತ್ತಡ, ಮಾನಸಿಕ ಕಿರುಕುಳದಿಂದ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿರುವ ಪರಶುರಾಮ್ ಅವರ ಸಾವಿಗೆ ಕಾಂಗ್ರೆಸ್ ಶಾಸಕ ಚೆನ್ನಾರೆಡ್ಡಿ ಪಾಟೀಲ, ಅವರ ಪುತ್ರ ಸನ್ನಿಗೌಡ ಕಾರಣ ಎಂದು ಮೃತರ ಪತ್ನಿ ಲಿಖಿತ ದೂರು ಕೊಟ್ಟಿದ್ದಾರೆ' ಎಂದು ಹೇಳಿದ್ದಾರೆ.

ರಾಜ್ಯ ಮಟ್ಟದ ಸಂವಹನ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ರಾಜ್ಯ ಮಟ್ಟದ ಸಂವಹನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾಧ್ಯಮ ಮತ್ತು ಸಾರ್ವಜನಿಕ ಸಂಪರ್ಕ ಕ್ಷೇತ್ರದ ಸಾಧಕರನ್ನು ಗೌರವಿಸಲಾಯಿತು

ಬೆಂಗಳೂರು: ಸಾರ್ವಜನಿಕ ಸಂಪರ್ಕ ಕ್ಷೇತ್ರವು ಎಲ್ಲ ವಲಯಗಳಲ್ಲಿ ಅವಶ್ಯವಾಗಿದೆ. ಸಚಿವರು, ಜನಪ್ರತಿನಿಧಿಗಳು, ಸಂಸ್ಥೆಗಳ ಸಹಿತ ಎಲ್ಲರನ್ನೂ ಗುರುತಿಸಲು ಸಂವಹನ ಸಹಕಾರಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ರಾಜ್ಯ ಮಟ್ಟದ ಸಂವಹನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾರ್ವಜನಿಕ ಸಂಪರ್ಕ ವಿಭಾಗಗಳನ್ನು ಚೆನ್ನಾಗಿ ಬಳಸಿಕೊಳ್ಳುವವರೇ ಯಶಸ್ವಿ ವ್ಯಕ್ತಿಗಳು ಎಂದು ಅಳೆಯುವ ಕಾಲದಲ್ಲಿ ನಾವಿದ್ದೇವೆ' ಎಂದು ತಿಳಿಸಿದರು.

ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ, ಪಿಆರ್‌ಸಿಐ ಸಂಸ್ಥಾಪಕ ಜಯರಾಮ್, ಬೆಂಗಳೂರು ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ವೇಣುಗೋಪಾಲ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಮ್, ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ಉಪಾಧ್ಯಕ್ಷೆ ಲತಾ ಟಿ.ಎಸ್., ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ಬೆಂಗಳೂರು ವಲಯ ಅಧ್ಯಕ್ಷ ರಾಮಕೃಷ್ಣ ಉಪಸ್ಥಿತರಿದ್ದರು. ಮಾಧ್ಯಮ ಮತ್ತು ಸಾರ್ವಜನಿಕ ಸಂಪರ್ಕ ಕ್ಷೇತ್ರದ ಹಲವರನ್ನು ಸನ್ಮಾನಿಸಲಾಯಿತು.

ಅಂಗನವಾಡಿ ಸಂಘಟನೆಗಳ ಜಂಟಿ ಸಮಾವೇಶದಲ್ಲಿ ಟಿಯುಸಿಸಿ ಅಧ್ಯಕ್ಷ ಶಿವಶಂಕರ್ ಆಗ್ರಹ

'ಎಲ್‌ಕೆಜಿ–ಯುಕೆಜಿಗೆ ಅನುದಾನ ಬಿಡುಗಡೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ನಡೆಸಲು ಅಗತ್ಯವಾದ ಅನುದಾನ ಬಿಡುಗಡೆಗೊಳಿಸಬೇಕು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿಯ (ಟಿಯುಸಿಸಿ) ಅಧ್ಯಕ್ಷ ಜಿ.ಆರ್. ಶಿವಶಂಕರ್ ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಶನಿವಾರ ಆಯೋಜಿಸಿದ್ದ 'ಅಂಗನವಾಡಿ ಸಂಘಟನೆಗಳ ಜಂಟಿ ಸಮಾವೇಶ'ದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಶನಿವಾರ ನಡೆದ ಸಮಾವೇಶದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಭಾಗವಹಿಸಿದ್ದರು

'ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಲು ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿರುವುದು ಸ್ವಾಗತಾರ್ಹ. ಈ ವ್ಯವಸ್ಥೆಯನ್ನು ಬಲಪಡಿಸಲು ಶಿಕ್ಷಣ ತಜ್ಞರು, ವಿಷಯ ಪರಿಣಿತರು ಹಾಗೂ ಅಂಗನವಾಡಿ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕು. ಇಲ್ಲಿ ಕಲಿಯುತ್ತಿರುವ ಎಲ್ಲ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕಗಳನ್ನು ಒದಗಿಸಬೇಕು' ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಬಿ. ಪ್ರೇಮಾ, 'ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ 2023ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಗ್ರಾಚ್ಯುಟಿ ನೀಡುವ ಸರ್ಕಾರದ ಆದೇಶವನ್ನು ಹಿಂಪಡೆದು, ಎಲ್ಲ ನಿವೃತ್ತರಿಗೂ ಗ್ರಾಚ್ಯುಟಿ ನೀಡಬೇಕು. ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಆಗುತ್ತಿರುವ ಪೌಷ್ಟಿಕ ಆಹಾರ ಕಳಪೆ ಗುಣಮಟ್ಟದಿಂದ ಕೂಡಿದ್ದು, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪ್ರಕಾರ ಸ್ಥಳೀಯ ಪೌಷ್ಟಿಕ ಆಹಾರ ನೀಡಬೇಕೆಂಬ ನಿಯಮವಿದ್ದು, ಅದನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ' ಎಂದು ದೂರಿದರು.

ಮುಖ್ಯಾಂಶಗಳು

- ಸಮವಸ್ತ್ರ, ಪುಸ್ತಕ ವಿತರಣೆಗೆ ಆಗ್ರಹ
- ಗೌರವಧನ ಹೆಚ್ಚಳ ಭರವಸೆ ಈಡೇರಿಸಲು ಒತ್ತಾಯ
- ಸ್ಥಳೀಯ ಆಹಾರ ನೀಡಬೇಕೆಂಬ ನಿಯಮ ಉಲ್ಲಂಘನೆ–ದೂರು

'ವಿಧಾನಸಭೆ ಚುನಾವಣೆಯ ಪೂರ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ಗೌರವ ಧನವನ್ನು ತಿಂಗಳಿಗೆ ₹15 ಸಾವಿರಕ್ಕೆ ಹಾಗೂ ಸಹಾಯಕಿಯರ ಗೌರವಧನ ತಿಂಗಳಿಗೆ ₹10 ಸಾವಿರಕ್ಕೆ ಹೆಚ್ಚಿಸುವುದಾಗಿ ನೀಡಿದ್ದ ಭರವಸೆಯನ್ನು ಈಡೇರಿಸಬೇಕು. ನಿವೃತ್ತರಾದ ಎಲ್ಲರಿಗೂ ₹3 ಲಕ್ಷ ಇಡುಗಂಟು ನೀಡಬೇಕು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಸಹಾಯಕಿಯರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ಆಗ್ರಹಿಸಿದರು.

ಉಮಾಮಣಿ, ಎಐಯುಟಿಯುಸಿ ಸಂಘದ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ, ಎಂ.ಉಮಾದೇವಿ, ಜಿ.ಚಿತ್ರಾದೇವಿ, ಕೆ.ಸಿ. ಸಂತೋಷ, ಸಿ. ಶಿವಣ್ಣ, ನಾಗಮಣಿ ಭಾಗವಹಿಸಿದ್ದರು.

ಭೂಕುಸಿತ: 12 ರೈಲು ತಾತ್ಕಾಲಿಕವಾಗಿ ರದ್ದು

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು–ಹಾಸನ ಮಾರ್ಗದ ಯಡಕುಮರಿ ಮತ್ತು ಕಡಗರವಳ್ಳಿ ಮಧ್ಯೆ ಹಳಿ ಮೇಲೆ ಮಣ್ಣು ಕುಸಿದಿರುವುದರಿಂದ 12 ರೈಲುಗಳ ಸೇವೆಯನ್ನು ತಾತ್ಕಾಲಿಕವಾಗಿ ರದ್ದು ಪಡಿಸಲಾಗಿದೆ.

16511 ಕೆಎಸ್‌ಆರ್ ಬೆಂಗಳೂರು–ಕಣ್ಣೂರ ರೈಲು ಆ.4 ಮತ್ತು 5ರಂದು ಹಾಗೂ 16512 ಕಣ್ಣೂರು–ಕೆಎಸ್‌ಆರ್ ಬೆಂಗಳೂರು ರೈಲಿನ ಸೇವೆಯನ್ನು 5 ಮತ್ತು 6ರಂದು ರದ್ದು ಪಡಿಸಲಾಗಿದೆ.

16595 ಕೆಎಸ್‌ಆರ್ ಬೆಂಗಳೂರು–ಕಾರವಾರ ಸ್ಪೇಷಲ್ ರೈಲು 4 ಮತ್ತು 5ರಂದು ಹಾಗೂ 16596 ಕಾರವಾರ–ಕೆಎಸ್ಆರ್ ಬೆಂಗಳೂರು ಸ್ಪೇಷಲ್ ರೈಲು ಸೇವೆಯನ್ನು 5 ಮತ್ತು 6ರಂದು ರದ್ದುಪಡಿಸಲಾಗಿದೆ.

16585 ಎಸ್‌ಎಂವಿಟಿ ಬೆಂಗಳೂರು–ಮುರುಡೇಶ್ವರ ರೈಲು 4 ಮತ್ತು 5ರಂದು ಹಾಗೂ 16586 ಮುರುಡೇಶ್ವರ–ಎಸ್ಎಂವಿಟಿ ಬೆಂಗಳೂರು ರೈಲು 5 ಮತ್ತು 6ರಂದು ಸಂಚರಿಸುವುದಿಲ್ಲ.

07377 ವಿಜಯಪುರ–ಮಂಗಳೂರು ಸೆಂಟ್ರಲ್ ರೈಲು 4 ಮತ್ತು 5ರಂದು ಹಾಗೂ 07378 ಮಂಗಳೂರು ಸೆಂಟ್ರಲ್–ವಿಜಯಪುರ ರೈಲು 5 ಮತ್ತು 6ರಂದು ಸಂಚರಿಸುವುದಿಲ್ಲ.

16515 ಯಶವಂತಪುರ ಜಂಕ್ಷನ್–ಕಾರವಾರ ರೈಲು 5ರಂದು ಹಾಗೂ 16516 ಕಾರವಾರ–ಯಶವಂತಪುರ ಜಂಕ್ಷನ್ ರೈಲು 6ರಂದು ಸಂಚರಿಸುವುದಿಲ್ಲ. 16575 ಯಶವಂತಪುರ ಜಂಕ್ಷನ್–ಮಂಗಳೂರು ಜಂಕ್ಷನ್ ರೈಲು 4ರಂದು ಹಾಗೂ 16576 ಮಂಗಳೂರು ಜಂಕ್ಷನ್–ಯಶವಂತಪುರ ಜಂಕ್ಷನ್ ರೈಲು ಸೇವೆಯನ್ನು 5ರಂದು ರದ್ದುಪಡಿಸಲಾಗಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ 'ಬ್ರಿಗೇಡಿಯರ್ ಆರ್.ಸಿ.ಆರ್. ಹಿಲ್ ಮೆಮೋರಿಯಲ್ ಕಪ್ ರೇಸ್'ನಲ್ಲಿ ಗೆದ್ದ ಇಂಡಿಯನ್ ಬ್ಲೂಸ್ ಕುದುರೆಯ ತರಬೇತುದಾರ ನಾರಾಯಣ ಗೌಡ ಅವರಿಗೆ ಕ್ಲಬ್ ಅಧ್ಯಕ್ಷ ಅಶ್ವಿನ್ ಶೆಟ್ಟಿ ಮತ್ತು ನಿಕಟಪೂರ್ವ ಆಧ್ಯಕ್ಷ ಕೆನ್ನೆತ್ ಪಿಂಟೊ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕ್ಲಬ್‌ನ ಇತರೆ ಸದಸ್ಯರು ಹಾಗೂ ಬಿ.ಟಿ.ಸಿ ಸ್ಟೀವರ್ಡ್ಸ್ ಮತ್ತು ಕಮಿಟಿ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಸಂಕ್ಷಿಪ್ತ ಸುದ್ದಿ

ಉಚಿತ ಆರೋಗ್ಯ ತಪಾಸಣೆ: ಆಯೋಜನೆ: ಅರ್ಪಿತ ಸೇವಾ ಟ್ರಸ್ಟ್, ಸಪ್ತಗಿರಿ ಆಸ್ಪತ್ರೆ, ಸ್ಥಳ: ಅಪೊಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಚೌಡೇಶ್ವರಿನಗರ, ಲಗ್ಗೆರೆ, ಬೆಳಿಗ್ಗೆ 8.30

'ಭಕ್ತಿ ಭಾವಾನಂದ' ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಕಾಡುಗೋಡಿ, ಬೆಳಿಗ್ಗೆ 9

'ಉತ್ತರ ಪರ್ವ' ಹತ್ತು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಬಿ. ಸುರೇಶ, ರಾಗಂ, ಕರ್ಕಿ ಕೃಷ್ಣಮೂರ್ತಿ, ಮಧು ವೈ.ಎನ್., ಉಪಸ್ಥಿತಿ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಗುರುಪ್ರಸಾದ ಭಟ್ ಅವರ 'ರಣಧುರಂಧರ' ಪುಸ್ತಕ ಬಿಡುಗಡೆ: ಅತಿಥಿಗಳು: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ದಿನೇಶ ಕಾಮತ್, ಪುಸ್ತಕ ಪರಿಚಯ: ಸತ್ಯೇಶ್ ಬೆಳ್ಳೂರ್, ಪ್ರಕಾಶಕರು: ಸವಿತಾ ಯಾಜಿ, ಆಯೋಜನೆ: ಯಾಜಿ ಪ್ರಕಾಶನ, ಸ್ಥಳ: ಅಕ್ಷರಂ, ಸಂಸ್ಕೃತ ಭಾರತಿ, ಗಿರಿನಗರ, ಬೆಳಿಗ್ಗೆ 10

ಡಿ.ಎನ್. ಅಕ್ಕಿ ಅವರ 'ಗೆರೆ ಏಕೆ ಕೊರೆದೆ', 'ಹಕ್ಕಿ ಹಾಂಗ' ಪುಸ್ತಕಗಳ ಬಿಡುಗಡೆ: ಹಂ.ಪ. ನಾಗರಾಜಯ್ಯ, ಪುಸ್ತಕಗಳ ಕುರಿತು: ಎಸ್.ಪಿ. ಪದ್ಮಪ್ರಸಾದ್, ಟಿ.ಎಸ್. ಗೋಪಾಲ್, ಉಪಸ್ಥಿತಿ: ಚನ್ನಪ್ಪ ಕಟ್ಟಿ, ಅಧ್ಯಕ್ಷತೆ: ಸಂಗಮೇಶ ಬಾದವಾಡಗಿ, ಅತಿಥಿಗಳು: ಸಿ.ಎನ್. ಭಂಡಾರೆ, ಶಿವಶರಣ ಅರುಣಿ, ದೇವು ಪತ್ತಾರ, ಆಯೋಜನೆ: ಕವಿಕುಂಚ ಪ್ರಕಾಶನ ಇಂಡಿ, ಸ್ಥಳ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಹಂ.ಪ. ನಾಗರಾಜಯ್ಯ

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಯಲಹಂಕ ವಿಧಾನಸಭೆ ಕ್ಷೇತ್ರ ಘಟಕದ ಉದ್ಘಾಟನೆ: ಬಿ.ಎಂ. ನಾಗಭೂಷಣ, ಪ್ರತಿಭಾ ಪುರಸ್ಕಾರ ಪ್ರದಾನ: ವಿ.ಎಸ್. ನಂಜುಂಡಪ್ಪ, ಅಧ್ಯಕ್ಷತೆ: ಈ. ಬಸವರಾಜು, ಅತಿಥಿ: ನಾ. ಶ್ರೀಧರ್, ಸ್ಥಳ: ಎಸ್‌ವಿವಿಎಸ್ ಫಿನ್ಟೆಕ್ ಕಾರ್ಮಸ್ ಶಾಲೆ, ಯಲಹಂಕ ಉಪನಗರ, ಬೆಳಿಗ್ಗೆ 10.30

'ಅಣಕು ನ್ಯಾಯಾಲಯ ಸ್ಪರ್ಧೆ' ಸಮಾರೋಪ ಸಮಾರಂಭ: ಅತಿಥಿಗಳು: ಎನ್. ಕುಮಾರ್, ಎಂಗಳಗುಪ್ಪೆ ಸೀತಾರಾಮಯ್ಯ ಇಂದಿರೇಶ್, ಸುದೀಶ್ ಪೈ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ, ಮಧ್ಯಾಹ್ನ 1

'ಅಪರ್ಣಾ ನಾದಾರ್ಪಣೆ' ನಾದ-ಭಾವ ನಮನ: ಭಾಗವಹಿಸುವವರು: ನಾಗರಾಜ ವಸ್ತಾರೆ, ಡಾ.ನಾ. ಸೋಮಶೇಖರ, ನಾರಾಯಣರಾವ್ ಆರ್. ಮಾನೆ, ವಿ. ಮನೋಹರ್, ವಿ.ವಿ.ಗೋಪಾಲ್, ರೇವತಿ ಕಾಮತ್, ಗಿರಿಜಾ ಲೋಕೇಶ್, ರಾ.ಸು. ವೆಂಕಟೇಶ್, ಆಯೋಜನೆ: ವೀಣಾ ವಾರುಣಿ ಕಲ್ಚರಲ್ ಫೌಂಡೇಷನ್, ಬಿಎನ್‌ಎಂ ವಿದ್ಯಾಸಂಸ್ಥೆ, ಸಾರ್ಯ ಕ್ರಿಯೇಷನ್ಸ್, ಸ್ಥಳ: ಬಿಎನ್‌ಎಂಐಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ ಎರಡನೇ ಹಂತ, ಸಂಜೆ 4

ಪದಾಧಿಕಾರಿಗಳ ಪದಗ್ರಹಣ, ಸಮ್ಮಿಲನ ಕಾರ್ಯಕ್ರಮ: ಅಧ್ಯಕ್ಷತೆ: ಸಿ.ಎಂ. ನಾರಾಯಣ ಸ್ವಾಮಿ, ಬಿ.ಎಚ್. ಗಿರಿಜಾ, ಪದಾಧಿಕಾರಿಗಳು: ಆಕಾಶ ಎ. ಸುವರ್ಣ, ರಾಜು ಚಂದ್ರಶೇಖರ್, ವಿ. ವಿಜಯಕುಮಾರ್ ರಾಜು, ಅತಿಥಿಗಳು: ವಂಶಿಧರ್ ಬಾಬು, ವಿವಿ. ಕೃಷ್ಣ ರೆಡ್ಡಿ, ಎನ್. ಕೃಷ್ಣೇಗೌಡ, ಆಯೋಜನೆ: ಲಯನ್ಸ್ ಇಂಟರ್ ನ್ಯಾಷನಲ್ ಡಿಸ್ಟ್ರಿಕ್ಟ್–317, ಸ್ಥಳ: ನಿಮ್ಹಾನ್ಸ್ ಕನ್ವೆಷನ್ ಹಾಲ್, ಸಂಜೆ 4

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ಆಯೋಜನೆ: ನಮ್ದೆ ನಟನೆ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆಕಳುಹಿಸಿ. nagaradalli_indu@prajavani.co.in

ನದಿಗೆ ಬಿದ್ದ ಬೈಕ್: ಒಬ್ಬ ಪಾರು, ಇನ್ನೊಬ್ಬ ನಾಪತ್ತೆ

ಬೆಳಗಾವಿ: ತಾಲ್ಲೂಕಿನ ಬಿ.ಕೆ.ಕಂಗ್ರಾಳಿಯಲ್ಲಿ ಶನಿವಾರ ರಾತ್ರಿ ಬೈಕ್ ಮಾರ್ಕಂಡೇಯ ನದಿಗೆ ಬಿದ್ದು, ಒಬ್ಬ ಸವಾರ ನೀರು ಪಾಲಾಗಿದ್ದು, ಇನ್ನೊಬ್ಬ ಈಜಿ ದಡ ಸೇರಿದ್ದಾರೆ.

ತಾಲ್ಲೂಕಿನ ಅಲತ್ತಗಾ ಗ್ರಾಮದ ಓಂಕಾರ ಅರುಣ ಪಾಟೀಲ (23) ನೀರಿನಲ್ಲಿ ಕೊಚ್ಚಿಕೊಂಡು ಹೋದ ಯುವಕ. ಇವರ ಸಹೋದರ ಜ್ಯೋತಿನಾಥ ಪಾಟೀಲ ಈಜಿ ದಡ ಸೇರಿದ್ದಾರೆ. ಇಬ್ಬರೂ ಸಹೋದರರು ಅಲತಗಾದಿಂದ ಕಂಗ್ರಾಳಿಗೆ ಕ್ಷೌರ ಮಾಡಿಸಿಕೊಳ್ಳಲು ಹೊರಟಿದ್ದರು. ನದಿ ಹರಿಯುವ ಜಾಗದಲ್ಲಿ ಬೈಕ್ ನಿಯಂತ್ರಣ ತಪ್ಪಿ ಮಾರ್ಕಂಡೇಯ ನದಿಗೆ ಬಿದ್ದಿದೆ.

ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತಯೇ ಸ್ಥಳಕ್ಕಾಗಮಿಸಿದ ಕಾಕತಿ ಠಾಣೆ ಪೊಲೀಸರು ಓಂಕಾರ ಪಾಟೀಲಗಾಗಿ ಶೋಧ ಕಾರ್ಯ ಶುರು ಮಾಡಿದರು.

• 10 am to 8 pm • Open All Days • Master / Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Kundalahalli Gate:	S K R Convention hall, Thubarahalli, Varthur Main Road,
Jayanagar:	Srinivasa Sagar Kalyan Mahal, 2nd block, (Near Ashoka Pillar)
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital,
Rajarajeswari Nagar:	Vasavi Mahal Kalyana Mantapa, Next To Reliance Digital, Ideal Homes I Phase
Vijay Nagar:	Five O Gallery 17th Cross, M.C. Road, Near Vijay Nagar Bus Stop
Mahalaxmipuram:	Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School
Malleswaram:	The Canara Union, No. 42, 8th Main, Canara Union Road
Hesaraghatta Main Road:	Sri Sai Kalyana Mantapa, No. 36 Near Bangalagunte Bus Stop, Mallasandra
Koramangala:	Apoorva International, #35A, Raheja Arcade, Opp Star Box - 560095
Basavanagudi:	Amolak Apparels, #104, Bull Temple Road, Near Ramakrishna Ashram - 560019

Org. by: Surya Agency Pvt. Ltd.

ಹಸಿರು ಹೊದಿಕೆ ವೃದ್ಧಿಗೆ 'ಥೀಮ್' ವೃಕ್ಷವನ

ವಾಯು ಮಾಲಿನ್ಯ ನಿಯಂತ್ರಣಕ್ಕೆ ಬಿಬಿಎಂಪಿ ವಿಶೇಷ ಯೋಜನೆ; ಮಿಯಾವಾಕಿ ಅರಣ್ಯಕ್ಕೂ ಒತ್ತು

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ 'ಹಸಿರು ಹೊದಿಕೆ'ಯನ್ನು ವೃದ್ಧಿಸುವ ಉದ್ದೇಶದಿಂದ 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ವೃಕ್ಷವನ, ಮಿಯಾವಾಕಿ ಅರಣ್ಯಗಳನ್ನು ಅಭಿವೃದ್ಧಿಗೊಳಿಸಲು ನಿರ್ಧರಿಸಲಾಗಿದೆ.

ವೃಕ್ಷವನಗಳಲ್ಲಿ ಸ್ಥಳೀಯ ಸಸ್ಯಗಳನ್ನು ಮಾತ್ರ ನೆಡಲಾಗುತ್ತದೆ. ಇದರಲ್ಲಿ ಔಷಧೀಯ ಗುಣಗಳುಳ್ಳ ಸಸಿಗಳಿಗೆ ಹೆಚ್ಚು ಪ್ರಾಮುಖ್ಯ ನೀಡಲಾಗುತ್ತದೆ. ನಗರದ ಹವಾಗುಣಕ್ಕೆ ಹೊಂದಿಕೊಳ್ಳುವ ಗಿಡಗಳನ್ನು ಬೆಳೆಸಿ, ಮರಗಳನ್ನಾಗಿಸಿ, ವಾಯು ಮಾಲಿನ್ಯವನ್ನು ನಿಯಂತ್ರಿಸಲು ಯೋಜಿಸಲಾಗಿದೆ.

ಬಿಬಿಎಂಪಿ ತೋಟಗಾರಿಕೆ ವಿಭಾಗದ ಸ್ವಾಧೀನದಲ್ಲಿರುವ ಒಂಬತ್ತು ಉದ್ಯಾನಗಳನ್ನು, ಅರಣ್ಯ ವಿಭಾಗದ ವತಿಯಿಂದ ವೃಕ್ಷವನಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ವೃಕ್ಷವನಗಳನ್ನು ಸಸಿಗಳನ್ನು ನೆಟ್ಟು ಪೋಷಿಸುವುದಕ್ಕೆ ಸೀಮಿತಗೊಳಿಸದೆ, 'ಥೀಮ್ಡ್ ಪಾರ್ಕ್'ಗಳನ್ನಾಗಿ ರೂಪಿಸಲು ಬಿಬಿಎಂಪಿ ನಿರ್ಧರಿಸಿದೆ. ಧನ್ವಂತರ ವನ, ರಾಶಿವನ, ಅರಣ್ಯ ಆಟ, ಬುಡಕಟ್ಟು ಅರಣ್ಯ ಎಂಬ ವಿಷಯಗಳನ್ನು ಆಧರಿಸಿ ವೃಕ್ಷವನಗಳನ್ನು ಅಭಿವೃದ್ಧಿಗೊಳಿಸಲಾಗುತ್ತದೆ.

'ಔಷಧೀಯ ಗುಣಗಳ ಸಸ್ಯಗಳನ್ನೇ ಹೊಂದಿರುವ ಧನ್ವಂತರಿ ವನ, ಬುಡಕಟ್ಟು ಸಮುದಾಯದ ಪರಿಸರವನ್ನು ಬಿಂಬಿಸುವ ರೀತಿಯಲ್ಲಿ ವೃಕ್ಷವನ, ಮಕ್ಕಳು ಆಟವಾಡಲು ಕಾಡಿನ ಮಾದರಿಯಲ್ಲೇ ಆಟೋಪಕರಣಗಳನ್ನೂ ರೂಪಿಸಲಾಗುತ್ತದೆ' ಎಂದು ಬಿಬಿಎಂಪಿ ಅರಣ್ಯ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು.

ಬಿಬಿಎಂಪಿ ಈಗ ಒಂದು ಮಿಯಾವಾಕಿ ಅರಣ್ಯವನ್ನು ನಿರ್ಮಿಸಿದ್ದು, ಇನ್ನೂ ಎರಡು ಮಿಯಾವಾಕಿ ಅರಣ್ಯ ನಿರ್ಮಿಸಲಾಗುತ್ತಿದೆ. ಹೊಸ ನರ್ಸರಿ ಹಾಗೂ ನರ್ಸರಿಗಳ ಅಭಿವೃದ್ಧಿ ಕಾರ್ಯವನ್ನೂ ಕೈಗೊಳ್ಳಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಇನ್ನೊಂದು ವರ್ಷದಲ್ಲಿ ಹೊಸ ಉದ್ಯಾನಗಳ ಅಭಿವೃದ್ಧಿ ಕೆಲಸ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಮಿಯಾವಾಕಿ ಅರಣ್ಯ (ಸಾಂದರ್ಭಿಕ ಚಿತ್ರ)

₹25 ಕೋಟಿ	₹11 ಕೋಟಿ	₹10 ಕೋಟಿ;	₹4 ಕೋಟಿ
ಅರಣ್ಯ ವಿಭಾಗದಿಂದ ಒಟ್ಟು ವೆಚ್ಚ	9 ವೃಕ್ಷವನಗಳ ಅಭಿವೃದ್ಧಿಗೆ ವೆಚ್ಚ	ಹೊಸ ನರ್ಸರಿ, ಹಳೆ ನರ್ಸರಿ ಅಭಿವೃದ್ಧಿ	ಎರಡು ಮಿಯಾವಾಕಿ ಅರಣ್ಯ ಅಭಿವೃದ್ಧಿ

ಎಲ್ಲೆಲ್ಲಿ ಏನೇನು?

ಮಿಯಾವಾಕಿ ಅರಣ್ಯ	ಬೊಮ್ಮನಹಳ್ಳಿ ಹಾಗೂ ಆವಲಹಳ್ಳಿ, ಯಲಹಂಕ
ನರ್ಸರಿ	ದಾಸರಹಳ್ಳಿಯ ಶೆಟ್ಟಿಹಳ್ಳಿಯಲ್ಲಿ ಹೊಸ ನರ್ಸರಿ ಹಾಗೂ ಬೊಮ್ಮನಹಳ್ಳಿಯ ಕೂಡ್ಲು, ರಾಜೀವ್‌ಗಾಂಧಿ ಉದ್ಯಾನ, ಕೆಂಪಾಪುರ ನರ್ಸರಿಗಳ ಅಭಿವೃದ್ಧಿ
ವೃಕ್ಷವನ	ಮಹದೇವಪುರದ ರಾಂಪುರ ಕೆರೆ ಆವರಣದಲ್ಲಿನ ಎರಡು ಉದ್ಯಾನ; ಬೊಮ್ಮನಹಳ್ಳಿಯ ಬನ್ನೇರುಘಟ್ಟ ಜೈವಿಕ ಉದ್ಯಾನದ ವನ್ಯಜೀವಿ ರಕ್ಷಣಾ ಕೇಂದ್ರ; ಯಲಹಂಕದ ಬ್ಯಾಟರಾಯನಪುರದಲ್ಲಿರುವ ಎನ್‌ಟಿಐ ಲೇಔಟ್‌ನಲ್ಲಿ ಎರಡು ಉದ್ಯಾನ; ಬೊಮ್ಮನಹಳ್ಳಿಯ ಸಿಂಗಸಂದ್ರ ಎಇಸಿಎಸ್ ಲೇಔಟ್; ಬೊಮ್ಮನಹಳ್ಳಿಯ ಪೂರ್ಣಪ್ರಜ್ಞ ಲೇಔಟ್‌ನಲ್ಲಿನ ಮೂರು ಉದ್ಯಾನ.

'ಮರ ಗಣತಿಗೆ: ಇನ್ನೂ ನಾಲ್ಕು ತಿಂಗಳು ಬೇಕು'

'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಮರಗಳ ಗಣತಿ ಕಾರ್ಯ ನಡೆಯುತ್ತಿದ್ದು, ಇನ್ನು ನಾಲ್ಕು ತಿಂಗಳಲ್ಲಿ ಮುಗಿಯಲಿದೆ' ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು. '10 ವಾರ್ಡ್‌ಗಳಲ್ಲಿ ಗಣತಿ ಮುಗಿದಿದ್ದು, 2.5 ಲಕ್ಷ ಮರಗಳ ಗಣತಿಯಾಗಿದೆ. ಉಳಿದ ವಾರ್ಡ್‌ಗಳಲ್ಲಿ ಸಮೀಕ್ಷೆ ಕಾರ್ಯ ನಡೆಯುತ್ತಿದೆ' ಎಂದರು.

ಸುಧಾ, ಮಯೂರ ಓದಿ

ಪೀಣ್ಯ: ಏಷ್ಯಾದ ದೊಡ್ಡ ಕೈಗಾರಿಕಾ ಪ್ರದೇಶದ ದುಃಸ್ಥಿತಿ

ರಸ್ತೆ: ಮಳೆಯಾದರೆ ಕೆಸರು ಗದ್ದೆ..

● ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಗುಂಡಿ ಬಿದ್ದಿರುವ ರಸ್ತೆಗಳು, ಮಳೆ ಬಂದರೆ ಕೆಸರು ಗದ್ದೆ, ಬಿಸಿಲಿದ್ದರೆ ದೂಳು ಮಯ, ವಾಹನ ಸವಾರರ ಪರದಾಟ, ದಿನನಿತ್ಯ ಅಪಘಾತಗಳ ಸರಮಾಲೆ...

ಏಷ್ಯಾ ಖಂಡದಲ್ಲೇ ಅತಿ ಹೆಚ್ಚು ಸಣ್ಣ ಕೈಗಾರಿಕೆಗಳನ್ನು ಹೊಂದಿರುವ ಪ್ರದೇಶವೆಂದೇ ಖ್ಯಾತಿ ಪಡೆದಿರುವ ಪೀಣ್ಯ ಕೈಗಾರಿಕಾ ಪ್ರದೇಶದ ದುಸ್ಥಿತಿ ಇದು.

ಪೀಣ್ಯ 2ನೇ ಹಂತದಲ್ಲಿರುವ ಈ ಕೈಗಾರಿಕಾ ಪ್ರದೇಶ, ತಿಂಗಳಪಾಳ್ಯ, ಕೆಂಪಯ್ಯ ಗಾರ್ಡನ್‌ನ ಚಿಕ್ಕರಂಗಯ್ಯ ಇಂಡಸ್ಟ್ರಿಯಲ್ ಏರಿಯಾ, ಕಿಯೋನಿಕ್ಸ್ ಲೇಔಟ್, ಎಸ್‌ಎಲ್‌ವಿ ಲೇಔಟ್‌ಗಳಲ್ಲಿ ವಿಸ್ತರಿಸಿಕೊಂಡಿದೆ. ಸುಮಾರು 15 ಸಾವಿರ ಕೈಗಾರಿಕೆಗಳು, 12 ಲಕ್ಷಕ್ಕೂ ಹೆಚ್ಚು ದುಡಿಯುವ ಜನರಿರುವ ಈ ಪ್ರದೇಶದಲ್ಲಿ ರಸ್ತೆಗಳಷ್ಟೇ ಅಲ್ಲದೇ, ಬೀದಿ ದೀಪ, ಕುಡಿಯುವ ನೀರು, ಚರಂಡಿ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳ ಕೊರತೆ ಇದೆ. 'ಸುಮಾರು12 ವರ್ಷಗಳಿಂದ ಇದೇ ಪರಿಸ್ಥಿತಿ ಇದೆ' ಎಂದು ಕೈಗಾರಿಕೋದ್ಯಮಿಗಳು ಬೇಸರ ವ್ಯಕ್ತಪಡಿಸುತ್ತಾರೆ.

'ಇಲ್ಲಿ ಎಲ್ಲ ರೀತಿಯ ಉದ್ಯಮಗಳಿವೆ. ಪುಣೆ, ಮುಂಬೈ ಸೇರಿದಂತೆ ಹೊರ ರಾಜ್ಯಗಳಿಗೆ ಅಗತ್ಯವಾದ ಕಚ್ಚಾವಸ್ತುಗಳು ಇಲ್ಲಿಂದ ರಫ್ತಾಗುತ್ತವೆ. ವಸ್ತುಗಳನ್ನು ಸಾಗಿಸುವ ವಾಹನಗಳು ಸಂಚರಿಸಲು ಉತ್ತಮ ರಸ್ತೆ ಇಲ್ಲ. ಹೀಗಾಗಿ, ಕೈಗಾರಿಕೆಗಳ ಪ್ರಗತಿಗೆ ಹಿನ್ನಡೆಯಾಗಿದೆ' ಎಂದು ಪೀಣ್ಯಾ ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷ ಎಂ.ಎಂ.ಗಿರಿ ಬೇಸರ ವ್ಯಕ್ತಪಡಿಸುತ್ತಾರೆ.

'ನಮ್ಮದು ಆಕ್ಸಿಜನ್ ಪೂರೈಕೆ ಕಂಪನಿ. ಕಂಪನಿಯೊಂದಿಗೆ ವ್ಯವಹರಿಸಲು ಹೊರದೇಶಗಳಿಂದ ಉದ್ಯಮಿಗಳು ಬರುತ್ತಾರೆ. ಅವರನ್ನು ಕರೆತರಲು ನಮಗೆ ಮುಜುಗರವಾಗುತ್ತದೆ. ಮಳೆ ಬಂದರಂತೂ ರಸ್ತೆಗಳು ಕೆಸರುಮಯವಾಗುತ್ತವೆ' ಎಂದು ದೂರುತ್ತಾರೆ ಅಕ್ಸಿಪ್ಲಾಂಟ್ ಕಂಪನಿಯ ಎಂ.ಡಿ.ರಮೇಶ್.

ಎಸ್‌ಎಲ್‌ವಿ ಲೇಔಟ್ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 150 ಕೈಗಾರಿಕೆಗಳಿವೆ. ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಾರೆ. ಬೀದಿ ದೀಪವಿಲ್ಲದ ಕಾರಣ, ಮಹಿಳೆಯರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಾರೆ' ಎಂದು ಉದ್ಯಮಿ ಸ್ಮಿತಾ ಲಕ್ಮೀಕಾಂತ್ ಹೇಳುತ್ತಾರೆ.

'ಬ್ರಾಂಡ್ ಬೆಂಗಳೂರು' ಯೋಜನೆ ರೀತಿ 'ಬ್ರಾಂಡ್ ಪೀಣ್ಯ ಇಂಡಸ್ಟ್ರಿಯಲ್ ಏರಿಯಾ' ಎಂದು ಮಾಡಿ. ₹500 ಕೋಟಿ ಅನುದಾನ ಬಿಡುಗಡೆ ಮಾಡಿ, ಮೂಲಸೌಕರ್ಯಗಳನ್ನು ಒದಗಿಸಿದರೆ, ನಾವು ಸರ್ಕಾರಕ್ಕೆ ಇನ್ನಷ್ಟು ಆದಾಯ ತಂದು ಕೊಡುತ್ತೇವೆ' ಎಂದು ಪೀಣ್ಯ ಕೈಗಾರಿಕಾ ಪ್ರದೇಶಗಳ ಸಂಘದ ಅಧ್ಯಕ್ಷ ಆರ್.ಶಿವಕುಮಾರ್ ಹೇಳುತ್ತಾರೆ

ಪೀಣ್ಯ ಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿರುವ ಪಿಎಂ ಚಿಕ್ಕಗಂಗಯ್ಯ ಇಂಡಸ್ಟ್ರಿಯಲ್ ಏರಿಯಾದ ರಸ್ತೆಯೊಂದರ ದುಸ್ಥಿತಿ

ಮುಖ್ಯಾಂಶಗಳು

- ರಸ್ತೆಗಳು ಸರಿ ಇಲ್ಲ, ಬೀದಿ ದೀಪವಿಲ್ಲ
- ಸೌಕರ್ಯದ ಕೊರತೆಯಿಂದ ವಹಿವಾಟಿಗೆ ಏಟು
- 'ಬ್ರ್ಯಾಂಡ್ ಪೀಣ್ಯ ಇಂಡಸ್ಟ್ರಿಯಲ್ ಏರಿಯಾ' ಅಗತ್ಯ

ಅತಿವೃಷ್ಟಿ: ಹೆಚ್ಚುವರಿ ಪರಿಹಾರಕ್ಕೆ ಜಾರ್ಜ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಭಾರಿ ಹಾನಿ ಉಂಟಾಗಿದ್ದು, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಹೊರತುಪಡಿಸಿ, ಹೆಚ್ಚುವರಿಯಾಗಿ ವಿಶೇಷ ಪರಿಹಾರ ಪ್ಯಾಕೇಜ್ ನೀಡುವಂತೆ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ಇಂಧನ ಸಚಿವ ಕೆ.ಜೆ.ಜಾರ್ಜ್ ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯಿಂದ ಅಪಾರ ಹಾನಿಯಾಗಿದೆ. ಸಾಕಷ್ಟು ಮನೆಗಳು ಕುಸಿದಿವೆ. ರಸ್ತೆಗಳು ಹಾಳಾಗಿವೆ. ಮರಗಳು ಬಿದ್ದು ವಿದ್ಯುತ್ ಕಂಬ, ತಂತಿ, ಪರಿವರ್ತಕಗಳು ಹಾಳಾಗಿವೆ. ಹೀಗಾಗಿ ಎನ್‌ಡಿಆರ್‌ಎಫ್ ಮಾನದಂಡದ ಅನ್ವಯ ನೆರವು ನಿಗದಿ ಮಾಡಿದರೆ, ಸಮರ್ಪಕವಾಗಿ ಪರಿಹಾರ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಹೆಚ್ಚುವರಿ ಅನುದಾನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಮನವಿ ಸಲ್ಲಿಸಿರುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನಳಿನಿ ಮೂರ್ತಿ ದತ್ತಿ ಪ್ರಶಸ್ತಿ' ಸ್ಥಾಪನೆ

ಬೆಂಗಳೂರು: ವಿಜ್ಞಾನ ಲೇಖಕಿ ನಳಿನಿ ಮೂರ್ತಿ ಹೆಸರಿನಲ್ಲಿ ಅವರ ಪತಿ ಎಸ್. ನರಸಿಂಹ ಮೂರ್ತಿ ಅವರು ಕರ್ನಾಟಕ ಲೇಖಕಿಯರ ಸಂಘದಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ.

ಕೆನಡಾದ ಟೊರಾಂಟೊದಲ್ಲಿ ನೆಲೆಸಿರುವ ನರಸಿಂಹ ಮೂರ್ತಿ ಅವರು, ₹20 ಲಕ್ಷ ದತ್ತಿನಿಧಿಯನ್ನು ಸಂಘದಲ್ಲಿ ಇರಿಸಿದ್ದಾರೆ. ವೈಜ್ಞಾನಿಕ ಕಥನಗಳು ಹಾಗೂ ಬರಹಗಳು, ವೈದ್ಯಕೀಯ, ಸಂಕೀರ್ಣ, ಕೃಷಿ, ಪರಿಸರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಪ್ರಶಸ್ತಿಯನ್ನ ಸ್ಥಾಪಿಸಿದ್ದಾರೆ.

'ಈ ದತ್ತಿನಿಧಿಯನ್ನು ಪ್ರಶಸ್ತಿಯ ಜತೆಗೆ ವಿಜ್ಞಾನ ಸಾಹಿತ್ಯದ ಕುರಿತಾದ ಕಮ್ಮಟ, ಪ್ರಕಟಣೆಗೆ ಬಳಸಿಕೊಳ್ಳಬೇಕೆಂಬುದು ನರಸಿಂಹ ಮೂರ್ತಿ ಅವರ ಆಶಯವಾಗಿದೆ. ನಳಿನಿ ಮೂರ್ತಿ ಅವರು 'ಬಿಸಿಲು ಮಳೆ', 'ಬೀಸಿ ಬಂದ ಬಿರುಗಾಳಿ', 'ಬಂಗಾರದ ಜಿಂಕೆ' ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ' ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ತಿಳಿಸಿದ್ದಾರೆ.

ರೋಟರಿ ಅನಿಕೇತನ ಮತ್ತು ರೋಟರಿ ಬೆಂಗಳೂರು ಚಿಮ್ನಿಹಿಲ್‌ನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಹಿರಿಯ ರೋಟರಿಯನ್ ರಾಜಶೇಖರ್ ದಂಪತಿಯನ್ನು ಸನ್ಮಾನಿಸಲಾಯಿತು

ರೋಟರಿ ಕ್ಲಬ್: ನೂತನ ಪದಾಧಿಕಾರಿಗಳ ಪದಗ್ರಹಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಮಹಿಳಾ ಸಬಲೀಕರಣ, ಅಂಧತ್ವ ನಿವಾರಣೆ, ಆರೋಗ್ಯ, ಶೈಕ್ಷಣಿಕ ಪ್ರಗತಿಗಾಗಿ ರೋಟರಿ ಸಂಸ್ಥೆ ನೂರಾರು ಕೋಟಿ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ' ಎಂದು ರೋಟರಿ 2192 ಡಿಸ್ಟ್ರಿಕ್ಟ್ ಕಾರ್ಯದರ್ಶಿ ಕೆ.ಟಿ.ನಿರಂಜನ್ ಅವರು ಹೇಳಿದರು.

ರೋಟರಿ ಅನಿಕೇತನ, ರೋಟರಿ ಬೆಂಗಳೂರು ಚಿಮ್ನಿ ಹಿಲ್ಸ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮತ್ತು ರೋಟರಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

'ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳು ಹಾಗೂ ಅರಣ್ಯ, ಗ್ರಾಮೀಣಾಭಿವೃದ್ಧಿಗಾಗಿ ರೋಟರಿ ಕಂಕಣ ಬದ್ಧವಾಗಿದ್ದು, ಸ್ವಯಂಸೇವಾ ಸಂಸ್ಥೆಯಾಗಿ ವಿಶ್ವದಾದ್ಯಂತ ಎಲ್ಲ ವರ್ಗಗಳ ಪ್ರಗತಿಗಾಗಿ ದುಡಿಯುತ್ತಿದೆ' ಎಂದು ತಿಳಿಸಿದರು.

ರೋಟರಿ ಡಿಸ್ಟ್ರಿಕ್ಟ್ 3190 ಗವರ್ನರ್ ಕೆ.ಎಸ್.ನಾಗೇಂದ್ರ ಅವರು ನೂತನ ಪದಾಧಿಕಾರಿಗಳಿಗೆ ಶುಭ ಕೋರಿದರು. ರೋಟರಿಯನ್ ಡಾ.ರಾಜಶೇಖರ್ ಮಾತನಾಡಿದರು.

ರೋಟರಿ ಅನಿಕೇತನ ಅಧ್ಯಕ್ಷರಾಗಿ ಎಂ.ಟಿ.ಕೃಷ್ಣಮೂರ್ತಿ, ಕಾರ್ಯದರ್ಶಿ ಶಿವಲಿಂಗಯ್ಯ ಕೆ.ಟಿ, ರೋಟರಿ ಬೆಂಗಳೂರು ಚಿಮ್ನಿ ಹಿಲ್ಸ್ ಅಧ್ಯಕ್ಷರಾಗಿ ಲಕ್ಷ್ಮೀಶ ಹಾಗೂ ಕಾರ್ಯದರ್ಶಿಯಾಗಿ ಶಿವರಾಜ್.ಜಿ ಭಟ್ ಅಧಿಕಾರ ಸ್ವೀಕರಿಸಿದರು.

केनरा बैंक Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಸರ್ಕಲ್ ಆಫೀಸ್,
ಆರ್ & ಎಲ್ ವಿಭಾಗ ಬೆಂಗಳೂರು
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001.

ದೂ: 8708450558/ 080–25008800, ಇಮೇಲ್ ಐಡಿ: blrlegal@canarabank.com

ಬ್ಯಾಂಕಿನ ಪ್ಯಾನಲ್‌ನಲ್ಲಿ ವಕೀಲರ ನೇಮಕಾತಿಗೆ ಸಂಬಂಧಿಸಿದ ಅಧಿಸೂಚನೆ

ವಿವರಗಳು : ಡಿಆರ್‌ಟಿಗಳು, ಹೈಕೋರ್ಟ್‌ಗಳು ಸೇರಿದಂತೆ ವಿವಿಧ ನ್ಯಾಯಾಲಯಗಳು ಮತ್ತು ವಿವಿಧ ಸಾಲದ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಕಾನೂನು ಪರಿಶೀಲನೆಯ ವರದಿಗಳನ್ನು ನೀಡುವುದಕ್ಕಾಗಿ ಬ್ಯಾಂಕ್ ಅನ್ನು ಪ್ರತಿನಿಧಿಸಲು ಬ್ಯಾಂಕ್ ತನ್ನ ಸಮಿತಿಗೆ ವಕೀಲರನ್ನು ಎಂಪಾನೆಲಿಂಗ್ ಮಾಡುವ ಪ್ರಕ್ರಿಯೆಯಲ್ಲಿದೆ. ಮಂಜೂರು ಮಾಡಿದ ಕೆಲಸಕ್ಕೆ ಶುಲ್ಕ ರಚನೆಯು ಬ್ಯಾಂಕಿನ ನಿಗದಿತ ಶುಲ್ಕ ರಚನೆಯ ಪ್ರಕಾರ ಇರುತ್ತದೆ.

ಅರ್ಹತೆ : * ನಿಗದಿತ ದಿನಾಂಕದಂದು ಮೇಲೆ ತಿಳಿಸಿದ ನ್ಯಾಯಾಲಯಗಳಲ್ಲಿ 5 ವರ್ಷಗಳಿಗಿಂತ ಹೆಚ್ಚು ಅಭ್ಯಾಸ ಅನುಭವ ಹೊಂದಿರುವ ವಕೀಲರು. * ಇತರ ಬ್ಯಾಂಕ್‌ಗಳು/ಎಫ್‌ಐ ಸಂಸ್ಥೆಗಳಲ್ಲಿ ಅನುಭವ ಹೊಂದಲು ಅಪೇಕ್ಷಣೀಯ.

ಎಲ್ಲಾ ಆಸಕ್ತ ವಕೀಲರು ವಿವರವಾದ ಬಯೋ ಡೇಟಾ, ಎಲ್‌ಎಲ್‌ಬಿ ಪದವಿ ಪ್ರಮಾಣಪತ್ರ, ದಾಖಲಾತಿ ಪ್ರಮಾಣಪತ್ರ, ಐಡಿ ಪುರಾವೆಗಳು ಮತ್ತು ಇತರ ಬ್ಯಾಂಕ್‌ಗಳು/ಎಫ್‌ಐಗಳ ಎಂಪನೆಲ್‌ಮೆಂಟ್ ಲೆಟರ್‌ಗಳು ಮತ್ತು ಅನುಭವ ಪ್ರಮಾಣಪತ್ರಗಳೊಂದಿಗೆ ಎಂಪನೇಲ್ ಮಾಡಿದ್ದರೆ ಆರ್ & ಎಲ್ ಸೆಕ್ಷನ್ ಸರ್ಕಲ್ ಆಫೀಸ್ ಬೆಂಗಳೂರು ಅನ್ನು ಸಂಪರ್ಕಿಸಬೇಕು.

ಸ್ಥಳ : ಬೆಂಗಳೂರು
ದಿನಾಂಕ : 03.08.2024

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ಸದಾಶಿವ ಆಯೋಗ ವರದಿ ಶಿಫಾರಸು ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯ ಶಿಫಾರಸುಗಳ ಜಾರಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಷ್ಟ್ರೀಯ ಮೂಲನಿವಾಸಿ ಮಂಚ್ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಚ್‌ನ ಅಧ್ಯಕ್ಷ ಜೆ.ಸಿ. ಪ್ರಕಾಶ್, 'ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್.ಟಿ) ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಅಧಿವೇಶನ ಕರೆದು, ಆಯೋಗದ ವರದಿಯ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೆ ತರಬೇಕು. ಮಾದಿಗ ಜನಾಂಗದ ಮೂಲಪುರುಷನಾದ ಸಾಮ್ರಾಟ್ ಅಶೋಕನ ಜಯಂತಿಯನ್ನು ಸರ್ಕಾರ ಆಚರಿಸಿ, ರಜೆ ನೀಡಬೇಕು. ಅಶೋಕನ ಪುತ್ಥಳಿಯನ್ನು ವಿಧಾನಸೌಧದ ಮುಂಭಾಗ ಪ್ರತಿಷ್ಠಾಪಿಸಬೇಕು. ಪರಿಶಿಷ್ಟರ ಬದುಕಿನ ನಿರ್ವಹಣೆಗೆ ಪ್ರತಿ ಕುಟುಂಬಕ್ಕೆ 5 ಎಕರೆ ಕೃಷಿ ಜಮೀನು ಮತ್ತು ಕೊಳವೆ ಬಾವಿಯನ್ನು ಸರ್ಕಾರ ಮಂಜೂರು ಮಾಡಬೇಕು' ಎಂದು ಒತ್ತಾಯಿಸಿದರು.

'ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಕಾಯ್ದೆಯಡಿ ಪ್ರತಿ ವರ್ಷ ಬಜೆಟ್‌ನಲ್ಲಿ ಮೀಸಲಿಡುತ್ತಿರುವ ಹಣದಲ್ಲಿ ಮಾದಿಗ ಮತ್ತು ಸಂಬಂಧಿತ ಉಪ ಜಾತಿಗಳ ಅಭಿವೃದ್ಧಿಗೆ ನ್ಯಾಯೋಚಿತ ಪಾಲು ಒದಗಿಸಬೇಕು. ಮಾದಿಗ ಜನಾಂಗದ ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಹಣವನ್ನು ಮೀಸಲಿಡಬೇಕು. ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸದಸ್ಯರು, ಕುಲಸಚಿವರು, ಕುಲಪತಿಗಳ ಹುದ್ದೆಗಳಿಗೆ ಮಾದಿಗರನ್ನು ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ಶಾಸ್ತ್ರಿ ಬದುಕೇ ಪಾಠ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾರಣಿಗಳೂ ಸೇರಿದಂತೆ ಸಾರ್ವಜನಿಕ ರಂಗದಲ್ಲಿ ಇರುವವರ ಜೀವನ ಹೇಗಿರಬೇಕು ಎಂಬುದಕ್ಕೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಬದುಕೇ ಪಾಠ ಎಂದು ಮಾಜಿ ಶಾಸಕ ಡಿ.ಆರ್. ಪಾಟೀಲ ತಿಳಿಸಿದರು.

ಎಂ.ಕೆ. ಕೆಂಪೇಗೌಡ ಅವರು ಕನ್ನಡಕ್ಕೆ ಭಾಷಾಂತರಿಸಿದ ಡಿ.ಆರ್. ಮಾಂಕೇಕರ್ ಅವರ 'ಲಾಲ್ ಬಹದ್ದೂರ್ ಶಾಸ್ತ್ರಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನುಷ್ಯನಿಗೆ ಶಕ್ತಿ ಬರುವುದು ವ್ಯಕ್ತಿತ್ವ, ಚಾರಿತ್ರ್ಯಗಳಿಂದ ಹೊರತು ಬುದ್ಧಿವಂತಿಕೆಯಿಂದಲ್ಲ. ಜನರು ಹೃದಯವಂತರನ್ನು ಗೌರವಿಸುತ್ತಾರೆ. ಗಾಂಧೀಜಿ, ಶಾಸ್ತ್ರಿ ಇಂಥ ಗೌರವಕ್ಕೆ ಪಾತ್ರರಾದವರು. ಗ್ರಾಮೀಣ ಜನರ ಬದುಕಿನಲ್ಲಿ ಈ ವ್ಯಕ್ತಿತ್ವ ಉಳಿದಿದೆ ಎಂದು ತಿಳಿಸಿದರು.

ರಾಜಕೀಯ ಸೇರಿದಂತೆ ಎಲ್ಲ ಕ್ಷೇತ್ರಗಳು ಈಗಿರುವುದಕ್ಕಿಂತ ಕೆಳಗೆ ಹೋಗಲು ಸಾಧ್ಯವಿಲ್ಲ. ಅಷ್ಟು ಕೆಟ್ಟು ಹೋಗಿದೆ. ಇನ್ನೇನಿದ್ದರೂ ಇದರಿಂದ ಹೊರಬರುವ ದಾರಿ ಕಂಡುಕೊಳ್ಳುವುದು ಮಾತ್ರ ಉಳಿದಿರುವುದು. ಗಾಂಧೀಜಿಯ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಮತ್ತೆ ಅನುಷ್ಠಾನಕ್ಕೆ ತರುವುದೇ ಪರ್ಯಾಯ ಮಾರ್ಗ. ಸಂಪತ್ತು ಕೆಲವೇ ಜನರ ಕೈಯಲ್ಲಿರಬಾರದು. ಮಾಧ್ಯಮಗಳು ಕೂಡ ಶ್ರೀಮಂತರನ್ನು ವೈಭವೀಕರಿಸುವುದನ್ನು ಬಿಡಬೇಕು ಎಂದು ಸಲಹೆ ನೀಡಿದರು.

ಪ್ರಾಧ್ಯಾಪಕ ಎಂ.ಕೃಷ್ಣೇಗೌಡ ಅವರು ಕೃತಿ ಪರಿಚಯ ಮಾಡಿ, 'ಕಾನೂನುಗಳನ್ನು ಯಾರೇ ಮಾಡಲಿ. ಅದನ್ನು ಪಾಲಿಸಬೇಕು ಎಂಬುದು ಶಾಸ್ತ್ರಿಯವರ ನಿಲುವು. ಈ ಕೃತಿಯಲ್ಲಿ ಆರಂಭದಿಂದ ಅಂತ್ಯದವರೆಗೂ ದಾಖಲಾಗಿರುವ ವಿವಿಧ ಘಟನೆಗಳು ಅದನ್ನು ಹೇಳುತ್ತಿವೆ. ಪ್ರಾಮಾಣಿಕತೆ, ಅಗತ್ಯಕ್ಕಿಂತ ಅಧಿಕ ಸಂಪತ್ತು ಇರಬಾರದು ಎಂಬ ಅವರ ತಿಳಿವಳಿಕೆ ಎಂದಿಗೂ ಬೇಕಾದ ಮೌಲ್ಯ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಕೃತಿ ಬಿಡುಗಡೆ ಮಾಡಿದರು. ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ವಿಕೇಂದ್ರೀಕರಣ ಹಾಗೂ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ, ವಿಸ್ಮಯ ಬುಕ್ ಹೌಸ್ ಮುಖ್ಯಸ್ಥ ಪ್ರಕಾಶ್ ಚಿಕ್ಕಪಾಳ್ಯ, ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಜಿ.ಬಿ. ಶಿವರಾಜ್ ಭಾಗವಹಿಸಿದ್ದರು.

ಕಲಾವಿದರಿಗಿಲ್ಲ ಮಾಸಾಶನ ಹೆಚ್ಚಳ 'ಗ್ಯಾರಂಟಿ'

₹1 ಸಾವಿರ ಹೆಚ್ಚಳದ ಪ್ರಸ್ತಾವವನ್ನು ತಿರಸ್ಕರಿಸಿದ ಆರ್ಥಿಕ ಇಲಾಖೆ ● ಸಂಕಷ್ಟದಲ್ಲಿ ಕಲಾ ವಲಯ

● ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಸಂಕಷ್ಟದಲ್ಲಿರುವ ಕಲಾವಿದರಿಗೆ ನೀಡಲಾಗುತ್ತಿರುವ ಮಾಸಾಶನ ಹೆಚ್ಚಳದ ಪ್ರಸ್ತಾವವನ್ನು ಆರ್ಥಿಕ ಇಲಾಖೆ ತಿರಸ್ಕರಿಸಿದೆ. ಇದರಿಂದಾಗಿ ಕಲಾವಿದರು ಮಾಸಿಕ ₹ 2 ಸಾವಿರಕ್ಕೇ ತೃಪ್ತಿಗೊಳ್ಳಬೇಕಾಗಿದೆ.

ಕಲಾವಿದರ ಮಾಸಾಶನವನ್ನು ಹೆಚ್ಚಳ ಮಾಡಬೇಕೆಂಬ ಕೂಗು ಸಾಂಸ್ಕೃತಿಕ ವಲಯದಲ್ಲಿದೆ. ಸಂಗೀತ, ನೃತ್ಯ, ನಾಟಕ, ಜಾನಪದ, ಯಕ್ಷಗಾನ, ಬಯಲಾಟ, ಲಲಿತ ಕಲೆ ಸೇರಿ ವಿವಿಧ ಕಲಾ ಪ್ರಕಾರಗಳಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿ, ಕಷ್ಟದ ಸ್ಥಿತಿಯಲ್ಲಿರುವ ಕಲಾವಿದರು ಹಾಗೂ ಸಾಹಿತಿಗಳಿಗೆ ಇಲಾಖೆಯು ಮಾಸಾಶನ ನೀಡುತ್ತಿದೆ. ಇದರ ಫಲಾನುಭವಿಗಳಿಗೆ ಕನಿಷ್ಠ 58 ವರ್ಷವಾಗಿರಬೇಕು. ರಾಜ್ಯದಲ್ಲಿ ಪ್ರತಿ ವರ್ಷ ಹತ್ತು ಸಾವಿರಕ್ಕೂ ಅಧಿಕ ಮಂದಿ ಮಾಸಾಶನ ಪಡೆಯುತ್ತಿದ್ದಾರೆ.

ಈ ಮಾಸಾಶನವನ್ನು ₹ 5 ಸಾವಿರಕ್ಕೆ ಹೆಚ್ಚಳ ಮಾಡಬೇಕೆಂದು ಕಲಾವಿದರ ನಿಯೋಗ ಜಿಲ್ಲಾಧಿಕಾರಿಗಳಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿತ್ತು. ಇದಕ್ಕೆ ಮಣಿದ ಇಲಾಖೆ, ₹2 ಸಾವಿರ ಇರುವ ಮಾಸಾಶನವನ್ನು ₹3 ಸಾವಿರಕ್ಕೆ ಏರಿಸಲು ನಿರ್ಧರಿಸಿತ್ತು. ಈ ಸಂಬಂಧ ಇಲಾಖೆಯು ಪ್ರಸ್ತಾವವನ್ನು ಹಣಕಾಸು ಇಲಾಖೆಗೆ ಸಲ್ಲಿಸಿತ್ತು. ಆದರೆ, 'ಗ್ಯಾರಂಟಿ' ಯೋಜನೆಗಳಿಗೆ ಸಾವಿರಾರು ಕೋಟಿ ವೆಚ್ಚ ಮಾಡಿರುವುದರಿಂದ ಈ ಪ್ರಸ್ತಾವವನ್ನು ಆರ್ಥಿಕ ಇಲಾಖೆ ತಿರಸ್ಕರಿಸಿದೆ. ಇನ್ನೊಂದೆಡೆ 2023–24ನೇ ಸಾಲಿನ ಧನಸಹಾಯದ 2ನೇ ಕಂತಿನ ಹಣವನ್ನೂ ಬಿಡುಗಡೆ ಮಾಡಿಲ್ಲ. ಇದರಿಂದ ಕಲಾವಿದರು ಕಂಗಾಲಾಗಿದ್ದಾರೆ.

ಸಂಕಷ್ಟದಲ್ಲಿ ಕಲಾವಿದರು: 2020ರಲ್ಲಿ ಕೋವಿಡ್ ಸಾಂಕ್ರಾಮಿಕವು ರಾಜ್ಯ ಪ್ರವೇಶಿಸಿದ ಬಳಿಕ ಸಾಂಸ್ಕೃತಿಕ ಚಟುವಟಿಕೆಗಳು ಸಂಪೂರ್ಣ ಸ್ತಬ್ಧವಾಗಿದ್ದವು. ಸುಮಾರು ಎರಡೂವರೆ ವರ್ಷ ಅವಕಾಶಗಳಿಲ್ಲದೆ ಕಲಾವಿದರು ಸಂಕಷ್ಟಕ್ಕೆ ಸಿಲುಕಿ, ಅನ್ಯ ವೃತ್ತಿ ಅವಲಂಬಿಸಿದ್ದರು. ಆ ವೇಳೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಕಲಾವಿದರಿಗೆ ಸರ್ಕಾರ ಘೋಷಿಸಿದ್ದ ₹3 ಸಾವಿರ ನೆರವಿಗೆ 26 ಸಾವಿರಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿದ್ದರು. ಇದೇ ವೇಳೆ ಹಿರಿಯ ಕಲಾವಿದರ ಮಾಸಾಶನ ಹೆಚ್ಚಿಸುವಂತೆ ರಾಜ್ಯದಾದ್ಯಂತ ಕಲಾವಿದರು ಆಗ್ರಹಿಸಿದ್ದರು. ಆಗ ಬಿಜೆಪಿ ನೇತೃತ್ವದ ಸರ್ಕಾರ ಮಾಸಾಶನ ಹೆಚ್ಚಳದ ಭರವಸೆ ನೀಡಿದ್ದರೂ ಸಾಕಾರಗೊಂಡಿರಲಿಲ್ಲ.

'ಮಾಸಾಶನಕ್ಕೆ ಸಂಬಂಧಿಸಿದಂತೆ ಸಚಿವ ಶಿವರಾಜ್ ತಂಗಡಗಿ ಅವರು ಸಭೆ ನಡೆಸಿ, ₹ 3 ಸಾವಿರಕ್ಕೆ ಹೆಚ್ಚಿಸಲು ಕ್ರಮವಹಿಸುವಂತೆ ಸೂಚಿಸಿದ್ದರು. ಅದರಂತೆ ಕಲಾವಿದರ ಮಾಹಿತಿಯೊಂದಿಗೆ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆ ಪ್ರಸ್ತಾವವನ್ನು ತಿರಸ್ಕರಿಸಿದೆ. ಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಬಳಕೆಯಾಗುತ್ತಿರುವುದರಿಂದ ಇಲಾಖೆಯ ಅನುದಾನದಲ್ಲಿಯೂ ಕಡಿತ ಮಾಡಲಾಗಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

ಧನಸಹಾಯದ 2ನೇ ಕಂತು ಬಾಕಿ

ಸಂಸ್ಕೃತಿ ಇಲಾಖೆಯು 2023–24ನೇ ಸಾಲಿನ ಧನಸಹಾಯದ ಮೊದಲ ಕಂತನ್ನು ಕಳೆದ ಮಾರ್ಚ್‌ನಲ್ಲಿ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಬಿಡುಗಡೆ ಮಾಡಿ ಆದೇಶ ಹೊರಡಿಸಿತ್ತು. ಇದೇ ಮೊದಲ ಬಾರಿಗೆ ಕಂತು ರೂಪದಲ್ಲಿ ಅನುದಾನ ಒದಗಿಸಿರುವುದು ಕಲಾವಿದರ ಆಕ್ರೋಶಕ್ಕೆ ಕಾರಣವಾಗಿತ್ತು. ಎರಡನೇ ಕಂತು ಈವರೆಗೂ ಬಿಡುಗಡೆಯಾಗದಿರುವುದರಿಂದ ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ಗೊಂದಲಕ್ಕೆ ಒಳಗಾಗಿದ್ದು, ಆದಷ್ಟು ಶೀಘ್ರ ಬಿಡುಗಡೆ ಮಾಡುವಂತೆ ಇಲಾಖೆಯ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಏಳು ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿದ್ದರೂ, ಅರ್ಜಿ ಅಲ್ಲಿಸುವ ನಾಲ್ಕು ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳಲ್ಲಿ ಒಂದು ಸಾವಿರದಿಂದ 1,500 ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ. ಇಲಾಖೆಯ ಖಜಾನೆಯಲ್ಲಿ ₹6 ಕೋಟಿ ಮಾತ್ರ ಅನುದಾನ ಧನಸಹಾಯಕ್ಕೆ ಲಭ್ಯವಿದ್ದರಿಂದ ಸಾಮಾನ್ಯ ವರ್ಗದಲ್ಲಿ 831, ಪರಿಶಿಷ್ಟ ಜಾತಿ ಉಪಯೋಜನೆಯಡಿ 519 ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ 97 ಸಂಘ–ಸಂಸ್ಥೆಗಳಿಗೆ ಮೊದಲ ಕಂತು ಹಂಚಿಕೆ ಮಾಡಲಾಗಿದೆ.

ಧನಸಹಾಯದ 2ನೇ ಕಂತನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಅನುದಾನ ಬಂದೊಡನೆ ಸಂಘ–ಸಂಸ್ಥೆಗಳಿಗೆ ಬಾಕಿ ಹಣ ಬಿಡುಗಡೆ ಮಾಡಲಾಗುತ್ತದೆ
ಧರಣೀದೇವಿ ಮಾಲಗತ್ತಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ವರ್ಷವಾರು ಮಾಸಾಶನ ಪಡೆದ ಕಲಾವಿದರು

ವರ್ಷ	ಕಲಾವಿದರು
2020-21	12,171
2021-22	11,264
2022-23	10,659
2023-24	13,108

ಜ್ಞಾನ ವಿಜ್ಞಾನ ಸಮಿತಿ ಘಟಕ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನವನ್ನು ಸುಜ್ಞಾನದಿಂದ ಬಳಸಬೇಕು. ಅಜ್ಞಾನವನ್ನು ಅಳಿಸುವಂತಾಗಬೇಕು. ಆಗ ಮಾತ್ರ ವಿಜ್ಞಾನದಿಂದ ಸಮಾಜ ಸುಧಾರಣೆಯಾಗಲು ಸಾಧ್ಯ ಎಂದು ನಿವೃತ್ತ ಪ್ರಾಧ್ಯಾಪಕ ಬಸವರಾಜ್ ಎ.ಕಾಗಲಿ ತಿಳಿಸಿದರು.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ (ಕೆಜಿವಿಎಸ್) ರಾಜ್ಯ ಕಾರ್ಯದರ್ಶಿ ಈ. ಬಸವರಾಜು ಸಮಿತಿಯ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಬಗ್ಗೆ ಮಾಹಿತಿ ನೀಡಿದರು. ಮೂಢನಂಬಿಕೆಯ ವಿರುದ್ಧ ಜಾಗೃತಿ ಮೂಡಿಸಲು ಆ.20ರಂದು ರಾಜ್ಯದಾದ್ಯಂತ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಕೆಜಿವಿಎಸ್ ನಗರ ಜಿಲ್ಲಾಧ್ಯಕ್ಷ ನಾ.ಶ್ರೀಧರ್ ತಿಳಿಸಿದರು.

ಕೆಜಿವಿಎಸ್ ರಾಜರಾಜೇಶ್ವರಿ ವಿಧಾನ ಸಭಾ ಘಟಕದ ಅಧ್ಯಕ್ಷ ಎ.ಕಾಳಪ್ಪ, ಪದಾಧಿಕಾರಿಗಳಾದ ಎನ್.ಜಿ. ಮಾರುತಿ, ಬಸವಯ್ಯ, ರೇಖಾ ವಿ, ಚಂದ್ರು, ಚಂದ್ರಶೇಖರ್, ಪ್ರಸಾದ್, ಶಾಲೆಯ ಆಡಳಿತಾಧಿಕಾರಿ ಗೋಪಾಲನ್, ಮುಖ್ಯ ಶಿಕ್ಷಕಿ ಮೀನಾಕ್ಷಿ ಬೆಳ್ಳಟ್ಟಿ, ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷೆ ಮಾನಸ ಸಿದ್ದಲಿಂಗಯ್ಯ, ನಾಟಕಕಾರ ನಾರಾಯಣಘಟ್ಟ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

'₹6.08 ಕೋಟಿ ಅಕ್ರಮ ವರ್ಗಾವಣೆ'

ಬಾಗಲಕೋಟೆ: 'ಐಡಿಬಿಐ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಇಲಾಖೆಯ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಇಲಾಖೆಯ ನಿರ್ದೇಶಕರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಅವರು ಹೇಳಿದರು.



'ಪ್ರವಾಸೋದ್ಯಮ ಇಲಾಖೆಯಲ್ಲಿ ₹2.47 ಕೋಟಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ₹79.75 ಲಕ್ಷ, ಪಂಚಾಯತ್‌ರಾಜ್ ಇಲಾಖೆಯಲ್ಲಿ ₹86.40 ಲಕ್ಷ, ಕೈಮಗ್ಗ ಮತ್ತು ಜವಳಿಯಲ್ಲಿ ₹17.81 ಲಕ್ಷ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ₹1.76 ಲಕ್ಷ ಸೇರಿ ಒಟ್ಟು ₹6.08 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿದ್ದು ಪತ್ತೆಯಾಗಿದೆ' ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸದಸ್ಯರಾಗಿ ವೆಂಕಟೇಶ್ ನೇಮಕ

ಬೆಂಗಳೂರು: ನೆಫ್ರೊ-ಯುರಾಲಜಿ ಸಂಸ್ಥೆಯ ಆಡಳಿತ ಪರಿಷತ್ತಿಗೆ ನಾಮ ನಿರ್ದೇಶಿತ ಸದಸ್ಯರನ್ನಾಗಿ ಡಾ.ಜಿ.ಕೆ. ವೆಂಕಟೇಶ್ ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆ ನೇಮಕ ಮಾಡಿದೆ.

ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ಇಲಾಖೆ ಆದೇಶದಲ್ಲಿ ತಿಳಿಸಿದೆ.

ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಇ-ಮೇಲ್: secretary@bel.co.in ವೆಬ್‌ಸೈಟ್: www.bel-india.in ಫೋನ್: 080-25039300

70ನೇ ವಾರ್ಷಿಕ ಸರ್ವಸದಸ್ಯರ ಸಭೆ, ಇ-ಮತದಾನ ಮತ್ತು ಲೆಕ್ಕ ಪುಸ್ತಕ ಮುಕ್ತಾಯಗೊಳಿಸುವ ಸೂಚನೆ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ 70ನೇ ವಾರ್ಷಿಕ ಸರ್ವಸದಸ್ಯರ ಸಭೆಯು (AGM) ಬುಧವಾರ, 28 ಆಗಸ್ಟ್, 2024 ರಂದು ಬೆಳಿಗ್ಗೆ 10:00 ಗಂಟೆಗೆ (ಐಎಸ್‌ಟಿ) ವಿಸಿ/ಓಎವಿಎಂ ಮೂಲಕ ನಡೆಯಲಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಕಾರ್ಪೊರೇಟ್ ವ್ಯವಹಾರಿಗಳು ("ಎಂ.ಸಿ.ಎ") ಸಾಮಾನ್ಯ ಸುತ್ತೋಲೆಗಳ ಸಂಖ್ಯೆ ದಿನಾಂಕ 8ನೇ ಏಪ್ರಿಲ್ 2020ರ ಸಂಖ್ಯೆ 14/2020, ಅನ್ನು ದಿನಾಂಕ 13ನೇ ಏಪ್ರಿಲ್ 2020ರ ಸಂಖ್ಯೆ 17/2020, 5ನೇ ಮೇ 2020ರ ಸಂಖ್ಯೆ 20/2020, 5ನೇ ಮೇ 2022ರ 2/2022, 28ನೇ ಡಿಸೆಂಬರ್ 2022ರ 10/2022, ನೂತನವಾಗಿ ದಿನಾಂಕ 25ನೇ ಸೆಪ್ಟೆಂಬರ್ 2023ರ 09/2023ನ್ನು ಜೊತೆ ಓದಲಾಗಿದ್ದು ಮತ್ತು ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿಯ ದಿನಾಂಕ 6ನೇ ಅಕ್ಟೋಬರ್ 2023ರ ಸುತ್ತೋಲೆ ಸಂಖ್ಯೆ SEBI/HO/DDHS/P/CIR/2023/0164 ರಲ್ಲಿ ತಿಳಿಸಿದಂತೆ (ಸಮಗ್ರವಾಗಿ ಸುತ್ತೋಲೆಗಳು ಎಂದು ಉಲ್ಲೇಖವಾಗಿದ್ದು), ಇದಕ್ಕೆ ಸಂಬಂಧಿಸಿದಂತೆ ಇತರೆ ಅನ್ವಯ ಸುತ್ತೋಲೆಗಳಲ್ಲಿ ತಿಳಿಸಿದಂತೆ ವಿಡಿಯೋ ಕಾನ್ಫರೆನ್ಸ್ (ವಿ.ಸಿ.) ಅಥವಾ ಇತರ ಶ್ರವ್ಯ ದೃಶ್ಯ ಮಾಧ್ಯಮ (ಒ.ಎ.ವಿ.ಎಂ.) ಮೂಲಕ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ("ಎಜಿಎಂ") ನಡೆಸಲು ಕಂಪನಿಗಳಿಗೆ ಅನುಮತಿ ನೀಡಿದೆ. ಕಂಪನಿ ಕಾಯ್ದೆ 2013 ("ಕಾಯ್ದೆ"), ಎಸ್.ಈ.ಬಿ.ಐ. (ಬಾಧ್ಯತೆಗಳು ಮತ್ತು ಅವಶ್ಯಕತೆಗಳ ಪ್ರಕಟೀಕರಣ ಪಟ್ಟಿ) ವಿನಿಮಯಗಳು 2015 ("ಪಟ್ಟಿ ವಿನಿಮಯಗಳು") ನಿಬಂಧನೆಗಳು ಮತ್ತು ಸುತ್ತೋಲೆಗಳನ್ನು ಪಾಲಿಸುವುದರೊಂದಿಗೆ, ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ("ನೋಟೀಸು") ನೋಟೀಸಿನಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ನಡೆಸಲು ವಿಡಿಯೋ ಕಾನ್ಫರೆನ್ಸ್ (ವಿ.ಸಿ.) / ಇತರ ಶ್ರವ್ಯ ದೃಶ್ಯ ಮಾಧ್ಯಮದ (ಒ.ಎ.ವಿ.ಎಂ.) ಮೂಲಕ ಕಂಪನಿಯ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಆಯೋಜಿಸಲಾಗುತ್ತಿದೆ.

2023–24 ಹಣಕಾಸು ವರ್ಷದ ಏಕೀಕೃತ ವಾರ್ಷಿಕ ವರದಿಯೊಂದಿಗೆ ಎಜಿಎಂ ಅನ್ನು ಕರೆಯುವ ಸೂಚನೆಯನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಎಲ್ಲ ಸದಸ್ಯರಿಗೆ ಅವರ ನೋಂದಾಯಿತ ಇ-ಮೇಲ್ ವಿಳಾಸಗಳಿಗೆ, ಅಂದರೆ ಠೇವಣಿ ಭಾಗವಹಿಸುವವರು ("ಡಿಪಿಗಳು") / ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈ ಲಿಮಿಟೆಡ್ ಗೆ ("ಆರ್‌ಟಿಎ") ಕಳಿಸಲಾಗುತ್ತದೆ. ಈ ಮೇಲೆ ತಿಳಿಸಲಾದ ದಾಖಲೆಗಳನ್ನು ಕಂಪನಿಯ ವೆಬ್‌ಸೈಟ್ www.bel-india.in ನಲ್ಲಿ ಸಹ 'ಹೂಡಿಕೆದಾರರು' ಭಾಗದ ಅಡಿಯಲ್ಲಿ ಮತ್ತು ಷೇರು ವಿನಿಮಯಗಳು ಅಂದರೆ, ಬಿ.ಎಸ್.ಇ. ಲಿಮಿಟೆಡ್ ಮತ್ತು ರಾಷ್ಟ್ರೀಯ ಭಾರತ ಷೇರು ವಿನಿಮಯ ಕ್ರಮಾನುಸಾರ www.bseindia.com ಮತ್ತು www.nseindia.com ರಲ್ಲಿ ಕೂಡ ಒದಗಿಸಲಾಗಿದೆ. ಹೆಚ್ಚುವರಿಯಾಗಿ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿ.ಡಿ.ಎಸ್.ಎಲ್.)ನ ವೆಬ್‌ಸೈಟ್ www.evotingindia.com ನಲ್ಲಿ ಸಹ ನೋಟಿಸ್ ಲಭ್ಯವಿರುತ್ತದೆ. ಎಜಿಎಂ ಪ್ರಾರಂಭವಾಗುವ ನಿಗದಿತ ಸಮಯಕ್ಕೆ 30 ನಿಮಿಷಗಳ ಮೊದಲು ಮತ್ತು ಎಜಿಎಂ ಸಮಯದಲ್ಲಿ ಸದಸ್ಯರಿಗೆ ಎಜಿಎಂಗೆ ವಿಸಿ / ಒಎವಿಎಂ ಮೂಲಕ ಲಾಗಿನ್ ಬಳಸಿ ಮತ್ತು ಕಂಪನಿಯ ಎಜಿಎಂಗೆ ಇವಿಎಸ್‌ಎನ್ ಆಯ್ಕೆಮಾಡಿ ಸೇರಲು ಅನುಮತಿಸಲಾಗಿದೆ. www.evotingindia.com ವಿಸಿ / ಒಎವಿಎಂ ಮೂಲಕ ಎಜಿಎಂಗೆ ಸೇರುವ ವಿಧಾನವನ್ನು ನೋಟಿಸ್ ನಲ್ಲಿ ಉಲ್ಲೇಖಿಸಲಾಗಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 10 ಮತ್ತು ನಿಯಮಗಳು ನಿಯಂತ್ರಣ 42ರೊಂದಿಗೆ ಕಾಯ್ದೆಯ ಸೆಕ್ಷನ್ 91ರ ಅನುಸಾರ ನೋಟಿಸ್ ನೀಡಲಾಗಿದ್ದು ಮತ್ತು 2023–24ನೇ ಹಣಕಾಸಿನ ವರ್ಷಕ್ಕೆ 70ನೇ ಎಜಿಎಂ ಹಾಗೂ ಅಂತಿಮ ಡಿವಿಡೆಂಡನ್ನು ಪಾವತಿಸುವ ಸಲುವಾಗಿ ಕಂಪನಿಯ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು **ಶುಕ್ರವಾರ 16ನೇ ಆಗಸ್ಟ್ 2024 ರಿಂದ ಭಾನುವಾರ 18ನೇ ಆಗಸ್ಟ್ 2024ರ ವರೆಗೆ** (ಎರಡು ದಿನಗಳು ಒಳಗೊಂಡಂತೆ) ಸ್ಥಗಿತಗೊಳಿಸಲಾಗಿದೆ. 2023–24ರ ಹಣಕಾಸು ವರ್ಷದ ಅಂತಿಮ ಡಿವಿಡೆಂಡ್ ಅನ್ನು ಎಜಿಎಂ ನಲ್ಲಿ ಘೋಷಿಸಿದ್ದಲ್ಲಿ 30 ದಿನಗಳ ಶಾಸನಬದ್ಧ ಅವಧಿ ಒಳಗೆ **15 ಆಗಸ್ಟ್, 2024ರ ವರೆಗೆ** ನೋಂದಣಿ ಇರುವ ಭೌತಿಕ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ಪಾವತಿಸಲಾಗುವುದು. ಆದಾಗ್ಯೂ ಡಿಮೆಟಿರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ **15ನೇ ಆಗಸ್ಟ್, 2024** ರಂತೆ ವ್ಯವಹಾರದ ಸಮಯ ಮುಕ್ತಾಯದವರೆಗೆ ಲಾಭದಾಯಕ ಮಾಲೀಕರಾಗಿರುವ ವ್ಯಕ್ತಿಗಳಿಗೆ ಠೇವಣಿದಾರರು ಒದಗಿಸಿದ ವಿವರಗಳ ಪ್ರಕಾರ ಲಾಭಾಂಶವನ್ನು ಪಾವತಿಸಲಾಗುವುದು.

ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಮತ್ತು ನಿಯಮ 20 ಕಾಯ್ದೆಯ ಸೆಕ್ಷನ್ 108 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮಗಳ ಅನುಸಾರವಾಗಿ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಜಾರಿಗೊಳಿಸಿದ ಸಾಮಾನ್ಯ ಸಭೆಗಳ ಸೆಕ್ರೆಟರಿಯಲ್ ಸ್ಟಾಂಡರ್ಡ್ (ಎಸ್‌ಎಸ್–2) ಲಿಸ್ಟಿಂಗ್ ರೆಗ್ಯುಲೇಷನ್ಸ್ 44ರ ಪ್ರಕಾರ, ಎಜಿಎಂ ನಲ್ಲಿ ವ್ಯವಹಾರ ನಡೆಸಲು ಸಂಬಂಧಿಸಿದಂತೆ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಕಂಪನಿಯು ಸಿಡಿಎಸ್‌ಎಲ್ ಮೂಲಕ ಒದಗಿಸಿದೆ. ದೂರಸ್ಥ ಇ–ಮತದಾನಕ್ಕೆ ಅನುಕೂಲವಾಗುವಂತೆ ಕಂಪನಿಯು ಸಿಡಿಎಸ್‌ಎಲ್ ನೊಂದಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಎಜಿಎಂ ಸಮಯದಲ್ಲಿ ದೂರಸ್ಥ ಇ–ಮತದಾನ ಮತ್ತು ಇ–ಮತದಾನದ ವಿವರವಾದ ಕಾರ್ಯ ವಿಧಾನ ಮತ್ತು ಸೂಚನೆಗಳನ್ನು ನೋಟೀಸ್ ನಲ್ಲಿ ಉಲ್ಲೇಖಿಸಲಾಗಿದೆ. ಎಲ್ಲಾ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. **ಎಜಿಎಂನಲ್ಲಿ ದೂರಸ್ಥ ಇ–ಮತದಾನದ ಅಥವಾ ಇ–ಮತದಾನದ ಮೂಲಕ ಮತ ಚಲಾಯಿಸುವ ಅರ್ಹತೆಯನ್ನು ನಿರ್ಧರಿಸುವ ಕಟ್–ಆಫ್ ದಿನಾಂಕ ಬುಧವಾರ, 21ನೇ ಆಗಸ್ಟ್, 2024 ಆಗಿರುತ್ತದೆ. ದೂರಸ್ಥ ಇ–ಮತದಾನವು 4 ದಿನಗಳ ಅವಧಿಗೆ ತೆರೆದಿರುತ್ತದೆ. ಶನಿವಾರ 24ನೇ ಆಗಸ್ಟ್ 2024 ಬೆಳಿಗ್ಗೆ 9.00 ಗಂಟೆಗೆ (ಭಾರತೀಯ ಸಮಯ) ದಿಂದ ಪ್ರಾರಂಭವಾಗಿ ಮಂಗಳವಾರ 27ನೇ ಆಗಸ್ಟ್ 2024 ಸಂಜೆ 5.00 ರ ವರೆಗೆ (ಭಾರತೀಯ ಸಮಯ) ಭೌತಿಕ ರೂಪದಲ್ಲಿ ಅಥವಾ ಡಿಮೆಟಿರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರ ಸದಸ್ಯರಿಗೆ ತೆರೆದಿರುತ್ತದೆ.** ತದನಂತರ ದೂರಸ್ಥ ಇ–ಮತದಾನದ ಮಾಡ್ಯೂಲ್ ಅನ್ನು ಮತದಾನಕ್ಕೆ ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸಲಾಗುತ್ತದೆ. ಮೇಲಿನ ದಿನಾಂಕ ಮತ್ತು ಸಮಯದ ನಂತರ ದೂರಸ್ಥ ಇ–ಮತದಾನವನ್ನು ಅನುಮತಿಸಲಾಗುವುದಿಲ್ಲ. ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
2. ಡಿಮ್ಯಾಟ್ ಮೋಡ್, ಭೌತಿಕ ಮೋಟ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿದ ಸದಸ್ಯರಿಂದ ಎಜಿಎಂನಲ್ಲಿ ದೂರಸ್ಥ ಇ–ಮತದಾನ ಮತ್ತು ಮತದಾನ ಮಾಡುವ ವ್ಯವಸ್ಥೆಯನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗಿದೆ.
3. ಎಜಿಎಂಗೆ ಮುಂಚಿತವಾಗಿ ದೂರಸ್ಥ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂನಲ್ಲಿ ವಿಸಿ / ಒಎವಿಎಂ ಮೂಲಕ ಹಾಜರಾಗಬಹುದು / ಭಾಗವಹಿಸಬಹುದು. ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
4. ಯಾವುದೇ ವ್ಯಕ್ತಿಯು ಎ.ಜಿ.ಎಂ. ನೋಟಿಸು ಜಾರಿಯಾದ ನಂತರ ಷೇರುದಾರರಾದರೆ ಮತ್ತು ಕಂಪನಿಯ ಷೇರುಗಳನ್ನು ಪಡೆದಿದ್ದರೆ ಮತ್ತು ನಿಗದಿಪಡಿಸಿದ ದಿನಾಂಕದಂತೆ ಷೇರುಗಳನ್ನು ಹೊಂದಿದ್ದರೆ ಎಜಿಎಂ ನೋಟಿಸ್‌ನಲ್ಲಿ ತಿಳಿಸಿದಂತೆ ಸಂಕಲ್ಪಗಳನುಸಾರವಾಗಿ ಮತದಾನಕ್ಕೆ ಸೂಚನೆಗಳನ್ನು ಅನುಕರಿಸತಕ್ಕದ್ದು.
5. ಎಜಿಎಂ ನಲ್ಲಿ ವಿಸಿ / ಒಎವಿಎಂ ಮೂಲಕ ಹಾಜರಿರುವ ಮತ್ತು ದೂರಸ್ಥ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸಿದ ಸದಸ್ಯರುಗಳು ಎಜಿಎಂ ಸಮಯದಲ್ಲಿ ಇ–ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಎಜಿಎಂ ಸಮಯದಲ್ಲಿ ಇ–ಮತದಾನದ ವಿವರವಾದ ಕಾರ್ಯವಿಧಾನ ಮತ್ತು ಸೂಚನೆಗಳನ್ನು ನೋಟಿಸ್ ನಲ್ಲಿ ಉಲ್ಲೇಖಿಸಲಾಗಿದೆ.
6. ತಮ್ಮ ಇ–ಮೇಲ್ ವಿಳಾಸವನ್ನು ಇನ್ನು ನೋಂದಾಯಿಸದ ಸದಸ್ಯರು ಷೇರುಗಳನ್ನು ಡಿಮೆಟಿರಿಯಲೈಸ್ಡ್ ರೂಪದಲ್ಲಿ ಮತ್ತು ಕಂಪನಿ / ಆರ್‌ಟಿಎ ಯೊಂದಿಗೆ ಷೇರುಗಳನ್ನು ಭೌತಿಕ ರೂಪದಲ್ಲಿ ಇಟ್ಟುಕೊಂಡಿದ್ದರೆ ಅದನ್ನು ತಮ್ಮ ಡಿಪಿ ಯೊಂದಿಗೆ ನೊಂದಾಯಿಸಿಕೊಳ್ಳಲು ವಿನಂತಿಸಲಾಗುತ್ತದೆ.

ಎಜಿಎಂನ ಇ–ಮತದಾನ ವ್ಯವಸ್ಥೆ ಮತ್ತು ಇ–ಮತದಾನಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ಪ್ರಶ್ನೆಗಳನ್ನು ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ನೀವು ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು ("FAQಗಳು") ಮತ್ತು ಇ–ಮತದಾನ ಕೈಪಿಡಿಯನ್ನು ಸಹಾಯ ಭಾಗದ ಅಡಿಯಲ್ಲಿ ಪಡೆಯಬಹುದು ಅಥವಾ ಸಂಪರ್ಕಿಸಬಹುದು. ಭಾರತೀಯರ ಪರವಾಗಿ www.evotingindia.com ಅಥವಾ helpdesk.evoting@cdslindia.com ಇ–ಮೇಲ್ ಬರೆಯಬಹುದು ಅಥವಾ ಟೋಲ್‌ಫ್ರೀ ಸಂ. 18002109911ರ ಮುಖೇನ ಸಂಪರ್ಕಿಸಬಹುದು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ನ ಪರವಾಗಿ
ಸಹಿ/–
ಎಸ್. ಶ್ರೀನಿವಾಸ್
ಕಂಪನಿ ಕಾರ್ಯದರ್ಶಿ

ಬೆಂಗಳೂರು
4ನೇ ಆಗಸ್ಟ್ 2024

'ಹರ್ ಏಕ್ ಕಾಮ್ ದೇಶ್ ಕೆ ನಾಮ್'

ಭಾರತ ಸರ್ಕಾರ
ಬುಡಕಟ್ಟು ವ್ಯವಹಾರಗಳ ಸಚಿವಾಲಯ
(ಸ್ಕಾಲರ್‌ಶಿಪ್ ಸೆಕ್ಷನ್)
सत्यमेव जयते

ಸನ್ 2024–25ನೇ ಸಾಲಿಗೆ ಎಸ್‌ಟಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಫೆಲೋಶಿಪ್

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಇವರು ಸನ್ **2024–25**ನೇ ಸಾಲಿಗೆ **"ಎಸ್‌ಟಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಫೆಲೋಶಿಪ್ ಮತ್ತು ಸ್ಕಾಲರ್‌ಶಿಪ್"** ಯೋಜನೆ ಅಡಿಯಲ್ಲಿ ರಾಷ್ಟ್ರೀಯ ಫೆಲೋಶಿಪ್‌ಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಪಿಹೆಚ್.ಡಿ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಈ ಫೆಲೋಶಿಪ್ ನೀಡಲಾಗುತ್ತದೆ.

ಸ್ಲಾಟ್‌ಗಳ ಸಂಖ್ಯೆ: 750

ಆಸಕ್ತಿಯುಳ್ಳ ಅಭ್ಯರ್ಥಿಗಳು https://fellowship.tribal.gov.in/ ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.09.2024. ಅಭ್ಯರ್ಥಿಗಳು ತಮ್ಮ ಹೆಚ್ಚಿನ ವಿವರಗಳಿಗಾಗಿ ಸಚಿವಾಲಯದ https://fellowship.tribal.gov.in ಪೋರ್ಟಲ್‌ಗೆ ಭೇಟಿ ನೀಡಬಹುದು.

CBC 43101/12/0002/2425

PUBLIC NOTICE

We are investigating the title of the owners as detailed in the table below **("Owners")** with respect to the lands situated at Alambadi Village, Lakkuru Hobli, Maluru Taluk, Kolar District, totally admeasuring 3 Acres, which is more fully described in the schedule hereunder and hereinafter referred to as the **"Schedule Property"**.

Any person having any right, title, claim or interest in the Schedule Property must notify the undersigned with documentary proof thereof within fifteen (15) days of this publication. In case no such notice is received by us within fifteen (15) days from the date of publication of this notice, it shall be presumed that the title of the Owners with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof. Claims or alleged interest, if any, which are not received within fifteen (15) days from the date of publication of this notice shall be deemed to have been waived and disregarded for all intents and purposes and shall not be binding on our client.

SCHEDULE PROPERTY

All that piece and parcel of lands situated at Alambadi Village, Lakkuru Hobli, Malur Taluk, Kolar District, totally admeasuring 3 Acres [vide Conversion Order No.ALN.SR.62/2015-16, dated 07.08.2017, issued by Deputy Commissioner, Kolar District, Kolar] and bounded on:

Sl. Nos	Survey Nos.	Extents Acres	Extents Guntas	Boundaries East By: E; West By: W; North By: N; South By: S	Details of the Owners
1	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Property bearing C. Lokanadha Reddy: and S: Road;	Mr. C. Bhaskar Reddy, son of Mr. late C. Munirathnam Reddy.
2	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Property bearing Chengalareddy Satwik: and S: Property bearing C. Lokhanadhareddy;	Mrs. C. Vijayalakshmi Devi, wife of Mr. C. Lokhanadha Reddy.
3.	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Property bearing C. Vijayalakshmi Devi: and S: Property bearing C. Bhaskar Reddy;	Mr. Chengalareddygari Lokanatha Reddy, son of Mr. late C. Munirathnam Reddy.
4.	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Property bearing C. Srujan Kumar Reddy: and S: Property bearing C. Vijayalakshmi Devi;	Mr. Chengalreddy Sathwik, son of Mr. Chengalreddygari Bhaskar Reddy.
5.	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Property bearing T. Navaneeth Kumari & Jagannadham Jessy Beulah: and S: Property bearing Chengalreddy Sathwik;	Mr. C. Srujan Kumar Reddy, son of Mr. Chengalreddygari Lokanatha Reddy.
6.	**243** (Old No.132)	00	20	E: Land bearing Sy.No.132/p1. W: Land bearing Sy.No.242. N: Land bearing to Seenappa.B: and S: Property bearing to C.Srujan Reddy;	Mrs. T. Navaneetha Kumari, daughter of late T. Sudakar Reddy and Mrs. Jagannadham Jessy Beulah, wife of Mr. C. Srujan Kumar Reddy

LAW PARK ASSOCIATES
JUSTICE ON YOUR SIDE
Sd/- **LAW PARK ASSOCIATES,** Advocate
6th Sector, HSR Layout, Bangalore-560 102.
helpdesk@lawpark.in
+91 80 41715959, +91 98456 65379

ಸಾಂಸ್ಕೃತಿ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ
(ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ನೇತೃತ್ವದಲ್ಲಿ)
15–ಎ, ಸೆಕ್ಟರ್–07, ದ್ವಾರಕಾ, ನವದೆಹಲಿ–110075
सत्यमेव जयते
ಸಂಸ್ಕೃತಿ ಸಚಿವಾಲಯ
ಭಾರತ ಸರ್ಕಾರ

ಜಾಹೀರಾತು ಸಂ.: ಸಿಸಿಆರ್‌ಟಿ/11011/02/2024/03

ಸಿಸಿಆರ್‌ಟಿಯಲ್ಲಿ ಗ್ರೂಪ್–'ಎ' ನೇಮಕಾತಿ

ಸಿಸಿಆರ್‌ಟಿ'ಯಲ್ಲಿ ಡೆಪ್ಯುಟೇಶನ್ ಆಧಾರದಲ್ಲಿ ಕೆಳಕಂಡ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಲಿಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ:

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವೇತನ ಹಂತ	ನೇಮಕಾತಿ ವಿಧಾನ
1.	ನಿರ್ದೇಶಕರು	01	ವೇತನ ಹಂತ–12 (ರೂ. 78,800–2,09,200) 7ನೇ ಸಿಪಿಸಿ ಪ್ರಕಾರ	ಡೆಪ್ಯೂಟೇಶನ್ ಆಧಾರದಲ್ಲಿ
2.	ಸಹಾಯಕ ನಿರ್ದೇಶಕರು (ಹಣಕಾಸು)	01	ವೇತನ ಹಂತ–11 (ರೂ. 67,700–2,08,700) 7ನೇ ಸಿಪಿಸಿ ಪ್ರಕಾರ	

ವಿವರವಾದ ಜಾಹೀರಾತು, ನಿರ್ದಿಷ್ಟ ನಮೂನೆಯ ಅರ್ಜಿ ಮತ್ತು ಸಾಮಾನ್ಯ ಸೂಚನೆಗಳು ಸಿಸಿಆರ್‌ಟಿ'ಯ https://ccrtindia.gov.in/ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಸೂಕ್ತ ವಿಧಾನದಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 28/08/2024 ಆಗಿರುತ್ತದೆ.

ಡೆ. ಡೈರೆಕ್ಟರ್ (ಅಡ್ಮಿನಿಸ್ಟ್ರೇಶನ್)
ಸಿಸಿಆರ್‌ಟಿ, ನವದೆಹಲಿ

cbc09127/12/0005/2425

ಬೈರತಿ–ಆವಲಹಳ್ಳಿ ಮುಖ್ಯರಸ್ತೆಯಲ್ಲಿ ವಾಹನ ಸವಾರರಿಗೆ ಸಂಕಷ್ಟ

ಪ್ರತಿ ಮಳೆಯಲ್ಲೂ ಸಂಚಾರಕ್ಕೆ ತೊಡಕು

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಬೈರತಿ ಗ್ರಾಮದಿಂದ ಆವಲಹಳ್ಳಿ ಮೂಲಕ ರಾಷ್ಟ್ರೀಯ ಹೆದ್ದಾರಿ ಮದ್ರಾಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಪ್ರತಿ ಮಳೆಯಲ್ಲೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ.

ಚರಂಡಿ ವ್ಯವಸ್ಥೆ ಇಲ್ಲದ, ರಸ್ತೆ ಗುಂಡಿಗಳಿಂದ ಕೂಡಿದ್ದರಿಂದ ಪ್ರತಿ ಬಾರಿ ಮಳೆ ಬಂದಾಗ ನೀರು ನಿಂತು ಸಂಪರ್ಕ ಕಡಿತವಾಗುತ್ತದೆ. ವಾಹನ ಸವಾರರಿಗೆ ಸಂಚರಿಸಲು ತೊಂದರೆಯಾಗುತ್ತಿದೆ.

ಬಿದರಹಳ್ಳಿ, ರಾಂಪುರ, ಬಿದರಹಳ್ಳಿ, ಆದೂರು, ಆವಲಹಳ್ಳಿ ಮೂಲಕ ರಾಷ್ಟ್ರೀಯ ಹೆದ್ದಾರಿ ಮದ್ರಾಸ್ ರಸ್ತೆಗೆ ಈ ಮುಖ್ಯರಸ್ತೆ ಸಂಪರ್ಕ ಹೊಂದಿದೆ. ಹೆಣ್ಣೂರು, ಬೈರತಿ, ಹೊರಮಾವು, ಬಾಣಸವಾಡಿ, ಹೊಸಕೋಟೆ ಕಡೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೊಂಡಿಯಾಗಿದೆ. ಪ್ರತಿನಿತ್ಯ ಈ ರಸ್ತೆಯ ಮೂಲಕ ಸಾವಿರಾರು ವಾಹನಗಳು ಸಂಚರಿಸುತ್ತವೆ.

'ಆದೂರು ಬಳಿ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸಂಚರಿಸಲು ಪ್ರಯಾಸಪಡುವಂತಾಗಿದೆ. ಇಲ್ಲಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗೋದಾಮುಗಳು, ಶಾಲೆ, ಕಾಲೇಜುಗಳು, ಕಾರ್ಖಾನೆಗಳು ಹೆಚ್ಚಾಗಿವೆ. ವಾಹನ ಸವಾರರು, ಬೃಹತ್ ಪ್ರಮಾಣದ ಲಾರಿಗಳು ಈ ರಸ್ತೆಯಲ್ಲಿ ಓಡಾಡುತ್ತವೆ. ಆದರೆ ಅಧಿಕಾರಿಗಳು ನಮ್ಮ ಸಮಸ್ಯೆಯನ್ನು ಗಮನಿಸುತ್ತಿಲ್ಲ' ಎಂದು ವ್ಯಾಪಾರಿ ರಮೇಶ್ ಕುಮಾರ್ ದೂರಿದರು.

'ಪ್ರತಿ ನಿತ್ಯ ಹೊಸಕೋಟೆಯಿಂದ ಕೊತ್ತನೂರಿನ ಕ್ರಿಸ್ತು ಜಯಂತಿ ಕಾಲೇಜಿಗೆ ಇದೇ ರಸ್ತೆಯಲ್ಲಿ ಓಡಾಡುತ್ತೇನೆ. ಪ್ರತಿ ಸಲ ಮಳೆಯಾದಾಗಲೂ ರಸ್ತೆಯಲ್ಲಿ ಮಾರು ಅಡಿಯಷ್ಟು ನೀರು ನಿಂತಿರುತ್ತದೆ. ಅನೇಕ ವಾಹನಗಳು ಕೆಟ್ಟು ನಿಲ್ಲುತ್ತವೆ. ದ್ವಿಚಕ್ರ ಸವಾರರು ಸಮಸ್ಯೆಯಾಗುತ್ತಿದೆ' ಎಂದು ವಿದ್ಯಾರ್ಥಿ ಅಭಿಷೇಕ್ ಹೇಳಿದರು.

'ರಸ್ತೆ ನಿರ್ಮಾಣದ ಬಗ್ಗೆ ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಕೇಳಿದರೆ, 'ಇದು ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ, ಲೋಕೋಪಯೋಗಿ ಇಲಾಖೆಗೆ ತಿಳಿಸಿ' ಎನ್ನುತ್ತಾರೆ. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, 'ಮಾರು ವರ್ಗಗಳಿಂದ ಕಾಮಗಾರಿ ನಡೆಸುವಂತೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇಲಾಖೆಯಲ್ಲಿ ಹೆಚ್ಚಿನ ಅನುದಾನವಿಲ್ಲ' ಎಂದು ಹಾರಿಕೆಯ ಉತ್ತರ ನೀಡುತ್ತಾರೆ. ಆದಷ್ಟು ಬೇಗನೆ ರಸ್ತೆ ಕಾಮಗಾರಿ ಕೈಗೊಂಡು ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಕರ್ನಾಟಕ ರಕ್ಷಣಾ ವೇದಿಕೆ ಸೇನೆಯ ಕಾರ್ಮಿಕ ಘಟಕದ ಅಧ್ಯಕ್ಷ ಕಾವೇರಪ್ಪ ಎಚ್ಚರಿಸಿದರು.

ಜಲಾವೃತವಾದ ರಾಂಪುರ ಆದೂರು ಮುಖ್ಯ ರಸ್ತೆಯಲ್ಲಿ ಸಂಚರಿಸಿದ ವಾಹನಗಳು

ಯಾದಗಿರಿ ಡಿಎಚ್‌ಒ ಅಮಾನತು

ಯಾದಗಿರಿ: ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿರುವ ಆರೋಪದಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪ್ರಭುಲಿಂಗ ಮಾನಕರ್ ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಡಳಿತಾಧಿಕಾರಿ ಅಮಾನತು ಮಾಡಿ ಆದೇಶಿಸಿದ್ದಾರೆ.

ಪ್ರಭುಲಿಂಗ ಅವರು ₹1.40 ಕೋಟಿ ಮೌಲ್ಯದ ಅಕ್ರಮ ಆಸ್ತಿ ಹೊಂದಿರುವುದನ್ನು ಲೋಕಾಯುಕ್ತ ಪೊಲೀಸ್ ಪತ್ತೆ ಹಚ್ಚಿದ್ದರು. ಹೀಗಾಗಿ ನಿಷ್ಪಕ್ಷಪಾತ ತನಿಖೆಗಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಮಾಡಲಾಗಿದೆ.

ನೈರುತ್ಯ ರೈಲ್ವೆ
ರೂ.99,85,873/-
...ಮತ್ತು ನಂದಿ ಹಾಲ್ಟ್ ನಿಲ್ದಾಣ–ಎರಡನೇ ಹಂತದಲ್ಲಿ ರೈಲ್ವೆ ಮ್ಯೂಸಿಯಂಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.
ಟೆಂಡರ್‌ಗೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.08.2024 ರಂದು 15:00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ (ಸಾಮಾನ್ಯ) ಬೆಂಗಳೂರು
ಪಿಯುಬಿ/315/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂ ಆರ್/2024-25
South Western Railway - SWR SWRRLY SWRRLY

'ಜ್ಞಾನ ಒಟ್ಟುಗೂಡಿಸಿದ ಆಚಾರ್ಯರು'

ಗೋವಿಂದಾಚಾರ್ಯರ ಕಾರ್ಯಕ್ಕೆ ವಿದ್ವಾಂಸರ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬನ್ನಂಜೆ ಗೋವಿಂದಾಚಾರ್ಯರ ಉಪನ್ಯಾಸಗಳು ಹಾಗೂ ಪ್ರವಚನಗಳು ಜೀವನದುದ್ದಕ್ಕೂ ನೆನಪಿನಲ್ಲಿ ಇರುವಂತಹವು. ಜ್ಞಾನವನ್ನು ಒಟ್ಟುಗೂಡಿಸಿದ ಅವರು, ಸನಾತನ ಧರ್ಮದ ಶ್ರೇಷ್ಠ ಮೌಲ್ಯಗಳನ್ನು ಎತ್ತಿಹಿಡಿದಿದ್ದರು' ಎಂದು ವಿದ್ವಾಂಸರು ಹಾಗೂ ಒಡನಾಡಿಗಳು ಸ್ಮರಿಸಿದರು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಆಚಾರ್ಯರ ಜನ್ಮದಾಚರಣೆ 88' ಕಾರ್ಯಕ್ರಮದಲ್ಲಿ ಗೋವಿಂದಾಚಾರ್ಯರ ಜತೆಗಿನ ನೆನಪುಗಳನ್ನು ವಿದ್ವಾಂಸರಾದ ಪಾದೇಕಲ್ಲು ವಿಷ್ಣು ಭಟ್ಟ, ಮಲ್ಲೇಪುರಂ ಜಿ. ವೆಂಕಟೇಶ್, ಪ್ರತಿ ವೀಣಾ ಬನ್ನಂಜೆ ಹಂಚಿಕೊಂಡರು.

'ಆಚಾರ್ಯರ ಆತ್ಮಕಥನ ಒಳನೋಟ' ವಿಷಯದ ಬಗ್ಗೆ ವಿದ್ವಾಂಸ ಶತಾವಧಾನಿ ಆರ್. ಗಣೇಶ್, 'ಆಚಾರ್ಯರು, ಸತ್ಯಕಾಮ, ಅಧ್ಯ ಕರ್ನಾಟಕದ ಋಷಿಗಳು' ವಿಷಯದ ಬಗ್ಗೆ ಗೌರಿಗದ್ದೆಯ ದತ್ತಾತ್ರೇಯ ಪೀಠದ ವಿನಯ ಗುರೂಜಿ ಹಾಗೂ 'ಪುಟ್ಟ ಕಟ್ಟೆಗಳೊಳಗೆ ಆಚಾರ್ಯರ ಪರಿಚಯ' ವಿಷಯದ ಬಗ್ಗೆ ಸಂದೇಶ ಫೌಂಡೇಶನ್ ಸ್ಥಾಪಕ ಪ್ರಕಾಶ್ ಮಲ್ಪೆ, ಮಲ್ಲೇಪುರಂ ಜಿ. ವೆಂಕಟೇಶ, ವಿನಯ ಗುರೂಜಿ ಮಾತನಾಡಿದರು.

ಪ್ರಕಾಶ್ ಮಲ್ಪೆ, 'ಆಚಾರ್ಯರು ಬಹುತೇಕ ಲೇಖನಗಳಿಗೆ ಹೆಸರನ್ನು ಹಾಕಿಲ್ಲ. ಅದರ ಉದ್ದೇಶ ವಿಚಾರಗಳನ್ನು ತಲುಪಿಸುವುದಾಗಿತ್ತು. ಹೆಸರು ಮಾಡುವುದಲ್ಲ. ವಿದೇಶಗಳಿಗೆ ತೆರಳಿದಾಗಲೂ ಅವರು ತಮ್ಮ ವೇಷಭೂಷಣವನ್ನು ಬದಲಿಸಲಿಲ್ಲ. ನಾವು ಬೆಲೆ ನೀಡಬೇಕಾದದ್ದು ಒಳಗಿನ ಜ್ಞಾನಕ್ಕೆ ಹೊರತು ಹೊರಗಿನ ಅಲಂಕಾರಕ್ಕಲ್ಲ ಎಂಬ ನಿಲುವು ತಾಳಿದ್ದರು' ಎಂದರು.

ಇದೇ ಕಾರ್ಯಕ್ರಮದಲ್ಲಿ 'ಆತ್ಮ ನಿವೇದನೆ' ಹಾಗೂ 'ನಮ್ಮ ಪಿತಾಮಹ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಬಳಿಕ 'ಭಾರತ ಮಾರುತಿ' ಏಕವ್ಯಕ್ತಿ ತಾಳಮದ್ದಲೆ ನಡೆಯಿತು.

ಕಾರ್ಯಕ್ರಮದಲ್ಲಿ (ಎಡದಿಂದ) ಮಲ್ಲೇಪುರಂ ಜಿ. ವೆಂಕಟೇಶ, ಪಾದೇಕಲ್ಲು ವಿಷ್ಣು ಭಟ್ಟ, ಶತಾವಧಾನಿ ಆರ್.ಗಣೇಶ್, ಪ್ರಕಾಶ್ ಮಲ್ಪೆ ಹಾಗೂ ವಿನಯ ಗುರೂಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಬಾಲಗೋಪಾಲ್ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋರಾಟಗಾರ ಕೆ.ಬಾಲಗೋಪಾಲ್ ಅವರ ಹಲವು ಕೃತಿಗಳು ತೆಲುಗಿನಿಂದ ಕನ್ನಡಕ್ಕೆ ಅನುವಾದಗೊಳ್ಳಬೇಕಿದೆ ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ಅಕ್ಷರ ಪುಸ್ತಕ, ನವಯಾನ ಟ್ರಸ್ಟ್ ಮತ್ತು ಬೀ ಕಲ್ಚರ್ ಶನಿವಾರ ಆಯೋಜಿಸಿದ್ದ ಕೆ.ಬಾಲಗೋಪಾಲ್ ಅವರ 'ಅಭಿವೃದ್ಧಿ ಎಂಬ ವಿನಾಶ' (ತೆಲುಗಿನಿಂದ ಕನ್ನಡಕ್ಕೆ ಬಂಜಗೆರೆ ಜಯಪ್ರಕಾಶ್) ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯಾವುದೇ ವಿಷಯದ ಬಗ್ಗೆ ಬಾಲಗೋಪಾಲ್ ಆಳ ಅಧ್ಯಯನ ಮಾಡುತ್ತಿದ್ದರು. ಸಾಹಿತ್ಯ, ಸಂಸ್ಕೃತಿ, ಮಾನವಹಕ್ಕು, ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಸಮಸ್ಯೆಗಳ ಬಗ್ಗೆ ಲೇಖನ ಬರೆದಿದ್ದಾರೆ. ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದಿಯಾಗಿಯೂ ಆಗಿದ್ದರು. ಬೆಂಗಳೂರಿಗೆ ಭೇಟಿ ನೀಡಿದಾಗ ಮಾನವ ಹಕ್ಕುಗಳ ಹೋರಾಟಗಾರರ ಒಡನಾಟವಿತ್ತು. ಆದರೆ ಅವರಿಗೆ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಅವಕಾಶ ಸಿಗಲಿಲ್ಲ ಎಂದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ವಿಮರ್ಶಕ ರಹಮತ್ ತರೀಕೆರೆ, ಹಲವು ದೇಶಗಳ ಪ್ರಮುಖ ಕೃತಿಗಳು ಇಂಗ್ಲಿಷ್‌ಗೆ ಅನುವಾದವಾಗುತ್ತಿವೆ. ಕೆಲವರು ಅಲ್ಲಿಂದ ಭಾಷೆಯಲ್ಲಿ ಪರಿಣತರಾಗಿ ಕೃತಿಗಳನ್ನು ಅನುವಾದ ಮಾಡುತ್ತಿದ್ದಾರೆ. ತುಳು, ಬ್ಯಾರಿ, ಲಂಬಾಣಿ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತಿದೆ ಎಂದರು.

ಚಿಂತಕ ಶ್ರೀಪಾದ್ ಭಟ್, 'ಪುಸ್ತಕದಲ್ಲಿ ಪೊಲೀಸ್ ವ್ಯವಸ್ಥೆ, ಜಾತಿ ವ್ಯವಸ್ಥೆ ಕುರಿತು ಪ್ರಸ್ತಾಪಿಸಲಾಗಿದೆ. ಬಾಲಗೋಪಾಲ್ ಅವರ ಲೇಖನಗಳು ಈಗಲೂ ಪ್ರಸ್ತುತ' ಎಂದರು.

'ನವ ಉದಾರೀಕರಣದ ಬಗ್ಗೆ ಮಾತನಾಡುತ್ತೇವೆ. ದೇಶದಲ್ಲಿ ವಸೂಲಾಗದ ಸಾಲದ ಪ್ರಮಾಣ ₹10 ಲಕ್ಷ ಕೋಟಿಯಷ್ಟಿದೆ. ಇದರಲ್ಲಿ ಶೇಕಡ 50ರಷ್ಟು ಬಂಡವಾಳಶಾಹಿಗಳದ್ದು. ಒಂದೂವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಿರುದ್ಯೋಗ ಸಮಸ್ಯೆ ಇದೆ. ಇವುಗಳ ಬಗ್ಗೆ ಚರ್ಚೆ ನಡೆಸಬೇಕಾದ ಅಗತ್ಯ ಇದೆ' ಎಂದು ಹೇಳಿದರು.

'ಜಾತಿಯ ಕಾನೂನು: ಬಾಲಗೋಪಾಲ್ ಜತೆಗೆ ಜಾತಿ ಓದು' ಕುರಿತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಸಂದರ್ಶಕ ಪ್ರಾಧ್ಯಾಪಕ ಮಾತನಾಡಿದರು. ಸಾಮಾಜಿಕ ಕಾರ್ಯಕರ್ತ ವಿ.ಎಲ್.ನರಸಿಂಹ ಮೂರ್ತಿ ಪಾಲ್ಗೊಂಡಿದ್ದರು.

ಸಸಿ ನೆಡಲು ನಾಗರಿಕರಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳು, ಉದ್ಯಾನಗಳಲ್ಲಿ ಬಿಬಿಎಂಪಿಯು 19 ಸಾವಿರ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಿದ್ದು, ನಾಗರಿಕರು ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಬಿಬಿಎಂಪಿ ಅರಣ್ಯ ವಿಭಾಗದ ವತಿಯಿಂದ, ಆಗಸ್ಟ್ 6ರಿಂದ 12ರವರೆಗೆ 19,850 ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ. ವೃಕ್ಷ ಕವಚಗಳನ್ನು ಒದಗಿಸಿ ನೆಡಲು ವ್ಯವಸ್ಥೆ ಮಾಡಲಾಗುತ್ತದೆ.

ಸಾರ್ವಜನಿಕರು ಮಕ್ಕಳ ಜೊತೆಗೂಡಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಸರ ಕಾಳಜಿಯನ್ನು ಉತ್ತೇಜಿಸಬೇಕು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ. ಸ್ವಾಮಿ ಹೇಳಿದ್ದಾರೆ.

ಹೆಸರು ನೋಂದಾಯಿಸಲು ತಂತ್ರಾಂಶ (https://bit.ly/friendsofcac) ಮೂಲಕ ನೋಂದಾಯಿಸಿಕೊಂಡು ಗಿಡಗಳ ಪೋಷಣೆಗೆ ನಿರಂತರವಾಗಿ ಪಾಲ್ಗೊಳ್ಳಬಹುದಾಗಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಶೈಕ್ಷಣಿಕ ಸಂಸ್ಥೆಗಳು, ಲೇಕ್ ಗ್ರೂಪ್, ಸಾರ್ವಜನಿಕರು ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಯಲಹಂಕ ವಲಯದಲ್ಲಿ 5,450, ಮಹದೇವಪುರದಲ್ಲಿ 4,800, ಬೊಮ್ಮನಹಳ್ಳಿಯಲ್ಲಿ 4,000, ಆರ್.ಆರ್. ನಗರದಲ್ಲಿ 1,600, ದಾಸರಹಳ್ಳಿಯಲ್ಲಿ 4,000 ಸಸಿಗಳನ್ನು ನೆಡಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಡಬಲ್ ಡೆಕರ್ ಬಸ್ ಮರೀಚಿಕೆ

ಅತಿಯಾದ ದರ ನಮೂದಿಸಿರುವ ಬಿಡ್‌ದಾರರು • ಯೋಜನೆಯನ್ನೇ ಬದಲಾಯಿಸಲು ಚಿಂತನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಡಬಲ್ ಡೆಕರ್ ಬಸ್‌ಗಳನ್ನು ನಗರದಲ್ಲಿ ಮತ್ತೆ ರಸ್ತೆಗಿಳಿಸುವ ಬಿಎಂಟಿಸಿಯ ಕನಸು ನನಸಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಸತತ ಮೂರು ಬಾರಿ ಟೆಂಡರ್ ಪ್ರಕ್ರಿಯೆ ನಡೆಸಿದರೂ ಬಿಡ್‌ದಾರರು ಆಸಕ್ತಿ ವಹಿಸಿಲ್ಲ. ಬಿಡ್ ಮಾಡಿದವರೂ ಅತಿಯಾದ ದರ ದಾಖಲಿಸಿದ್ದರಿಂದ ಯೋಜನೆ ಕಾರ್ಯಗತಗೊಳ್ಳುವುದೇ ಅನುಮಾನವಾಗಿದೆ.

ಪ್ರವಾಸಿಗರನ್ನು ಸೆಳೆಯಲು ರಾಜ್ಯ ಸರ್ಕಾರವೇ ವರ್ಷದ ಹಿಂದೆ ಡಬಲ್ ಡೆಕರ್ ಬಸ್ ಯೋಜನೆಗೆ ಅನುಮತಿ ನೀಡಿತ್ತು. ನಗರದ ಪ್ರವಾಸಿ ತಾಣಗಳು ಇರುವ ಮಾರ್ಗಗಳಲ್ಲಿ 10 ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ನಿರ್ಧರಿಸಲಾಗಿತ್ತು. 65 ಸೀಟುಗಳ ಈ ಬಸ್ ದಿನಕ್ಕೆ 150 ಕಿ.ಮೀ. ಸಂಚಾರ ನಡೆಸುವಂತೆ ಯೋಜನೆ ರೂಪಿಸಲಾಗಿತ್ತು. 1970–80ರಲ್ಲಿ ಡಬಲ್ ಡೆಕರ್ ಬಸ್‌ಗಳು ಪ್ರಸಿದ್ಧವಾಗಿದ್ದವು. ಮತ್ತೆ ಬೆಂಗಳೂರಿನಲ್ಲಿ ಡಬಲ್ ಡೆಕರ್ ಸಂಚರಿಸಲಿವೆ ಎಂಬುದು ಪ್ರಯಾಣಿಕರಲ್ಲಿ ಕುತೂಹಲವನ್ನು ಮೂಡಿಸಿತ್ತು.

70ರ ದಶಕದಲ್ಲಿ ಬೆಂಗಳೂರಿನಲ್ಲಿದ್ದ ಡಬಲ್ ಡೆಕರ್ ಬಸ್

'ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮ'ದ (ಎನ್‌ಸಿಎಪಿ) ಅಡಿಯಲ್ಲಿ ಐದು ಬಸ್‌ಗಳು, ನಗರ ಭೂ ಸಾರಿಗೆ ನಿರ್ದೇಶನಾಲಯದ (ಡಲ್ಟ್) ಸಹಕಾರದಲ್ಲಿ ಐದು ಡಬಲ್ ಡೆಕರ್ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ಟೆಂಡರ್ ಆಹ್ವಾನಿಸಿದರೂ ಬಿಡ್‌ದಾರರಿಂದ ಉತ್ತಮ ಸ್ಪಂದನೆ ಬಂದಿರಲಿಲ್ಲ. ಒಂದೇ ಕಂಪನಿ ಭಾಗವಹಿಸಿತ್ತು. ಆನಂತರ ಮತ್ತೆರಡು ಬಾರಿ ಟೆಂಡರ್ ಆಹ್ವಾನಿಸಿದಾಗ ಬೆರಳೆಣಿಕೆಯ ಕಂಪನಿಗಳಷ್ಟೇ ಭಾಗವಹಿಸಿದ್ದವು. ಪ್ರತಿ ಕಿ.ಮೀಗೆ ₹ 102.5 ದರ ಪ್ರಸ್ತಾಪಿಸಿದ್ದವು.

'ಡಬಲ್ ಡೆಕರ್ ಬಸ್‌ಗಳು ಹವಾನಿಯಂತ್ರಣ ರಹಿತವಾಗಿರುತ್ತವೆ. ಹಾಗಾಗಿ ದುಬಾರಿ ಟಿಕೆಟ್ ದರ ಇರಿಸಲು ಸಾಧ್ಯವಿಲ್ಲ. ಸಾಮಾನ್ಯ ದರದಲ್ಲಿಯೇ ಕಾರ್ಯಾಚರಣೆ ಆರಂಭಿಸಿದರೆ ಬಿಎಂಟಿಸಿಗೆ ಭಾರಿ ನಷ್ಟವಾಗಲಿದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ನಿಗಮವೇ ಈ ಬಸ್ ಖರೀದಿಸುವುದೂ ಲಾಭದಾಯಕವಲ್ಲ. ಅಲ್ಲದೇ ನಗರದಲ್ಲಿ ಪ್ರಮುಖ ರಸ್ತೆಗಳಲ್ಲಿ ಮೇಲ್ಸೇತುವೆಗಳೇ ಹೆಚ್ಚಾಗಿರುವುದರಿಂದ ನಿಗದಿತ ಸ್ಥಳಗಳನ್ನು ನೋಡಲು ಸುತ್ತು ಹಾಕಿಕೊಂಡು ಬರಬೇಕಾಗಿದೆ. ನಿಗಮಕ್ಕೆ ಲಾಭ ತರದೇ ಹೋದರೂ ನಷ್ಟವಾಗದೇ, ಪ್ರಯಾಣಿಕರಿಗೂ ಹೊರೆಯಾಗದಂತೆ ಟಿಕೆಟ್ ದರ ಇರಿಸುವಷ್ಟು ಬಿಡ್ ಇದ್ದಿದ್ದರೆ ಈ ಯೋಜನೆ ಕಾರ್ಯಗತಗೊಳಿಸಬಹುದಿತ್ತು' ಎಂದು ಅಧಿಕಾರಿಗಳು ಕೈಚೆಲ್ಲಿದ್ದಾರೆ.

'ಬಿಳಿಯಾನೆಯಾದರೆ ಕಷ್ಟ'

'ದಶಕಗಳ ಹಿಂದೆ ಡಬಲ್ ಡೆಕರ್ ಬಸ್‌ಗಳು ಇದ್ದವು. ಇದೇ ಮಾದರಿಯ ಬಸ್‌ಗಳನ್ನು ಮತ್ತೆ ರಸ್ತೆಗಿಳಿಸಿ ಪ್ರಯಾಣಿಕರನ್ನು ಆಕರ್ಷಿಸುವ ಯೋಜನೆ ಹಾಕಿಕೊಳ್ಳಲಾಗಿತ್ತು. ಆದರೆ ಟೆಂಡರ್‌ನಲ್ಲಿ ಬಿಡ್‌ದಾರರು ಸಲ್ಲಿಸಿರುವ ದರ ನೋಡಿದರೆ ಯೋಜನೆಯು ಬಿಳಿಯಾನೆ ಆಗುವ ಸಾಧ್ಯತೆ ಕಾಣುತ್ತಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

'ಡಬಲ್ ಡೆಕರ್ ಯೋಜನೆಯನ್ನು ಮುಂದುವರಿಸುವ ಅಥವಾ ಕೈಬಿಡುವ ಬಗ್ಗೆ ಸದ್ಯ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಹಿರಿಯ ಅಧಿಕಾರಿಗಳು, ತಜ್ಞರೊಂದಿಗೆ ಚರ್ಚೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

ವಾರದಲ್ಲಿ ಎರಡನೇ ಬಾರಿ ಪೊಲೀಸರ ಗುಂಡಿನ ಸದ್ದು

ಮತ್ತೊಬ್ಬ ರೌಡಿಶೀಟರ್ ಕಾಲಿಗೆ ಗುಂಡು

ಪ್ರಜಾವಾಣಿ ವಾರ್ತೆ

ಆನೇಕಲ್ : ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ರಾಗಿಹಳ್ಳಿ ಬಳಿ ಶನಿವಾರ ಸಂಜೆ ಪೊಲೀಸರು ಕೊಲೆ ಯತ್ನ ಪ್ರಕರಣದ ಆರೋಪಿ ಕಾಲಿಗೆ ಗುಂಡು ಗುಂಡಿಕ್ಕಿ ಬಂಧಿಸಿದ್ದಾರೆ.

ಕುಸಿದು ಬಿದ್ದ ರೌಡಿಶೀಟರ್ ಆನೇಕಲ್‌ನ ವೆಂಕಟರಾಜು ಅಲಿಯಾಸ್ ತುಕಡಿ (26) ಎಂಬಾತನನ್ನು ವಶಕ್ಕೆ ಪಡೆದು ಆಸ್ಪತ್ರೆಗೆ ಸೇರಿಸಿದ್ದಾರೆ.

ಪುರಸಭಾ ಸದಸ್ಯ ರವಿ ಕೊಲೆ ಪ್ರಕರಣದ ಆರೋಪಿ ಕಾರ್ತಿಕ್ ಎಂಬಾತನ ಕಾಲಿಗೆ ಪೊಲೀಸರು ಕಳೆದ ಬುಧವಾರ ಗುಂಡಿಕ್ಕಿ ಬಂದಿಸಿದ್ದರು. ಅದಾದ ನಾಲ್ಕು ದಿನಗಳಲ್ಲಿಯೇ ಮತ್ತೊಬ್ಬ ರೌಡಿಶೀಟರ್ ಗುಂಡೇಟು ತಿಂದಿದ್ದಾನೆ.

ವೆಂಕಟರಾಜು ಎರಡು ತಿಂಗಳ ಹಿಂದೆ ಶೆಟ್ಟಹಳ್ಳಿ ಬಳಿ ಕೊಲೆ ಯತ್ನ ನಡೆಸಿದ್ದ. ಈ ಸಂಬಂಧ ಪೊಲೀಸರು ವೆಂಕಟರಾಜು ಬಂಧನಕ್ಕಾಗಿ ಬಲೆ ಬೀಸಿದ್ದರು. ತಲೆಮರೆಯಿಸಿಕೊಂಡಿದ್ದ ಆತ ರಾಗಿಹಳ್ಳಿ ಬಳಿ ಇರುವ ಮಾಹಿತಿ ಜಾಡು ಹಿಡಿದು ಪೊಲೀಸರು ದಾಳಿ ನಡೆಸಿದ್ದರು.

ಆರೋಪಿ ಬಂಧನಕ್ಕೆ ಮುಂದಾದಾಗ ವೆಂಕಟರಾಜು ಅಲಿಯಾಸ್ ತುಕಡಿ ಮಾರಕಾಸ್ತ್ರಗಳಿಂದ ದಾಳಿ ಮಾಡಲು ಯತ್ನಿಸಿದ. ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಿದರೂ ಸಹ ಪೊಲೀಸ್ ಪೇದೆ ವಿನಯ್ ಮೇಲೆ ಮಾರಾಕಾಸ್ತ್ರಗಳಿಂದ ದಾಳಿ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ. ಆಗ ಜಿಗಣಿ ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್, ರೌಡಿಶಿಟರ್ ಎಡಗಾಲಿಗೆ ಗುಂಡು ಹಾರಿಸಿದರು. ಗಾಯಗೊಂಡ ವೆಂಕಟರಾಜು ಕುಸಿದು ಬಿದ್ದ. ಆರೋಪಿ ವಿರುದ್ಧ ಕೊಲೆ, ಕೊಲೆಯತ್ನ ಸೇರಿದಂತೆ ವಿವಿಧ ಪ್ರಕರಣಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಎಸ್‌ಪಿ ನಾಗರಾಜು, ಡಿವೈಎಸ್‌ಪಿ ಮೋಹನ್ ಕುಮಾರ್, ಬನ್ನೇರುಘಟ್ಟ ಸರ್ಕಲ್ ಇನ್‌ಸ್ಪೆಕ್ಟರ್ ಕೃಷ್ಣಕುಮಾರ್, ಅತ್ತಿಬೆಲೆ ಸರ್ಕಲ್ ಇನ್‌ಸ್ಪೆಕ್ಟರ್ ಮುರಳಿ, ಸೂರ್ಯಸಿಟಿ ಸರ್ಕಲ್ ಇನ್‌ಸ್ಪೆಕ್ಟರ್ ಸಂಜೀವ್ ಮಹಾಜನ್ ಅವರು ಇದ್ದರು.

ಪೊಲೀಸರ ಗುಂಡೇಟು ತಿಂದ ರೌಡಿಶೀಟರ್ ವೆಂಕಟರಾಜು ಅಲಿಯಾಸ್ ತುಕಡಿ

ಹಸಿರು ಮಾರ್ಗದ ದೊಡ್ಡಕಲ್ಲಸಂದ್ರ ನಿಲ್ದಾಣದಲ್ಲಿ ಘಟನೆ

ಮೆಟ್ರೊ ಹಳಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ದೊಡ್ಡಕಲ್ಲಸಂದ್ರ ನಿಲ್ದಾಣದಲ್ಲಿ ಶನಿವಾರ ವ್ಯಕ್ತಿಯೊಬ್ಬರು ಮೆಟ್ರೊ ರೈಲು ಬರುವ ಸಮಯದಲ್ಲಿ ಹಳಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬನಶಂಕರಿ ಕೆ.ಎಸ್. ಬಡಾವಣೆ ನಿವಾಸಿ ನವೀನ್ ಕುಮಾರ್ ಅರೋರ (57) ಆತ್ಮಹತ್ಯೆ ಮಾಡಿಕೊಂಡವರು. ಶನಿವಾರ ಸಂಜೆ 5.45ಕ್ಕೆ ಘಟನೆ ನಡೆದಿದೆ. ಯಲಚೇನಹಳ್ಳಿ ನಿಲ್ದಾಣದಿಂದ ರೇಷ್ಮೆ ಸಂಸ್ಥೆ ಕಡೆಗೆ ಮೆಟ್ರೊ ರೈಲು ಸಂಚಾರವನ್ನು ಮೂರು ತಾಸು ಸ್ಥಗಿತಗೊಳಿಸಲಾಯಿತು. ರಾತ್ರಿ 8.45ಕ್ಕೆ ಮೆಟ್ರೊ ಸಂಚಾರ ಪುನರಾರಂಭಗೊಂಡಿತು.ನಾಗಸಂದ್ರದಿಂದಯಲಚೇನಹಳ್ಳಿವರೆಗೆ ಮೆಟ್ರೊ ರೈಲು ಎಂದಿನಂತೆ ಸಂಚರಿಸಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ರೈಲಿನ ಅಡಿಯಿಂದ ಮೃತದೇಹವನ್ನು ಪೊಲೀಸರ ಸಮಕ್ಷಮದಲ್ಲಿ ತೆಗೆಯಲಾಯಿತು. ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಮಾಹಿತಿ ನೀಡಿದ್ದಾರೆ.

ಐದನೇ ಘಟನೆ: ಇದು, ಈ ವರ್ಷ ಮೆಟ್ರೊ ಹಳಿಗೆ ಹಾರಿದ ಐದನೇ ಘಟನೆಯಾಗಿದೆ. ಮಾರ್ಚ್ ತಿಂಗಳಲ್ಲಿ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ಯುವಕನೊಬ್ಬ ಹಾರಿ ಜೀವ ಕಳೆದುಕೊಂಡಿದ್ದ. ಜನವರಿಯಲ್ಲಿ ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದ. ಇಂದಿರಾನಗರ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಕೆಳಗೆ ಬಿದ್ದ ಮೊಬೈಲ್ ಎತ್ತಿಕೊಳ್ಳಲು ಹಳಿಗೆ ಹಾರಿದ್ದರು. ಜೂನ್‌ನಲ್ಲಿ ಹೊಸಹಳ್ಳಿ ನಿಲ್ದಾಣದಲ್ಲಿ ಯುವಕನೊಬ್ಬ ಆತ್ಮಹತ್ಯೆಗೆ ಯತ್ನಿಸಿದ್ದ.

ಇದಲ್ಲದೇ, ಎರಡು ದಿನಗಳ ಹಿಂದೆ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ನಾಲ್ಕು ವರ್ಷದ ಬಾಲಕನೊಬ್ಬ ಆಯ ತಪ್ಪಿ ಹಳಿಗೆ ಬಿದ್ದಿದ್ದು, ಬಿಎಂಆರ್‌ಸಿಎಲ್ ಸಿಬ್ಬಂದಿ ರಕ್ಷಿಸಿದ್ದರು.

ಕಂಬಕ್ಕೆ ಮಿನಿ ಬಸ್ ಡಿಕ್ಕಿ: ಮೂರು ಮಕ್ಕಳಿಗೆ ಗಾಯ

ಬೆಂಗಳೂರು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಗೆದ್ದಲಹಳ್ಳಿ ರೈಲ್ವೆ ಕೆಳಸೇತುವೆ ಬಳಿ ಶುಕ್ರವಾರ ಬೆಳಿಗ್ಗೆ ಮಿನಿ ಬಸ್‌ವೊಂದು ಚಾಲಕನ ನಿಯಂತ್ರಣ ತಪ್ಪಿ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮೂವರು ವಿದ್ಯಾರ್ಥಿಗಳು ಹಾಗೂ ಚಾಲಕ ಗಾಯಗೊಂಡಿದ್ದಾರೆ.

'ವಾಹನದ ಬ್ರೇಕ್ ವಿಫಲಗೊಂಡಿದ್ದು, ಅಪಘಾತಕ್ಕೆ ಕಾರಣ ಎನ್ನಲಾಗುತ್ತಿದೆ. ಮಿನಿ ಬಸ್‌ನಲ್ಲಿ ಎಂಟಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳಿದ್ದರು. ಕಮ್ಮನಹಳ್ಳಿ–ಲಿಂಗರಾಜಪುರ ನಡುವೆ ಮಿನಿ ಬಸ್ ಸಂಚರಿಸುತ್ತಿತ್ತು. ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಘಟನೆ ಸಂಬಂಧ ದೂರು ದಾಖಲಾಗಿಲ್ಲ.

ಒಂದೇ ಸ್ಥಳದಲ್ಲಿ ಎರಡು ಅಪಘಾತ: ಹೈಗ್ರೌಂಡ್ಸ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವಿಂಡ್ಸರ್ ಮ್ಯಾನರ್ ಸೇತುವೆ ಬಳಿ ಶನಿವಾರ ಮೂರು ಗಂಟೆಯ ಅಂತರದಲ್ಲಿ ಎರಡು ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ವ್ಯಕ್ತಿಯೊಬ್ಬರು ಗಾಯಗೊಂಡಿದ್ದಾರೆ.

ಶನಿವಾರ ಮುಂಜಾನೆ 4 ಗಂಟೆ ಹಾಗೂ ಬೆಳಿಗ್ಗೆ 7 ಗಂಟೆ ಸುಮಾರಿಗೆ ಸೇತುವೆಗೆ ಎರಡು ಆಟೊಗಳು ಡಿಕ್ಕಿ ಹೊಡೆದಿವೆ. ಇದರಿಂದ ನಜೀರ್ ಎಂಬುವವರಿಗೆ ಗಾಯಗಳಾಗಿದ್ದು, ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಸ್ತೆ ಸರಿಯಿಲ್ಲದ ಕಾರಣಕ್ಕೆ ಅಪಘಾತಗಳು ನಡೆದಿವೆ. ಕೂಡಲೇ ರಸ್ತೆ ಸರಿಪಡಿಸಬೇಕು ಆಟೊ ಚಾಲಕರು ಆಗ್ರಹಿಸಿದ್ದಾರೆ.

ಅಪರಾಧ ಸುದ್ದಿ

ಮಹಿಳೆ ಜತೆಗೆ ಸಲುಗೆ: ಸ್ನೇಹಿತನ ಕೊಲೆ

ರೌಡಿಶೀಟರ್ ಸೇರಿ ಇಬ್ಬರನ್ನು ಬಂಧಿಸಿದ ಸಿದ್ದಾಪುರ ಠಾಣೆ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಂದಿಗೆ ಸಲುಗೆ ಬೆಳೆಸಿದ್ದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ವ್ಯಕ್ತಿಯೊಬ್ಬರನ್ನು ಶನಿವಾರ ಮುಂಜಾನೆ ಕೊಲೆ ಮಾಡಲಾಗಿದ್ದು, ಪ್ರಕರಣದಲ್ಲಿ ರೌಡಿಶೀಟರ್ ಸೇರಿ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಇಸಾಕ್

ವೆಂಕಟೇಶ್

ದಯಾನಂದ ನಗರದ ಕೊಳೆಗೇರಿಯ ನಿವಾಸಿ ಸೈಯದ್ ಇಸಾಕ್ (31) ಕೊಲೆಯಾದ ವ್ಯಕ್ತಿ.

ಸಿದ್ದಾಪುರ ಠಾಣಾ ರೌಡಿಶೀಟರ್ ವೆಂಕಟೇಶ ಅಲಿಯಾಸ್ ಒಂಟಿ ಕೈ ವೆಂಕಟೇಶ್, ಅಜಯ್ ಬಂಧಿತರು.

ಕೊಲೆಯಾದ ಇಸಾಕ್ ಹಾಗೂ ಬಂಧಿತ ಆರೋಪಿಗಳು ಸ್ನೇಹಿತರಾಗಿದ್ದರು. ಈ ಹಿಂದೆ ಮೂವರೂ ಕೊಲೆ ಯತ್ನ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದರು. ನಂತರ, ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು.

'ಇಸಾಕ್‌ಗೆ ಮದುವೆಯಾಗಿ ಒಂದು ಮಗುವಿದೆ. ಇವರ ಗುಂಪಿನಲ್ಲೇ ಗುರುತಿಸಿಕೊಂಡಿದ್ದ ಸ್ನೇಹಿತರೊಬ್ಬರ ಪತ್ನಿಯ ಜತೆಗೆ ಇಸಾಕ್ ಸಲುಗೆ ಬೆಳೆಸಿಕೊಂಡಿದ್ದರು. ಈ ವಿಷಯವು ಆಕೆಯ ಪತಿಯ ಗಮನಕ್ಕೆ ಬಂದಿತ್ತು. ಆತ ಒಂಟಿ ಕೈ ವೆಂಕಟೇಶ್ ಬಳಿ ಈ ವಿಚಾರ ಹೇಳಿಕೊಂಡಿದ್ದರು. ಇಸಾಕ್‌ನನ್ನು ಕರೆಸಿಕೊಂಡಿದ್ದ ವೆಂಕಟೇಶ್, ಸ್ನೇಹಿತನ ಪತ್ನಿಯ ಜೊತೆಗೆ ಸಲುಗೆಯಿಂದ ಇರುವುದನ್ನು ಬಿಡುವಂತೆ ಎಚ್ಚರಿಕೆ ನೀಡಿದ್ದರು. ಇದರಿಂದ ಆಕ್ರೋಶಗೊಂಡ ಇಸಾಕ್ ನನಗೆ ಬುದ್ದಿಮಾತು ಹೇಳುವ ಅಗತ್ಯವಿಲ್ಲ ಎಂದು ಬೆದರಿಕೆ ಹಾಕಿದ್ದರು. ಅಲ್ಲದೇ, ವೆಂಕಟೇಶ್‌ನನ್ನು ಕೊಲೆ ಮಾಡುವುದಾಗಿ ಸ್ನೇಹಿತರ ಬಳಿ ಹೇಳಿಕೊಂಡು ಓಡಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಕೊಲೆ ಮಾಡುವ ವಿಚಾರವನ್ನು ಹಲವರ ಬಳಿ ಹೇಳಿಕೊಂಡಿದ್ದು ವೆಂಕಟೇಶ್ ಗಮನಕ್ಕೂ ಬಂದಿತ್ತು. ಶುಕ್ರವಾರ ಪರಸ್ಪರ ಎದುರಾಗಿ ಗಲಾಟೆ ಮಾಡಿಕೊಂಡಿದ್ದರು. ಆಗ ಸ್ಥಳೀಯರು ಇಬ್ಬರನ್ನೂ ಸಮಾಧಾನ ಪಡಿಸಿ ಮನೆಗೆ ಕಳುಹಿಸಿದ್ದರು. ನಂತರ, ವೆಂಕಟೇಶ್ ತನ್ನ ಸಹಚರ ಅಜಯ್ ಜೊತೆಗೆ ಸೇರಿ ಇಸಾಕ್ ಕೊಲೆಗೆ ಸಂಚು ರೂಪಿಸಿದ್ದರು. ಶನಿವಾರ ಮುಂಜಾನೆ ದಯಾನಂದನಗರದ ಕೊಳೆಗೇರಿ ಬಳಿಯ ಮೋರಿ ಬಳಿ ಇಸಾಕ್ ಕರೆಸಿಕೊಂಡಿದ್ದ ಆರೋಪಿಗಳು ಮತ್ತೆ ಜಗಳ ತೆಗೆದಿದ್ದರು. ಗಲಾಟೆ ವಿಕೋಪಕ್ಕೆ ಹೋಗಿ ಮಾರಕಾಸ್ತ್ರದಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಇಸಾಕ್ ಕುಟುಂಬಸ್ಥರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ದರೋಡೆ: ಬಂಧನ

ಬೆಂಗಳೂರು: ಮನೆಗಳ ಬೀಗವನ್ನು ನಕಲಿ ಕೀ ಬಳಸಿ ತೆಗೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಆರೋಪಿಯನ್ನು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ನಿವಾಸಿ ಅರ್ಜುನ್ ಬಂಧಿತ. ಆರೋಪಿಯಿಂದ ₹4.5 ಲಕ್ಷ ಮೌಲ್ಯದ 68 ಗ್ರಾಂ ಚಿನ್ನಾಭರಣ, 180 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಗಾಯತ್ರಿ ನಗರದ ನಿವಾಸಿಯೊಬ್ಬರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ತಮಿಳುನಾಡು ಮೂಲದ ಅರ್ಜುನ್, 20 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಯಶವಂತಪುರದಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ಜುಲೈ 26ರಂದು ಗಾಯತ್ರಿ ನಗರದ ಮನೆಯೊಂದರಲ್ಲಿ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿ ಕಳವು ಮಾಡಿ ಪರಾರಿಯಾಗಿದ್ದ. ಆರ್.ಪಿ.ರಸ್ತೆಯಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ. ಆಗ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವ ವಿಚಾರವನ್ನು ಬಾಯ್ಬಿಟ್ಟಿದ್ದಾನೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಕಳ್ಳತನವನ್ನೇ ಉದ್ಯೋಗ ಮಾಡಿಕೊಂಡಿದ್ದ. ಈತನ ವಿರುದ್ಧ ತಲಘಟ್ಟಪುರ, ತಿಲಕ್‌ನಗರ, ಮಹಾಲಕ್ಷ್ಮೀಪುರ ಪೊಲೀಸ್ ಠಾಣೆಗಳಲ್ಲಿ ವಿವಿಧ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದರು.

ವಚನ ಸಾಹಿತ್ಯ, ಬಸವಣ್ಣನವರ ಚಿತ್ರ ವಿರೂಪ: ಪ್ರತಿಭಟನಕಾರರ ಆರೋಪ

ಬಸವಪರ ಸಂಘಟನೆಗಳ ಮುಖಂಡರ ಸೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಸವಣ್ಣನವರ ಭಾವಚಿತ್ರ ಹಾಗೂ ಅವರ ವಚನ ಸಾಹಿತ್ಯವನ್ನು ತಿರುಚುವ ಭಾಗವಾಗಿಯೇ ಆರ್‌ಎಸ್‌ಎಸ್ ಅಂಗವಾದ 'ಪ್ರಜ್ಞಾ ಪ್ರವಾಹ' ಸಂಸ್ಥೆಯು ಬಸವ ವಿರೋಧಿಗಳ ಲೇಖನಗಳನ್ನೊಳಗೊಂಡ 'ವಚನ ದರ್ಶನ' ಕೃತಿ ಪ್ರಕಟಿಸಿದೆ ಎಂದು ಆರೋಪಿಸಲಾಗಿದೆ. ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಪ್ರತಿಭಟನೆ ನಡೆಸಿದ ಜಾಗತಿಕ ಲಿಂಗಾಯತ ಮಹಾಸಭಾ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ನಗರದ ಅಪ್ಪಾ ಪಬ್ಲಿಕ್ ಸ್ಕೂಲ್ ಆವರಣದ ಬಸವರಾಜಪ್ಪ ಅಪ್ಪ ಭವನದಲ್ಲಿ ಶನಿವಾರ ಆಯೋಜಿಸಲಾಗಿತ್ತು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಲಬುರಗಿಯಲ್ಲಿ ಆಯೋಜಿಸಿದ್ದ 'ವಚನ ದರ್ಶನ' ಪುಸ್ತಕ ಬಿಡುಗಡೆ ಖಂಡಿಸಿ ಸಭಾಂಗಣದಲ್ಲಿ ಪ್ರತಿಭಟನೆ ನಡೆಸಿದ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಅವರನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ಕಾರ್ಯಕ್ರಮ ಆರಂಭಕ್ಕೂ ಮುನ್ನ ಶಾಲೆಯ ಮುಂಭಾಗದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಮುಖಂಡರು ಪ್ರತಿಭಟನೆ ನಡೆಸಿದರು. ಅವರನ್ನು ಪೊಲೀಸರು ಬಂಧಿಸಿ ಕರೆದೊಯ್ದರು. ಕಾರ್ಯಕ್ರಮ ಆರಂಭವಾದ ಬಳಿಕ ಜನವಾದಿ ಮಹಿಳಾ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಡಿವೈಎಫ್‌ಐ ರಾಜ್ಯ ಅಧ್ಯಕ್ಷೆ ಲವಿತ್ರ ವಸ್ತ್ರದ ಅವರು ಪುಸ್ತಕ ಬಿಡುಗಡೆ ವಿರೋಧಿಸಿ ಸಭಾಂಗಣದಲ್ಲೇ ಘೋಷಣೆ ಕೂಗಿದರು. ತಕ್ಷಣ ಮಹಿಳಾ ಪೊಲೀಸರು ಅವರನ್ನು ವಶಕ್ಕೆ ಪಡೆದು ಕರೆದೊಯ್ದರು.

ಘಟನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಮೀನಾಕ್ಷಿ ಬಾಳಿ, 'ಆರ್‌ಎಸ್‌ಎಸ್‌ಗೂ ವಚನ ಸಾಹಿತ್ಯಕ್ಕೂ ಏನು ಸಂಬಂಧ? ಬಸವಣ್ಣನವರ ವಿಚಾರಗಳನ್ನು ತಿರುಚಲೆಂದೇ ಈ ಪುಸ್ತಕವನ್ನು ಆರ್‌ಎಸ್‌ಎಸ್ ಆಸಕ್ತಿ ವಹಿಸಿ ಪ್ರಕಟಿಸಿದೆ. ಪ್ರತಿ ಕಾರ್ಯಕ್ರಮಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕೃತಿ ಬಿಡುಗಡೆ ಮಾಡುತ್ತಿದೆ. ಒಂದು ಸಣ್ಣ ಪುಸ್ತಕ ಬಿಡುಗಡೆಗೆ ಬಿ.ಎಲ್. ಸಂತೋಷ್ ಅವರಂತಹ ಬಿಜೆಪಿಯ ಪ್ರಮುಖ ನಾಯಕರು ಬರುತ್ತಾರೆ ಎಂದರೆ ಇವರ ಉದ್ದೇಶ ಸ್ಪಷ್ಟವಾಗುತ್ತದೆ. ಇಡೀ ಪುಸ್ತಕದ ಒಳಗಡೆ ಬಸವಣ್ಣನ ಚಿತ್ರವಿಲ್ಲ. ಮುಖಪುಟದಲ್ಲಿ ಬಸವಣ್ಣನನ್ನು ವಿರೂಪಗೊಳಿಸಿ ಚಿತ್ರಿಸಲಾಗಿದೆ' ಎಂದು ಟೀಕಿಸಿದರು.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಬಿ.ಎಲ್. ಸಂತೋಷ್, 'ಕೆಲವರು ಬಸವಣ್ಣನವರನ್ನು ಒಂದು ಚೌಕಟ್ಟಿನಲ್ಲಿ ಬಂಧಿಸಿದ್ದಾರೆ. ಹೀಗಾಗಿಯೇ ಬೇರೆ ಹೊಳಹುಗಳಿಂದ ಚರ್ಚಿಸಲು ಮುಂದಾದರೆ ಪ್ರತಿರೋಧಿಸುತ್ತಾರೆ. ಈ ಪುಸ್ತಕದಲ್ಲಿರುವುದೆಲ್ಲ ಸರಿ ಎಂದು ನಾನು ಹೇಳುವುದಿಲ್ಲ. ಆದರೆ, ತಪ್ಪು ಯಾವುದು ಎಂಬುದರ ಬಗ್ಗೆ ಚರ್ಚೆಗೆ ಬರಲಿ' ಎಂದು ಸವಾಲು ಹಾಕಿದರು.

ಉದ್ಯೋಗ ಆಕಾಂಕ್ಷಿಗಳಿಗೆ ₹49 ಲಕ್ಷ ಮೋಸ: ಸಿಸಿಬಿ ತನಿಖೆ ಚುರುಕು

ನಕಲಿ ನೇಮಕಾತಿ ಪತ್ರ ನೀಡಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಹೆಸರಿನಲ್ಲಿ ಏಳು ಮಂದಿ ಉದ್ಯೋಗ ಆಕಾಂಕ್ಷಿಗಳಿಗೆ ನಕಲಿ ನೇಮಕಾತಿ ಪತ್ರ ನೀಡಿ ₹49 ಲಕ್ಷ ವಂಚಿಸಿದ್ದ ಆರೋಪದ ಅಡಿ ಇಬ್ಬರ ವಿರುದ್ಧ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಹಕಾರ ನಗರದ ನಿವಾಸಿ ಸಿದ್ದಲಿಂಗಯ್ಯ ಹಿರೇಮಠ್ ಹಾಗೂ ಲವೀನಾ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರ್.ಟಿ ನಗರ ಕೌಸರ್ ಬಡಾವಣೆಯ ಅಬ್ದುಲ್ ರಜಾಕ್ ಅವರು ದೂರು ನೀಡಿದ್ದು, ಪೊಲೀಸರು ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಆರೋಪಿಗಳು ಏಳು ಮಂದಿಗೆ ವಂಚಿಸಿರುವ ಮಾಹಿತಿಯಿದೆ. ಆರೋಪಿಗಳನ್ನು ಬಂಧಿಸಿ ತನಿಖೆ ಕೈಗೊಂಡ ಬಳಿಕ ಎಷ್ಟು ಮಂದಿಗೆ ವಂಚಿಸಿದ್ದಾರೆ ಎಂಬುದು ತಿಳಿಯಲಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೊಪ್ಪಳದ ಸಿದ್ದಲಿಂಗಯ್ಯ ಹಿರೇಮಠ್ ಕೆಲವು ವರ್ಷಗಳಿಂದ ಸಹಕಾರ ನಗರದಲ್ಲಿ ವಾಸಿಸುತ್ತಿದ್ದಾರೆ. ತನಗೆ ನ್ಯಾಯಮೂರ್ತಿಗಳ ಪರಿಚಯವಿದ್ದು, ನೇರ ನೇಮಕಾತಿ ಮೂಲಕ ನ್ಯಾಯಾಲಯದಲ್ಲಿ ಕೆಳ ಹಂತದ ಹುದ್ದೆಗಳನ್ನು ಕೊಡಿಸುವುದಾಗಿ ನಂಬಿಸಿ ಉದ್ಯೋಗ ಆಕಾಂಕ್ಷಿಗಳಿಂದ ಹಂತಹಂತವಾಗಿ ಹಣ ಪಡೆದು ವಂಚಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರುದಾರ ಅಬ್ದುಲ್ ರಜಾಕ್ ಅವರು ನಾಗರಬಾವಿಯ ಪಾಪರೆಡ್ಡಿ ಪಾಳ್ಯದಲ್ಲಿ ಗೋಲ್ಡನ್ ಹ್ಯಾಂಡ್ಸ್ ಹೆಸರಿನಲ್ಲಿ ಮಹಿಳಾ ಪಿ.ಜಿ ನಡೆಸುತ್ತಿದ್ದಾರೆ. ಅಲ್ಲದೇ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ನಡೆಸುತ್ತಿದ್ದಾರೆ. ಇವರಿಗೆ ಆರೋಪಿ ಸಿದ್ದಲಿಂಗಯ್ಯ ಪರಿಚಯವಾಗಿ, ಚಿಕ್ಕಬಳ್ಳಾಪುರದ ಕೆರೆಯೊಂದರಲ್ಲಿ ಹೂಳು ತೆಗೆಯುವ ಕೆಲಸ ಕೊಡಿಸುವುದಾಗಿ ನಂಬಿಸಿದ್ದರು. ಇದಾದ ಒಂದು ತಿಂಗಳ ಬಳಿಕ ಸಹಕಾರ ನಗರದಲ್ಲಿರುವ ಆತನ ಕಚೇರಿಗೆ ತೆರಳಿದ್ದಾಗ 'ಸರ್ಕಾರದಲ್ಲಿ ಈಗ ಅಗತ್ಯ ಹಣ ಇಲ್ಲ; ಅನುದಾನ ನೀಡಿದ ಬಳಿಕ ಕೆಲಸ ಕೊಡಿಸುವುದಾಗಿ ಹೇಳಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ತಮ್ಮಲ್ಲಿ ಯಾರಿಗಾದರೂ ಕೆಲಸದ ಅಗತ್ಯವಿದ್ದರೆ ತಿಳಿಸಿ. ನನಗೆ ನ್ಯಾಯಮೂರ್ತಿ ಪರಿಚಯವಿದ್ದು, ನ್ಯಾಯಾಲಯದಲ್ಲಿ ಕೆಲಸ ಕೊಡಿಸುವುದಾಗಿ ಸಿದ್ಧಲಿಂಗಯ್ಯ ನಂಬಿಸಿದ್ದರು. ಇದನ್ನು ನಂಬಿದ ದೂರುದಾರ, ಸರ್ಕಾರಿ ಹುದ್ದೆಗಳು ಆನ್‌ಲೈನ್ ಮೂಲಕ ಪ್ರಕ್ರಿಯೆ ಆಗಲಿದ್ದು, ಹೇಗೆ ಕೆಲಸ ಕೊಡಿಸುತ್ತೀರಾ ಎಂದು ಆರೋಪಿ ಪ್ರಶ್ನಿಸಿದ್ದರು. ನ್ಯಾಯಾಧೀಶರು ತಮಗೆ ಪರಿಚಯ ಇರುವುದರಿಂದ ನೇರ ನೇಮಕಾತಿ ಮೂಲಕ ಕೆಲಸ ಕೊಡಿಸುವುದಾಗಿ ನಂಬಿಸಿದ್ದರು' ಎಂದು ಪೊಲೀಸರು ಹೇಳಿದರು.

ಅಬ್ದುಲ್ ರಜಾಕ್ ಅವರು ತನ್ನ ಚಿಕ್ಕಪ್ಪನ ಪುತ್ರ ಜಾವೀದ್ ಅವರಿಗೆ ಕೆಲಸ ಕೊಡಿಸುವಂತೆ ಆರೋಪಿಯೊಂದಿಗೆ ಮಾತುಕತೆ ನಡೆಸಿದ್ದರು. ಎಸ್ಸೆಸ್ಸೆಲ್ಸಿ ವ್ಯಾಸಂಗ ಮಾಡಿದ್ದ ಜಾವೀದ್‌ಗೆ ಸರ್ವರ್ ಹುದ್ದೆ ಕೊಡಿಸುವುದಾಗಿ ಹೇಳಿ ಸಿದ್ದಲಿಂಗಯ್ಯ ಅವರು ಹಂತಹಂತವಾಗಿ ₹ 7 ಲಕ್ಷ ಹಣ ಪಡೆದುಕೊಂಡಿದ್ದರು. ಅಲ್ಲದೇ ಹೈಕೋರ್ಟ್ ನ್ಯಾಯಮೂರ್ತಿ ಹೆಸರಿನ ನಕಲಿ ಸಹಿಯುಳ್ಳ ನೇಮಕಾತಿ ಪತ್ರ ನೀಡಿದ್ದರು. ಜಾವೀದ್ ಜತೆಗೆ ಇನ್ನೂ ಆರು ಮಂದಿಗೆ ಇದೇ ರೀತಿಯಲ್ಲಿ ವಂಚಿಸಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

'ಉದ್ಯೋಗ ಆಕಾಂಕ್ಷಿಗಳು ಕಲಬುರಗಿ ಕೋರ್ಟ್‌ಗೆ ತೆರಳಿ ನೇಮಕಾತಿ ಪತ್ರ ತೋರಿಸಿದಾಗ ಅಲ್ಲಿನ ಸಿಬ್ಬಂದಿ ಇದು ನಕಲಿ ಪತ್ರ ಎಂದು ತಿಳಿಸಿದರು. ಆಗ ವಂಚನೆ ಬಯಲಾಗಿದೆ' ಎಂದು ಪೊಲೀಸರು ಹೇಳಿದರು.

ಸಂಚಾರ ನಿಯಮ ಉಲ್ಲಂಘನೆ ₹10.86 ಲಕ್ಷ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುತ್ತಿರುವವರ ವಿರುದ್ಧ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಉತ್ತರ ಹಾಗೂ ಪೂರ್ವ ವಿಭಾಗದ ಸಂಚಾರ ಪೊಲೀಸರು, ವಾಹನ ಸವಾರರು ಹಾಗೂ ಚಾಲಕರ ವಿರುದ್ಧ ಒಟ್ಟು 2,121 ಪ್ರಕರಣ ದಾಖಲಿಸಿಕೊಂಡು, ₹10.86 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಉತ್ತರ ವಿಭಾಗದ ಸಂಚಾರ ಪೊಲೀಸರು ಶುಕ್ರವಾರ ಒಂದೇ ದಿನ 948 ಪ್ರಕರಣ ದಾಖಲಿಸಿಕೊಂಡಿದ್ದಾರೆ. ಉತ್ತರ ವಿಭಾಗದ ವ್ಯಾಪ್ತಿಯಲ್ಲಿ ಸಂಭವಿಸುತ್ತಿರುವ ಅಪಘಾತ ತಡೆಗಟ್ಟುವ ಉದ್ದೇಶದಿಂದ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಉಲ್ಲಂಘನೆ ಕಂಡುಬಂದರೆ ಅಂತಹವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗುತ್ತಿದೆ. ಒಂದೇ ದಿನ ₹4.80 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಪೂರ್ವ ಸಂಚಾರ ವಿಭಾಗದಲ್ಲೂ ಕಾರ್ಯಾಚರಣೆ ನಡೆಸಲಾಯಿತು. ನಿಯಮ ಉಲ್ಲಂಘಿಸಿದ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ 1,173 ಪ್ರಕರಣ ದಾಖಲಿಸಿ, ₹5.86 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದರು.

ಹೈದರಾಬಾದ್ ರೇಸ್

ಗೋಲ್ಡನ್ ಗೆಜೆಲ್ ಗೆಲ್ಲುವ ನಿರೀಕ್ಷೆ

ಪಿ.ಜಿ.ರೆಡ್ಡಿ ಮೆಮೋರಿಯಲ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡನ್ ಗೆಜೆಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:40ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಇಂಪೀರಿಯಾ 3, ಕಾಸ್ಮಿಕೊ 1, ಮಾಸ್ಟರ್ ಟಚ್ 5
2ನೇ ರೇಸ್: ಸೀಕ್ರೆಟ್ ಸೇಂಟ್ 5, ಕಿಂಗ್ ಇಮ್ಮೋರ್ಟಲ್ 4, ಡೆಸರ್ಟ್ ಹೀರೊ 2
3ನೇ ರೇಸ್: ಸ್ಟಾರ್ ಫಾರೆವರ್ 3, ಬೋಲ್ಡ್ ಬ್ಯೂಟಿ 1, ಚಾಲೆಂಜರ್ 5
4ನೇ ರೇಸ್: ಕ್ಲೇರ್ 2, ಡೆಕ್ಕನ್ ಸ್ಪಿರಿಟ್ 3, ಗೆಟ್ ಲಕ್ಕಿ 5
5ನೇ ರೇಸ್: ಆಂಜಿಯೊ 4, ಲಾಸ್ಟ್ ವಿಶ್ 3, ಎನೇಬ್ಲಿಂಗ್ 6
6ನೇ ರೇಸ್: ಗೋಲ್ಡನ್ ಗೆಜೆಲ್ 2, ತ್ರಿಶೂಲ್ 3, ಆಲ್‌ಪೈನ್ ಗರ್ಲ್ 5
7ನೇ ರೇಸ್: ಕ್ಯಾಲಿಸ್ಟೋಗ 4, ಫೈನಲ್ ಜಡ್ಜ್‌ಮೆಂಟ್ 2, ಡೆಕ್ಕನ್ ಡೈಸಿ 3

ಉತ್ತಮ ಬೆಟ್: ಸೀಕ್ರೆಟ್ ಸೇಂಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಭಾನುವಾರ ಏರ್ಪಡಿಸಿದ್ದ ಪುಣೆ ರೇಸ್‌ಗಳನ್ನು ಮಳೆಯ ಕಾರಣದಿಂದ ಮಂಗಳವಾರ ನಡೆಸಲಾಗುತ್ತಿದೆ.

ನೆಲ ಮಹಡಿಯಲ್ಲೇ ಕಮರುವ ಐಎಎಸ್, ಕೆಎಎಸ್ ಕನಸು

ಬಹುತೇಕ ಕೋಚಿಂಗ್ ಕೇಂದ್ರಗಳ ಗ್ರಂಥಾಲಯ, ಅಧ್ಯಯನ ಕೊಠಡಿಗೆ ನೆಲ ಮಹಡಿಗಳೇ ನೆಲೆ

ದೆಹಲಿಯ ಓಲ್ಡ್ ರಾಜೆಂದರ್ ನಗರದಲ್ಲಿರುವ 'ರಾವ್ಸ್ ಐಎಎಸ್ ಸ್ಟಡಿ ಸರ್ಕಲ್'ನ ನೆಲಮಹಡಿಗೆ ಈಚೆಗೆ ಮಳೆನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟದ್ದರು. ದೆಹಲಿಯ ಕೋಚಿಂಗ್ ಕೇಂದ್ರದಲ್ಲಿ ನಡೆದಿರುವ ಅನಾಹುತ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಎದೆಯಲ್ಲಿ ನಡುಕ ಹುಟ್ಟಿಸಿದೆ. ದೆಹಲಿಯಲ್ಲಿ ಇದು ಮೊದಲ ಘಟನೆಯೇನಲ್ಲ. ಹಲವು ವರ್ಷಗಳಿಂದ ಇಂಥವು ನಡೆಯುತ್ತಲೇ ಇವೆ. ದೆಹಲಿಯಂತೆ ಬೆಂಗಳೂರು ಸಹ ಐಎಎಸ್, ಕೆಎಎಸ್ ಕೋಚಿಂಗ್ ಕೇಂದ್ರಗಳ ಹಬ್ ಆಗಿ ಬೆಳೆಯುತ್ತಿದೆ. ಉತ್ತರ ಕರ್ನಾಟಕದಲ್ಲಿ ಧಾರವಾಡ ಸಹ ಇದೇ ರೀತಿ ಬೆಳವಣಿಗೆ ಕಾಣುತ್ತಿದೆ. ರಾಜ್ಯದ ರಾಜಧಾನಿಯ ಬಹುತೇಕ ಕೋಚಿಂಗ್ ಕೇಂದ್ರಗಳು ನೆಲ ಮಹಡಿಯಲ್ಲಿ ನೆಲೆಸಿವೆ. ಮಳೆ ನೀರು ನುಗ್ಗಿದರೆ, ಅಗ್ನಿ ಅವಘಡ ಸಂಭವಿಸಿದರೆ ಅಗತ್ಯ ಸುರಕ್ಷತಾ ಕ್ರಮಗಳಿಗೆ ಬಹುತೇಕ ಕಡೆ ಆದ್ಯತೆಯನ್ನೇ ನೀಡಿಲ್ಲ. ಉಜ್ವಲ ಭವಿಷ್ಯದ ಕನಸು ಹೊತ್ತ ಯುವಕ ಯುವತಿಯರು, ತರಬೇತಿಗಾಗಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿಯೂ ಮೂರನೇ ದರ್ಜೆಯ ಮನುಷ್ಯರಂತೆ ಬದುಕಬೇಕಾಗಿ ಬಂದಿರುವುದು, ಮಹತ್ವಾಕಾಂಕ್ಷೆಯ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳ ಅವ್ಯವಸ್ಥೆಗೆ ಬಲಿಪಶುಗಳಾಗುತ್ತಿರುವುದು ವ್ಯವಸ್ಥೆಯ ಲೋಪಗಳಿಗೆ ಕನ್ನಡಿ ಹಿಡಿಯುತ್ತಿದೆ. ಇಂತಹ ಅವ್ಯವಸ್ಥೆಯತ್ತ 'ಪ್ರಜಾವಾಣಿ' ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ.

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ಬಿ.ಎಸ್‌ಸಿ (ಕೃಷಿ) ಪದವಿ ಮುಗಿಸಿದ ನಂತರ ಐಎಎಸ್ ಅಧಿಕಾರಿಯಾಗುವ ಕನಸು ಹೊತ್ತು ತರಬೇತಿ ಪಡೆಯಲು ಬೆಂಗಳೂರಿಗೆ ಬಂದೆ. ಸ್ನೇಹಿತರ ಸಲಹೆಯಂತೆ ವಿಜಯನಗರದ ಚಂದ್ರಾಲೇಔಟ್‌ನ ಕೋಚಿಂಗ್ ಕೇಂದ್ರ ಒಂದನ್ನು ಆಯ್ಕೆ ಮಾಡಿಕೊಂಡೆ. ಸಾಮಾಜಿಕ ಜಾಲತಾಣಗಳಲ್ಲಿ ಕೇಂದ್ರದ ಧ್ಯೇಯ, ತರಬೇತಿದಾರರ ಅರ್ಹತೆ, ಸೌಲಭ್ಯಗಳನ್ನು ಕಂಡು ಬೆರಗಾಗಿದ್ದೆ'.

'ಕೋಚಿಂಗ್ ಕೇಂದ್ರಕ್ಕೆ ಭೇಟಿ ನೀಡಿದಾಗ ಸೀದಾ ಮೂರನೇ ಅಂತಸ್ತಿನಲ್ಲಿದ್ದ ಕಚೇರಿಗೆ ಕರೆದುಕೊಂಡು ಹೋಗಿದ್ದರು. ತರಬೇತಿ ಆರಂಭವಾದ ನಂತರ ವಾಹನಗಳ ನಿಲುಗಡೆಗೆ ಮೀಸಲಾಗಿದ್ದ ಜಾಗದಲ್ಲಿ ಅರ್ಧ ಬಳಸಿಕೊಂಡಿದ್ದ ನೆಲ ಮಹಡಿಯಲ್ಲೇ ತರಬೇತಿ, ಗ್ರಂಥಾಲಯದಲ್ಲೇ ಅಧ್ಯಯನ ನಡೆಸುವುದು ಕಾಯಂ ಆಯಿತು. ಮೊನ್ನೆ ದೆಹಲಿಯಲ್ಲಿ ಕೋಚಿಂಗ್ ಕೇಂದ್ರದ ನೆಲಮಹಡಿಗೆ ನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟ ನಂತರ ಅಲ್ಲಿನ ಎಲ್ಲರೂ ನಿದ್ರೆ ಇಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದೇವೆ. ಕೆಲವರು ಊರಿಗೆ ಹೋದವರು ಮರಳಿ ಬಂದಿಲ್ಲ'

–ಇದು ಐಎಎಸ್ ಕನಸು ಹೊತ್ತು ಬೆಂಗಳೂರಿಗೆ ಬಂದ ಉತ್ತರ ಕರ್ನಾಟಕದ ಕೃಷಿ ಪದವೀಧರ, ಐಎಎಸ್ ಆಕಾಂಕ್ಷಿ ರವಿ ನಾಯಕ್ ಅವರ ಮಾತು.

ಕರ್ನಾಟಕದ ರಾಜಧಾನಿ ಬೆಂಗಳೂರು ಐಎಎಸ್, ಕೆಎಎಸ್ ಮತ್ತಿತರ ಸ್ಪರ್ಧಾ ಪರೀಕ್ಷೆಗಳ ತರಬೇತಿ ಹಬ್ ಆಗಿ ರೂಪುಗೊಳ್ಳುತ್ತಿದೆ. ಇತರೆ ರಾಜ್ಯಗಳ ಐಎಎಸ್ ಸ್ಪರ್ಧಾಕಾಂಕ್ಷಿಗಳು ತರಬೇತಿ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿನತ್ತ ಧಾವಿಸುತ್ತಿದ್ದಾರೆ. ಕೆಲ ಕೋಚಿಂಗ್ ಕೇಂದ್ರಗಳು ಅತ್ಯುತ್ತಮ ಸೌಕರ್ಯಗಳನ್ನು ಒಳಗೊಂಡಿದ್ದು, ನುರಿತ ಬೋಧಕ ವರ್ಗವನ್ನು ನೇಮಿಸಿಕೊಂಡಿದ್ದಾರೆ. ಸ್ಪರ್ಧಾ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಆಕಾಂಕ್ಷಿಗಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಆದರೆ, ಅಭ್ಯರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದಂತೆ ಬಹುತೇಕ ಕೋಚಿಂಗ್ ಸೆಂಟರ್‌ಗಳು ವಾಹನಗಳ ನಿಲುಗಡೆಗೆ ಮೀಸಲಾದ ನೆಲಮಹಡಿಯ ಜಾಗವನ್ನು ಗ್ರಂಥಾಲಯ, ಅಭ್ಯರ್ಥಿಗಳ ಅಧ್ಯಯನದ ಕೊಠಡಿಗಳಾಗಿ ಬಳಸಿಕೊಳ್ಳುತ್ತಿವೆ. ಇಂತಹ ಕೇಂದ್ರಗಳಲ್ಲಿ ಅಭ್ಯರ್ಥಿಗಳು ಅಭದ್ರತೆ ಅನುಭವಿಸುತ್ತಿದ್ದಾರೆ. ದೆಹಲಿ ಘಟನೆಯ ನಂತರ ಭಯದ ವಾತಾವರಣದಲ್ಲೇ ಕಲಿಕೆ ಮುಂದುವರಿಸಿದ್ದಾರೆ.

ಬೆಂಗಳೂರಿನಲ್ಲೇ ಕೋಚಿಂಗ್ ಕೇಂದ್ರಗಳ ತಾಣಗಳಾಗಿ ಬೆಳೆದಿರುವ ವಿಜಯನಗರ, ಚಂದ್ರಾಲೇಔಟ್ ಒಳಗೊಂಡಂತೆ ಸುತ್ತಮುತ್ತಲ ಸ್ಪರ್ಧಾ ಪರೀಕ್ಷಾ ಕೇಂದ್ರಗಳಿಗೆ 'ಪ್ರಜಾವಾಣಿ' ತಂಡ ಭೇಟಿ ನೀಡಿದಾಗ 10ಕ್ಕೂ ಹೆಚ್ಚು ಕಡೆ ನೆಲ ಮಹಡಿಯಲ್ಲಿ ಅಭ್ಯರ್ಥಿಗಳು ಅಧ್ಯಯನದಲ್ಲಿ ತೊಡಗಿದ್ದರು. ಈ ಎಲ್ಲ ಕೇಂದ್ರಗಳಲ್ಲೂ ಗ್ರಂಥಾಲಯಗಳು ನೆಲಮಹಡಿಯಲ್ಲೇ ಇವೆ.

ಅತಿ ಹೆಚ್ಚಿನ ಸಮಯ ಕಳೆಯುವ ಜಾಗ: ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳು ಹೆಚ್ಚಿನ ಸಮಯವನ್ನು ಗ್ರಂಥಾಲಯಗಳಲ್ಲೇ ಕಳೆಯುತ್ತಾರೆ. ಬೋಧನಾ ತರಗತಿಗಳು ಮುಗಿದ ನಂತರ ಅಧ್ಯಯನಕ್ಕಾಗಿ ಸುದೀರ್ಘ ಅವಧಿ ಗ್ರಂಥಾಲಯಗಳಲ್ಲೇ ಕುಳಿತುಕೊಳ್ಳುತ್ತಾರೆ.

'ಬೆಳಿಗ್ಗೆ 10ಕ್ಕೆ ಅಥವಾ 11ಕ್ಕೆ ಬೋಧನಾ ತರಗತಿಗಳು ಆರಂಭವಾದರೆ, ಸಂಜೆಯ ಒಳಗೆ ಮುಗಿಯುತ್ತವೆ. ಸಂಜೆಯ ನಂತರ ಮಧ್ಯರಾತ್ರಿವರೆಗೂ ಬಹುತೇಕರು ಗ್ರಂಥಾಲಯದಲ್ಲೇ ಓದುತ್ತಾರೆ. ಕೆಲವರು ಬೆಳಗಿನ ಜಾವದವರೆಗೂ ಅಲ್ಲೇ ಓದಿಕೊಳ್ಳುತ್ತಾ ಕುಳಿತುಬಿಡುತ್ತಾರೆ. ನೆಲ ಮಹಡಿಯಲ್ಲಿರುವ ಕಾರಣ ಅಲ್ಲಿ ಯಾವುದೇ ಸೌಕರ್ಯವಿಲ್ಲ. ಏನಾದರು ಅನಾಹುತವಾದರೆ ರಕ್ಷಿಸಲೂ ಆಗದು' ಎನ್ನುತ್ತಾರೆ ವಿದ್ಯಾರ್ಥಿನಿ ಅಶ್ವಿನಿ.

ಓದಿಗೆ ವಾಹನಗಳ ಸದ್ದು ಅಡ್ಡಿ: 'ನಮ್ಮ ತರಬೇತಿ ಕೇಂದ್ರದ ನೆಲ ಮಹಡಿಯ ವಾಹನ ನಿಲುಗಡೆ ಜಾಗದಲ್ಲಿ ಅರ್ಧ ಗ್ರಂಥಾಲಯಕ್ಕೆ, ಅರ್ಧ ವಾಹನಗಳ ನಿಲುಗಡೆಗೆ ಮೀಸಲಾಗಿದೆ. ಹಗಲು ವೇಳೆ ಅಲ್ಲಿ ಕುಳಿತರೆ ವಾಹನ ನಿಲುಗಡೆಗೆ ಬರುವ ವಾಹನಗಳ ಸದ್ದು ತೊಂದರೆ ಮಾಡುತ್ತದೆ. ಹಾಗಾಗಿ, ತರಗತಿಗಳು ಇಲ್ಲದಿದ್ದಾಗ ಬೋಧನಾ ಕೊಠಡಿಯಲ್ಲೇ ಕಾಲಕಳೆಯುತ್ತೇವೆ. ರಾತ್ರಿ ಸಮಯ ನೆಲ ಮಹಡಿಯ ಗ್ರಂಥಾಲಯಕ್ಕೆ ತೆರಳುತ್ತೇವೆ' ಎನ್ನುತ್ತಾರೆ ಕೆಎಎಸ್ ಆಕಾಂಕ್ಷಿ ಶೋಭಾ.

ಅಗ್ನಿ ಅವಘಡಗಳಿಗೆ ಸುರಕ್ಷತೆಯ ಕೊರತೆ: ಕೆಲವು ಪ್ರಖ್ಯಾತ ಕೋಚಿಂಗ್ ಕೇಂದ್ರಗಳು ಕಟ್ಟಡದ ಮೇಲಂತಸ್ತಿನ ಮಹಡಿಗಳಲ್ಲಿ ಇವೆ. ಆದರೆ, ಅಗ್ನಿ ಅವಘಡಗಳು ಸಂಭವಿಸಿದರೆ ಅಗತ್ಯವಾದ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಂಡಿಲ್ಲ. ಅಗ್ನಿ ಶಾಮಕ ಪರಿಕರಗಳು ಬಹುತೇಕ ಕಟ್ಟಡಗಳಲ್ಲಿ ಇಲ್ಲ. ಎರಡು ತಿಂಗಳ ಹಿಂದಷ್ಟೇ ಚಂದ್ರಾಲೇಔಟ್‌ನ ಕೋಚಿಂಗ್ ಕೇಂದ್ರವೊಂದರಲ್ಲಿ ವಿದ್ಯುತ್ ಶಾರ್ಟ್‌ಸರ್ಕಿಟ್‌ನಿಂದ ಬೆಂಕಿ ಹತ್ತಿಕೊಂಡಿತ್ತು. ತಕ್ಷಣ ಅಲ್ಲಿನ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಹೊರತರಲಾಯಿತಾದರೂ, ಗ್ರಂಥಾಲಯ ಸಂಪೂರ್ಣ ಸುಟ್ಟು ಹೋಗಿದೆ.

'ಕೋಚಿಂಗ್ ಕೇಂದ್ರಗಳನ್ನು ಆರಂಭಿಸುವಾಗ ಪರವಾನಗಿ ಪಡೆಯಲು ಅಗ್ನಿ ಶಾಮಕ ಪರಿಕರಗಳನ್ನು ಅಳವಡಿಸುತ್ತಾರೆ. ನಂತರ ಅತ್ತ ಗಮನ ಹರಿಸುವುದೇ ಇಲ್ಲ. ಅಧಿಕಾರಿಗಳು ಇಂತಹ ವಿಷಯಗಳಲ್ಲಿ ನಿರ್ಲಕ್ಷ್ಯ ವಹಿಸುತ್ತಾರೆ. ಎರಡು ತಿಂಗಳ ಹಿಂದೆ ಕೋಚಿಂಗ್ ಕೇಂದ್ರದಲ್ಲಿ ಬೆಂಕಿ ಹೊತ್ತಿಕೊಂಡ ನಂತರ ಕೆಲ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಯಾರೂ ಸುರಕ್ಷತಾ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ನಿಂಗರಾಜ್ ಮೂರ್ತಿ.

ಅಭ್ಯರ್ಥಿಗಳ ಕನಸು ಕಮರಿಸುವ ಪಿ.ಜಿ.ಗಳು: ಕೋಚಿಂಗ್ ಕೇಂದ್ರಗಳಿಗೆ ದಾಖಲಾಗುವ ಅಭ್ಯರ್ಥಿಗಳು ಮೊದಲು ಹುಡುಕುವುದು ಸಮೀಪದ ಪೇಯಿಂಗ್ ಗೆಸ್ಟ್‌ಹೌಸ್‌ಗಳನ್ನು (ಪಿ.ಜಿ). ಇಂತಹ ಅಭ್ಯರ್ಥಿಗಳನ್ನೇ ಕೇಂದ್ರವಾಗಿಸಿಕೊಂಡು ಬೆಂಗಳೂರಿನಲ್ಲಿ ಸಾಕಷ್ಟು ಪಿ.ಜಿ.ಗಳು ತಲೆ ಎತ್ತಿವೆ. ಐಎಎಸ್, ಕೆಎಎಸ್‌ನಂತಹ ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಬರುವ ಅಭ್ಯರ್ಥಿಗಳು ತಡರಾತ್ರಿವರೆಗೂ ಕೋಚಿಂಗ್ ಕೇಂದ್ರಗಳಲ್ಲಿ ಅಧ್ಯಯನ ನಡೆಸುವ ಕಾರಣ ಕೇಂದ್ರಕ್ಕೆ ಸಮೀಪದ ಪಿ.ಜಿ. ಅಥವಾ ಮನೆಗಳನ್ನೇ ಹುಡುಕುತ್ತಾರೆ. ಅಭ್ಯರ್ಥಿಗಳ ಇಂತಹ ಅನಿವಾರ್ಯತೆ ಮನವರಿಕೆಯಾಗಿರುವ ಮನೆಗಳು ಹಾಗೂ ಪಿ.ಜಿ.ಗಳ ಮಾಲೀಕರು ಅಧಿಕ ಹಣ ಪಡೆಯುವ ಮೂಲಕ ಒಂದು ರೀತಿ ಸುಲಿಗೆ ಮಾಡುತ್ತಿದ್ದಾರೆ.

'ನಾನು ವಿಜಯನಗರದ ಕೋಚಿಂಗ್ ಕೇಂದ್ರದಲ್ಲಿ ಐದು ತಿಂಗಳ ಕೋರ್ಸ್‌ಗೆ ಪ್ರವೇಶ ಪಡೆದಿರುವೆ. ಪಿ.ಜಿ.ಗೆ ಸೇರಲು 10 ತಿಂಗಳ ಹಣವನ್ನು ಮುಂಗಡವಾಗಿ ಕೇಳುತ್ತಾರೆ. ಬರೀ ಆರು ತಿಂಗಳ ಬಾಡಿಗೆಗೆ ಕೊಡುವುದೇ ಇಲ್ಲ. ನಾನು ಪ್ರತಿ ತಿಂಗಳು ₹6 ಸಾವಿರದಂತೆ ₹60 ಸಾವಿರ ಕೊಟ್ಟ ನಂತರವೇ ಪ್ರವೇಶ ನೀಡಿದರು. ಕೋಚಿಂಗ್ ಕೇಂದ್ರದ ಶುಲ್ಕದ ಜೊತೆಗೆ ಮನೆಯಲ್ಲಿ ಅಷ್ಟು ಹಣ ಹೊಂದಿಸಿಕೊಡಲು ಪಟ್ಟ ಕಷ್ಟ ಹೇಳತೀರದು' ಎನ್ನುತ್ತಾರೆ ಪಿಎಸ್‌ಐ ಹುದ್ದೆ ಆಕಾಂಕ್ಷಿ ಲಕ್ಷ್ಮಿ.

ಅಷ್ಟು ಹಣ ತೆತ್ತರೂ ಒಂದು ಕೊಠಡಿಗೆ ನಾಲ್ಕು ಐದು ಮಂದಿಯನ್ನು ಹಾಕುತ್ತಾರೆ. ಇಬ್ಬರು, ಒಬ್ಬರು ಇರಬೇಕೆಂದರೆ ಮುಗಿಯದ ಕಥೆ ಎನ್ನುವುದು ಅಭ್ಯರ್ಥಿಗಳ ಅಳಲು. ಕೆಲ ಪ್ರಕರಣಗಳಲ್ಲಿ ಇಬ್ಬರು, ಮೂವರು ಸೇರಿ ಮನೆ ಮಾಡಿಕೊಂಡಿದ್ದಾರೆ. ಇಲ್ಲೂ ಅಷ್ಟೇ, ಎಷ್ಟು ತಿಂಗಳ ಕೋರ್ಸ್‌ಗೆ ಪ್ರವೇಶ ಪಡೆದರೂ, ಮನೆ ಬಾಡಿಗೆ ಮಾತ್ರ 11 ತಿಂಗಳಿಗೆ ನೀಡುವುದು ಕಡ್ಡಾಯ.

'₹20 ಸಾವಿರ ಮನೆ ಬಾಡಿಗೆ ಲೆಕ್ಕದಲ್ಲಿ ಮೂವರು ಸೇರಿ ಮನೆ ಬಾಡಿಗೆ ಪಡೆದಿದ್ದೆವು. ಎಂಟು ತಿಂಗಳಿಗೆ ಕೋರ್ಸ್ ಮುಗಿಯಿತು. ಮನೆ ಖಾಲಿ ಮಾಡುವಾಗ 11 ತಿಂಗಳ ಬಾಡಿಗೆ ಜೊತೆಗೆ ಬಣ್ಣ ಮತ್ತಿತರೆ ದುರಸ್ತಿ ಎಂದು ಇನ್ನೊಂದು ತಿಂಗಳ ಲೆಕ್ಕದಲ್ಲಿ ಹಣ ಮುರಿದುಕೊಂಡರು. ಬೆಂಗಳೂರಿಗೆ ಬರುವವರು ಇಂತಹ ಸುಲಿಗೆಯ ಖರ್ಚುಗಳನ್ನೂ ಹೊಂದಿಸಿಕೊಂಡು ಬರಬೇಕು' ಎನ್ನುತ್ತಾರೆ ಈಗಾಗಲೇ ಐಎಎಸ್ ಮುಖ್ಯ ಪರೀಕ್ಷೆಗೆ ತರಬೇತಿ ಪಡೆದಿರುವ ಸುಶ್ಮಿತಾ.

1. ನೆಲಮಹಡಿಯಲ್ಲಿರುವ ಬೆಂಗಳೂರಿನ ಕೋಚಿಂಗ್ ಕೇಂದ್ರ **2,3,4** ಧಾರವಾಡದ ಕೋಚಿಂಗ್ ಕೇಂದ್ರಗಳ ಕೊಠಡಿಯಲ್ಲಿ ಮೂಲಸೌಲಭ್ಯ ಕೊರತೆ ಇದೆ

ವಿದ್ಯಾಕಾಶಿ ಧಾರವಾಡದಲ್ಲಿ ವ್ಯಾಪಕ ಅವ್ಯವಸ್ಥೆ

ಕೋಚಿಂಗ್ ಕೇಂದ್ರ: ಸೌಲಭ್ಯಗಳೇ ಇಲ್ಲ!

● ಬಿ.ಜೆ.ಧನ್ಯಪ್ರಸಾದ್

ಧಾರವಾಡ: 'ವಿದ್ಯಾಕಾಶಿ' ಎಂದು ಕರೆಯುವ ಧಾರವಾಡದಲ್ಲಿ ಕೋಚಿಂಗ್ ಕೇಂದ್ರಗಳು ಸಾಕಷ್ಟು ಇವೆ. ಅವುಗಳ ಮಧ್ಯೆ ಪೈಪೋಟಿಯಿದ್ದು, ವಿದ್ಯಾರ್ಥಿಗಳನ್ನು ಮತ್ತು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳನ್ನು ಸೆಳೆಯಲು ನಿರಂತರವಾಗಿ ಬೇರೆ ಬೇರೆ ಸ್ವರೂಪದಲ್ಲಿ ಪ್ರಯತ್ನಿಸುತ್ತವೆ. ಆದರೆ, ಬಹುತೇಕ ಕೇಂದ್ರಗಳಲ್ಲಿ ಕನಿಷ್ಠ ಮೂಲಸೌಲಭ್ಯಗಳಿಲ್ಲ. ದನಿಯೆತ್ತುವ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆಯೂ ಸಿಗುತ್ತಿಲ್ಲ.

ಧಾರವಾಡದ ಸಪ್ತಾಪುರ, ಜಯನಗರ, ಶ್ರೀನಗರದಲ್ಲಿ ಹೆಚ್ಚು ಕೇಂದ್ರಗಳು ಇವೆ. ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ), ಕೆಪಿಎಸ್‌ಸಿ (ಕರ್ನಾಟಕ ಲೋಕಸೇವಾ ಆಯೋಗ), ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಮೊದಲಾದವು ನಡೆಸುವ ಸ್ಪರ್ಧಾ ಪರೀಕ್ಷೆಗಳಿಗೆ ಈ ಕೇಂದ್ರಗಳಲ್ಲಿ ತರಬೇತಿ ಸಿಗುತ್ತದೆ. ಶೇ 99ರಷ್ಟು ಕೇಂದ್ರದವರು ಅಧ್ಯಯನಕ್ಕೆ ಪೂರಕ ವಾತಾವರಣ ಕಲ್ಪಿಸಿಲ್ಲ. ವಿದ್ಯಾರ್ಥಿಗಳ ಸಂಕಷ್ಟಗಳನ್ನು ಪರಿಹರಿಸಿಲ್ಲ.

ಬಹಳಷ್ಟು ಕೇಂದ್ರಗಳು ಸರ್ಕಾರದಲ್ಲಿ ನೋಂದಣಿಯನ್ನೂ ಮಾಡಿಸಿಲ್ಲ. ನೋಂದಣಿ ಪ್ರಕ್ರಿಯೆ ಜವಾಬ್ದಾರಿಯನ್ನು ಕಾಲೇಜು ಶಿಕ್ಷಣ ಇಲಾಖೆ ವಹಿಸಲಾಗಿದೆ. ಈ ಇಲಾಖೆಯು ನೋಂದಣಿ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ.

ನಗರದಲ್ಲಿ ಸ್ಪರ್ಧಾ ಪರೀಕ್ಷೆ ತರಬೇತಿ ಕೇಂದ್ರಗಳು 180 ಕ್ಕೂ ಹೆಚ್ಚು ಇವೆ. ಗಾಳಿ ಬೆಳಕಿನ ವ್ಯವಸ್ಥೆ ಇಲ್ಲದ ಕಟ್ಟಡ, ಮನೆ, ತಗಡಿನ ಶೆಡ್‌ಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಹಲವು ಕೇಂದ್ರಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಕಿಟಕಿಗಳು ಇಲ್ಲ. ರಭಸವಾಗಿ ಗಾಳಿ ಬೀಸಿದರೆ ಬೀಳುವಂಥ ಸ್ಥಿತಿಯಲ್ಲಿರುವ ಶೆಡ್‌ಗಳಲ್ಲೂ ಕೇಂದ್ರಗಳಿವೆ. ಕೆಲ ಕೇಂದ್ರಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಒಂದೇ ಶೌಚಾಲಯದ ವ್ಯವಸ್ಥೆ ಇದೆ!

ಮಳೆ ಸುರಿದಾಗ ತಗಡಿನ ಚಾವಣಿಯ ಶೆಡ್‌ಗಳಲ್ಲಿ 'ಟಪ್... ಟಪ್...' ಶಬ್ದದ ಕಿರಿಕಿರಿ ಉಂಟಾಗುತ್ತದೆ. ಕೆಲ ಕಟ್ಟಡಗಳು ಸೋರುತ್ತವೆ. ನೆಲದ ಪೂರ್ತಿ ನೀರು ಆವರಿಸಿಕೊಳ್ಳುತ್ತದೆ. ತರಗತಿ ಕೊಠಡಿಯಲ್ಲಿನ ಆಸನ ಸಾಮರ್ಥ್ಯಕ್ಕಿಂತ ಹೆಚ್ಚು ಜನರನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಬೆಳಿಗ್ಗೆಯಿಂದ ರಾತ್ರಿವರೆಗೆ (ಸುಮಾರು 10 ಗಂಟೆ) ಅಭ್ಯರ್ಥಿಗಳು ಇಂಥ ಅವ್ಯವಸ್ಥೆಯಲ್ಲೇ ಪಾಠ ಆಲಿಸಬೇಕು.

ಒಂದು ಅಂದಾಜಿನ ಪ್ರಕಾರ, ಧಾರವಾಡದಲ್ಲಿ ಸುಮಾರು 25 ಸಾವಿರ ಸ್ಪರ್ಧಾರ್ಥಿಗಳು ಇದ್ದಾರೆ. ಹಾವೇರಿ, ಗದಗ, ಕೊಪ್ಪಳ, ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ, ದಾವಣಗೆರೆ, ಶಿವಮೊಗ್ಗ, ರಾಯಚೂರು ಜಿಲ್ಲೆಯವರು ಇದ್ದಾರೆ. ಈ ಪೈಕಿ ಗ್ರಾಮೀಣ ಪ್ರದೇಶದವರೇ ಹೆಚ್ಚು. ಐಎಎಸ್, ಐಪಿಎಸ್, ಐಆರ್‌ಎಸ್, ಐಎಫ್‌ಎಸ್‌ಗೆ ದಾರಿ ತೋರುವ ಯುಪಿಎಸ್‌ಸಿ ಮತ್ತು ಕೆಎಎಸ್, ಪಿಎಸ್‌ಐ ಮೊದಲಾದ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸುವ ಕನಸು ಕಟ್ಟಿ, ತಯಾರಿಯಲ್ಲಿ ತೊಡಗಿದ್ದಾರೆ.

'ಯದ್ವಾತದ್ವಾ' ಶುಲ್ಕ ವಸೂಲಿ: ಕೇಂದ್ರಗಳು ಯದ್ವತದ್ವಾ ಶುಲ್ಕ ವಸೂಲಿ ಮಾಡುತ್ತಿವೆ. ಸ್ಪರ್ಧಾ ಪರೀಕ್ಷೆ (ಯುಪಿಎಸ್‌ಸಿ, ಕೆಪಿಎಸ್‌ಸಿ...) ಆಧರಿಸಿ ಶುಲ್ಕದಲ್ಲಿ ವ್ಯತ್ಯಾಸ ಇರುತ್ತದೆ.

'ಲೋಕಸೇವಾ ಪರೀಕ್ಷೆಗೆ ಕೆಲವು ಕೇಂದ್ರಗಳು ತಿಂಗಳಿಗೆ ₹50ಸಾವಿರ, ಕೆಲ ಕೇಂದ್ರಗಳು ಇನ್ನೂ ಹೆಚ್ಚು ವಸೂಲಿ ಮಾಡುತ್ತಿವೆ. ಪಿಎಸ್‌ಐ, ಪಿಡಿಒ ಮೊದಲಾದ ಪರೀಕ್ಷೆಗಳಿಗೆ ₹15ಸಾವಿರದಿಂದ ₹35 ಸಾವಿರ ವರೆಗೆ ವಸೂಲು ಮಾಡುತ್ತವೆ. ಮೂರು ತಿಂಗಳು ತರಬೇತಿ ನೀಡುತ್ತವೆ' ಎಂದು ಕೋಚಿಂಗ್ ಕೇಂದ್ರವೊಂದರ ಬೋಧಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಏಜೆಂಟ್– ಕಮಿಷನ್ ದಂಧೆ: ಸ್ಪರ್ಧಾರ್ಥಿಗಳನ್ನು ಕೇಂದ್ರಗಳಿಗೆ ದಾಖಲು ಮಾಡಿಸಲು ಏಜೆಂಟ್‌ಗಳು ಇದ್ದಾರೆ. ಈ ಏಜೆಂಟ್‌ಗಳಿಗೆ ಕೇಂದ್ರಗಳಿಗೆ ಕಮಿಷನ್ (ಶುಲ್ಕದಲ್ಲಿ ಶೇ 10 ಪಾಲು) ನೀಡುತ್ತವೆ. ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಈ ಏಜೆಂಟ್‌ಗಳು ಇದ್ದಾರೆ. ಇಂತಹದ್ದೊಂದು ವ್ಯವಸ್ಥಿತ ಜಾಲವೇ (ರಾಕೆಟ್) ಇದೆ ಎಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಸದಸ್ಯ ಈರೇಶ ಅಂಚಟಗೇರಿ ಆರೋಪಿಸಿದರು.

ಕೇಂದ್ರಗಳಲ್ಲಿ ಬೋಧಿಸುವವರಲ್ಲಿ ಹಲವರು ಅನರ್ಹರು ಇದ್ದಾರೆ. ಐಎಎಸ್, ಕೆಎಎಸ್ ಪರೀಕ್ಷೆ ಎದುರಿಸಿ ವಿಫಲರಾದವರು ಬೋಧನೆಯಲ್ಲಿ ತೊಡಗಿದ್ದಾರೆ. ಕೆಲವರು ಬೇರೆ ಬೇರೆ ಊರುಗಳಿಂದ ಬಂದು ಹೋಗುತ್ತಾರೆ.

'ಸ್ನಾತಕೋತ್ತರ ಪದವಿ, ಸಂಶೋಧನಾ ವಿದ್ಯಾರ್ಥಿಗಳು ಬೋಧಿಸುತ್ತಾರೆ. ಕೆಲವರಿಗೆ ವಿಷಯದ ಬಗ್ಗೆ ಆಳ ಜ್ಞಾನ ಇರುವುದಿಲ್ಲ. ಹೊಸ ಪಠ್ಯಕ್ರಮಕ್ಕೆ ತಕ್ಕಂತೆ ಮಾಹಿತಿ ಪಡೆದಿರುವುದಿಲ್ಲ. ಒಂದೇ ರೀತಿಯಲ್ಲಿ ಬಾಯಿಪಾಠದಂತೆ ಪಾಠ ಮಾಡುತ್ತಾರೆ. ಮೂರು ತಿಂಗಳಲ್ಲಿ ಎಲ್ಲ ಪಾಠ ಮುಗಿಸಲ್ಲ. ಅನರ್ಹರಿಂದಲೂ ಪಾಠ ಕೇಳಬೇಕಾದ ಸ್ಥಿತಿ ಇದೆ' ಎಂದು ಸ್ಪರ್ಧಾರ್ಥಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಒಳಗಿನ ಗಾಳಿ ಹೊರಗೆ, ಹೊರಗಿನ ಗಾಳಿ ಒಳಕ್ಕೆ ಬಾರದಂತಹ ಸ್ಥಿತಿ ಇರುವ ಕೊಠಡಿಗಳು ಇವೆ. ಕೊಠಡಿಗಳಲ್ಲಿ ಕಿಟಕಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲ

ದೇವರಾಜ್ ದೊರೆ, ಸ್ಪರ್ಧಾರ್ಥಿ, ಧಾರವಾಡ

ಕಟ್ಟಡ ಸುಸ್ಥಿತಿಯಲ್ಲಿ ಇಲ್ಲದಿದ್ದರೂ ಅಲ್ಲಿಯೇ ತರಗತಿಗಳನ್ನು ನಡೆಸಲಾಗುತ್ತದೆ. ಕೇಂದ್ರ ತೆರೆಯಲು ಸ್ಪಷ್ಟ ಮಾರ್ಗಸೂಚಿ ಇಲ್ಲ. ಸರ್ಕಾರ ನಿಗಾ ವಹಿಸಬೇಕು

ಪ್ರಭಾಕರ ಕಾಂಬ್ಳೆ, ಬೋಧಕ, ಕರ್ನಾಟಕ ಕಾಲೇಜು, ಧಾರವಾಡ

ಕೋಚಿಂಗ್ ಕೇಂದ್ರ ನಡೆಸುವುದು ಹಣ ಗಳಿಕೆ ದಂಧೆಯಾಗಿದೆ. ಶೌಚಾಲಯವೂ ಇಲ್ಲದ ಕೇಂದ್ರಗಳು ಇವೆ. ಈ ಕೇಂದ್ರಗಳ ಮೇಲೆ ಯಾರ ಹಿಡಿತವೂ ಇಲ್ಲ

ಈರೇಶ ಅಂಚಟಗೇರಿ
ಸದಸ್ಯ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಗುಂಡಣ್ಣ

---

25 ವರ್ಷಗಳ ಹಿಂದೆ

ಬುಧವಾರ, 04-08-1999

● **ದಳ ಚಿಹ್ನೆ ವಿವಾದ: ಲಿಖಿತ ದಾಖಲೆ ಸಲ್ಲಿಕೆಗೆ 6ರವರೆಗೆ ಕಾಲಾವಕಾಶ**

ಪ್ರಜಾವಾಣಿ ವಾರ್ತೆ, ನವದೆಹಲಿ, ಆಗಸ್ಟ್ 3– ಜನತಾದಳವು ಇಬ್ಭಾಗವಾಗಿ, ತನ್ನದೇ ನಿಜವಾದ ದಳ ಎಂದು ಪಕ್ಷದ ಚಿಹ್ನೆಯ ಸಂಬಂಧ ಚುನಾವಣಾ ಆಯೋಗವು ಇಂದು ಎರಡು ಬಣಗಳ ವಾದ ಆಲಿಸಿ ಈ ಬಗೆಗೆ ಲಿಖಿತ ದಾಖಲೆ ಸಲ್ಲಿಕೆಗೆ 6ರವರೆಗೆ ಕಾಲಾವಕಾಶ ನೀಡಿತು. ಶರದ್ ಯಾದವ್ ಪರ ಸುಪ್ರೀಂ ಕೋರ್ಟ್ ವಕೀಲ ಸಾಂಘ್ವಿ ಮತ್ತು ರಾಮ್ ವಿಲಾಸ್ ಪಾಸ್ವಾನ್ ಹಾಗೂ ಎಚ್.ಡಿ. ದೇವೇಗೌಡ ನೇತೃತ್ವದ ಬಣದ ಪರ ಸುಪ್ರೀಂ ಕೋರ್ಟ್ ವಕೀಲ ಎ.ಎಸ್. ಆನಂದ್ ತಮ್ಮ ವಾದ ಮಂಡಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 04-08-1974

● **ಭೂಸುಧಾರಣೆ ಶಾಸನದ ದಾರಿ ನಿರ್ವಿಘ್ನ**

ಬೆಂಗಳೂರು, ಆಗಸ್ಟ್ 3– ಒಕ್ಕಲು ಎಬ್ಬಿಸುವ ಕೋರ್ಟ್ ಆದೇಶಗಳಿಂದ ಗೇಣಿದಾರರಿಗೆ ರಕ್ಷಣೆ ಕೊಡಲು ರಾಜ್ಯಪಾಲರು ಇಂದು ಹೊರಡಿಸಿದ ಸುಗ್ರೀವಾಜ್ಞೆ ಹಾಗೂ ಇದೀಗ ತಾನೇ ಮುಗಿದಿರುವ 172 ತಾಲ್ಲೂಕು ಭೂ ಪಂಚಾಯಿತಿಗಳ ರಚನೆಯೊಂದಿಗೆ, ಕರ್ನಾಟಕ ಭೂ ಸುಧಾರಣಾ ಶಾಸನದ ಅನುಷ್ಠಾನ ಪಥದಲ್ಲಿರುವ ವಿಘ್ನಗಳೆಲ್ಲ ನಿವಾರಣೆಯಾದಂತಾ ಗಿದೆ. ತಕ್ಷಣಕ್ಕೆ ಜಾರಿಗೆ ಬಂದಿರುವ ಸುಗ್ರೀವಾಜ್ಞೆಯ ಪ್ರಕಾರ ಗೇಣಿ ಹಕ್ಕನ್ನು ಪಡೆದಿರುವ ಯಾವನೇ ಗೇಣಿದಾರನನ್ನು ಒಕ್ಕಲೆಬ್ಬಿಸುವಂತೆ ಯಾವುದೇ ನ್ಯಾಯಾಲಯ ಆದೇಶ ನೀಡುವಂತಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಆಗಸ್ಟ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ ಅಮಾವಾಸ್ಯೆ ಗಂ. 16-43 ನಕ್ಷತ್ರ: ಪುಷ್ಯ ಗಂ. 13-26 ಯೋಗ: ಸಿದ್ಧಿ(ಆಸ್ರಿಕ್) ಗಂ. 10-38 ಕರಣ: ನಾಗ ಗಂ. 16-43, ಕರ್ಕಾಟಕ ಮಾಸದ 18 ನೇ ದಿನ, ಮಳೆನಕ್ಷತ್ರ: ಆಶ್ಲೇಷ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-20 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 24 ಮೊಹರಮ್
ದಿನ ವಿಶೇಷ : ಆಡಿ ಅಮಾವಾಸ್ಯೆ, ಜ್ಯೋತಿರ್ಭೀಮೇಶ್ವರ ವ್ರತ, ಅದೃಷ್ಟ ಸಂಖ್ಯೆ : 1, 6

ಮೇಷ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ನಿಮ್ಮ ಸ್ನೇಹಿತರು ಅಥವಾ ಸಹೋದ್ಯೋಗಿಗಳು ತಪ್ಪಿಸುವರು. ಪೂರ್ವ ನಿಯಾಮಕವಾಗಿ ಕೆಲಸ ಮಾಡುವುದು ಬಹಳ ಮುಖ್ಯವಾಗಿದೆ.

ವೃಷಭ: ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲ್ಯಗಳನ್ನು ಹೊರ ತೆಗೆಯಲು ಶಿಕ್ಷಕಿಯೊಬ್ಬರು ಸಹಾಯ ಮಾಡುವರು. ಅನ್ಯರ ಭಾವನೆಗಳಿಗೆ ಬೆಲೆಯನ್ನು ಕೊಡುವ ಗುಣವನ್ನು ಅಭ್ಯಾಸ ಮಾಡಿಕೊಳ್ಳಿ.

ಮಿಥುನ: ರಫ್ತು ವ್ಯಾಪಾರಗಳಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಬಾರದೇ ಇರುವ ರೀತಿಯಲ್ಲಿ ವ್ಯವಹರಿಸಿ. ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಆಗಬಹುದು. ಸಾಹಿತ್ಯ ವಿದ್ವಾಂಸರು ಅನವಶ್ಯಕ ಮಾತುಗಳಿಂದ ದೂರವಿರುವುದು ಒಳಿತು.

ಕರ್ಕಾಟಕ: ವಿನೂತನ ಕೆಲಸವನ್ನು ಸ್ಟಾರ್ಟ್‌ಅಪ್ ರೀತಿಯಲ್ಲಿ ಪ್ರಾರಂಭಿಸಲು ಸ್ನೇಹಿತರು ಒತ್ತಾಯಿಸುತ್ತಾರೆ. ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿ. ರಾಜಕೀಯದಲ್ಲಿ ಜಯವನ್ನು ಸಾಧಿಸುವಿರಿ.

ಸಿಂಹ: ಅರ್ಚಕ, ವೈದಿಕ ವೃತ್ತಿಯವರಿಗೆ ಕಾರ್ಯದೊತ್ತಡ ಅಧಿಕವಾಗಿದ್ದರೂ, ಸರಿಸಮಾನವಾದ ಗೌರವಧನಕ್ಕೆ ಕೊರತೆ ಕಾಣುವುದಿಲ್ಲ. ಕೆಲಸಗಳು ಎಷ್ಟೇ ಕಷ್ಟವಾದರೂ, ಸ್ವತಃ ನೀವೇ ಸೋಲನ್ನು ಘೋಷಿಸಿಕೊಳ್ಳಬೇಡಿ.

ಕನ್ಯಾ: ನೂತನ ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬದ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ. ಆದರೆ ಅದಕ್ಕಾಗಿ ವಿವಿಧ ರೀತಿಯ ವೈಯಕ್ತಿಕ ಖರ್ಚುಗಳನ್ನೆಲ್ಲಾ ನಿಲ್ಲಿಸಬೇಕಾದಂತಹ ಪರಿಸ್ಥಿತಿ ಎದುರಿಸುವಿರಿ.

ತುಲಾ: ಕೌಟುಂಬಿಕವಾದ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿ ಹೊಂದಿಯಾವು. ದೂರದ ಪ್ರಯಾಣಗಳು ಅನುಕೂಲಕರವಾಗಿರುವುದು. ಮಕ್ಕಳ ತೀರ್ಮಾನ ಬಹುಮಟ್ಟಿಗೆ ಸರಿಯಾಗಿರುವುದು.

ವೃಶ್ಚಿಕ: ದೂರದ ಪ್ರಯಾಣದಲ್ಲಿ ಇದ್ದರೂ ಮಗಳ ಜವಾಬ್ದಾರಿಯುತ ನಡೆಯಿಂದಾಗಿ ಮನೆ ಮತ್ತು ಕುಟುಂಬದ ಚಿಂತೆ ಅಷ್ಟಾಗಿ ಕಾಡುವುದಿಲ್ಲ. ಮಾರುಕಟ್ಟೆಯ ಬದಲಾವಣೆ ಅನುಕೂಲಕ್ಕೆ ತಕ್ಕಂತೆ ಇರುವುದು.

ಧನು: ನಾಯಕರಾಗಿ ನೀವು ನೀಡುವ ಸಲಹೆ ಸೂಚನೆಯಂತೆಯೇ ನಡೆದುಕೊಳ್ಳಲು ಸಹೋದ್ಯೋಗಿಗಳಿಗೆ ತಿಳಿಸಿ. ತೈಲ ಲೇಪನ, ಅಭ್ಯಂಗದಂತಹ ವಿಧಿಯ ಆಚರಣೆಯಿಂದ ಆರೋಗ್ಯ ಉತ್ತಮಗೊಳ್ಳುವುದು.

ಮಕರ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಮಾಡಿದ ತಪ್ಪಿನಿಂದಾಗಿ ನಷ್ಟವನ್ನು ಅನುಭವಿಸಬೇಕಾಗುವುದು. ವದಂತಿಗಳಿಗೆ ಕಿವಿಗೊಡದೆ ನಿಮ್ಮ ಕೆಲಸವನ್ನು ಮುಂದುವರೆಸಿಕೊಂಡು ಹೋಗಿ.

ಕುಂಭ: ಕೌಟುಂಬಿಕವಾಗಿ ನಡೆದುಕೊಂಡು ಬಂದಂತಹ ದೇವತಾ ಅಥವಾ ದೈವ ಕಾರ್ಯವನ್ನು ಹಮ್ಮಿಕೊಳ್ಳುವ ತೀರ್ಮಾನ ಆಗುವುದು. ಮುಕ್ತಾಯ ಹಂತದ ಯೋಜನೆಗಳು ನಿಮ್ಮ ಗಡಿಬಿಡಿಯಿಂದಾಗಿ ವ್ಯತ್ಯಾಸವಾಗಬಹುದು.

ಮೀನ: ನೀವು ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯ ಕ್ಷೇತ್ರ ಹಾಗೂ ಜೀವನದಲ್ಲಿ ಅಭೀಷ್ಟ ಪಡೆಯಬಹುದು. ಹಿಂದೆ ನೀವು ಇತರರಿಗೆ ಕೊಟ್ಟ ಹಣ ಇಂದು ಹಿಂದಿರುಗಿ ಬರುವ ಸೂಚನೆ ಇದೆ. ಹಣದ ದುಂದುವೆಚ್ಚವನ್ನು ನಿಲ್ಲಿಸಿ.

ಪದಬಂಧ 5762

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸುಗಂಧಯುಕ್ತ ನೀರು (3)
2.ಬೆಳೆದ ಬೆಳೆಯಿಂದ ಕಸಕಡ್ಡಿಗಳನ್ನು ಬೇರ್ಪಡಿಸು (2)
3.ಕಿಟಕಿ ಇಲ್ಲಿ ಕಾಣುತ್ತಿದೆ (4)
4.ಸಂಕೋಲೆ ಅಥವಾ ಸೆರೆಮನೆವಾಸ! (3)
5.ಹಾಲಿನ ಸಾರವತ್ತಾದ ಭಾಗ (2)
7.ಇವರು ಹುಟ್ಟಿದ ದಿನವನ್ನು ರಾಷ್ಟ್ರೀಯ ಗಣಿತದಿನ ಎಂದು ಆಚರಿಸಲಾಗುತ್ತದೆ (9)
10.ಮನೆ ಇಲ್ಲಿದೆ (2)
12.ನೂರರ ಮೊತ್ತ (3)
13.ಹಣವಿರುವ ಅಗಲವಾದ ತಟ್ಟೆ! (4)
14.ಹಣವನ್ನು ಸಂಗ್ರಹಿಸುವ ಡಬ್ಬಿ (2)
15.ಐತಿಹಾಸಿಕ ತಾಣವಾದ ಲಕ್ಕುಂಡಿ ಈ ಜಿಲ್ಲೆಯಲ್ಲಿದೆ (3)

ಮೇಲಿಂದ ಕೆಳಕ್ಕೆ
1.ಹೃದಯದಿಂದ ದೇಹದ ಇತರೆ ಭಾಗಕ್ಕೆ ರಕ್ತವನ್ನು ಸಾಗಿಸುವ ರಕ್ತನಾಳ (5)
2.ಓಬವ್ವನ ಆಯುಧ (3)
3.ಋಷಿ ಹಾಗೂ ಸಂಸ್ಕೃತ ಕವಿ ರಾಮಚರಿತೆ ಕುರಿತು ರಚಿಸಿದ ಮಹಾಕಾವ್ಯವು ಕವಿಯ ಹೆಸರಿನೊಂದಿಗಿದೆ (7)
6.ಜೇನು ಹುಳುವಿನಿಂದಾಗುವ ಸಿಹಿ ರಸ (2)
8.ಸರಸ್ವತಿಯ ಇನ್ನೊಂದು ಹೆಸರು (2)
9.ನೀರಿನ ಅಲೆ ಎಂಬರ್ಥದ ವಾದ್ಯ (5)
11.ಮಡಿವಂತನು ಏರಿದ ಅಟ್ಟ (3)



5761ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಮಧುರ 6.ಅಂಬರ
7.ಗುಲಾಬಿ 9.ಕರ
10.ಹರ್ಡೇಕರಮಂಜಪ್ಪ 11.ಹಾಲು
12.ಡಬರಿ 15.ಗೊಗ್ಗಯ್ಯ
16.ಪೇಚಾಟ

ಮೇಲಿಂದ ಕೆಳಕ್ಕೆ:
1.ವಾಮನ 2.ಬೆರಗು
3.ನೇರ 4.ಉಪಕಾರ
6.ಅಂಬಿಗರಚೌಡಯ್ಯ 8.ಮಹಲು
9.ಕಪ್ಪಡ 11.ಹಾಲುಗಲ್ಲ
13.ರಿಪೇರಿ 14.ಕಟಕಿ
15.ಗೊನೆ

ಸುಡೊಕು 6147

	8	4		5				
1			6		4		7	3
	5			7			2	
5		8	9					
						7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6146 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆಪಿಎಸ್‌ಸಿ: ಸರ್ಕಾರಿ ಹುದ್ದೆಗಾಗಿ ಆಕಾಂಕ್ಷಿಗಳಿಂದ ಅರ್ಜಿಗಳ ಮಹಾಪೂರ

2,243 ಹುದ್ದೆ; 10.79 ಲಕ್ಷ ಅರ್ಜಿ

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಹುದ್ದೆ ಗಿಟ್ಟಿಸಿಕೊಳ್ಳಲು ಹಾತೊರೆ ಯುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದ್ದು, ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಈಗಾಗಲೇ ಅರ್ಜಿ ಆಹ್ವಾನಿಸಿರುವ ವಿವಿಧ ಇಲಾಖೆಗಳ ನಾನಾ ವೃಂದಗಳ 2,243 ಹುದ್ದೆಗಳಿಗೆ 10,79,236 ಅರ್ಜಿಗಳು ಸಲ್ಲಿಕೆ ಆಗಿವೆ!

ಈ ಪೈಕಿ, ಉಳಿಕೆ ಮೂಲ ವೃಂದದ (ಹೈದರಾಬಾದ್- ಕರ್ನಾಟಕೇತರ) 1,772 ಹುದ್ದೆಗಳಿಗೆ 8,65,715, ಹೈದರಾಬಾದ್ ಕರ್ನಾಟಕದ 471 ಹುದ್ದೆಗಳಿಗೆ 2,13,521 ಅರ್ಜಿಗಳು ಬಂದಿವೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಅದರಲ್ಲೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ತಾಲ್ಲೂಕು ಕಲ್ಯಾಣ ಅಧಿಕಾರಿ (ಗ್ರೂಪ್ 'ಬಿ') ಹೈದರಾಬಾದ್ -ಕರ್ನಾಟಕೇತರ ವೃಂದದ 21 ಹುದ್ದೆಗಳಿಗೆ 1,33,781 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಯಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) 247 (ಹೈಕ 97) ಹುದ್ದೆಗಳಿಗೆ 4,04,430 ಅರ್ಜಿಗಳು ಸಲ್ಲಿಕೆ ಆಗಿವೆ.

2023ರ ಏಪ್ರಿಲ್‌ನಿಂದ ಈವರೆಗೆ ವಿವಿಧ ಹುದ್ದೆಗಳ ನೇಮಕಾತಿಗೆ ಒಟ್ಟು 20 ಅಧಿಸೂಚನೆಗಳನ್ನು ಕೆಪಿಎಸ್‌ಸಿ ಹೊರಡಿಸಿದೆ. ಈ ಪೈಕಿ, 19 ಅಧಿಸೂಚನೆಗಳಿಗೆ ಅರ್ಜಿ ಆಹ್ವಾನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಒಂದು ಅಧಿಸೂಚನೆಗೆ (ಪಶು ವೈದ್ಯಾಧಿಕಾರಿ 400 ಹುದ್ದೆಗಳು) ಮಾತ್ರ ಆಗಸ್ಟ್ 9 ರಿಂದ ಅರ್ಜಿ ಸ್ವೀಕಾರ ಆರಂಭವಾಗಲಿದೆ. ಅರ್ಜಿ ಸಲ್ಲಿಕೆ ಅವಧಿ ಪೂರ್ಣಗೊಂಡ ಅಧಿಸೂಚನೆಗಳ ಪೈಕಿ, ವಾಣಿಜ್ಯ ತೆರಿಗೆ ಪರಿವೀಕ್ಷಕ 245 (ಹೈಕ 15) ಹುದ್ದೆಗಳಿಗೆ ನೇಮಕಾತಿಗೆ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆ ನಡೆದಿದೆ. ಉಳಿದ 18 ನೇಮಕಾತಿ ಅಧಿಸೂಚನೆ ಗಳಲ್ಲಿ ಅರ್ಜಿ ಆಹ್ವಾನ ಅವಧಿ ಪೂರ್ಣಗೊಂಡು ಕೆಲವು ತಿಂಗಳು ಕಳೆದರೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕೆಪಿಎಸ್‌ಸಿ ನಡೆಸಿಲ್ಲ.

'ವಿಧಾನಸಭೆ ಚುನಾವಣೆ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದರೆ, ಸರ್ಕಾರದಲ್ಲಿ ಖಾಲಿ ಇರುವ ಎಲ್ಲ ಅನುಮೋದಿತ ಹುದ್ದೆಗಳನ್ನು ಒಂದು ವರ್ಷದಲ್ಲಿ ಭರ್ತಿ ಮಾಡುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆ ಯಲ್ಲಿ ಭರವಸೆ ನೀಡಿತ್ತು. ಆದರೆ, ಆ ಭರವಸೆ ಈಡೇರುವುದಿರಲಿ, ಅಧಿಸೂಚನೆ ಹೊರಡಿಸಿದ ನೇಮಕಾತಿ ಪ್ರಕ್ರಿಯೆಗಳೂ ತ್ವರಿತಗತಿಯಲ್ಲಿ ನಡೆಯುತ್ತಿಲ್ಲ' ಎಂದು ಹುದ್ದೆ ಆಕಾಂಕ್ಷಿಗಳು ಅಲವತ್ತುಕೊಂಡಿದ್ದಾರೆ.

ಹೆಚ್ಚು ಅರ್ಜಿಗಳು ಸಲ್ಲಿಕೆಯಾದ ಹುದ್ದೆಗಳು

ವೃಂದ	ಉಳಿಕೆ ವೃಂದದ ಹುದ್ದೆ (ಅರ್ಜಿ)	ಹೈ-ಕ ವೃಂದ (ಅರ್ಜಿ)
ವಾಣಿಜ್ಯ ತೆರಿಗೆ ಪರಿವೀಕ್ಷಕರು	230 (1,60,682)	15 (25,079)
ಸಹಾಯಕ ಉದ್ಯೋಗಾಧಿಕಾರಿ	-	1 (6,818)
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ	150 (3,19,527)	97 (84,903)
ಗೆಜೆಟೆಡ್ ಪ್ರೊಬೇಷನರಿ	384 (2,10,910)	-
ಹಿಂದುಳಿದ ವರ್ಗಗಳ ತಾಲ್ಲೂಕು ಅಧಿಕಾರಿ	21 (1,33,781)	19 (34,671)
ಕೈಗಾರಿಕಾ ವಿಸ್ತರಣಾ ಅಧಿಕಾರಿ	50 (49,270)	13 (12,213)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಸಹಾಯಕ ನಿರ್ದೇಶಕರು	20 (30,122)	3 (6,060)
ಬಿಬಿಎಂಪಿ ಎಇ (ಸಿವಿಲ್) (ವಿಭಾಗ-1)	92 (22,365)	8 (4,078)
ಜಲ ಸಂಪನ್ಮೂಲ ಇಲಾಖೆ ಎಇ (ಸಿವಿಲ್) (ವಿಭಾಗ-1)	90 (21,364)	-

ವಿವಿಧ ಹುದ್ದೆಗಳಿಗೆ ನಡೆಸುವ ನೇಮಕಾತಿ ಪ್ರಕ್ರಿಯೆಯಲ್ಲಿನ ವಿಳಂಬ ತಡೆಗೆ, ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪರಿಶೀಲಿಸಲಾಗುತ್ತಿದೆ

ಕೆ. ರಾಕೇಶ್ ಕುಮಾರ್, ಕಾರ್ಯದರ್ಶಿ, ಕೆಪಿಎಸ್‌ಸಿ

ನೇಮಕಾತಿ ವಿಳಂಬಕ್ಕೆ ಕೆಪಿಎಸ್‌ಸಿ ಕಾರಣಗಳೇನು?

- ಇಲಾಖೆಗಳಿಂದ ಬರುವ ಪ್ರಸ್ತಾವಗಳಲ್ಲಿ ನ್ಯೂನತೆ
- ಪ್ರಸ್ತಾವಗಳಲ್ಲಿರುವ ನ್ಯೂನತೆಗಳಿಗೆ ಸ್ಪಷ್ಟೀಕರಣ, ಮಾಹಿತಿ ನೀಡಲು ಇಲಾಖೆಗಳು ಕಾಲಾವಕಾಶ ತೆಗೆದುಕೊಳ್ಳುತ್ತಿರುವುದು
- ಕೆಇಎ ಸೇರಿದಂತೆ ಇತರ ಪ್ರಾಧಿಕಾರಗಳೂ ಶನಿವಾರ, ಭಾನುವಾರ ಪರೀಕ್ಷೆ ಗಳನ್ನು ನಡೆಸುತ್ತಿರುವುರಿಂದ, ಆ ದಿನಗಳನ್ನು ಹೊರತುಪಡಿಸಿ ಪರೀಕ್ಷೆಗೆ ದಿನಾಂಕ ನಿಗದಿಪಡಿಸಬೇಕಿದೆ.
- ಹಬ್ಬ ಹರಿದಿನ, ಜಯಂತಿ, ರಾಷ್ಟ್ರೀಯ ದಿನಗಳನ್ನೂ ಹೊರತುಪಡಿಸಿಯೂ ದಿನಾಂಕ ನಿಗದಿಪಡಿಸಬೇಕಿದೆ
- ಆಯ್ಕೆಗೊಂಡ ಅಭ್ಯರ್ಥಿಗಳು ನಿಗದಿತ ಅವಧಿಯಲ್ಲಿ ಮೂಲ ದಾಖಲೆ ಸಲ್ಲಿಸದಿರುವುದು
- ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ವಿಳಂಬ
- ಎಲ್ಲ ನೇಮಕಾತಿ ಪ್ರಕ್ರಿಯೆಗಳಲ್ಲೂ ಅಭ್ಯರ್ಥಿಗಳು ಕೋರ್ಟ್ ಮೊರೆ ಹೋಗುತ್ತಿರುವುದು
- ಸಿಬ್ಬಂದಿ ಕೊರತೆ

ಕೆಎಎಸ್– ಯಾವ ಪದವಿ, ಎಷ್ಟು ಅರ್ಜಿ?

2023–24ನೇ ಸಾಲಿನ ಕೆಎಎಸ್ 40 ಹುದ್ದೆಗಳೂ ಸೇರಿ ಗೆಜೆಟೆಡ್ ಪ್ರೊಬೇಷನರಿ ಒಟ್ಟು 384 ಹುದ್ದೆಗಳಿಗೆ 2,10,910 ಅರ್ಜಿಗಳು ಸಲ್ಲಿಕೆ ಆಗಿವೆ. ಕೆಪಿಎಸ್‌ಸಿಗೆ ಇದೇ ಮೊದಲ ಬಾರಿಗೆ ಅರ್ಜಿ ಸಲ್ಲಿಸಿದವರಲ್ಲಿ ಯಾವ ಪದವಿ ಪಡೆದವರು, ಎಷ್ಟು ಮಂದಿ ಅರ್ಜಿ ಸಲ್ಲಿಸಿದ್ದಾರೆ ಎಂಬ ಮಾಹಿತಿಯನ್ನೂ ನೀಡಿದೆ. ಆ ಮಾಹಿತಿಯ ಪ್ರಕಾರ, ಬಿ.ಎ 63,769 (ಶೇ 30.24), ಬಿ.ಇ 38,692 (ಶೇ18.35), ಬಿ.ಎಸ್‌ಸಿ 36,091 (ಶೇ 17.11) ಬಿ.ಕಾಂ 34,795 (ಶೇ 16.50) ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಈ ನಾಲ್ಕು ಪದವಿ ಪಡೆದವರು ಅತೀ ಹೆಚ್ಚು 1,73,347 (ಶೇ 82.19) ಅರ್ಜಿ ಸಲ್ಲಿಸಿದ್ದಾರೆ.

'ರೈಲ್ವೆ: ಕನ್ನಡದಲ್ಲೂ ಪರೀಕ್ಷೆ'

ಸುತ್ತೋಲೆ ಹೊರಡಿಸಲು ರೈಲ್ವೆ ಮಂಡಳಿಗೆ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ವಿ. ಸೋಮಣ್ಣ

ಬೆಂಗಳೂರು: ರೈಲ್ವೆ ನೇಮಕಾತಿ ಮಂಡಳಿ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನ್ನಡದಲ್ಲಿಯೂ ಬರೆಯಲು ಅವಕಾಶ ಕಲ್ಪಿಸಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಇಲಾಖೆಯಲ್ಲಿ ಬಡ್ತಿ ನೀಡಲು ನಡೆಸುವ 'ಸಾಮಾನ್ಯ ವಿಭಾಗ ಸ್ಪರ್ಧಾತ್ಮಕ ಪರೀಕ್ಷೆ' (ಜಿಡಿಸಿಇ) ಬರೆಯಲು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಅವಕಾಶ ನೀಡಲಾಗಿತ್ತು. ಕನ್ನಡದಲ್ಲಿಯೂ ಅವಕಾಶ ಇರಬೇಕು ಎಂದು ಒತ್ತಾಯ ಬಂದಿರುವುದರಿಂದ ಪರೀಕ್ಷೆಯನ್ನು ಮುಂದಕ್ಕೆ ಹಾಕಲಾಗಿದೆ. ಕನ್ನಡ ದಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ನೀಡಿ ಸುತ್ತೋಲೆ ಹೊರಡಿಸುವಂತೆ ರೈಲ್ವೆ ಬೋರ್ಡ್ ಪ್ರಧಾನ ವ್ಯವಸ್ಥಾಪಕ ರಿಗೆ ಸೂಚನೆ ನೀಡಲಾಗಿದೆ' ಎಂದು ಹೇಳಿದರು.

'ಲೋಕೊ ಪೈಲೆಟ್ ಹುದ್ದೆಗಳ ಪರೀಕ್ಷಾ ಸುತ್ತೋಲೆ ಕನ್ನಡದಲ್ಲಿ ಇಲ್ಲದೇ ಇರುವುದನ್ನು ಸಂಸದ ತೇಜಸ್ವಿ ಸೂರ್ಯ ಗಮನಕ್ಕೆ ತಂದಿದ್ದರು. ಕನ್ನಡದಲ್ಲಿಯೂ ಸುತ್ತೋಲೆ ಹೊರಡಿಸಲು ತಿಳಿಸಿದ್ದೇನೆ. ಸೀಮಿತ ವಿಭಾಗದ ಸ್ಪರ್ಧಾತ್ಮಕ ಪರೀಕ್ಷೆ (ಎಲ್‌ಡಿಸಿಇ) ಸೇರಿದಂತೆ ರೈಲ್ವೆಯ ಎಲ್ಲ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿಯೂ ನಡೆಸಲು ಅವಕಾಶ ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದರು.

ಬೆಂಗಳೂರು ಉಪನಗರ ರೈಲು ಯೋಜನೆ ಮಂದಗತಿಯಲ್ಲಿದೆ. ತ್ವರಿತ ಗೊಳಿಸಲು ತಿಂಗಳಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

ಬಡ ಸಮುದಾಯದ ಪ್ರಯಾಣಿಕ ರನ್ನು ಗಮನದಲ್ಲಿ ಇಟ್ಟುಕೊಂಡು ಪ್ರಯಾಣಿಕರ ರೈಲಿಗೆ ಸಾಮಾನ್ಯ ಬೋಗಿಗಳನ್ನು ಹೆಚ್ಚಿಸಲಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಮತ್ತು ರಾಷ್ಟ್ರೀಯ ಹೆದ್ದಾರಿ (ಲೋಕೋಪಯೋಗಿ) ಅಧಿಕಾರಿ ಗಳೊಂದಿಗೆ ಸಭೆ ನಡೆಸಿ ತುಮಕೂರು ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ 48ರಲ್ಲಿ ತುಮಕೂರು–ನೆಲಮಂಗಲ ರಸ್ತೆ ಕಾಮಗಾರಿ, ಎನ್‌ಎಚ್ 206ರ ಮಲ್ಲಸಂದ್ರ–ಕರಡಿ ಚತುಷ್ಪಥ ಕಾಮಗಾರಿ, ಎನ್‌ಎಚ್ 234ರ ಹುಳಿಯಾರು–ಶಿರಾ ದ್ವಿಪಥ ರಸ್ತೆ ಸಹಿತ ಒಟ್ಟು ₹ 6,400 ಕೋಟಿ ವೆಚ್ಚದಲ್ಲಿ 12 ರಸ್ತೆಗಳಲ್ಲಿ 375 ಕಿ.ಮೀ. ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ ಎಂದು ವಿವರಿಸಿದರು.

ರಾಷ್ಟ್ರೀಯ ಹೆದ್ದಾರಿ 150 (ಎ) ಯಲ್ಲಿ ಕೆ.ಬಿ. ಕ್ರಾಸ್ ಬಳಿ ಸ್ವಾಧೀನ ಪಡೆದಿರುವ 2 ಎಕರೆ 2 ಗುಂಟೆ ಜಮೀನಿಗೆ ಸಂಬಂಧಿಸಿ ಸಂತ್ರಸ್ತರಿಗೆ ಪರಿಹಾರ ನೀಡಲು ಕ್ರಮ ವಹಿಸಲಾಗಿದೆ ಎಂದರು.

ಗೂಡ್ಸ್ ರೈಲಿನಲ್ಲಿ ಕಟ್ಟುನಿಟ್ಟಿನ ತಪಾಸಣೆ

'ಗೂಡ್ಸ್ ರೈಲುಗಳಲ್ಲಿ ಬರುವ ಎಲ್ಲ ವಸ್ತುಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ನಡೆಸಬೇಕು. ಕಾನೂನು ಬಾಹಿರವಾಗಿ ಆಹಾರ ಪದಾರ್ಥವೂ ಸೇರಿದಂತೆ ಯಾವುದೇ ವಸ್ತುಗಳು ಬಾರದಂತೆ ನೋಡಿಕೊಳ್ಳಬೇಕು ಎಂದು ಆರ್‌ಪಿಎಫ್ ತಂಡದ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆ ದಿನ ಬದಲು– ಸಿ.ಎಂ

ಬೆಂಗಳೂರು: '2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆಯ ಹೊಸ ದಿನಾಂಕವನ್ನು ಕೆಪಿಎಸ್‌ಸಿ ಶೀಘ್ರ ಪ್ರಕಟಿಸಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

'X' ಖಾತೆಯಲ್ಲಿ ಈ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ, 'ಪೂರ್ವಭಾವಿ ಪರೀಕ್ಷೆಯನ್ನು ಕೆಪಿಎಸ್‌ಸಿ ಆ. 25ರಂದು ನಡೆಸಲು ನಿರ್ಧರಿಸಿತ್ತು. ಅದೇ ದಿನ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ಗುಮಾಸ್ತ ಹುದ್ದೆಗಳಿಗೆ ಪರೀಕ್ಷೆ ನಡೆಸಲಿದೆ. ಈ ಬಗ್ಗೆ ಕೆಪಿಎಸ್‌ಸಿ ಜೊತೆ ಚರ್ಚಿಸಿದ್ದು, ಐಬಿಪಿಎಸ್ ಪರೀಕ್ಷಾರ್ಥಿಗಳ ಹಿತದೃಷ್ಟಿಯಿಂದ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯನ್ನು ಕೆಲ ದಿನಗಳಿಗೆ ಮುಂದೂಡುವಂತೆ ಸಲಹೆ ನೀಡಿದ್ದೇನೆ' ಎಂದಿದ್ದಾರೆ.

'ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಗೆ ಅಗತ್ಯ ಸಿದ್ಧತೆಗಳು ಆಗಿರುವ ಕಾರಣ ಆಗಸ್ಟ್ ತಿಂಗಳಲ್ಲೇ ಬೇರೊಂದು ದಿನ ಪರೀಕ್ಷೆ ನಡೆಸುವಂತೆ ಸಲಹೆ ನೀಡಿದ್ದೇನೆ' ಎಂದರು.

ಕೆಎಚ್‌ಐಆರ್ ಸಿಟಿ ಯೋಜನೆಗೆ ಆ. 23 ರಂದು ಚಾಲನೆ– ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ, ಸುಮಾರು 2 ಸಾವಿರ ಎಕರೆಯಲ್ಲಿ 'ನಾಲೆಡ್ಜ್, ಹೆಲ್ತ್ ಇನ್ನೋವೇಶನ್ ಮತ್ತು ರೀಸರ್ಚ್ ಸಿಟಿ' (ಕೆಎಚ್‌ಐಆರ್ ಸಿಟಿ) ಯೋಜನೆ ಮೊದಲ ಹಂತಕ್ಕೆ ಇದೇ 23ರಂದು ಚಾಲನೆ ನೀಡಲಾಗುವುದು' ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

'ಮೊದಲ ಹಂತದಲ್ಲಿ ಒಂದು ಸಾವಿರ ಎಕರೆ ಜಾಗದಲ್ಲಿ ಯೋಜನೆ ತಲೆ ಎತ್ತಲಿದೆ. ಎರಡು ಹಂತಗಳಲ್ಲಿ ₹40 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಆಗಲಿದ್ದು, 50 ಸಾವಿರ ಉದ್ಯೋಗಗಳು ಸೃಷ್ಟಿ ಆಗಲಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು, ಉದ್ಯಮ ವಲಯದ ಪ್ರಮುಖರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಇಸ್ರೇಲ್ ರಾಯಭಾರ ಕಚೇರಿ ಭದ್ರತೆ ಪರಿಶೀಲನೆ

ನವದೆಹಲಿ (ಪಿಟಿಐ): ಟೆಹರಾನ್‌ನಲ್ಲಿ ಹಮಾಸ್ ಬಂಡುಕೋರರ ನಾಯಕನ ಹತ್ಯೆ ನಡೆದಿರುವ ಹಿನ್ನೆಲೆಯಲ್ಲಿ ಗುಪ್ತಚರ ಸಂಸ್ಥೆಗಳ ಎಚ್ಚರಿಕೆಯ ಮೇರೆಗೆ ದೆಹಲಿ ಪೊಲೀಸರು ಇಸ್ರೇಲ್ ರಾಯಭಾರ ಕಚೇರಿ ಮತ್ತು ಚಾಬಾದ್ ಹೌಸ್‌ನ ಭದ್ರತೆ ವ್ಯವಸ್ಥೆಯನ್ನು ಪರಿಶೀಲಿಸಿದ್ದಾರೆ.

ಜುಲೈ 31ರಂದು ಟೆಹರಾನ್‌ನಲ್ಲಿ ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆ ನೆಲೆಸಿದ್ದ ನಿವಾಸ ಗುರಿಯಾಗಿಸಿ ಇಸ್ರೇಲ್ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ ಹನಿಯೆ ಮತ್ತು ಅವರ ಅಂಗರಕ್ಷಕ ಹತರಾಗಿದ್ದರು.

ಮೂಲಗಳ ಪ್ರಕಾರ, ರಾಷ್ಟ್ರ ರಾಜಧಾನಿಯಲ್ಲಿರುವ ಎರಡು ಇಸ್ರೇಲಿ ಕಟ್ಟಡಗಳ ಸುತ್ತಲೂ ಬೃಹತ್ ಭದ್ರತಾ ಜಾಲ ಹೆಣೆಯಲು ಹಿರಿಯ ಅಧಿಕಾರಿಗಳು ಸಭೆ ನಡೆಸಿದ್ದಾರೆ.

ಶೇ 84.87 ವಿದ್ಯಾರ್ಥಿಗಳು ಉತ್ತೀರ್ಣ

ದ್ವಿತೀಯ ಪಿಯುಸಿ ಮೂರು ಪರೀಕ್ಷೆಗಳ ಕ್ರೋಡೀಕೃತ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ನೇ ಸಾಲಿನ ದ್ವಿತೀಯ ಪಿಯುಸಿ ಮೂರು ಪರೀಕ್ಷೆಗಳ ಕ್ರೋಡೀಕೃತ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಶನಿವಾರ ಬಿಡುಗಡೆ ಮಾಡಿದೆ. ಶೇ 84.87 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದೇ ಮೊದಲ ಬಾರಿಗೆ ವಾರ್ಷಿಕ ಮೂರು ಪರೀಕ್ಷೆಗಳು ನಡೆದಿದ್ದವು.

2023ನೇ ಸಾಲಿಗೆ (ಶೇ 74.67) ಹೋಲಿಸಿದರೆ, ಮೂರೂ ಪರೀಕ್ಷೆಗಳ ಕ್ರೋಡೀಕೃತ ಫಲಿತಾಂಶದಲ್ಲಿ ಶೇ 10.2 ರಷ್ಟು ಏರಿದೆ. 2022ರಲ್ಲಿ ಶೇ 61.88 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದರು. ಅದೇ ರೀತಿ, 2024ರ ದ್ವಿತೀಯ ಪಿಯು ಪರೀಕ್ಷೆ-1ರ ಫಲಿತಾಂಶಕ್ಕೆ (ಶೇ 81.15) ಹೋಲಿಸಿ ದರೆ ಕ್ರೋಡೀಕೃತ ಫಲಿತಾಂಶದಲ್ಲಿ ಶೇ 3.72 ಏರಿಕೆ ಆಗಿದೆ.

ಗಣಿತ ವಿಜ್ಞಾನದಲ್ಲಿ 7,378 ಮತ್ತು ಜೀವ ವಿಜ್ಞಾನದಲ್ಲಿ 5,959, ಕನ್ನಡದಲ್ಲಿ 2,595, ಅರ್ಥಶಾಸ್ತ್ರ ದಲ್ಲಿ 1,452 ವಿದ್ಯಾರ್ಥಿ ಗಳು ಶೇ ನೂರು ಅಂಕ ಗಳಿಸಿದ್ದಾರೆ.

ಜಿಲ್ಲಾವಾರು ಫಲಿತಾಂಶದಲ್ಲಿ ದಕ್ಷಿಣ ಕನ್ನಡ (ಶೇ 98.59), ಉಡುಪಿ (ಶೇ 98.45), ಉತ್ತರ ಕನ್ನಡ (ಶೇ 94.64) ಮೊದಲ ಮೂರು ಸ್ಥಾನಗಳನ್ನು ಪಡೆದಿವೆ. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪ್ರತಿನಿಧಿಸುವ ಶಿವಮೊಗ್ಗ ಜಿಲ್ಲೆ 8ನೇ ಸ್ಥಾನ (ಶೇ 91.9) ಪಡೆದಿದೆ.

536 ಖಾಸಗಿ ಮತ್ತು 71 ಸರ್ಕಾರಿ ಕಾಲೇಜುಗಳು ಶೇ 100 ಫಲಿತಾಂಶ ಪಡೆದಿವೆ. ಫಲಿತಾಂಶದಲ್ಲಿ ಖಾಸಗಿ ಕಾಲೇಜುಗಳು (ಶೇ 92.02) ಮುಂಚೂಣಿ ಯಲ್ಲಿವೆ. ಸರ್ಕಾರಿ ಕಾಲೇಜುಗಳ ಒಟ್ಟು ಫಲಿತಾಂಶ ಶೇ 74.02.

ವಿಜ್ಞಾನ ವಿಷಯಗಳಲ್ಲಿ ವಿದ್ಯಾರ್ಥಿ ಗಳು ಹೆಚ್ಚು ಬಾರಿ ಪರೀಕ್ಷೆ ತೆಗೆದು- ಕೊಂಡಿದ್ದಾರೆ. ಭೌತವಿಜ್ಞಾನ ವಿಷಯದ ಪರೀಕ್ಷೆ ಬರೆದ 25,996 ವಿದ್ಯಾರ್ಥಿಗ- ಳಲ್ಲಿ 14,882 ವಿದ್ಯಾರ್ಥಿಗಳು ಅಂಕ ಹೆಚ್ಚಿಸಿಕೊಂಡಿದ್ದಾರೆ. ರಾಸಾಯನಿಕ ವಿಜ್ಞಾನ ವಿಷಯದಲ್ಲಿ 7,700, ಗಣಿತ ವಿಜ್ಞಾನದಲ್ಲಿ 9,351, ಜೀವ ವಿಜ್ಞಾನದಲ್ಲಿ 2,159 ವಿದ್ಯಾರ್ಥಿಗಳು ಫಲಿತಾಂಶ ಸುಧಾರಿಸಿಕೊಂಡಿದ್ದಾರೆ.

ಅಂತಿಮ ಫಲಿತಾಂಶ ವೀಕ್ಷಿಸಲು https:kseab.karanataka.gov.in ವೆಬ್‌ಸೈಟ್ ಕ್ಲಿಕ್ಕಿಸಬಹುದು.

ಅಂಕಿ ಅಂಶಗಳು

7,20,593 ಮೂರೂ ಪರೀಕ್ಷೆಗೆ ನೋಂದಾಯಿಸಿದ್ದ ಒಟ್ಟು ವಿದ್ಯಾರ್ಥಿಗಳು

7,04,920 ಪರೀಕ್ಷೆಗೆ ಹಾಜರಾದವರು

5,98,283 (ಶೇ 84.87) ಉತ್ತೀರ್ಣ

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
Sreenidhi
(RBI License No: UBD.KAN 0027P, Dated 6/1/2003)
ಆಡಳಿತ ಕಛೇರಿ: ನಂ.113, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004.
ದೂ: 080 26601152/22410151 Website: www.sreenidhibank.com

26ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನೋಟೀಸು

ಆತ್ಮೀಯ ಸದಸ್ಯರೇ,
ನಮ್ಮ ಬ್ಯಾಂಕಿನ '2023–24ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು' ದಿನಾಂಕ 25–08–2024 ರಂದು ಭಾನುವಾರ ಬೆಳಿಗ್ಗೆ 10:30 ಗಂಟೆಗೆ 'ಸಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್' ಹೊಸೂರು ಮುಖ್ಯ ರಸ್ತೆ, ಲಕ್ಕಸಂದ್ರ ಬಸ್ ನಿಲ್ದಾಣದ ಎದುರು, ಬೆಂಗಳೂರು–560029, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ಆಹ್ವಾನ ಪತ್ರಿಕೆ ಮತ್ತು ವಾರ್ಷಿಕ ವರದಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಅಂಚೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟಿಸ್ ಎಂದು ತಿಳಿದು ತಾವೆಲ್ಲರೂ ಈ ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ.

ದಿನಾಂಕ: 03/08/2024 ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸ್ಥಳ: ಬೆಂಗಳೂರು ಸಹಿ/– ಜಿ. ಪ್ರವೀಣ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು/ಸಿ.ಇ.ಒ

ಪ್ರಜಾವಾಣಿ

ಇದೀಗ ಸರಿಸಾಟಿಯಿಲ್ಲದ ಪಾಕಶಾಸ್ತ್ರ ಪಯಣ
ಮತ್ತಷ್ಟು ದೊಡ್ಡದಾಗಿ ಹಾಗೂ ಉತ್ತಮವಾಗಿ!



ಅಡುಗೆ ಸ್ಪರ್ಧೆ ಮತ್ತು ರೋಮಾಂಚಕ ವಿಡಿಯೊ ಸರಣಿಯಲ್ಲಿ ನಮ್ಮ ಜೊತೆ ಪಾಲ್ಗೊಳ್ಳಿ

ಇದೇ ಮೊದಲ ಸಲ 'ಕರುನಾಡ ಸವಿಯೂಟ' ಸ್ಪರ್ಧೆಯು ನಿಮ್ಮ ನಗರಕ್ಕೆ ಬರುತ್ತಿದೆ.

ನಿಪುಣ ಬಾಣಸಿಗರ ಮುಂದೆ ಪಾಕ ಕೌಶಲಗಳನ್ನು ಪ್ರದರ್ಶಿಸಲು ಅವಕಾಶ ಒದಗಿಸುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಾಗೂ ಅವರು ನೀಡುವ ಮಾಸ್ಟರ್ ಕ್ಲಾಸ್ ಗೆ ಹಾಜರಾಗಿ.

ಜೊತೆಗೆ, ನಾವು ಕರ್ನಾಟಕದ ಪಾಕ ಪರಂಪರೆಯ ಹಿರಿಮೆಯನ್ನು ವಿಶೇಷ ವಿಡಿಯೊ ಸರಣಿ ಮೂಲಕ ಆಚರಿಸುತ್ತಿದ್ದು, 7 ವಾರಗಳ ಅವಧಿಯಲ್ಲಿ 3 ಹೆಸರಾಂತ ಬಾಣಸಿಗರು 15 ಅಡುಗೆ ವಿಧಾನಗಳನ್ನು ಪ್ರದರ್ಶಿಸಲಿದ್ದಾರೆ.

ಇಲ್ಲಿ ಸ್ಕ್ಯಾನ್ ಮಾಡಿ. ರುಚಿಯೊಂದಿಗಿನ ಈ ಕುತೂಹಲಕರ ಯಾನದಿಂದ ವಂಚಿತರಾಗದಿರಿ

Associate sponsors
Preethi SSP HING Vencobb Vencobb No.1 Tastiest Chicken

Supported by
Sujay WATER SAVING IRRIGATION SYSTEMS

COLLATERAL

ನಿಯಮಗಳು ಮತ್ತು ಷರತ್ತುಗಳಿಗೆ ನೋಡಿ: https://www.prajavani.net/cok2024tnc | *T&C apply.

‘ವಿಶ್ವದ ಆಹಾರ ಭದ್ರತೆಗೆ ಒತ್ತು’

65 ವರ್ಷದ ಬಳಿಕ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನ ಆಯೋಜನೆ

ನವದೆಹಲಿ (ಪಿಟಿಐ): ‘ಭಾರತವು ಅತಿಹೆಚ್ಚು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಉತ್ಪಾದಿಸುವ ರಾಷ್ಟ್ರವಾಗಿದೆ. ಹಾಗಾಗಿ, ಜಾಗತಿಕ ಆಹಾರ ಮತ್ತು ಪೌಷ್ಟಿಕತೆಯ ಭದ್ರತೆಗೆ ಮಾರ್ಗೋಪಾಯ ಹುಡುಕುವ ಕೆಲಸ ಮಾಡಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಶನಿವಾರದಿಂದ ಆರಂಭವಾದ 32ನೇ ಕೃಷಿ ಅರ್ಥಶಾಸ್ತ್ರಜ್ಞರ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಕೃಷಿಯು ಭಾರತದ ಆರ್ಥಿಕ ನೀತಿಗಳ ಕೇಂದ್ರ ಬಿಂದುವಾಗಿದೆ. 2024–25ನೇ ಸಾಲಿನ ಬಜೆಟ್‌ನಲ್ಲಿ ಸುಸ್ಥಿರ ಕೃಷಿ ಮತ್ತು ಹವಾಮಾನ ಆಧಾರಿತ ಕೃಷಿ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ ಎಂದರು.

65 ವರ್ಷಗಳ ಹಿಂದೆ ಭಾರತವು ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನವನ್ನು ಸಂಘಟಿಸಿತ್ತು. ಆಗ ದೇಶ ಸ್ವಾತಂತ್ರ್ಯಗೊಂಡು ಕೆಲವು ವರ್ಷಗಳಾಗಿದ್ದವು. ಹಾಗಾಗಿ, ಕೃಷಿ ಮತ್ತು ಆಹಾರ ಭದ್ರತೆಯ ಸವಾಲುಗಳನ್ನು ಎದುರಿಸುತಿತ್ತು. ಪ್ರಸ್ತುತ ಹಾಲು, ಬೇಳೆಕಾಳು ಮತ್ತು ಸಂಬಾರ ಪದಾರ್ಥಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು. ಆಹಾರ ಧಾನ್ಯಗಳು, ಹಣ್ಣುಗಳು, ತರಕಾರಿ, ಹತ್ತಿ, ಸಕ್ಕರೆ ಮತ್ತು ಚಹಾ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಎರಡನೇ ಅತಿದೊಡ್ಡ ರಾಷ್ಟ್ರವಾಗಿದೆ ಎಂದು ತಿಳಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಉಷ್ಣಾಂಶ ತಾಳಿಕೆಯ 1,900 ಹೊಸ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಲಾಗುತ್ತಿದೆ ಎಂದರು.

‘ಹಸಿವು ಮುಕ್ತ ಗುರಿ ಕಷ್ಟಸಾಧ್ಯ’

‘2030ರೊಳಗೆ ಜಗತ್ತನ್ನು ಹಸಿವು ಮುಕ್ತಗೊಳಿಸುವ ವಿಶ್ವಸಂಸ್ಥೆಯ ಗುರಿ ಈಡೇರಿಕೆಯು ಕಷ್ಟಸಾಧ್ಯ’ ಎಂದು ಜರ್ಮನಿಯ ಕೃಷಿ ಅರ್ಥಶಾಸ್ತ್ರಜ್ಞ ಮಾರ್ಟಿನ್ ಕೈಮ್ ಹೇಳಿದ್ದಾರೆ.

ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಪ್ರಸ್ತುತ ವಿಶ್ವದಾದ್ಯಂತ ಹಸಿವು ಮತ್ತು ಅಪೌಷ್ಟಿಕತೆ ಆವರಿಸಿಕೊಂಡಿದೆ. ಇದು ಅಭಿವೃದ್ಧಿಗೆ ತೊಡಕಾಗಿದೆ’ ಎಂದರು. ‘ಹಸಿವು ಮತ್ತು ಅಪೌಷ್ಟಿಕತೆ ಪ್ರಮಾಣ ಹೆಚ್ಚಳಕ್ಕೆ ಜಾಗತಿಕ ತಾಪಮಾನ ಮತ್ತು ಬಿಕ್ಕಟ್ಟುಗಳು ಕಾರಣವಾಗಿವೆ. ಆಹಾರ ವ್ಯವಸ್ಥೆಗಳು ಕೂಡ ಹವಾಮಾನ ವೈಪರೀತ್ಯ , ಪರಿಸರ ಸಂಬಂಧಿ ಸಮಸ್ಯೆಗಳಿಗೆ ಕೊಡುಗೆ ನೀಡುತ್ತಿವೆ ಎಂದರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ ಎಸ್.ವಿ.ನಾರಾಯಣಸ್ವಾಮಿರೆಡ್ಡಿ
ನಿಧನ 3-8-1991

ನೀವು ನಮ್ಮನಗಲಿ ಇಂದಿಗೆ 33 ವರ್ಷಗಳಾಯಿತು ಸದಾ ನಿಮ್ಮ ಸವಿನೆನಪಿನಲ್ಲಿ ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವ

ಶ್ರೀಮತಿ ಎಸ್.ವೆಂಕಟಲಕ್ಷ್ಮಮ್ಮ
ನಿಧನ 18-11-1999

ನೀವು ನಮ್ಮನಗಲಿ ಇಂದಿಗೆ 25 ವರ್ಷಗಳಾಯಿತು ಸದಾ ನಿಮ್ಮ ಸವಿನೆನಪಿನಲ್ಲಿ ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವ

ಮಕ್ಕಳು ಮೊಮ್ಮಕ್ಕಳು ಹಾಗೂ ಬಂಧು ವರ್ಗದವರು
ಎಸ್.ಜಿ.ಪಾಳ್ಯ, ಬೆಂಗಳೂರು-29.

ಸವಿನೆನಪು



ಜಯರಾಮ್ ಬಿ.ಸಿ
ನೀವು ತೋರಿಸಿದ ದಾರಿಯಲ್ಲಿ ನಡೆಯುತ್ತ ಪ್ರತಿಕ್ಷಣ ನಿಮ್ಮನ್ನು ನೆನೆಯುತ್ತ, ಭಗವಂತ ನಿಮ್ಮ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುವ

ದುಃಖತಪ್ತ ಪತ್ನಿ: ದೇವಿಕಾ
ಮಗಳು: ತನುಶ್ರೀ ಜಯರಾಮ್,
ಮುರುಗೇಶ್ ಪಾಳ್ಯ,
ಎನ್.ಆರ್. ಕಾಲೋನಿ, ಬೆಂಗಳೂರು.

LOOKING TO BUILD, BUY OR SELL A PROPERTY
Please refer Classifieds on Sunday

ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹16000
ಎಸಿ	₹9660
ಆರ್‌ಪಿ	₹18500
ಆರ್‌ಸಿ	₹9880

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹227
ಆರ್‌ಎಸ್‌ಎಸ್-5	₹218
ಗುಡ್ ಲಾಟ್	₹208

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-466
ದ್ವಿತಳಿ (ಬಿ.ವಿ)	₹288-588

2023–24ರಲ್ಲಿ 47.39 ಲಕ್ಷ ಟನ್ ಪೂರೈಕೆ

ಬೇಳೆಕಾಳು ಆಮದು ದುಪ್ಪಟ್ಟು



ನವದೆಹಲಿ (ಪಿಟಿಐ): ಭಾರತವು ಬೇಳೆಕಾಳುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಆದರೆ, ಚಿಲ್ಲರೆ ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆಯನ್ನು ನಿಯಂತ್ರಣಕ್ಕೆ ತರಲು ಕೇಂದ್ರ ಸರ್ಕಾರವು, ಪ್ರತಿವರ್ಷ ಬೇಳೆಕಾಳು ಸೇರಿ ಕೆಲವು ಧಾನ್ಯಗಳನ್ನು ಆಮದು ಮಾಡಿ-ಕೊಳ್ಳುತ್ತಿದೆ.

ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ 2023–24ರಲ್ಲಿ ಬೇಳೆಕಾಳು ಆಮದು ಪ್ರಮಾಣವು ದುಪ್ಪಟ್ಟಾಗಿದೆ. ತೊಗರಿ, ಉದ್ದು ಮತ್ತು ಚೆನ್ನಂಗಿ ಬೇಳೆಯನ್ನು (ಮಸೂರ್ ದಾಲ್) ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡಿದೆ.

‘2023–24ರಲ್ಲಿ ಒಟ್ಟು 47.39 ಲಕ್ಷ ಟನ್‌ನಷ್ಟು ಬೇಳೆಕಾಳುಗಳನ್ನು ಆಮದು ಮಾಡಿಕೊಳ್ಳಲಾಗಿದೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಖಾತೆಯ ರಾಜ್ಯ ಸಚಿವೆ ನಿಮುಬೇನ್ ಜಯಂತಿಭಾಯ್ ಬಮ್ಭಾನಿಯಾ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ದೇಶೀಯ ಬೇಡಿಕೆಯನ್ನು ಪೂರೈಸಲು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 11.32 ಲಕ್ಷ ಟನ್ ಆಮದು ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ.

‘ದೇಶದಲ್ಲಿ ಸ್ಥಳೀಯ ಅಗತ್ಯತೆ ಪೂರೈಸಲು ಅನುಗುಣವಾಗಿ ಬೇಳೆಕಾಳು ಉತ್ಪಾದನೆಯಾಗುತ್ತಿದೆ. ಆದರೆ, ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ತೊಗರಿ, ಉದ್ದು ಮತ್ತು ಚೆನ್ನಂಗಿ ಬೇಳೆಯನ್ನು ಆಮದು ಮಾಡಿಕೊಳ್ಳಲಾಗಿದೆ’ ಎಂದು ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆ ನಿಯಂತ್ರಣಕ್ಕೆ ಸರ್ಕಾರವು ಕ್ರಮವಹಿಸಿದೆ. ಈ ನಿಟ್ಟಿನಲ್ಲಿ ಬೆಲೆ ಸ್ಥಿರತೆ ನಿಧಿಯಡಿ (ಪಿಎಸ್‌ಎಫ್) ಬೇಳೆಕಾಳು ಮತ್ತು ಈರುಳ್ಳಿ ಕಾಪು ದಾಸ್ತಾನು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ತೊಗರಿ, ಉದ್ದು, ಚೆನ್ನಂಗಿ ಬೇಳೆ ಮತ್ತು ಕಡಲೆ ಬೇಳೆ ದಾಸ್ತಾನು ಸಾಕಷ್ಟಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಏರಿಕೆಯಾದರೆ ನಿಯಂತ್ರಿಸುವಷ್ಟು ದಾಸ್ತಾನು ಇದೆ ಎಂದು ತಿಳಿಸಿದ್ದಾರೆ.

ಉತ್ಪಾದನೆ ಏರಿಕೆ

ದೇಶದಲ್ಲಿ 2014–15ರಿಂದ 2023–24ರ ವರೆಗೆ ಬೇಳೆಕಾಳು ಉತ್ಪಾದನೆಯಲ್ಲಿ ಶೇ 43ರಷ್ಟು ಹಾಗೂ ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಶೇ 44ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2015–16ರಲ್ಲಿ ಒಟ್ಟು 163.23 ಲಕ್ಷ ಟನ್ ಬೇಳೆಕಾಳು ಉತ್ಪಾದನೆಯಾಗಿತ್ತು. 2023–24ರಲ್ಲಿ 244.93 ಲಕ್ಷ ಟನ್ ಉತ್ಪಾದನೆಯಾಗಿದೆ ಎಂದು ವಿವರಿಸಿದೆ.

ಕಡಲೆ ಬೇಳೆ ಕೆ.ಜಿಗೆ ₹60

‘ಭಾರತ್ ಬ್ರ್ಯಾಂಡ್’ನಡಿ 2023ರ ಜುಲೈನಲ್ಲಿ ಕಡಲೆ ಬೇಳೆ ಮಾರಾಟವನ್ನು ಆರಂಭಿಸಲಾಯಿತು. ಚಿಲ್ಲರೆ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಕೇಂದ್ರ ತಿಳಿಸಿದೆ.

ಸಬ್ಸಿಡಿ ದರದಲ್ಲಿ ಪ್ರತಿ ಕೆ.ಜಿ ಪ್ಯಾಕೆಟ್‌ಗೆ ₹60 ದರ ನಿಗದಿಪಡಿಸಲಾಗಿದೆ. ಕೆ.ಜಿಗೆ ₹55ರಂತೆ 30 ಕೆ.ಜಿ ತೂಕದ ಪ್ಯಾಕೆಟ್ ದೊರೆಯಲಿದೆ. ಜುಲೈ 22ರ ವರೆಗೆ 11.37 ಲಕ್ಷ ಟನ್‌ನಷ್ಟು ಭಾರತ್ ಕಡಲೆ ಬೇಳೆ ಮಾರಾಟವಾಗಿದೆ ಎಂದು ವಿವರಿಸಿದೆ.

ಭಾರತ್ ಬ್ರ್ಯಾಂಡ್‌ನಡಿ ಹೆಸರು ಕಾಳು ಕೂಡ ಮಾರಾಟ ಮಾಡುತ್ತಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹107 ದರ ನಿಗದಿಪಡಿಸಿದೆ.

ಅಲ್ಲದೆ, ಚೆನ್ನಂಗಿ ಬೇಳೆಯನ್ನೂ ಮಾರಾಟ ಮಾಡಲಾಗುತ್ತಿದ್ದು, ಪ್ರತಿ ಕೆ.ಜಿಗೆ ₹89 ಬೆಲೆ ನಿಗದಿಪಡಿಸಿದೆ.

ಅಸ್ಸಾಂ: ಟಾಟಾದಿಂದ 27 ಸಾವಿರ ಉದ್ಯೋಗ ಸೃಷ್ಟಿ

ಸೆಮಿಕಂಡಕ್ಟರ್ ಘಟಕಕ್ಕೆ ಭೂಮಿಪೂಜೆ

ನವದೆಹಲಿ (ಪಿಟಿಐ): ‘ಟಾಟಾ ಎಲೆಕ್ಟ್ರಾನಿಕ್ಸ್‌ನಿಂದ ಅಸ್ಸಾಂನಲ್ಲಿ ₹27 ಸಾವಿರ ಕೋಟಿ ವೆಚ್ಚದಡಿ ನಿರ್ಮಿಸುತ್ತಿರುವ ಸೆಮಿಕಂಡಕ್ಟರ್ ಜೋಡಣಾ ಘಟಕವು ಮುಂದಿನ ವರ್ಷದಿಂದ ಕಾರ್ಯಾಚರಣೆ ಆರಂಭಿಸಲಿದೆ’ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ತಿಳಿಸಿದ್ದಾರೆ.

ಶನಿವಾರ ನಡೆದ ಘಟಕದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಘಟಕದಿಂದ 27 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಪೈಕಿ ನೇರವಾಗಿ 15 ಸಾವಿರ ಉದ್ಯೋಗಗಳು ಸೃಷ್ಟಿಯಾದರೆ, ಪರೋಕ್ಷವಾಗಿ 12 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಈಗಾಗಲೇ, ಅಸ್ಸಾಂನ ಒಂದು ಸಾವಿರ ಜನರಿಗೆ ಉದ್ಯೋಗ ನೀಡಲಾಗಿದೆ’ ಎಂದು ತಿಳಿಸಿದರು.

ಘಟಕದ ಕಾರ್ಯಾಚರಣೆಗೆ ಅಗತ್ಯವಿರುವ ಕಟ್ಟಡವನ್ನು ತ್ವರಿತವಾಗಿ ನಿರ್ಮಿಸಲು ಕ್ರಮವಹಿಸಲಾಗುವುದು. ಇದಕ್ಕೆ ಅಗತ್ಯವಿರುವ ನೆರವು ಒದಗಿಸ-ಲಾಗುತ್ತಿದೆ ಎಂದರು.

ಅಸ್ಸಾಂನ ಮೋರಿಗಾಂವ್ ಜಿಲ್ಲೆಯಲ್ಲಿ ಶನಿವಾರ ಸೆಮಿಕಂಡಕ್ಟರ್ ಘಟಕದ ನಿರ್ಮಾಣಕ್ಕೆ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ ಮತ್ತು ಟಾಟಾ ಸನ್ಸ್ ಲಿಮಿಟೆಡ್ ಅಧ್ಯಕ್ಷ ಎನ್. ಚಂದ್ರಶೇಖರನ್ ಭೂಮಿಪೂಜೆ ನೆರವೇರಿಸಿದರು —ಪಿಟಿಐ ಚಿತ್ರ

ಸದ್ಯ ಸೆಮಿಕಂಡಕ್ಟರ್‌ಗಳನ್ನು ಪೂರೈಸುವ ಕಂಪನಿಗಳು ಹಂತ ಹಂತವಾಗಿ ದೇಶದಲ್ಲಿ ಘಟಕ ಸ್ಥಾಪಿಸುತ್ತವೆ ಎಂದರು.

ಪ್ರತಿ ದಿನ 4.83 ಕೋಟಿ ಚಿಪ್ ತಯಾರಿಕೆ

ನವದೆಹಲಿ (ಪಿಟಿಐ): ‘ಅಸ್ಸಾಂನಲ್ಲಿ ನಿರ್ಮಿಸು-ತ್ತಿರುವ ಸೆಮಿಕಂಡಕ್ಟರ್ ಘಟಕವು ಸ್ಥಳೀಯ ತಂತ್ರಜ್ಞಾನ ಬಳಸಿಕೊಂಡು ದಿನವೊಂದಕ್ಕೆ 4.83 ಕೋಟಿ ಚಿಪ್‌ಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ’ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

‘ಕೇಂದ್ರದಿಂದ ಯೋಜನೆಗೆ ಅನುಮೋದನೆ ನೀಡಿದ ಐದು ತಿಂಗಳೊಳಗೆ ಕಾಮಗಾರಿ ಆರಂಭಗೊಂಡಿದೆ. ಈ ಘಟಕದಿಂದ ತಯಾರಿಕೆಯಾಗುವ ಚಿಪ್‌ಗಳನ್ನು ವಿದ್ಯುತ್‌ಚಾಲಿತ ವಾಹನಗಳಲ್ಲಿ ಬಳಸಬಹುದಾ-ಗಿದೆ. ದೊಡ್ಡ ಕಂಪನಿಗಳಲ್ಲೂ ಇವುಗಳು ಬಳಕೆಯಾಗಲಿವೆ’ ಎಂದು ತಿಳಿಸಿದ್ದಾರೆ.

5ಜಿ, ರೋಟರ್ ಸೇರಿ ಸಂವಹನ ಮತ್ತು ನೆಟ್‌ವರ್ಕ್ಸ್ ಮೂಲ ಸೌಕರ್ಯ ಅಭಿವೃದ್ಧಿಪಡಿಸುವ ಕಂಪನಿಗಳಲ್ಲೂ ಬಳಕೆಯಾಗಲಿವೆ ಎಂದಿದ್ದಾರೆ.

ಕೊಳೆ ಹಸಿ ಅಡಿಕೆ ದರ ಏರಿಕೆ

ಪ್ರಜಾವಾಣಿ ವಾರ್ತೆ

ಶಿರಸಿ: ಹಸಿ ಕೊಳೆ ಅಡಿಕೆ ತರುವವರ ಸಂಖ್ಯೆ ಕಡಿಮೆಯಾಗಿರುವ ಕಾರಣ ಶನಿವಾರ ಇಲ್ಲಿನ ಮಾರುಕಟ್ಟೆಯಲ್ಲಿ ದರವು ಅಲ್ಪ ಚೇತರಿಕೆ ಕಂಡಿದೆ. 1 ಕೆ.ಜಿ ಅಡಿಕೆ ದರವು 30 ಪೈಸೆಯಿಂದ ₹1ಕ್ಕೆ ಏರಿಕೆಯಾಗಿದೆ.

‘ಗುರುವಾರದಿಂದ ಸಹಕಾರ ಸಂಘಗಳಲ್ಲಿ ಹಸಿ ಕೊಳೆ ಅಡಿಕೆ ಟೆಂಡರ್ ಆರಂಭಗೊಂಡಿದ್ದು, ಮೊದಲೆರಡು ದಿನ 1 ಕೆ.ಜಿ ಹಸಿ ಕೊಳೆ ಅಡಿಕೆ ದರ ಸರಾಸರಿ 40 ಪೈಸೆ ಇತ್ತು. ಶುಕ್ರವಾರ 30 ಪೈಸೆಗೆ ಇಳಿದಿದ್ದರಿಂದ ಶನಿವಾರ ಬೆಳೆಗಾರರು ಮಾರುಕಟ್ಟೆಯತ್ತ ಸುಳಿಯಲಿಲ್ಲ. ಹಾಗಾಗಿ, ವ್ಯಾಪಾರಸ್ಥರು ದರವನ್ನು ₹1ಕ್ಕೆ ಏರಿಕೆ ಮಾಡಿದ್ದಾರೆ.

ಸ್ನೇಹಾ ಕೂಟ ದಾಖಲೆ

ಬೆಂಗಳೂರು: ಚಿಕ್ಕಮಗಳೂರಿನ ಸ್ನೇಹಾ ಎಸ್.ಎಸ್ ಅವರು ಕರ್ನಾಟಕ ರಾಜ್ಯ ಅಥ್ಲೆಟಿಕ್ ಕೂಟದ ಮಹಿಳೆಯರ 100 ಮೀ ಓಟದ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಕೂಟದಲ್ಲಿ ಅವರು ಈ ಸ್ಪರ್ಧೆಯನ್ನು 11.30 ಸೆಕೆಂಡುಗಳಲ್ಲಿ ಕ್ರಮಿಸಿ ದಾಖಲೆ ನಿರ್ಮಿಸಿದರು. ಈ ಹಿಂದಿನ ದಾಖಲೆ ಸ್ನೇಹಾ.ಪಿ.ಜೆ (2018ರಲ್ಲಿ 11.32 ಸೆ.) ಅವರ ಹೆಸರಿನಲ್ಲಿತ್ತು.



ಸ್ನೇಹಾ

ಫಲಿತಾಂಶಗಳು: ಪುರುಷರು: 200 ಮೀ.ಓಟ: ಪ್ರಸನ್ನಕುಮಾರ್ (ಬೆಂಗಳೂರು ನಗರ)-1, ಗುರುಪ್ರಸಾದ್ ಡಿ.ಸಿ. (ಮೈಸೂರು)-2, ವಿನಾಯಕ (ಬೆಂಗಳೂರು ನಗರ)-3, ಕಾಲ: 21ಸೆ. 800 ಮೀ.ಓಟ: ತುಷಾರ್ (ಬೆಂಗಳೂರು ನಗರ)-1, ಲೋಕೇಶ್ ಕೆ.(ಬೆಂಗಳೂರು ನಗರ)-2, ಬೋಪಣ್ಣ ಟಿ.ಕೆ. (ಮೈಸೂರು)-3, ಕಾಲ: 1ನಿ.49.1ಸೆ; 1500 ಮೀ ಓಟ: ಸುದೀಪ್ ಇ. (ರಾಮನಗರ) 1, ಭೀಮಾಶಂಕರ್ (ಬೆಂಗಳೂರು ನಗರ) 2, ವೈಭವ್ ಪಾಟೀಲ್ (ಬೆಳಗಾವಿ) 3, ಕಾಲ: 4ನಿ.1.50ಸೆ.;

ಮಹಿಳೆಯರು: 100 ಮೀ.ಓಟ: ಸ್ನೇಹಾ ಎಚ್.ಎಸ್ (ಆದಾಯ ತೆರಿಗೆ ಇಲಾಖೆ)-1, ದಾನೇಶ್ವರಿ (ಬೆಳಗಾವಿ)-2, ಕಾವೇರಿ ಎಲ್. ಪಾಟೀಲ-3, ದಾಖಲೆ: 11.30ಸೆ. ಹಳೆದು: 11.32 ಸೆ.;
200 ಮೀ.ಓಟ: ಬಿ.ಉನ್ನತಿ ಅಯ್ಯಪ್ಪ (ಬೆಂಗಳೂರು ನಗರ)-1, ಜ್ಯೋತಿಕಾ (ಬೆಂಗಳೂರು ನಗರ)-2, ಕಾವೇರಿ ಎಲ್.ಪಾಟೀಲ್ (ಬೆಳಗಾವಿ)-3, ಕಾಲ: 23.50ಸೆ.; 400 ಮೀ.ಓಟ: ಪ್ರಜ್ಞಾ ಕೆ.(ಉಡುಪಿ)-1, ಜ್ಯೋತಿಕಾ (ಬೆಂಗಳೂರು ನಗರ)-2, ದಿಶಾ ಅಳಿಗ (ಚಿಕ್ಕಮಗಳೂರು)-3, 800 ಮೀ.ಓಟ: ಅರ್ಪಿತಾ ಇ.ಬಿ. (ಶಿವಮೊಗ್ಗ)-1, ಅರ್ಪಿತಾ ಎಂ.ಎನ್.(ಬೆಂಗಳೂರು ನಗರ)-2, ಠಾಕೂರ್ ಸ್ಫೂರ್ತಿ ಸಿಂಗ್ (ಬೆಂಗಳೂರು ನಗರ)-3, ಕಾಲ: 2ನಿ 9.00ಸೆ.; ಕಾಲ: 54.96ಸೆ.;1500 ಮೀ.ಓಟ: ರಾಶಿ (ಬೆಂಗಳೂರು ನಗರ)-1, ಪ್ರಿಯಾಂಕಾ ಸಿ.(ಬೆಂಗಳೂರು ನಗರ)-2, ಠಾಕೂರ್ ಸ್ಫೂರ್ತಿ ಸಿಂಗ್ (ಬೆಂಗಳೂರು ನಗರ)-3, ಕಾಲ: 4ನಿ 45.06ಸೆ,; 5000 ಮೀ.ಓಟ: ನೀತು ಕುಮಾರಿ (ಬೆಂಗಳೂರು ನಗರ)-1, ಮರಿಯಾ ಲವಿನಾ (ದಕ್ಷಿಣ ಕನ್ನಡ)-2, ಕಾಲ: 18 ನಿ.16.4ಸೆ.; 100 ಮೀ. ಹರ್ಡಲ್ಸ್: ಬಿ.ಉನ್ನತಿ ಅಯ್ಯಪ್ಪ (ಬೆಂಗಳೂರು ನಗರ)-1, ಕಾಲ: 14.10 ಸೆ.; 400 ಮೀ.ಹರ್ಡಲ್ಸ್: ಪ್ರಜ್ಞಾ ಕೆ.(ಉಡುಪಿ)-1, ಶ್ರೇಯಾ ಪಾಟೀಲ್ (ಬೆಂಗಳೂರು ನಗರ)-2, ದೀಕ್ಷಿತಾ ಆರ್.ಜಿ.(ದಕ್ಷಿಣ ಕನ್ನಡ)-3, ಕಾಲ: 59.34 ಸೆ.

ಟ್ರಂಪ್ ಮೇಲಿನ ದಾಳಿ: ವೈಫಲ್ಯ ಒಪ್ಪಿಕೊಂಡ ಸೀಕ್ರೆಟ್ ಸರ್ವೀಸ್

ವಾಷಿಂಗ್ಟನ್ (ಪಿಟಿಐ): ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲೆ ಜುಲೈ 13ರಂದು ನಡೆದಿದ್ದ ಗುಂಡಿನ ದಾಳಿಗೆ ಭದ್ರತಾ ವೈಫಲ್ಯ ಕಾರಣ ಎಂದು ಅಮೆರಿಕದ ಸೀಕ್ರೆಟ್ ಸರ್ವೀಸ್ ಏಜೆನ್ಸಿ ಒಪ್ಪಿಕೊಂಡಿದೆ.



ಡೊನಾಲ್ಡ್ ಟ್ರಂಪ್

ಪೆನ್ಸಿಲ್ವೇನಿಯಾದಲ್ಲಿ ಕಾರ್ಯಕ್ರಮ-ದಲ್ಲಿ ಭಾಗವಹಿಸಿದ್ದ ಟ್ರಂಪ್ ಗುರಿಯಾಗಿಸಿ ಬಂದೂಕುಧಾರಿ ಗುಂಡಿನ ದಾಳಿ ನಡೆಸಿದ್ದ.

‘ಈ ಘಟನೆ ವೈಫಲ್ಯದ ಹೊಣೆಯನ್ನು ಸೀಕ್ರೆಟ್ ಸರ್ವೀಸ್ ಹೊರಲಿದೆ. ರಕ್ಷಣೆ ನೀಡುವುದೇ ಏಜೆನ್ಸಿಯ ಏಕಮಾತ್ರ ಕರ್ತವ್ಯ. ಇದರಲ್ಲಿ ವಿಫಲರಾಗಿದ್ದೇವೆ. ಇಂಥ ಘಟನೆ ಮರುಕಳಿದಂತೆ ಕೆಲಸ ಮಾಡುತ್ತೇವೆ’ ಎಂದು ಸೀಕ್ರೆಟ್ ಸರ್ವೀಸ್‌ನ ಹಂಗಾಮಿ ನಿರ್ದೇಶಕ ರೊನಾಲ್ಡ್ ರೋವೆ ತಿಳಿಸಿದ್ದಾರೆ.

ಪ್ರಕರಣ ವರ್ಗ: 2020ರ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ತಿರುಚುವ ಯತ್ನ ಆರೋಪ ಕುರಿತ ಟ್ರಂಪ್ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ವಿಚಾರಣಾ ಕೋರ್ಟ್‌ಗೆ ಒಪ್ಪಿಸಲಾಗಿದೆ ಎಂದು ವರದಿ ತಿಳಿಸಿದೆ.

ಎಸ್‌ಬಿಐಗೆ ₹19,325 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ನಿವ್ವಳ ಲಾಭದಲ್ಲಿ ಶೇ 4.25ರಷ್ಟು ಏರಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹16,884 ಕೋಟಿ ಲಾಭಗಳಿಸಲಾಗಿತ್ತು. ಈ ತ್ರೈಮಾಸಿಕದಲ್ಲಿ ₹19,325 ಕೋಟಿ ಗಳಿಸಲಾಗಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹1.08 ಲಕ್ಷ ಕೋಟಿ ವರಮಾನಗಳಿಸಿತ್ತು. ಈ ಬಾರಿ ₹1.22 ಲಕ್ಷ ಕೋಟಿ ಗಳಿಸಿದೆ. ಬಡ್ಡಿ ವರಮಾನ ₹1.11 ಲಕ್ಷ ಕೋಟಿ ಆಗಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 2.76ರಿಂದ ಶೇ 2.21ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.71ರಿಂದ ಶೇ 0.57ಕ್ಕೆ ಇಳಿಕೆಯಾಗಿದೆ.

2024-25ನೇ ಆರ್ಥಿಕ ವರ್ಷದಲ್ಲಿ ಅಡಿಷನಲ್ ಟೈರ್ 1 ಬಾಂಡ್‌ಗಳು ಮತ್ತು ಟೈರ್ 2 ಬಾಂಡ್‌ಗಳ ವಿತರಣೆ ಮೂಲಕ ದೇಶೀಯವಾಗಿ ಅಥವಾ ಸಾಗರೋತ್ತರ ಹೂಡಿಕೆದಾರರ ಮೂಲಕ ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

ಟೈರ್ 1 ಬಾಂಡ್‌ಗಳು ಮುಕ್ತಾಯ ಅವಧಿ (ಮೆಚ್ಯುರಿಟಿ ಪಿರಿಯಡ್) ಹೊಂದಿಲ್ಲದ ಶಾಶ್ವತ ಬಾಂಡ್‌ಗಳಾಗಿದ್ದು, ಬ್ಯಾಂಕ್ ಇವುಗಳಿಗೆ ಬಡ್ಡಿ ನೀಡುತ್ತದೆ. ಟೈರ್ 2 ಬಾಂಡ್‌ಗಳನ್ನು ಹೆಚ್ಚುವರಿಯಾಗಿ ಬಂಡವಾಳ ಸಂಗ್ರಹಿಸಲು ವಿತರಿಸಲಾಗುತ್ತದೆ.

ಆದರೆ, ಈ ಬಂಡವಾಳ ಸಂಗ್ರಹಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಬೇಕಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಳೆದ 4 ವರ್ಷಗಳಲ್ಲಿ ಬ್ಯಾಂಕ್ ₹1.63 ಲಕ್ಷ ಕೋಟಿ ನಿವ್ವಳ ಲಾಭಗಳಿಸಿದೆ. ಈ ಅವಧಿಗಿಂತ ಹಿಂದಿನ 64 ವರ್ಷಗಳಲ್ಲಿ ₹1.45 ಲಕ್ಷ ಕೋಟಿ ಗಳಿಸಿತ್ತು

ದಿನೇಶ್ ಖಾರಾ, ಅಧ್ಯಕ್ಷ, ಸ್ಟೇಟ್ ಬ್ಯಾಂಕ್ ಆಫ್‌ಇಂಡಿಯಾ

₹1 ಲಕ್ಷ ಕೋಟಿ ಲಾಭ ನಿರೀಕ್ಷೆ: ‘ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ನಿರೀಕ್ಷಿತ ಲಾಭಗಳಿಸಲು ಸಾಧ್ಯವಾಗಿಲ್ಲ’ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಖಾರಾ ತಿಳಿಸಿದ್ದಾರೆ.

‘ಮುಂಬರುವ ತ್ರೈಮಾಸಿಕಗಳಲ್ಲಿ ಬ್ಯಾಂಕ್ ಲಾಭದಲ್ಲಿ ಉತ್ತಮ ಬೆಳವಣಿಗೆ ಕಾಣುವ ನಿರೀಕ್ಷೆಯಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಿವ್ವಳ ಲಾಭವು ₹1 ಲಕ್ಷ ಕೋಟಿ ದಾಟುವ ವಿಶ್ವಾಸವಿದೆ’ ಎಂದು ಹೇಳಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಖಾರಾ ಅವರು, ಆಗಸ್ಟ್ 28ರಂದು ಸೇವೆಯಿಂದ ನಿವೃತ್ತಿಯಾಗಲಿದ್ದಾರೆ. ನೂತನ ಅಧ್ಯಕ್ಷರಾಗಿ ಚಲ್ಲಾ ಶ್ರೀನಿವಾಸುಲು ಸೆಟ್ಟಿ ಅಧಿಕಾರ ಸ್ವೀಕರಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಷ್ಯಾದ ವಿವಿಧೆಡೆ ಡ್ರೋನ್ ದಾಳಿ

ಮಾಸ್ಕೊ (ಎ.ಪಿ): ರಷ್ಯಾದ ವಿವಿಧ ಪ್ರದೇಶಗಳನ್ನು ಗುರಿಯಾಗಿಸಿ ಉಕ್ರೇನ್ ಸೇನೆಯು ಡ್ರೋನ್ ದಾಳಿ ನಡೆಸಿದೆ ಎಂದು ರಷ್ಯಾದ ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾದ ಸೇನೆಯು ಪ್ರತಿದಾಳಿ ನಡೆಸಿ ಸುಮಾರು 75 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ರೊಸ್ಟೊವ್ ವಲಯದಲ್ಲಿಯೇ ಸುಮಾರು 36 ಡ್ರೋನ್ ಹೊಡೆದುರುಳಿಸಲಾಗಿದೆ. ಈ ವಲಯದಲ್ಲಿ ಒಟ್ಟು 55 ಡ್ರೋನ್‌ಗಳನ್ನು ಪ್ರಯೋಗಿಸಲಾಗಿತ್ತು ಎಂದು ತಿಳಿಸಿದೆ

ಉಕ್ರೇನ್‌ನ ಅಧಿಕಾರಿಗಳು, ರಷ್ಯಾದ ಸೇನಾ ನೆಲೆ ಮತ್ತು ಶಸ್ತ್ರಾಸ್ತ್ರ ಅಡಗಿಸಿಟ್ಟಿದ್ದ ತಾಣವನ್ನು ಗುರಿಯಾಗಿಸಿ ತನ್ನ ಸೇನೆಯು ದಾಳಿ ನಡೆಸಿದೆ ಎಂದು ತಿಳಿಸಿದೆ.

ಬಾಂಗ್ಲಾ: ಪ್ರತಿಭಟನೆ ಮತ್ತಷ್ಟು ಉದ್ವಿಗ್ನ

ಢಾಕಾ (ಪಿಟಿಐ): ಮಾತುಕತೆಗೆ ಬರುವಂತೆ ಪ್ರಧಾನಿ ಶೇಖ್ ಹಸೀನಾ ಅವರು ನೀಡಿದ್ದ ಆಹ್ವಾನವನ್ನು ವಿದ್ಯಾರ್ಥಿ ನಾಯಕರು ತಿರಸ್ಕರಿಸಿದ್ದಾರೆ. ಈ ಬೆನ್ನಲ್ಲೇ ಶನಿವಾರ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಂಡಿದೆ.
ಅಲ್ಲದೇ, ರಾಷ್ಟ್ರವ್ಯಾಪ್ತಿ ಪ್ರತಿಭಟನೆ ಮತ್ತು ಸಂಪೂರ್ಣ ಅಸಹಕಾರ ಚಳವಳಿಗೆ ಕರೆ ನೀಡಿದ್ದಾರೆ.

1971ರ ಬಾಂಗ್ಲಾದೇಶ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರ ಸಂಬಂಧಿಕರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ 30ರಷ್ಟು ಮೀಸಲಾತಿ ನೀಡುವ ವ್ಯವಸ್ಥೆಯನ್ನು ರದ್ದುಮಾಡುವಂತೆ ಆಗ್ರಹಿಸಿ ನಡೆಯುತ್ತಿದೆ.

ಹೋಟೆಲ್ ಮೇಲೆ ದಾಳಿ: 32 ಸಾವು

ಮೊಗದಿಶು/ಸೋಮಾಲಿಯಾ (ಎಪಿ): ರಾಜಧಾನಿ ಮೊಗದಿಶುವಿನ ಕಡಲ ತೀರದ ಹೋಟೆಲ್‌ವೊಂದರ ಮೇಲೆ ಶುಕ್ರವಾರ ನಡೆದ ಗುಂಡಿನ ದಾಳಿಯಲ್ಲಿ 32 ಜನರು ಮೃತಪಟ್ಟಿದ್ದು, 63 ಮಂದಿ ಗಾಯಗೊಂಡಿದ್ದಾರೆ

‘ಮೃತರಲ್ಲಿ ಒಬ್ಬ ಯೋಧ ಸೇರಿದ್ದಾರೆ. ಮೊದಲು ಸ್ಫೋಟ ಸಂಭವಿಸಿದ್ದು, ನಂತರ ಗುಂಡಿನ ದಾಳಿ ನಡೆದಿದೆ’ ಎಂದು ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಪೊಲೀಸ್ ವಕ್ತಾರ ಮೇಜರ್ ಅಬ್ದಿಫತ ಆದಾನ್ ಹಸ್ಸಾ ತಿಳಿಸಿದರು.

ಅಲ್-ಶಬಾಬ್ ಉಗ್ರ ಸಂಘಟನೆಯು, ಈ ದಾಳಿಯನ್ನು ತನ್ನ ಹೋರಾಟಗಾರರೇ ನಡೆಸಿರುವುದಾಗಿ ರೇಡಿಯೊ ಪ್ರಸಾರದಲ್ಲಿ ಹೇಳಿದೆ.

ಪಾಕ್: ಮೂವರು ಉಗ್ರರ ಬಂಧನ

ಲಾಹೋರ್ (ಪಿಟಿಐ): ಐಸಿಸ್ ಕಮಾಂಡರ್ ಸೇರಿ ಮೂವರು ಉಗ್ರರನ್ನು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಯೋತ್ಪಾದನಾ ನಿಗ್ರಹ ಪಡೆ ಈ ಬಗ್ಗೆ ಹೇಳಿಕೆ ನೀಡಿದ್ದು, ಕಮಾಂಡರ್ ಅಬ್ದುಲ್ ವಹಾಬ್, ಸೈಫ್‌ಉಲ್ಲಾ ಖುರ್ರಂ ಅಬ್ಬಾಸ್ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೌಂಟ್ ಎವರೆಸ್ಟ್‌ನಲ್ಲಿ ಚೀನಾದಿಂದ ಅಧ್ಯಯನ

ಭೂಮೇಲ್ಮೈ–ವಾಯುಮಂಡಲ ಸ್ಪಂದನೆ

ಬೀಜಿಂಗ್ (ಪಿಟಿಐ): ಮೌಂಟ್ ಎವರೆಸ್ಟ್ ಪರ್ವತದ ಟಿಬೆಟ್ ವ್ಯಾಪ್ತಿಯ ವಲಯದಲ್ಲಿ ಭೂಮೇಲ್ಮೈ ಮತ್ತು ವಾಯುಮಂಡಲ ಸ್ಪಂದಿಸುವ ಸ್ವರೂಪವನ್ನು ಅವಲೋಕಿಸುವ ಕಾರ್ಯವನ್ನು ಚೀನಾ ಆರಂಭಿಸಿದೆ.

ಭೌಗೋಳಿಕ ಸ್ವರೂಪ ಮತ್ತು ತಾಪಮಾನ ವ್ಯವಸ್ಥೆ ಅಧ್ಯಯನದಲ್ಲಿ ಇದು ಪ್ರಮುಖ ಹೆಜ್ಜೆ. ಮಾನವರಹಿತ ವೈಮಾನಿಕ ಪರಿಕರಗಳನ್ನು ಬಳಸಿ ಮೌಂಟ್ ಎವರೆಸ್ಟ್‌ನ ಉತ್ತರ ಭಾಗದಲ್ಲಿ ಈ ಕಾರ್ಯ ನಡೆಯಲಿದೆ.

ಚೀನಾದ ವೈಮಾಂತರಿಕ್ಷ ಮಾಹಿತಿ ಅಧ್ಯಯನ ಸಂಸ್ಥೆಯ ಚೀನಾ ವಿಜ್ಞಾನ ಅಕಾಡೆಮಿಯ ಸಂಶೋಧಕರ ತಂಡವು, ಟಿಬೆಟ್‌ನ ಕ್ಯೂಮೂಲಾಂಗ್ಮಾದಲ್ಲಿ ಈ ಅಧ್ಯಯನ ಕಾರ್ಯವನ್ನು ನಡೆಸಲಿದೆ.

‘ಅಂದಾಜು 15,960 ಅಡಿ ಎತ್ತರದಲ್ಲಿ ಈ ಅಧ್ಯಯನ ಪ್ರಕ್ರಿಯೆಯು ನಡೆಯಲಿದೆ. ಕ್ಯೂಮೂಲಾಂಗ್ಮಾ ವಲಯದಲ್ಲಿ ಭೂಮೇಲ್ಮೈ ಮತ್ತು ವಾತಾವರಣ ನಡುವಿನ ಸಂವಹನವು ಕ್ವಿಂಘೈ–ಷಿಜಾಂಗ್ ಪ್ರಸ್ಥಭೂಮಿಯಷ್ಟೇ ಅಲ್ಲದೆ, ಆಸುಪಾಸಿನ ವಲಯದಲ್ಲೂ ತಾಪಮಾನದ ಮೇಲೆ ನಿರ್ಣಾಯಕ ಪರಿಣಾಮವನ್ನು ಬೀರಲಿದೆ’ ಎಂದು ಸಂಸ್ಥೆಯ ಸಂಶೋಧಕರಾದ ಜಿಯಾ ಲಿ ಅಭಿಪ್ರಾಯಪಟ್ಟರು.



ಮೌಂಟ್ ಎವರೆಸ್ಟ್

ಹಿಮನದಿ ಮತ್ತು ಮಂಜುಗಡ್ಡೆಗಳು ಕ್ಷಿಪ್ರಗತಿಯಲ್ಲಿ ಕರಗಲು ಪೂರಕವಾಗಿ ಗಂಭೀರ ಸ್ವರೂಪದ ತಾಪಮಾನ ಬದಲಾವಣೆ ಹಿನ್ನೆಲೆಯಲ್ಲಿ ಈ ತಾಣವನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ ಎಂದಿದ್ದಾರೆ.

‘ಎವರೆಸ್ಟ್ ಆಸುಪಾಸಿನಲ್ಲಿನ ಸುಮಾರು 79 ಹಿಮನದಿಗಳ ವ್ಯಾಪ್ತಿ ಕಳೆದ ಆರು ದಶಕದಲ್ಲಿ ಸುಮಾರು 100 ಮೀಟರ್‌ನಷ್ಟು ಕುಗ್ಗಿದೆ. 2009ರ ನಂತರ ನದಿ ಕರಗುವ ವೇಗವೂ ಹೆಚ್ಚಿದೆ’ ಎಂದು ಅಂತರರಾಷ್ಟ್ರೀಯ ಸಮಗ್ರ ಶಿಖರ ಅಭಿವೃದ್ಧಿ ಕೇಂದ್ರವು (ಐಸಿಐಎಂಒಡಿ) 2003ರಲ್ಲಿ ತಿಳಿಸಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

Chickmagalur

ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಅಥವಾ ಅಡಿಕೆ ತೋಟ ಖರೀದಿಸಲು ತಕ್ಷಣ ಬೇಕಾಗಿದೆ ಈ ಕೂಡಲೇ ಸಂಪರ್ಕಿಸಿ : 7483651933

ಉದ್ಯೋಗಾವಕಾಶ

Marketing & Sales

REQUIRED SALES OFFICERS
We are seeking motivated & results-driven Sales Officers to join our sales team. Candidates with a min. experience of 5 years who can increase market presence and are well versed in Salesforce are preferred. Apply to opportunitiesblr@gmail.com

REQ, EXPERIENCED Telecaller & Field executive For BankLoan collection Salary+ Incentive, 9916276701, 7899040499, 9108267410

Drivers

ಟ್ಯಾಕ್ಸಿ ಚಾಲಕರು ಬೇಕಾಗಿದ್ದಾರೆ. ಮಾಸಿಕ ವೇತನ 20 ರಿಂದ 23 ಸಾವಿರ ಇರುತ್ತದೆ. ಇದು ಬೆಂಗಳೂರಿಗರಿಗೆ ಮಾತ್ರ. ಹಲಸೂರು ಮತ್ತು ಸಮೀಪದ ಪ್ರದೇಶಕ್ಕೆ ಆದ್ಯತೆ. ph: 7619281190

General

TO FIND SUITABLE job for you in any sectors likeSchools/ Colleges, Engineering, Manufacturing, Hospitals. IT, Finance,Administration, Marketing, Media etc.Registeryour resume for free at www.checkmatejobs.com

Engg/ Production Technical

CIVIL ENGINEERS with 1-5 years experience to work at our Bangalore project. interested send resumes to gvrconst@gmail.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಿಂದಲೇ ಕೆಲಸ: ಗೃಹಿಣಿಯರು,ನಿವೃತ್ತರು, ವಿದ್ಯಾರ್ಥಿಗಳು ಬರವಣಿಗೆ ಡೇಟಾ ಎಂಟ್ರಿ ಹುದ್ದೆಗಳು ಗಳಿಸಿ 9000-12000. ಆಫೀಸ್ ವಿಸಿಟ್ ಹಾಗೂ ಕೊರಿಯರ್ `ಸೌಲಭ್ಯವಿದೆ. 9035407857.

ವ್ಯಾಪಾರ

Business Offers

Machinery & Tools

FOR SALE thread winding machine (12 head) Cone Winding Machine (1 head, 4 cops) Hanks to cone winding (16 head). Contact: 9446010786

ಪ್ರವಾಸ

Travel

13.09.2024 21.10.2024 06.11.2024 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 23.09.2024 17.10.2024 ಭೂತಾನ್ 8 ದಿನಗಳು. 23.09.2024 07.10.2024 30.10.2024 ಅಸ್ಸಾಂ,ಮೇಘಾಲಯ 9 ದಿನಗಳು. 26.09.2024 17.10.2024 ಮಧ್ಯಪ್ರದೇಶ 10 ದಿನಗಳು. 17.10.2024 24.11.2024 ಶ್ರೀಲಂಕಾ 6 ದಿನಗಳು. ಜೈನ್ ಟ್ರಾವಲ್ಸ್, ಬೆಂಗಳೂರು03. 9448402248 7022547922

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

★ವಿಮಾನದಲ್ಲಿ 24.09.2024★ 16/12ದಿನಗಳು ಅಖಂಡ ನೇಪಾಳ,ಮುಕ್ತಿನಾಥ,ಕಾಶಿ ಪ್ರವಾಸ.26.08.2024, 14.09.2024,05.10.2024 6ದಿನಗಳು ಕಾಶಿ,ಅಯೊಧ್ಯಾ, ಗಯಾ ಪ್ರವಾಸ.ಆರ್.ಗಾಂಧಿ ಟೂರ್ಸ್.ತ್ಯಾಗರಾಜನಗರ. 9945445809/ 8861545809

ಪ್ರವಾಸ 28.08.2024 ಶ್ರೀಶೈಲ ಮಂತ್ರಾಲಯ: 16.09.2024 ಜಾರ್ಖಂಡ್ ವೈದ್ಯನಾಥ, ಕಾಶಿ ಅಯೋಧ್ಯೆ: 24.09.2024 ಪುರಿ ಜಗನ್ನಾಥ ಕಲ್ಕತ್ತಾ: 03.10.24 ಗುಜರಾತ್ 22.10.2024 ಐದು ಜ್ಯೋತಿರ್ಲಿಂಗ ಮಹಾರಾಷ್ಟ್ರ ಮಧ್ಯಪ್ರದೇಶ: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು 8496044942

★16.09.2024 ರಿಂದ★ 12 ದಿನಗಳು ಬದರಿನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ, ದೆಹಲಿ,ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. 9480253807, 8105522123

12 ದಿನಗಳು ಚಾರ್‌ಧಾಮ್ ಯಾತ್ರಾ. 14 ದಿನಗಳು ಅಷ್ಟ ಜ್ಯೋತಿರ್ಲಿಂಗ. 7 ದಿನಗಳು ವೈಷ್ಣೋದೇವಿ. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಖಾಸಗಿ ಆಸ್ಪತ್ರೆಗಳಲ್ಲಿ ಮಾಹಿತಿ ಫಲಕ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯಡಿ (ಕೆಪಿಎಂಇ) ವೈದ್ಯಕೀಯ ಸಂಸ್ಥೆಗಳು ನೋಂದಣಿ ಸಂಖ್ಯೆ, ಸಂಸ್ಥೆ, ಮಾಲೀಕರ ಹೆಸರನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ. ಈ ಬಗ್ಗೆ ಇಲಾಖೆ ಆಯುಕ್ತ ಡಿ.ರಂದೀಪ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಈ ಮೊದಲು ನಿಗದಿಪಡಿಸಿದ ಅಳತೆಯ ಫಲಕಗಳನ್ನು ಕ್ಲಿನಿಕ್‌ಗಳಲ್ಲಿ ಅಳವಡಿಸುವುದು ಕಷ್ಟಸಾಧ್ಯ ಎಂದು ತಿಳಿಸಿದ್ದ ಭಾರತೀಯ ವೈದ್ಯಕೀಯ ಸಂಘ, ಅಳತೆಯ ನಿಯಮ ಸಡಿಲಿಸಲು ಕೋರಿತ್ತು. ಹೀಗಾಗಿ, ಮಾಹಿತಿ ಫಲಕದ ಅಳತೆಯನ್ನು ಕನಿಷ್ಠ 5 ಅಡಿ ಅಗಲ ಹಾಗೂ 2.5 ಅಡಿ ಉದ್ದಕ್ಕೆ ನಿಗದಿಪಡಿಸಲಾಗಿದೆ. ಆಸ್ಪತ್ರೆಗಳು ಮೊದಲಿನ ಆದೇಶದಂತೆ ಕನಿಷ್ಠ 7 ಅಡಿ ಅಗಲ, 3 ಅಡಿ ಉದ್ದದ ಫಲಕವನ್ನು ಅಳವಡಿಸಬೇಕು ಎಂದು ತಿಳಿಸಿದೆ. ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಫಲಕದಲ್ಲಿ ಮೂರು ಸಾಲು ಮಾತ್ರ ಇರಬೇಕು. ಮೊದಲ ಸಾಲಿನಲ್ಲಿ ಕೆಪಿಎಂಇ ನೋಂದಣಿ ಸಂಖ್ಯೆ, ಎರಡನೇ ಸಾಲಿನಲ್ಲಿ ಆಸ್ಪತ್ರೆಯ ಹೆಸರು, ಮೂರನೇ ಸಾಲಿನಲ್ಲಿ ಮಾಲೀಕರ ಅಥವಾ ವ್ಯವಸ್ಥಾಪಕರ ಹೆಸರನ್ನು ನಮೂದಿಸಬೇಕು. ಫಲಕದಲ್ಲಿ ನಮೂದಿಸಿರುವ ಅಕ್ಷರಗಳು ಎದ್ದು ಕಾಣುವಂತೆ ಕಪ್ಪು ಅಕ್ಷರದಲ್ಲಿ ಇರಬೇಕು. ಅದನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಇರಬಾರದು ಎಂದು ಹೇಳಲಾಗಿದೆ.

ಅಲೋಪಥಿ ಚಿಕಿತ್ಸಾ ಪದ್ಧತಿ ಒದಗಿಸುವ ವೈದ್ಯಕೀಯ ಸಂಸ್ಥೆಗಳು ಆಕಾಶ ನೀಲಿ ಬಣ್ಣದ ಫಲಕಗಳನ್ನು, ಆಯುಷ್ ಚಿಕಿತ್ಸಾ ಪದ್ಧತಿ ಅನುಸರಿಸುವ ಸಂಸ್ಥೆಗಳು ತಿಳಿ ಹಸಿರು ಬಣ್ಣದ ಫಲಕ ಬಳಸಬೇಕು ಎಂದು ಸೂಚಿಸಲಾಗಿದೆ.

ಮುಡಾ ಹಗರಣ: 'ದೂರುದಾರರ ಹಿನ್ನೆಲೆಯನ್ನೂ ಪರಿಶೀಲಿಸಲಿ'

ಬೆಂಗಳೂರು: 'ಮುಡಾ ಹಗರಣ ವಿಚಾರದಲ್ಲಿ ಸಿದ್ದರಾಮಯ್ಯ ವಿರುದ್ಧದ ತನಿಖೆಗೆ ಮನವಿ ಮಾಡಿದವರ ಹಿನ್ನೆಲೆಯನ್ನು ರಾಜ್ಯಪಾಲರು ಪರಿಶೀಲಿಸಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್ ಶನಿವಾರ ಆಗ್ರಹಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್, ಮುಖ್ಯಮಂತ್ರಿಯ ಸಲಹೆಗಾರ ಬಿ.ಆರ್. ಪಾಟೀಲ, ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ–ಜೆಡಿಎಸ್‌ನವರ ರೀತಿಯಲ್ಲಿ ರಾಜ್ಯಪಾಲರು ನಡೆದುಕೊಂಡರೆ ಅದು ಸಂವಿಧಾನಕ್ಕೆ ಮಾಡುವ ಅಪಚಾರ' ಎಂದಿದ್ದಾರೆ.

'ಮುಡಾ ವಿಷಯ ಕುರಿತು ಸಿ.ಎಂ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. 50:50 ಅನುಪಾತದಲ್ಲಿ ನಿವೇಶನ ನೀಡಿರುವುದು ತಪ್ಪಾಗಿದ್ದರೆ, ಯಾರ ಕಾಲದಲ್ಲಿ ಆಗಿದೆ ಎಂಬುದನ್ನು ನೋಡಿ, ಅವರನ್ನು ವಿಚಾರಣೆಗೆ ಒಳಪಡಿಸಬೇಕು' ಎಂದು ಬಿ.ಎಲ್. ಶಂಕರ್ ಒತ್ತಾಯಿಸಿದರು.

ಬಿ. ಆರ್.ಪಾಟೀಲ ಅವರು, 'ಎರಡು ಬಾರಿ ಹಿಂಬಾಗಿಲ ಮೂಲಕ ಅಧಿಕಾರ ಹಿಡಿದಿದ್ದ ಬಿಜೆಪಿ, ಮೂರನೇ ಬಾರಿಯೂ ಈ ಕೆಲಸಕ್ಕೆ ಕೈ ಹಾಕಿದೆ. ನಾವು ಬಿಜೆಪಿಯ ಬೆದರಿಕೆಗಳಿಗೆ ಜಗ್ಗುವುದಿಲ್ಲ' ಎಂದರು.

ಮುಖ್ಯ ವೈದ್ಯಾಧಿಕಾರಿಗಳು ಕಛೇರಿ
ಸಾರ್ವಜನಿಕ ಆಸ್ಪತ್ರೆ, ಶಿರಾ–572137

ಸಂಖ್ಯೆ: ಸಾಆಶಿ/ಡಯಟ್/ಟೆಂಡರ್/16/2024–25 ದಿನಾಂಕ: 01.08.2024

ಟೆಂಡರ್ ಅಧಿಸೂಚನೆ

ವಿಷಯ: 2024–25ನೇ ಸಾಲಿಗೆ ಈ ಆಸ್ಪತ್ರೆ ಒಳರೋಗಿಗಳಿಗೆ ಸಿದ್ಧಪಡಿಸಿದ ಆಹಾರ ಹಾಗೂ ಬ್ರೆಡ್ ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಸಲ್ಲಿಕೆ ಬಗ್ಗೆ.
ಉಲ್ಲೇಖ: 1. ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಪತ್ರ ಸಂ:ಲೆಪವಿ/ಪಥ್ಯಾಹಾರ/ಟೆಂ/10/2023–24 ದಿ: 12.03.2024. 2. ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಪತ್ರ ಸಂ:ಲೆಪವಿ/ಪತ್ಯಹಾರ/ಟೆಂ/01/2024–25

ಸಾರ್ವಜನಿಕ ಆಸ್ಪತ್ರೆ ಶಿರಾ ಇಲ್ಲಿನ ಒಳರೋಗಿಗಳಿಗೆ 2024–25 ನೇ ಸಾಲಿನ ಸಿದ್ಧಪಡಿಸಿದ ಉತ್ತಮ ದರ್ಜೆಯ ಆಹಾರ (ಪಥ್ಯಾಹಾರ), ಬಾಳೆಹಣ್ಣು, ಬೇಯಿಸಿದ ಕೋಳಿ ಮೊಟ್ಟೆ ಹಾಗೂ ಹಾಲು ಸರಬರಾಜು ಮಾಡಲು ಹಾಗೂ ಉತ್ತಮ ದರ್ಜೆಯ ಬ್ರೆಡ್ ಪೂರೈಸಲು ಆಸಕ್ತ ಹಾಗೂ ಅರ್ಹ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಈ ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ ವರ್ಷಕ್ಕೆ ರೂ.86,40,000/–ಮಾತ್ರ (ಎಂಭತ್ತಾರು ಲಕ್ಷದ ನಲವತ್ತಾರು ಸಾವಿರ ರೂಗಳು ಮಾತ್ರ). ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ.

ಟೆಂಡರ್ ವಿವರಗಳು

1) ಟೆಂಡರ್ ಪ್ರಕಟಣೆ ಸಂಖ್ಯೆ& ದಿನಾಂಕ:ಸಾ.ಆ.ಶಿ/ಪಥ್ಯಾಹಾರ/ಟೆಂಡರ್/16/2024–25, ದಿನಾಂಕ: **01.08.2024**. 2) ಟೆಂಡರ್‌ಗೆಇಟ್ಟಅಂದಾಜು ಮೊತ್ತ : 86,40,000/– 3) ಇ.ಎಂ.ಡಿ. (2 %) ರೂ.172800/– 4) e-portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: ದಿನಾಂಕ: 01.08.2024. 5) e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ ದಿನಾಂಕ: 09.08.2024 ರ ಸಂಜೆ: 04–30 ಗಂಟೆ. 6) e-portal ಟೆಂಡರ್ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ : ದಿನಾಂಕ: 12.08.2024 ರಬೆಳಿಗ್ಗೆ: 11–00 ಗಂಟೆ. 7) e-portal ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ತಾಂತ್ರಿಕ ದಾಖಲೆಗಳನ್ನು ಪರಿಶೀಲಿಸಿದ ನಂತರ. 8) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ: Website:www.Kppp.kamataka.gov.in ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಶಿರಾ, ತುಮಕೂರು ಜಿಲ್ಲೆ. ಇ–ಮೇಲ್ gh.sira82@gmail.com. ದೂರವಾಣಿ ಸಂಖ್ಯೆ:08135–275212. ಇ–ಪೋರ್ಟಲ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ ಮೊತ್ತ, ಟೆಂಡರು ಪ್ರಕ್ರಿಯೆ ದಿನಾಂಕಗಳು ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ– ಪೋರ್ಟಲ್ ವೆಬ್‌ಸೈಟ್ http://kppp.kamataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಶಿರಾ ತಾಲ್ಲೂಕು,

DIPR/TUM/199/KSMCA/2024-25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ನಂ.1, ಡಾ. ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು – 560079
ದೂರವಾಣಿ: +91–80–29619801, ಇಮೇಲ್: md.ksmscl@gmail.com

No. KSMSCL/DRUGS/RETND(III)/2022-23 AI/MEDICAL DEVICES/14/2024-25 Date: 03/08/2024

ಟೆಂಡರ್ ಪ್ರಕಟಣೆ

1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/DRUGS/RETND(III)/2022-23 AI/MEDICAL DEVICES/14/2024-25, Dated: 03.08.2024 (IND 0152).
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ KSMSCL/DRUGS/RETND(IV)/2022-23 AI/13 DRUGS/15/2024-25 , Dated: 03.08.2024 (IND-0153).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1. 2022–23 ನೇ ಸಾಲಿನ ವಾರ್ಷಿಕ ಬೇಡಿಕೆಯ ಔಷಧಗಳಲ್ಲಿನ 13 Medical Devices ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0152).
2. 2022–23 ನೇ ಸಾಲಿನ ವಾರ್ಷಿಕ ಬೇಡಿಕೆಯ 13 ಔಷಧಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0153).

ತಾಂತ್ರಿಕ ವಿವರಣೆ, ಇ.ಎಮ್.ಡಿ. ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ– ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https:/kppp.karnataka.gov.in ನಲ್ಲಿ ದಿನಾಂಕ: 03.08.2024 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

DIPR/CP/1272/Zen/2024-25

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)

ನಂ.ಎಚ್‌ಡಿಎಂಸಿ/63/04/2024–25 ದಿ: 03–08–2024

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ [illegible]

ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
1) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 14/08/2024 ಸಂಜೆ: 4.00 ಘಂಟೆ ವರೆಗೆ
2) ಟೆಂಡರ್ ತೆರೆಯುವ ದಿನಾಂಕ: 16/08/2024 ರಂದು ಬೆಳಗ್ಗೆ: 11.00 ಘಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/236/ದೇಶಪಾಂಡೆಪಬ್ಲಿಸಿಟಿ/2024–25

REGIONAL INSTITUTE OF EDUCATION
National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: www.riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on **12.08.2024** for the post of Junior Project Fellows (JPFs) purely on contractual basis upto 31.03.2025 or Completion of the Project whichever is earlier.

Sl. No	Name of the Posts	No. of Posts	Date of Interview & Time
1	Junior Project Fellows (JPFs)	04	12th August, 2024, 9.30 am to 1.00 pm

For more details please log on to **www.riemysore.ac.in**

Principal

ಪುರಸಭಾ ಕಾರ್ಯಾಲಯ, ತಿ.ನರಸೀಪುರ ಮೈಸೂರು ಜಿಲ್ಲೆ.
Email ID: tpnarasipur@ymail.com
itstaff_ulb_tnarasipura@yahoo.com
Website: www.tharasipuratown.gov.in
Fax: 08227–261232 Phone: 08227-261232
ನಂ/ಪುಸ/ತಿನಪುರ/ಕಿಅ.ಎಸ್‌ಎಫ್‌ಸಿ/ವಿಅ/2023–24/24–25
ದಿ:31.07.2024

ಕೊಟೇಷನ್ ಪ್ರಕಟಣೆ

ತಿ.ನರಸೀಪುರ ಪುರಸಭಾ ನೂತನ ಕಛೇರಿಯ ಅವಶ್ಯಕ ಪೀಠೋಪಕರಣಗಳನ್ನು ಖರೀದಿಸಲು ದರ ಅನುಮೋದನೆಗಾಗಿ ಕೊಟೇಷನ್ ಪ್ರಕಟಣೆ ಹೊರಡಿಸುತ್ತಿದ್ದು, ಕೊಟೇಷನ್ ಸಲ್ಲಿಸಲು ಆಸಕ್ತಿ ಇರುವ ಸರಬರಾಜುದಾರರು ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಿಂದ ಪೀಠೋಪಕರಣಗಳ ವಿವರವನ್ನು ಪಡೆದು ಕೊಟೇಷನ್‌ನ್ನು ದಿನಾಂಕ: 01.08.2024 ರಿಂದ 16.08.2024ರ ಒಳಗೆ ಕಛೇರಿ ವೇಳೆಯಲ್ಲಿ ಸರಬರಾಜುದಾರರು ಮುಚ್ಚಿದ ಲಕೋಟೆಯಲ್ಲಿ ಕೊಟೇಷನ್‌ಗಳನ್ನು ಸಲ್ಲಿಸಲು ಕೋರಿದೆ.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ತಿ.ನರಸೀಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ ತಿ.ನರಸೀಪುರ

DIPR/DD-MYS/350/KSMCA250/24-25

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–560070.

ಸಂ: ಕಾಅ/ಪಂರಾಇವಿ/ಬೆನ/ಎಇ–1/ಟೆಂಡರ್/13/2024–25 ದಿನಾಂಕ: 02.08.2024

ಟೆಂಡರ್ ಪ್ರಕಟಣೆ ಸಂ: 13/2024–25
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA, Samagra Shikshana, Muzarai & MP Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **21–08–2024ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು

DIPR/CP/1257/SPAN/2024-25

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಬಸವನಬಾಗೇವಾಡಿ

ಕ್ರ.ಸಂ:ಪುಸಬಬಾ/ಲೋ.ವಿ/2024–25 ದಿನಾಂಕ:01.08.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಬಸವನಬಾಗೇವಾಡಿ ಪುರಸಭೆ ವ್ಯಾಪ್ತಿಯಲ್ಲಿ 2023–24 ಸಾಲಿನ SFC Special ಅನುದಾನದಡಿಯಲ್ಲಿ ಒಟ್ಟು 4 ಪ್ಯಾಕೇಜ ಕಾಮಗಾರಿಗಳನ್ನು ಟೆಂಡರ ಕರೆಯಲಾಗಿದ್ದು ಅರ್ಹ ಪ್ರಥಮ ದರ್ಜೆ ಸಿವ್ಹಿಲ್ ಹಾಗೂ ಇಲೆಕ್ಟ್ರಿಕಲ್ ಗುತ್ತಿಗೆದಾರರು ಹಾಗೂ ಮೇಲ್ಪಟ್ಟ ಗುತ್ತಿಗೆದಾರರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರನ್ನು ಕೆ.ಪಿ.ಪಿ.ಪಿ ಪೋರ್ಟಲ್ at www.kppp.karnataka.gov.in ಠೇವಣಿ (ಇಎಂಡಿ) ಮತ್ತು ಟೆಂಡರ್ ಫೀಯನ್ನು ಕೆ.ಪಿ.ಪಿ.ಪಿ–ಪ್ರ್ಯೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಇಂಡೆಂಟ್ ಈ ಕೆಳಗಿನಂತಿವೆ.

1) DMA/2024-25/RD/WORK_INDENT24108 (SC)
2) DMA/2024-25/RD/WORK_INDENT24136 (ST)
3) DMA/2024-25/RD/WORK_INDENT23654
4) DMA/2024-25/EL/WORK_INDENT24437

ಟೆಂಡರ್ ಕುರಿತು ಆಕ್ಷಪಣೆಗಾಗಿ ಕೊನೆಯ ದಿನಾಂಕ: 26–08–2024 ರ ಸಂಜೆ 4:00 ಗಂಟೆವರೆಗೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27–08–2024 ರ ಸಂಜೆ 5:00 ಗಂಟೆವರೆಗೆ.
ಟೆಂಡರ್ ತಾಂತ್ರಿಕವಾಗಿ ತೆರೆಯುವ ದಿ:28–08–2024 ರ ಸಂಜೆ 5:30 ಗಂಟೆವರೆಗೆ ನಿಗದಿಪಡಿಸಲಾಗಿದೆ.
ಟೆಂಡರ್ ಆರ್ಥಿಕವಾಗಿ ತೆರೆಯುವ ದಿ:29–08–2024 ರ ಸಂಜೆ 5:30 ಗಂಟೆವರೆಗೆ ನಿಗದಿಪಡಿಸಲಾಗಿದೆ.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ ಬಸವನಬಾಗೇವಾಡಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಬಸವನಬಾಗೇವಾಡಿ

ವಾಸಾಸಂಇ/ವಿಜಯಪುರ/154/ಕೆಎಸ್‌ಎಂಸಿಎ/2024–25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2024–25 ದಿನಾಂಕ: 03.08.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು **ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ರಾಜಾಪುರ ಗ್ರಾಮದ ಒಟ್ಟು 187 ಎಕರೆ 34 ಗುಂಟೆ** ಜಮೀನಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ವಿವಿಧ ವರ್ಗದ ನಿವೇಶನಗಳಿಗೆ ದಿನಾಂಕ: **23–04–2017, 13–04–2021 ಮತ್ತು 09–07–2022** ರಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಿ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.
ಸದರಿ ಪ್ರಕಟಣೆಗಳಿಗೆ ಅನುಗುಣವಾಗಿ ನಿಗದಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಹಾಗೂ ಇ–ಲಾಟರಿ ದಿನಾಂಕವನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ–ಲಾಟರಿ ದಿನಾಂಕ
ಸೂರ್ಯನಗರ 2ನೇ ಹಂತದ ಮುಂದುವರೆದ–ರಾಜಾಪುರ	06–08–2024	17–08–2024	23–08–2024	28–08–2024

ಇ–ಲಾಟರಿ ದಿನಾಂಕ ಮತ್ತು ಸಮಯ:
1) ದಿನಾಂಕ: 23–04–2017, 13–04–2021ರ ಪ್ರಕಟಣೆಗಳಿಗೆ ಅನುಗುಣವಾಗಿ ಅರ್ಜಿ ಸಲ್ಲಿಸಿರುವ ಅರ್ಹ ಅರ್ಜಿದಾರರಿಗೆ ದಿನಾಂಕ: 28–08–2024ರಂದು ಬೆಳಿಗ್ಗೆ 11.30 ಗಂಟೆಗೆ.
2) ದಿನಾಂಕ: 09–07–2022ರ ಪ್ರಕಟಣೆಗೆ ಅನುಗುಣವಾಗಿ ಆರಂಭಿಕ ಠೇವಣಿ ಪಾವತಿಸಿರುವ ಅರ್ಹ ಅರ್ಜಿದಾರರಿಗೆ ದಿನಾಂಕ: 28–08–2024ರಂದು ಅಪರಾಹ್ನ 3.30 ಗಂಟೆಗೆ.

ಇ–ಲಾಟರಿ ಮಾಡುವ ಸ್ಥಳ: ಕರ್ನಾಟಕ ಗೃಹ ಮಂಡಳಿ ಆವರಣ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು

ವಿಶೇಷ ಸೂಚನೆ: ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಚೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಚೇರಿಯ ಸೂಚನಾಫಲಕದಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಚೇರಿಗಳಲ್ಲಿ ಅಥವಾ ಕೇಂದ್ರ ಕಚೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಬೆಂಗಳೂರು ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸಬಹುದು.

ಸಹಿ/– ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/YC/1274/2024-25

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/1835/2024–25 ದಿನಾಂಕ : 01–08–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟಿ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಮೀಸಲಾತಿ	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ :		
1)	PWD/2024-25/RD/WORK_INDENT12066	ಸಾಮಾನ್ಯ ವರ್ಗ	59.53
2)	PWD/2024-25/RD/WORK_INDENT12079	ಸಾಮಾನ್ಯ ವರ್ಗ	62.06
3)	PWD/2024-25/RD/WORK_INDENT12023	ಸಾಮಾನ್ಯ ವರ್ಗ	69.70
4)	PWD/2024-25/RD/WORK_INDENT12152	ಪರಿಶಿಷ್ಟ ಜಾತಿ	58.06
5)	PWD/2024-25/RD/WORK_INDENT12183	ಪರಿಶಿಷ್ಟ ಜಾತಿ	67.74
	3054–(ಯೋಜನೇತರ)–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ :		
6)	PWD/2024-25/RD/WORK_INDENT12067	ಸಾಮಾನ್ಯ ವರ್ಗ	82.63
7)	PWD/2024-25/RD/WORK_INDENT12069	ಪರಿಶಿಷ್ಟ ವರ್ಗ	73.98
8)	PWD/2024-25/RD/WORK_INDENT12072	ಸಾಮಾನ್ಯ ವರ್ಗ	90.83
9)	PWD/2024-25/RD/WORK_INDENT12027	ಸಾಮಾನ್ಯ ವರ್ಗ	64.40
10)	PWD/2024-25/RD/WORK_INDENT12097	ಪರಿಶಿಷ್ಟ ಜಾತಿ	80.82
11)	PWD/2024-25/RD/WORK_INDENT12026	ಸಾಮಾನ್ಯ ವರ್ಗ	63.30
12)	PWD/2024-25/RD/WORK_INDENT12163	ಸಾಮಾನ್ಯ ವರ್ಗ	57.43
13)	PWD/2024-25/RD/WORK_INDENT12180	ಸಾಮಾನ್ಯ ವರ್ಗ	81.96

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **07–08–2024** ರಂದು **12.00 ಗಂಟೆಯ** ವರೆಗೆ. ಆ) ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **09–08–2024** ರಂದು **16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **12–08–2024**ರಂದು **11.00** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/314/ಕೆಎಸ್‌ಎಂಸಿಎ/2024–25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಿಭಾಗ, ಕಲಬುರಗಿ
ಮಿನಿ ವಿಧಾನ ಸೌಧ ಎದುರುಗಡೆ, ಐವಾನ–ಎ–ಶಾಹಿ ರೋಡ, ಕಲಬುರ್ಗಿ –585102, ದೂ. 08472–220815

ಸಂಖ್ಯೆ:ಕಜಮ/ಕಾಪಾಅ/ತಾಂತ್ರಿಕ/ಕಿ.ಅ/ಯಾದಗಿರಿ ಡಿ.ಸಿ ವರ್ಕ್ಸ/2024–25/1144 ದಿನಾಂಕ: 02–08–2024

:: ಅಲ್ಪಾವಧಿ ಟೆಂಡರ ಪ್ರಕಟಣೆ ಇ–ಪ್ರೋಟಲ್ ಮುಖಾಂತರ ::

ಈ ಕೆಳಗೆ ವಿವರಿಸಿದಂತೆ ಈ ಕೆಳಗಿನ ಕೆಲಸಗಳಿಗೆ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ.
1) ಕೆಲಸ ವಿವರಣೆ: **ನೀತಿ ಆಯೋಗದ ಠೇವಣಿ ಕಾಮಗಾರಿಯಡಿಯಲ್ಲಿ ಯಾದಗಿರಿ ನಗರದಲ್ಲಿ ನವೀನ ತಂತ್ರಾಂಶವನ್ನು ಬಳಸಿಕೊಂಡು ತೆರೆದ ಚರಂಡಿ ನೀರು ಶುದ್ಧೀಕರಿಸಲು 250 KLD ಸಾಮರ್ಥ್ಯದ ಮಲೀನ ನೀರು ಶುದ್ಧೀಕರಿಸುವ ಘಟಕದ ವಿನ್ಯಾಸ ಮತ್ತು ನಿರ್ಮಿಸುವ ಕಾಮಗಾರಿ,** 2) ಕೆಲಸದ ಅಂದಾಜು ಮೊತ್ತ (ರೂ.ಗಳಲ್ಲಿ): ರೂ. **85,99,743.00,** 3) ಮುಂಗಡ ಠೇವಣಿ ಮೊತ್ತ (ರೂ. ಗಳಲ್ಲಿ): **ರೂ. 1,72,000.00,** 4) ಟೆಂಡರ ಪ್ರಕ್ರಿಯೆ ಶುಲ್ಕ: ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ, 5) ಕೆಲಸದ ಕಾಲಾವಧಿ: 6 ತಿಂಗಳು (ಮಳೆಗಾಲ ಸೇರಿ), 6) ಅರ್ಹತೆಯ ಮಾನದಂಡಗಳು: 1. ಮೇಲಿನ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಬಿಡ್‌ದಾರರು ಕನಿಷ್ಠ ಒಂದೆ ರೀತಿಯ ಕಾಮಗಾರಿಯನ್ನು ಹಿಂದಿನ ಐದು ವರ್ಷಗಳಲ್ಲಿ ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಅನುಭವ ಹೊಂದಿರಬೇಕು. 2. ಅಲ್ಲದೇ ಪ್ಯಾನ್ ಕಾರ್ಡ, ಜಿ.ಎಸ್.ಟಿ ನೋಂದಣಿ ಪ್ರಮಾಣ ಪತ್ರ ಮತ್ತು ವಾರ್ಷಿಕ ವಹಿವಾಟು ಪ್ರಮಾಣ ಪತ್ರ ಕಡ್ಡಾಯವಾಗಿ ಹೊಂದಿರಬೇಕು. 7) ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ ಕಲಬುರಗಿ ಮಿನಿ ವಿಧಾನ ಸೌಧ ಎದುರುಗಡೆ, ಐವಾನ–ಎ–ಶಾಹಿ ರೋಡ, ಕಲಬುರಗಿ. 8) ಟೆಂಡರನ್ನು ಡೌನಲೋಡ್ ಮಾಡಲು ಪ್ರಾರಂಬಿಸಲು ದಿನಾಂಕ ಮತ್ತು ಸಮಯ: **03–08–2024 13.00 ಗಂಟೆಯಿಂದ,** 9) ಟೆಂಡರನ್ನು ಇ–ಪ್ರಾಕ್ಯೂರಮೆಂಟ್ ಮೂಲಕ ಸಲ್ಲಿಸಲು / ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **17–08–2024 ಸಾ. 17:00 ಗಂಟೆವರೆಗೆ,** 10) ತಾಂತ್ರಿಕ ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ: **19–08–2024 ಬೆ. 11.00 ಗಂಟೆ ನಂತರ,** 11) ಆರ್ಥಿಕ ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ: **19–08–2024 ಬೆ. 12.00 ಗಂಟೆ ನಂತರ,** 12) ಅಂತರಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/285/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರಕಾರ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಹಾವೇರಿ–581110. ರಾಷ್ಟ್ರೀಯ ಆರೋಗ್ಯ ಅಭಿಯಾನ
ಬಿ ಬ್ಲಾಕ್ ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ ಆವರಣ, ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ
Ph : 08375-249127 Fax : 08375-249009 Email : rchohaveri@gmail.com

Sl. No. DPMU/HVR/RCH/Cont-Appointments/20/2024-25 ದಿನಾಂಕ : 03–08–2024

ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾವೇರಿಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 2024–25 ನೇ ಸಾಲಿಗೆ ಮಂಜೂರಾಗಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಹಾವೇರಿ ಹಾಗೂ ಮಾನ್ಯ ಅಧ್ಯಕ್ಷರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ ಇವರ ಅನುಮೋದನೆ ಮೇರೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ.

ಅರವಳಿಕೆ ತಜ್ಞ ವೈದ್ಯರು–**04** ಹುದ್ದೆಗಳು, ಫಿಜಿಶಿಯನ್–**02** ಹುದ್ದೆಗಳು, ಹಾಗೂ ಎಂ.ಬಿ.ಬಿ.ಎಸ್–**41** ಹುದ್ದೆಗಳಿಗೆ ಅರ್ಜಿಗಳನ್ನು ಪ್ರತಿ ದಿನ ಕಛೇರಿ ಅವಧಿಯಲ್ಲಿ ಹುದ್ದೆಗಳು ಭರ್ತಿಯಾಗುವವರೆಗೆ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಕಛೇರಿಗೆ ಬಂದು ಅರ್ಜಿ ಸಲ್ಲಿಸಿದಲ್ಲಿ ಅಂತಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. ಹಾಗೂ ಆಸಕ್ತಿಯುಳ್ಳ ಎಂ.ಬಿ.ಬಿ.ಎಸ್ ಅಭ್ಯರ್ಥಿಗಳು ನೇರ ಸಂದರ್ಶನ ನಡೆಯುವ ದಿನಾಂಕಗಳಂದು ಸ್ವತಃ ಬಂದು ಅರ್ಜಿ ಸಲ್ಲಿಸಬಹುದು.

ಶುಶ್ರೂಷಾಧಿಕಾರಿಗಳು–**33**, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ–**03**, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ (LHV)–**01**, ನೇತ್ರ ಸಹಾಯಕರು / ಫಾರ್ಮಾಸಿಸ್ಟ್–**02**, ಆರ್.ಬಿ.ಎಸ್.ಕೆ ಆಯುಷ್ ವೈದ್ಯರು–**02**, Health Inspecting Officers (HIO) – **07**, Bio-Medical Engineer – **01**, ಎಪಿಡಮಿಯಾಲಜಿಸ್ಟ್ – **04**, ಮೈಕ್ರೋಬಯಾಲಜಿಸ್ಟ್ – **01**, ಜಿಲ್ಲಾ ಆರೋಗ್ಯ & ಕ್ಷೇಮ ಕೇಂದ್ರ ಸಂಯೋಜಕರು – **01**, ಜಿಲ್ಲಾ ಕಾರ್ಯಕ್ರಮ ಸಂಯೋಜಕರು–**01**, Senior Treatment Supervisor–01, Audiologist–**01**, Instructor for Hearing Impaired Children–**01**, Audiologist–**01**, Audiometric Assistant-**01**, Dental Hygienist–**01** & ಅರೆಕಾಲಿಕ ಯೋಗ ತರಬೇತುದಾರರು–**56** ಹುದ್ದೆಗಳು ಖಾಲಿ ಇರುತ್ತವೆ.

ಸದರಿ ಗುತ್ತಿಗೆ ಆಧಾರದ ನೇಮಕಾತಿಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ಮೆರಿಟ್ ಕಮ್ ರೋಷ್ಟರ್ ಆಧಾರದ ಮೇಲೆ ಮಾಡಿಕೊಳ್ಳಲಾಗುವುದು. ಅರ್ಹ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ದಿನಾಂಕ : **12–08–2024**, ದಿನಾಂಕ : **13–08–2024** ಮತ್ತು ದಿನಾಂಕ : **14–08–2024** ರಂದು ನೇರ ಸಂದರ್ಶನವನ್ನು ಏರ್ಪಡಿಸಲಾಗಿದ್ದು ಅರ್ಜಿ ನಮೂನೆಯನ್ನು ವಿತರಿಸಿ ಅದೇ ದಿನ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲಾಗುವುದು. (ಹುದ್ದೆಗಳ ಅನುಸಾರ ನೇರ ಸಂದರ್ಶನದ ದಿನಾಂಕವನ್ನು ಜಿಲ್ಲೆಯ ವೆಬ್‌ಸೈಟ್‌ನ ನೋಟಿಫಿಕೇಶನ್‌ನಲ್ಲಿ ತಿಳಿಸಲಾಗಿರುತ್ತದೆ.) ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಬಯೋಡಾಟಾದೊಂದಿಗೆ ನಿಗದಿತ ವಿದ್ಯಾರ್ಹತೆಯ ದೃಢೀಕೃತ ದಾಖಲಾತಿಗಳನ್ನು (ಝರಾಕ್ಸ್) ತಮ್ಮ ಇತ್ತೀಚಿನ ಭಾವಚಿತ್ರದ ಎರಡು ಪ್ರತಿಗಳನ್ನು ಲಗತ್ತಿಸಿ ಅರ್ಜಿಯನ್ನು ಖುದ್ದಾಗಿ ಸಲ್ಲಿಸುವುದು. (ನಿಗದಿತ ದಿನಾಂಕದ ನಂತರ ಯಾವುದೇ ಕಾರಣಕ್ಕೂ ಅರ್ಜಿಗಳನ್ನು ವಿತರಿಸಲಾಗುವುದಿಲ್ಲ) ಸದರಿ ಗುತ್ತಿಗೆ ಆಧಾರದ ನೇಮಕಾತಿಯು ಎನ್.ಹೆಚ್.ಎಮ್ / ಎನ್.ಯು.ಹೆಚ್.ಎಮ್ ನಿಯಮಾವಳಿಯ ಷರತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ).

ಸದರಿ ಮೇಲ್ಕಾಣಿಸಿದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ, ಮೀಸಲಾತಿ ಮುಂತಾದ ಸಂಪೂರ್ಣ ವಿವರಗಳನ್ನು ಹಾವೇರಿ ಜಿಲ್ಲೆಯ ಅಧೀಕೃತ ವೆಬ್‌ಸೈಟ್ **www.haveri.nic.in** ನಲ್ಲಿ ಪ್ರಕಟಿಸಲಾಗಿರುತ್ತದೆ. ಹಾಗೂ ಸದರಿ ಗುತ್ತಿಗೆ ಆಧಾರದ ನೇಮಕಾತಿಯ ಪೂರ್ಣ ಪ್ರಮಾಣದ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಹಾವೇರಿಯು ಕಾಯ್ದಿರಿಸಿಕೊಂಡಿರುತ್ತದೆ. ಹಾಗೂ ರಾಜ್ಯಮಟ್ಟದಿಂದ ಕಾಲಕಾಲಕ್ಕೆ ಹೊಡಿಸುವ ಮಾರ್ಗಸೂಚಿಗಳನುಸಾರ ವಯೋಮಿತಿ ಮತ್ತು ಮಾಸಿಕ ಸಂಚಿತ ವೇತನವನ್ನು ಎನ್.ಹೆಚ್.ಎಮ್ ಮಾರ್ಗಸೂಚಿ ಪ್ರಕಾರ ನಿಗದಿಪಡಿಸಲಾಗುತ್ತದೆ.

ಸದರಿ ನೇಮಕಾತಿ ಕುರಿತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾಡಳಿತ ಭವನ ದೇವಗಿರಿ (ಆರೋಗ್ಯ ಇಲಾಖೆ) ಹಾವೇರಿಯಲ್ಲಿ ಕಛೇರಿ ಅವಧಿಯಲ್ಲಿ ಪಡೆಯಬಹುದು (ದೂರವಾಣಿ ಸಂಖ್ಯೆ: 9449843113) ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ.
ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/198/2024–25

ನಗರಸಭಾ ಕಾರ್ಯಾಲಯ, ಹಿರಿಯೂರು–577598
ಫೋನ್ ನಂ. 08193–263220, ಸಹಾಯವಾಣಿ: 08193–260020,
E-mail:tmchiriyur@yahoo.in Webist: hiriyurcity.gov.in
ನಂ.ನ.ಸ.ಹಿ/ತಾ.ವಿ/15ನೇ ಹ.ಕಾ.ನಿ/ಟೆಂ.ಸಿಆರ್:08/2024–25
ದಿನಾಂಕ:01/08/2024

ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 ರ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವಾಪ್ತಿಯಲ್ಲಿ 2023–24ನೇ ಸಾಲಿನ 15ನೇ ಹಣಕಾಸು ನಿರ್ಬಧಿತ ಅನುದಾನದಲ್ಲಿ ಇಂಡೆಂಟ್ ಸಂ:DMA/2024-25/OW/WORK_INDENT22277 (Reserved for SC) ಅಂದಾಜು ಮೊತ್ತ ರೂ.98.40 ಲಕ್ಷಗಳು, ಇಎಂಡಿ ಮೊತ್ತ ರೂ.83,142/–ಗಳು. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:17/08/2024ರ ಸಂಜೆ 05:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:19/08/2024ರ ಬೆಳಿಗ್ಗೆ:10:30ರ ನಂತರ. ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ಹಿರಿಯೂರು.
ಸಹಿ/– ಪೌರಾಯುಕ್ತರು, ನಗರಸಭೆ, ಹಿರಿಯೂರು.

DIPR/CTA/KSMCA/164/2024-25

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಟೆಂಡರ್/ಸ್ವಚ್ಛ/01/2023–24 ದಿನಾಂಕ: 01–08–2024

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಹಾಗೂ ಇದಕ್ಕೆ ಹೊಂದಿಕೊಂಡ ವಿದ್ಯಾರ್ಥಿಗಳ ವಸತಿ ನಿಲಯ, ವಿಕ್ಟೋರಿಯಾ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ ಮತ್ತು ಮಿಂಟೋ ಕಣ್ಣಾಸ್ಪತ್ರೆಗೆ ಅಗತ್ಯವಿರುವ ಸ್ವಚ್ಛತಾ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಲುವಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು **https://www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು.
1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: **03–08–2024.**
2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **09–08–2024 ರಂದು ಪೂರ್ವಾಹ್ನ 11.00 ಗಂಟೆಗೆ.** 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: **02–09–2024 ರಂದು ಅಪರಾಹ್ನ 4.30 ಗಂಟೆವರೆಗೆ.** 4) ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04–09–2024 ರಂದು ಪೂರ್ವಾಹ್ನ 11.30 ಗಂಟೆಗೆ.**
ಹೆಚ್ಚಿನ ವಿವರಗಳಿಗಾಗಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು** ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/1264/ಅಡ್ವರ್ಟೋರ್/2024–25

ಭಾರತೀಯ ರೈಲ್ವೆ
ಸಾರ್ವಜನಿಕ ಅಧಿಸೂಚನೆ

[illegible]

ಪ್ರಿನ್ಸಿಪಲ್ ಚೀಫ್ ಇಂಜಿನಿಯರ್

ಭಾನುವಾರ ● ಆಗಸ್ಟ್ 4, 2024 ಪ್ರಜಾವಾಣಿ

ಅಣಶಿಯಲ್ಲಿ 12 ಸೆಂ.ಮೀ. ಮಳೆ; ಪಾಲಡ್ಕದಲ್ಲಿ ಗುಡ್ಡ ಕುಸಿತ– ವಾಹನ ಸಂಚಾರ ಸ್ಥಗಿತ

ತಗ್ಗದ ಪ್ರವಾಹ; ನಿಲ್ಲದ ಭೂಕುಸಿತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಮಂಗಳೂರು: ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಮಳೆ ಮತ್ತು ಪ್ರವಾಹ ಪರಿಸ್ಥಿತಿ ಮುಂದುವರೆದಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶನಿವಾರ ಮಳೆ ಅಬ್ಬರ ತುಸು ತಗ್ಗಿತ್ತು. ಆದರೆ, ಅಲ್ಲಲ್ಲಿ ಗುಡ್ಡ ಕುಸಿತ ಮುಂದುವರಿದಿದೆ.

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಅಣಶಿಯಲ್ಲಿ ಶನಿವಾರ 12 ಸೆಂ.ಮೀ ಮತ್ತು ಕ್ಯಾಸಲ್‌ರಾಕ್ ಭಾಗದಲ್ಲಿ 11.6 ಸೆಂ.ಮೀ, ಮೂಡುಬಿದಿರೆ ತಾಲ್ಲೂಕಿನ ಪುತ್ತಿಗೆಯಲ್ಲಿ 10 ಸೆಂ.ಮೀ ಮಳೆ ಆಗಿದೆ.

ಅಘನಾಶಿನಿ, ಕಾಳಿ, ಶರಾವತಿ, ಗುಂಡಬಾಳ ನದಿಗಳಲ್ಲಿ ಹರಿವು ಹೆಚ್ಚಿದೆ. ಗೇರುಸೊಪ್ಪ ಜಲಾಶಯದಿಂದ ಶರಾವತಿ ನದಿಗೆ 55 ಸಾವಿರ ಕ್ಯುಸೆಕ್, ಕದ್ರಾ ಜಲಾಶಯದಿಂದ ಕಾಳಿ ನದಿಗೆ 58 ಸಾವಿರ ಕ್ಯುಸೆಕ್ ನೀರು ಹರಿಬಿಡಲಾಗುತ್ತಿದೆ. ಹೊನ್ನಾವರ ಮತ್ತು ಕುಮಟಾ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಪ್ರವಾಹ ಮುಂದುವರಿದಿದೆ. ಜಿಲ್ಲೆಯಲ್ಲಿ 18 ಕಾಳಜಿ ಕೇಂದ್ರಗಳಿದ್ದು, 550ಕ್ಕೂ ಹೆಚ್ಚು ಮಂದಿಗೆ ಆಶ್ರಯ ಕಲ್ಪಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಕೃಷ್ಣಾ ಕಿತ್ತೂರು ಗ್ರಾಮದಲ್ಲಿ ರೈತರೊಬ್ಬರು ಪ್ರವಾಹದ ಮಧ್ಯೆಯೇ ಬೈಕ್ ಓಡಿಸಿಕೊಂಡು ಜಾನುವಾರುಗಳಿಗೆ ಮೇವು ತಂದರು ಪ್ರಜಾವಾಣಿ ಚಿತ್ರ: ವಿಜಯಮಹಾಂತೇಶ ಅರಕೇರಿ

ತಗ್ಗಿದ ಪ್ರವಾಹ: ಮಹಾರಾಷ್ಟ್ರದಲ್ಲಿ ಮಳೆ ತಗ್ಗಿದ್ದರಿಂದ ಕೃಷ್ಣಾ ಪ್ರವಾಹದಲ್ಲಿ ತುಸು ಇಳಿಕೆಯಾಗಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ–ಯಡೂರ ಬ್ಯಾರೇಜ್ ಬಳಿ 2.87 ಲಕ್ಷ ಕ್ಯುಸೆಕ್ ಹರಿವು ಇದೆ.

ಕಾಗವಾಡ ತಾಲ್ಲೂಕಿನ ಕೃಷ್ಣಾ ಕಿತ್ತೂರು, ಬಣಜವಾಡ, ಕಾತ್ರಳ, ಮೊಳವಾಡ, ಕುಸುನಾಳ, ಜುಗೂಳ, ಶಾಹಾಪುರ, ಮಂಗಾವತಿ ಗ್ರಾಮಗಳ ತೋಟದ ವಸತಿಗಳಿಗೆ ನುಗ್ಗಿದ ನೀರು ಹಾಗೇ ಇದೆ. 18 ಮನೆಗಳು ಕುಸಿದಿವೆ.

ಮೂಡುಬಿದಿರೆ ತಾಲ್ಲೂಕಿನ ಗುಂಡ್ಯಡ್ಕದಲ್ಲಿ ಶನಿವಾರ ಗುಡ್ಡದ ಮಣ್ಣು ರಸ್ತೆ ಮೇಲೆ ಕುಸಿದಿದ್ದು, ಪಾಲಡ್ಕ-ಕಲ್ಲಮುಂಡ್ಕೂರು ನಡುವೆ ಸಂಪರ್ಕ ಕಡಿತಗೊಂಡಿದೆ. ಈ ರಸ್ತೆಯಲ್ಲಿ ವಾಹನ ಸಂಚಾರ ಪುನಾರಂಭಕ್ಕೆ ಒಂದೆರಡು ದಿನಗಳು ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುತ್ತೂರು ತಾಲ್ಲೂಕಿನ ಬೆಳ್ಳಿಪ್ಪಾಡಿ ಗ್ರಾಮದ ದೇವಸ್ಥದಲ್ಲಿ ಗುಡ್ಡ ಕುಸಿದು, 9 ಮನೆಗಳು ಅಪಾಯದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 36 ಮನೆಗಳಿಗೆ ಹಾನಿಯಾಗಿದೆ.

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಇನ್ನೂ ಎರಡು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಇದೇ 4 ಮತ್ತು 5ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

10 ಸಾವಿರ ಯಾತ್ರಿಕರ ರಕ್ಷಣೆ

ರುದ್ರಪ್ರಯಾಗ (ಪಿಟಿಐ): ಉತ್ತರಾಖಂಡದ ಕೇದಾರನಾಥಕ್ಕೆ ಕಾಲ್ನಡಿಗೆಯ ಮೂಲಕ ಸಾಗುವ ಮಾರ್ಗದಲ್ಲಿ ಭಾರಿ ಮಳೆಯ ಕಾರಣದಿಂದಾಗಿ ಸಿಲುಕಿಕೊಂಡಿರುವ ಯಾತ್ರಿಕರನ್ನು ರಕ್ಷಿಸುವ ಕಾರ್ಯಾಚರಣೆಯು ಮೂರನೆಯ ದಿನವೂ ಮುಂದುವರಿದಿದೆ. ಇದುವರೆಗೆ 10,500ಕ್ಕೂ ಹೆಚ್ಚು ಮಂದಿಯನ್ನು ಸುರಕ್ಷಿತ ಸ್ಥಳಕ್ಕೆ ಕರೆತರಲಾಗಿದೆ. ಕೆಲವರನ್ನು ವಾಯುಪಡೆಯ ಹೆಲಿಕಾಪ್ಟರ್ ಮೂಲಕ ಸ್ಥಳಾಂತರಿಸಲಾಗಿದೆ.

ಕೇದಾರನಾಥ, ಭೀಮಬಲಿ ಮತ್ತು ಗೌರಿಕುಂಡದಲ್ಲಿ ಅಂದಾಜು 1,300 ಯಾತ್ರಿಕರು ಸಿಲುಕಿದ್ದಾರೆ. ಅವರು ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಮತ್ತು ಪೊಲೀಸ್ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. ಭಾರತೀಯ ವಾಯುಪಡೆಯ ಚಿನೂಕ್ ಮತ್ತು ಎಂಐ17 ಹೆಲಿಕಾಪ್ಟರ್‌ಗಳನ್ನು ಯಾತ್ರಿಕರನ್ನು ರಕ್ಷಿಸಿ ಕರೆತರಲು ಬಳಸಿಕೊಳ್ಳಲಾಗುತ್ತಿದೆ.

ಕಾಲ್ನಡಿಗೆ ಹಾದಿಯಲ್ಲಿ ಮೇಘಸ್ಫೋಟ ಉಂಟಾದ ನಂತರದಲ್ಲಿ ಭಾರಿ ಸಂಖ್ಯೆಯ ಯಾತ್ರಿಕರು ನಾಪತ್ತೆ ಆಗಿದ್ದಾರೆ ಎಂಬುದು ಸತ್ಯವಲ್ಲ ಎಂದು ರುದ್ರಪ್ರಯಾಗದ ಎಸ್‌ಪಿ ವಿಶಾಖಾ ಅಶೋಕ್ ಬದಾಣೆ ಹೇಳಿದ್ದಾರೆ.

ಲಿನಚೋಲಿ ಸನಿಹ ಜಂಗಲ್ ಛಟ್ಟಿಯಲ್ಲಿ ಬುಧವಾರ ರಾತ್ರಿ ಉಂಟಾದ ಮೇಘಸ್ಫೋಟದ ಕಾರಣದಿಂದಾಗಿ ಕಾಲ್ನಡಿಗೆ ಹಾದಿಗೆ ತೀವ್ರ ಹಾನಿ ಆಗಿದೆ. ಮಂದಾಕಿನಿ ನದಿಯು ಉಕ್ಕಿ ಹರಿದು, ಗೌರಿಕುಂಡ–ಕೇದಾರನಾಥ ಕಾಲ್ನಡಿಗೆ ಹಾದಿಯ 20–25 ಮೀಟರ್ ಉದ್ದದ ಭಾಗವೊಂದು ಕೊಚ್ಚಿಹೋಗಿದೆ. ಯಾತ್ರಿಕರು ಭೀಮಬಲಿ ಆಚೆಗೆ ಸಿಲುಕಿಕೊಂಡಿದ್ದಾರೆ.

ಕೇದಾರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಹಾದಿಯಲ್ಲಿ ಬಿದ್ದಿರುವ ಕಸದ ರಾಶಿಯನ್ನು ತೆಗೆದು, ಸರಿಪಡಿಸುವವರೆಗೆ ಯಾತ್ರಿಕರು ಎಲ್ಲಿದ್ದಾರೋ ಅಲ್ಲಿಯೇ ಇರಬೇಕು ಎಂದು ಆಡಳಿತವು ಸೂಚಿಸಿದೆ.

ಮಾರ್ಗದಲ್ಲಿ ಸಿಲುಕಿರುವವರ ಬಗ್ಗೆ ಮಾಹಿತಿ ಪಡೆಯಲು ಜಿಲ್ಲಾ ಆಡಳಿತವು ಸಹಾಯವಾಣಿ ಆರಂಭಿಸಿದೆ (ಸಂಖ್ಯೆಗಳು: 7579257572 ಮತ್ತು 01364-233387) ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಮಾಚಲದಲ್ಲಿ 191 ರಸ್ತೆಗಳು ಬಂದ್

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ 191 ರಸ್ತೆಗಳನ್ನು ವಾಹನ ಸಂಚಾರಕ್ಕೆ ಬಂದ್ ಮಾಡಲಾಗಿದೆ. ನಾಲ್ಕು ದಿನದಿಂದ ಸುರಿಯುತ್ತಿರುವ ಭಾರಿ ಮಳೆಯು ರಾಜ್ಯದ ಬಹುತೇಕ ಕಡೆಗಳಲ್ಲಿ ಪರಿಣಾಮ ಉಂಟುಮಾಡಿದೆ. ಆಗಸ್ಟ್ 7ರವರೆಗೆ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆಯು ಯೆಲ್ಲೊ ಅಲರ್ಟ್ ಘೋಷಿಸಿದೆ.

ಒಟ್ಟು 3,612 ಮಾರ್ಗಗಳ ಪೈಕಿ 82 ಮಾರ್ಗಗಳಲ್ಲಿ ಬಸ್ ಸಂಚಾರವನ್ನು ಹಿಮಾಚಲ ರಸ್ತೆ ಸಾರಿಗೆ ನಿಗಮವು ಸ್ಥಗಿತಗೊಳಿಸಿದೆ. ರಾಜ್ಯದ ಜೋಗಿಂದರ್ ನಗರದಲ್ಲಿ ಶುಕ್ರವಾರ ಸಂಜೆ 85 ಮಿ.ಮೀ. ಮಳೆ ಆಗಿದೆ.

ರಾಜ್ಯದ ಮೂರು ಜಿಲ್ಲೆಗಳಲ್ಲಿ ಉಂಟಾದ ಮೇಘಸ್ಫೋಟದ ನಂತರ ನಾಪತ್ತೆಯಾದ 45 ಜನರ ಪತ್ತೆಗಾಗಿ ಶನಿವಾರವೂ ಪ್ರಯತ್ನ ಮುಂದುವರಿದಿದೆ.

ನರಸಿಂಹಪುರ (ಮಧ್ಯಪ್ರದೇಶ): ನರಸಿಂಹಪುರ ಜಿಲ್ಲೆಯ ಗ್ರಾಮವೊಂದರಲ್ಲಿ ಸುರಿದ ಮಳೆಗೆ ಮನೆಯೊಂದು ಕುಸಿದಿದ್ದು, ಮಕ್ಕಳಿಬ್ಬರು ಮೃತಪಟ್ಟಿದ್ದಾರೆ. ಕುಟುಂಬದ ಐವರಿಗೆ ಗಾಯಗಳಾಗಿವೆ.

ಬಾರದ ಸಿ.ಎಂ: ಗ್ರಾಮಸ್ಥರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೊಕ್ಕಹಳ್ಳಿ (ಮೈಸೂರು ಜಿಲ್ಲೆ): 'ಗ್ರಾಮಕ್ಕೆ ಬಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಂದುಕೊರತೆ ಆಲಿಸಿಲ್ಲ' ಎಂದು, ಕಪಿಲಾ ಪ್ರವಾಹದಿಂದ ಹಾನಿಗೊಳಗಾದ, ವರುಣ ಕ್ಷೇತ್ರ ವ್ಯಾಪ್ತಿಯಲ್ಲಿರುವ, ನಂಜನಗೂಡು ತಾಲ್ಲೂಕಿನ ಬೊಕ್ಕಹಳ್ಳಿ ನಿವಾಸಿಗಳು ಶನಿವಾರ ಆಕ್ರೋಶ ವ್ಯಕ್ತಪಡಿಸಿದರು.

ಬೆಳಿಗ್ಗೆ 9.30ರ ಸುಮಾರಿಗೆ ಮುಖ್ಯಮಂತ್ರಿ ಗ್ರಾಮಕ್ಕೆ ಭೇಟಿ ನೀಡಿ, ಅಹವಾಲು ಆಲಿಸುತ್ತಾರೆ ಎಂದು ತಿಳಿಸಲಾಗಿತ್ತು. ಸಿದ್ಧತೆಯೂ ಆಗಿತ್ತು. ಅಧಿಕಾರಿಗಳು, ಮುಖಂಡರು, ಮಾಧ್ಯಮ ಪ್ರತಿನಿಧಿಗಳು ಬಂದಿದ್ದರು. ಆದರೆ, ಕೊನೆಕ್ಷಣದಲ್ಲಿ ಮುಖ್ಯಮಂತ್ರಿ ಬರಲಿಲ್ಲ. ಅದೇ ರೀತಿಯ ಸಿದ್ಧತೆಯನ್ನು ಶುಕ್ರವಾರವೂ ಮಾಡಿಕೊಳ್ಳಲಾಗಿತ್ತು. ಅಂದೂ ಕಾರ್ಯಕ್ರಮ ರದ್ದಾಗಿತ್ತು.

ಗ್ರಾಮದ ನೂರಾರು ಎಕರೆ ಜಮೀನು ಹಾಗೂ 36 ಮನೆಗಳು ಜಲಾವೃತವಾಗಿದೆ. ಆ ಕುಟುಂಬಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಕಾಳಜಿ ಕೇಂದ್ರದಲ್ಲಿ ಗಂಟೆಗಟ್ಟಲೆ ಕಾದ ಬಳಿಕ ಸಂತ್ರಸ್ತರು, ಕ್ಷೇತ್ರದ ಶಾಸಕರೂ ಆಗಿರುವ ಸಿದ್ದರಾಮಯ್ಯ ಅವರು 2ನೇ ದಿನವೂ ಬಾರದಿದ್ದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ಕಬಿನಿ ಜಲಾಶಯದಿಂದ ಹೆಚ್ಚು ನೀರನ್ನು ಕಪಿಲಾ ನದಿಗೆ ಹರಿಸಿದಾಗಲೆಲ್ಲಾ ನಮಗೆ ನಷ್ಟವಾಗುತ್ತಿದೆ. ಗ್ರಾಮವನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಮನೆ ಹಾನಿ, ಬೆಳೆ ನಷ್ಟ ಅನುಭವಿಸಿದವರಿಗೆ ಪರಿಹಾರ ಕೊಡಬೇಕೆಂದು ಒತ್ತಾಯಿಸಲು ಕಾಯುತ್ತಿದ್ದೆವು' ಎಂದು ಮಾಧ್ಯಮದವರಿಗೆ ತಿಳಿಸಿದರು. ಕೆಲವು ಮಹಿಳೆಯರು, 'ನಮ್ಮ ಮನೆ ಹಾಳಾಗಿದೆ; ನೆರವಾಗುವವರಾರು?' ಎಂದು ಕಣ್ಣೀರಿಟ್ಟರು.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಬೊಕ್ಕಹಳ್ಳಿ ಗ್ರಾಮದಲ್ಲಿ ತೆರೆದಿರುವ ಕಾಳಜಿ ಕೇಂದ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಾಗಿ ಶನಿವಾರ ಮಹಿಳೆಯರು ಕಾದರು

> **ಗ್ರಾಮಸ್ಥರ ಮನವಿ ಮೇರೆಗೆ, ಸರ್ಕಾರಿ ಜಾಗದ ಲಭ್ಯತೆ ಆಧರಿಸಿ ಗ್ರಾಮವನ್ನು ಸ್ಥಳಾಂತರಿಸಲು ಪರಿಶೀಲಿಸಲಾಗುವುದು**
> **ಡಾ.ಎಚ್‌.ಸಿ.ಮಹದೇವಪ್ಪ** ಜಿಲ್ಲಾ ಉಸ್ತುವಾರಿ ಸಚಿವ

'ಪ್ರವಾಹ ಬಂದಾಗಲೆಲ್ಲಾ ಮನೆಗಳು ಮುಳುಗಿ, ಕಾಳಜಿ ಕೇಂದ್ರಕ್ಕೆ ಬಂದು ವಾರ–ಹದಿನೈದು ದಿನ ಇದ್ದು ಮನೆಗೆ ಹೋಗುವುದರಿಂದ ನೆಮ್ಮದಿಯೇ ಇಲ್ಲವಾಗಿದೆ. ಜಮೀನುಗಳು ಹಾಳಾಗುತ್ತಿವೆ. ಶಿಥಿಲ ಮನೆಗಳಲ್ಲಿ ಆತಂಕದಲ್ಲೇ ಜೀವನ ನಡೆಸುವಂತಾಗಿದೆ' ಎಂದು ರೈತ ಮುಖಂಡ ನಂಜುಂಡಸ್ವಾಮಿ ಅಳಲು ತೋಡಿಕೊಂಡರು.

ಮಧ್ಯಾಹ್ನ ಬಂದ ಸಚಿವ: ಮುಖ್ಯಮಂತ್ರಿ ಸೂಚನೆ ಮೇರೆಗೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಸೇರಿ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಮಧ್ಯಾಹ್ನ ಬಂದು ಅಹವಾಲುಗಳನ್ನು ಆಲಿಸಿದರು.

ವಾಯುಭಾರ ಕುಸಿತ ● ವರ್ಷಧಾರೆಗೆ ಕೊಚ್ಚಿಹೋದ ರಸ್ತೆ, ಸೇತುವೆ ● ಮನೆಗಳಿಗೆ ಹಾನಿ

ಕೋಲ್ಕತ್ತ, ದೆಹಲಿ, ರಾಂಚಿಯಲ್ಲಿ ಮಳೆ ಆರ್ಭಟ

ಕೋಲ್ಕತ್ತ/ನವದೆಹಲಿ/ರಾಂಚಿ (ಪಿಟಿಐ): ವಾಯುಭಾರ ಕುಸಿತದಿಂದಾಗಿ ಕೋಲ್ಕತ್ತ ಹಾಗೂ ನೆರೆಯ ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಕೂಡ ಶನಿವಾರ ಭಾರಿ ಮಳೆ ಸುರಿದಿದೆ.

ಜಡಿಮಳೆಯ ಕಾರಣದಿಂದಾಗಿ ಜಾರ್ಖಂಡ್ ರಾಜ್ಯದಲ್ಲಿ ಕೆಲವೆಡೆ ರಸ್ತೆಗಳು ಕೊಚ್ಚಿಕೊಂಡು ಹೋಗಿವೆ, ಮನೆಗಳಿಗೆ ಹಾನಿಯಾಗಿದೆ ಹಾಗೂ ಸೇತುವೆಯೊಂದರ ಭಾಗ ಕುಸಿದಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಆದರೆ, ಅದೃಷ್ಟವಶಾತ್ ಪ್ರಾಣಹಾನಿಯ ವರದಿ ಇಲ್ಲ.

ಮಳೆಯ ಕಾರಣದಿಂದಾಗಿ ಕೋಲ್ಕತ್ತ ನಗರದ ಹಲವು ಕಡೆಗಳಲ್ಲಿ ರಸ್ತೆಯ ಮೇಲೆ ನೀರು ನಿಂತಿತ್ತು. ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿಯೂ ಇದೇ ರೀತಿ ಆಗಿದ್ದರೂ, ವಿಮಾನ ಸಂಚಾರಕ್ಕೆ ಅಡಚಣೆ ಆಗಿರಲಿಲ್ಲ. ನೆರೆಯ ಹೌರಾ, ಸಾಲ್ಟ್‌ಲೇಕ್ ಮತ್ತು ಬೈರಕಪುರದಲ್ಲಿ ಕೂಡ ರಸ್ತೆಯ ಮೇಲೆ ನೀರು ಹರಿದಿದೆ.

ಕೋಲ್ಕತ್ತ ನಗರದ ಕೇಂದ್ರ ಹಾಗೂ ದಕ್ಷಿಣ ಭಾಗಗಳಲ್ಲಿ ಪಾದ ಮುಳುಗುವಷ್ಟು ನೀರು ರಸ್ತೆಯ ಮೇಲೆ ನಿಂತಿತ್ತು ಎಂದು ಪೊಲೀಸರು ಹೇಳಿದ್ದಾರೆ. ಆದರೆ, ವಾಹನ ಸಂಚಾರಕ್ಕೆ ತೊಂದರೆ ಆಗಲಿಲ್ಲ.

ರಾಂಚಿಯಲ್ಲಿ ಸುರಿದ ಭಾರಿ ಮಳೆಗೆ ರಸ್ತೆಯೊಂದು ಕೊಚ್ಚಿಕೊಂಡು ಹೋಗಿದೆ ಪಿಟಿಐ ಚಿತ್ರ

ಕೋಲ್ಕತ್ತದ ದಮ್‌ದಮ್ ಪ್ರದೇಶದಲ್ಲಿ ಶುಕ್ರವಾರದ ನಂತರ 100 ಮಿ.ಮೀ. ಮಳೆಯಾಗಿದೆ. ಸಾಲ್ಟ್‌ಲೇಕ್‌ನಲ್ಲಿ 81.1 ಮಿ.ಮೀ. ಹಾಗೂ ಅಲಿಪುರ ಪ್ರದೇಶದಲ್ಲಿ 31.9 ಮಿ.ಮೀ. ಮಳೆಯಾಗಿದೆ.

ದಕ್ಷಿಣದ ಹೌರಾ, ಪಶ್ಚಿಮ್ ಬರ್ಧಮಾನ್, ಬಿರ್‌ಭೂಮ್, ಹೂಗ್ಲಿ, ನಾದಿಯಾ, ಉತ್ತರ 24 ಪರಗಣ, ದಕ್ಷಿಣ 24 ಪರಗಣ ಜಿಲ್ಲೆಗಳಲ್ಲಿ ಮಳೆ ಮುಂದುವರಿಯುವ ನಿರೀಕ್ಷೆ ಇದೆ.

'ಜಾರ್ಖಂಡ್‌ನಲ್ಲಿ ನೀರಿನ ಮಟ್ಟ ಏರಿಕೆ ಆದಾಗ, ನೀರು ಹರಿಸುವ ಮೂಲಕ ಬಂಗಾಳದ ಪರಿಸ್ಥಿತಿ ಬಿಗಡಾಯಿಸುವ ಕೆಲಸವನ್ನು ಡಿವಿಸಿ ಮಾಡುತ್ತದೆ. ಆದರೆ ನೀರಾವರಿ ಹಾಗೂ ಕೃಷಿ ಚಟುವಟಿಕೆಗಳಿಗೆ ರಾಜ್ಯಕ್ಕೆ ನೀರಿನ ಅಗತ್ಯ ಬೇಸಿಗೆಯಲ್ಲಿ ಬಹಳ ಇರುವಾಗ ನೀರು ಬಿಡುವುದೇ ಇಲ್ಲ' ಎಂದು ಟಿಎಂಸಿ ನಾಯಕ ಕುನಾಲ್ ಘೋಷ್ ಅವರು ದಾಮೋದರ್ ವ್ಯಾಲಿ ನಿಗಮದ (ಡಿವಿಸಿ) ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ್ ಬರ್ಧಮಾನ್ ಜಿಲ್ಲೆಯ ಕಾಜಿ ನಜರುಲ್ ಇಸ್ಲಾಂ (ಕೆಎನ್‌ಐ) ವಿಮಾನ ನಿಲ್ದಾಣದಲ್ಲಿ ನೀರು ನಿಂತಿದ್ದ ಕಾರಣ ವಿಮಾನಗಳ ಸಂಚಾರವನ್ನು ಶುಕ್ರವಾರ ಸ್ಥಗಿತಗೊಳಿಸಲಾಗಿತ್ತು. ಶನಿವಾರವೂ ಇಲ್ಲಿ ವಿಮಾನ ಸಂಚಾರ ಆರಂಭವಾಗಿಲ್ಲ. ಇಲ್ಲಿ ವಿಮಾನ ಸಂಚಾರ ಭಾನುವಾರ ಮತ್ತೆ ಆರಂಭವಾಗುವ ನಿರೀಕ್ಷೆ ಇದೆ.

ಜಾರ್ಖಂಡ್ ಪರಿಸ್ಥಿತಿ: ಜಾರ್ಖಂಡ್‌ನಲ್ಲಿ ಶಾಲೆಗಳಿಗೆ ಶನಿವಾರ ರಜೆ ಘೋಷಿಸಲಾಗಿತ್ತು. ರಾಜಧಾನಿ ರಾಂಚಿಯ ತಗ್ಗು ಪ್ರದೇಶಗಳಲ್ಲಿ ಇರುವ ಹಲವು ಮನೆಗಳಿಗೆ ಮಳೆನೀರು ನುಗ್ಗಿದೆ. ಇಲ್ಲಿನ ಮಂದರ್ ಪ್ರದೇಶದಲ್ಲಿ ರಸ್ತೆಗೆ ಹಾನಿಯಾಗಿದೆ. ನಗರದ ಹಲವೆಡೆ ಮರಗಳು ಉರುಳಿಬಿದ್ದಿವೆ.

ಬೊಕಾರೊ ಜಿಲ್ಲೆಯಲ್ಲಿ ಸೇತುವೆಯ ಒಂದು ಭಾಗವು ಕುಸಿದುಬಿದ್ದಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಸೇತುವೆ ಕುಸಿದಿದ್ದಕ್ಕೆ ಕಾರಣ ಗುರುತಿಸಲು ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಾಜ್ಯದ ಗುಮಲಾ ಜಿಲ್ಲೆಯಲ್ಲಿ ಮಳೆಯಿಂದಾಗಿ ರಸ್ತೆಗಳಿಗೆ ಹಾನಿಯಾಗಿದೆ. ಅಲ್ಲದೆ, ಜಿಲ್ಲೆಯಲ್ಲಿ ತಗ್ಗು ಪ್ರದೇಶಗಳಲ್ಲಿ ಇರುವ ಹಲವು ಮನೆಗಳಿಗೆ ಹಾನಿ ಆಗಿದೆ.

'ಭ್ರಷ್ಟಾಚಾರದಲ್ಲಿ ವಿಜಯೇಂದ್ರ ನಂಬರ್ 1'

ಶಿವಮೊಗ್ಗ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭ್ರಷ್ಟಾಚಾರದಲ್ಲಿ ನಂಬರ್ ಒನ್ ರ್‍ಯಾಂಕ್ ಪಡೆದಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಆರೋಪಿಸಿದರು.

'ವಿಜಯೇಂದ್ರ ಮೇಲೆ ಭ್ರಷ್ಟಾಚಾರದ ಆರೋಪಗಳು ಸಾಕಷ್ಟಿವೆ. ಹಣ ಅಕ್ರಮ ವರ್ಗಾವಣೆ ಸೇರಿದಂತೆ ವಿವಿಧ ಪ್ರಕರಣಗಳು ತಮ್ಮ ಮೇಲೆ ಇರುವುದಾಗಿ ಚುನಾವಣಾ ಅಫಿಡವಿಟ್‌ನಲ್ಲಿ ಅವರೇ ಘೋಷಿಸಿಕೊಂಡಿದ್ದಾರೆ. ಮುಡಾ ವಿಚಾರ ಮುಂದಿಟ್ಟುಕೊಂಡು ಪಾದಯಾತ್ರೆ ಮಾಡುವ ನೈತಿಕತೆ ಅವರಿಗಿಲ್ಲ. ತಮ್ಮದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಡಿರುವ ಆರೋಪಗಳಿಗೆ ಮೊದಲು ಉತ್ತರ ಕೊಡಲಿ. ಭಾರೀ ಪ್ರಮಾಣದ ಆಸ್ತಿ ಹೇಗೆ ಬಂತು ಎಂಬುದನ್ನು ಜನರಿಗೆ ತಿಳಿಸಲಿ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

'ಯಡಿಯೂರಪ್ಪ ತಾವು ಮುಖ್ಯಮಂತ್ರಿಯಾಗಿದ್ದಾಗಲೇ ಜೈಲಿಗೆ ಹೋಗಲು ಕಾರಣರಾದವರು ಯಾರು? ಅವರ ಸಹಿ ನಕಲು ಮಾಡಿದವರು ಯಾರು? ಇಂತಹ ವ್ಯಕ್ತಿ ಭ್ರಷ್ಟಾಚಾರದ ವಿಚಾರ ಮುಂದಿಟ್ಟುಕೊಂಡು ಪಾದಯಾತ್ರೆ ಮಾಡುತ್ತಿರುವುದು ಹಾಸ್ಯಾಸ್ಪದ. ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿರುವುದಾಗಿ ಬಿಜೆಪಿಯವರೇ ಆರೋಪಿಸಿದ್ದಾರೆ. ಅದಕ್ಕೆ ಮೊದಲು ಉತ್ತರ ಕೊಡಲಿ' ಎಂದು ಸಚಿವರು ಕಿಡಿಕಾರಿದರು.

ನೈತಿಕತೆ ಇಲ್ಲ: ದಿನೇಶ ಗುಂಡೂರಾವ್

ಬೆಳಗಾವಿ: 'ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಬಿ.ವೈ.ವಿಜಯೇಂದ್ರ ಅಧಿಕಾರ ದುರ್ಬಳಕೆ ಮಾಡಿಕೊಂಡು, ಎಲ್ಲ ಕಡತಗಳನ್ನು ತಮ್ಮ ಮನೆಗಳಿಗೆ ತರಿಸಿಕೊಳ್ಳುತ್ತಿದ್ದರು. ಭ್ರಷ್ಟಾಚಾರದಲ್ಲಿ ತೊಡಗಿದ್ದ ಅವರಿಗೆ ಪಾದಯಾತ್ರೆ ಮಾಡುವ ನೈತಿಕತೆ ಇದೆಯೇ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.

'ಯಡಿಯೂರಪ್ಪ ಅವರ ಸಹಿಯನ್ನು ನಕಲಿ ಮಾಡಿ, ಬಳಸಿದ ಆರೋಪ ವಿಜಯೇಂದ್ರ ಮೇಲಿದೆ. ಅವರು ಆಗ ಯಾವ ರೀತಿ ನಡೆದುಕೊಂಡರು ಎಂಬುದು ಇಡೀ ರಾಜ್ಯಕ್ಕೆ ಗೊತ್ತು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿ ಕಚೇರಿ ಮುತ್ತಿಗೆಗೆ ಯತ್ನ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಬಿಜೆಪಿ– ಜೆಡಿಎಸ್ ಹುನ್ನಾರ ನಡೆಸಿವೆ' ಎಂದು ಆರೋಪಿಸಿ, ಅಹಿಂದ ಸಂಘಟನೆಗಳ ಮುಖಂಡರು ಶನಿವಾರ ಇಲ್ಲಿನ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ನಡೆಸಿದ ಯತ್ನವನ್ನು ಪೊಲೀಸರು ದೂರದಲ್ಲೇ ತಡೆದರು.

ಜಿಲ್ಲಾ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಬಿಜೆಪಿ ಕಚೇರಿಯತ್ತ ಮುನ್ನುಗ್ಗಿದ ಮುಖಂಡರನ್ನು ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು. ಆ ವೇಳೆ ಮಾತಿನ ಚಕಮಕಿಯೂ ನಡೆಯಿತು. ಬಿಜೆಪಿ ಕಾರ್ಯಕರ್ತರು ಕೂಡ, ಕಚೇರಿಯತ್ತ ಪ್ರತಿಭಟನಕಾರರು ಬರದಂತೆ ಪಕ್ಷದ ಬಾವುಟಗಳನ್ನು ಹಿಡಿದು ಪ್ರತಿಭಟಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮ್, 'ಸಿದ್ದರಾಮಯ್ಯ ಅವರ ಅಹಿಂದ ಧ್ವನಿಯನ್ನು ಅಡಗಿಸಲು ಬಿಜೆಪಿ ಮುಂದಾಗಿದೆ. ದಕ್ಷಿಣ ಭಾರತದಲ್ಲಿ ಪಕ್ಷ ವಿಸ್ತರಣೆಗೆ ಸಿದ್ದರಾಮಯ್ಯ ತಡೆಗೋಡೆಯಾಗಿದ್ದು, ಅವರನ್ನು ರಾಜಕೀಯವಾಗಿ ಮುಗಿಸಲು ಸಂಚು ನಡೆದಿದೆ' ಎಂದರು.

'ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಬಿಜೆಪಿ– ಜೆಡಿಎಸ್ ಹುನ್ನಾರ ನಡೆಸಿವೆ' ಎಂದು ಆರೋಪಿಸಿ ಅಹಿಂದ ಸಂಘಟನೆಗಳ ಮುಖಂಡರು ಶನಿವಾರ ಮೈಸೂರಿನ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕುವ ಯತ್ನ ನಡೆಸಿದರು

'ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣಗಳಲ್ಲಿ ತಮ್ಮ ಪಾತ್ರವಿಲ್ಲವೆಂದು ಸಿದ್ದರಾಮಯ್ಯ ದಾಖಲೆ ಸಮೇತ ತಿಳಿಸಿದ್ದರೂ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿ– ಜೆಡಿಎಸ್ ಹಮ್ಮಿಕೊಂಡಿರುವ ಪಾದಯಾತ್ರೆಯನ್ನು ವಿರೋಧಿಸಿ ಅಹಿಂದ ಸಮುದಾಯಗಳು ಒಗ್ಗಟ್ಟಾಗಿ ಹೋರಾಡಲಿವೆ' ಎಂದರು.

ವಿವಿಧ ಸಮುದಾಯ ಮುಖಂಡರಾದ ಸುಬ್ರಹ್ಮಣ್ಯ, ಎನ್. ಆರ್.ನಾಗೇಶ್, ರವಿನಂದನ್, ಶಿವಣ್ಣ, ಯೋಗೇಶ್ ಉಪ್ಪಾರ್, ರಾಜಶೇಖರ್, ಲೋಕೇಶ್‌ಕುಮಾರ್ ಮಾದಾಪುರ, ಎಚ್.ಎಸ್.ಪ್ರಕಾಶ್, ಸಿದ್ದು, ದಸಂಸ ಸಂಚಾಲಕ ದೇವಗಳ್ಳಿ ಸೋಮಶೇಖರ್, ಮಲ್ಲೇಶ್ ಪಾಲ್ಗೊಂಡಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.45	80,732	80,931
ಹಾರಂಗಿ	2,859	2,854.33	10,214	15,312
ಕಬಿನಿ	2,284.00	2,280.67	22,482	8,000
ಹೇಮಾವತಿ	2,922	2,920.05	24,100	22,425
ಲಿಂಗನಮಕ್ಕಿ	1,819	1,815.35	61,835	3,590
ಸೂಪಾ (ಮೀ)	564	556.47	40,466	3,534.47
ಮಾಣಿ	595	587.66	7,933	000
ತುಂಗಭದ್ರಾ	1,633	1,631.14	1,71,353	1,74,675
ಮಲಪ್ರಭಾ	2,079.5	2,076.10	17,397	11,594
ಘಟಪ್ರಭಾ	2175	2,170.63	34,387	34,387
ಭದ್ರಾ	186	180.9	30,350	56,032
ಆಲಮಟ್ಟಿ (ಮೀ)	519.6	515.65	3,19,916	3,02,555
ನಾರಾಯಣಪುರ (ಮೀ)	492.25	490.18	2,80,000	2,56,271

* ನೆಲಮಟ್ಟದಿಂದ

'ಸಿದ್ದರಾಮಯ್ಯ ಗುಂಡು ಕಲ್ಲಿನಂತಿದ್ದಾರೆ'

ಬೊಕ್ಕಹಳ್ಳಿ (ಮೈಸೂರು ಜಿಲ್ಲೆ): 'ಬಿಜೆಪಿ–ಜೆಡಿಎಸ್‌ನವರು ಮೈಸೂರು ಚಲೋ ಪಾದಯಾತ್ರೆ ನಡೆಸುತ್ತಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಚಲಿತರಾಗಿಲ್ಲ. ಗುಂಡು ಕಲ್ಲಿನಂತಿದ್ದಾರೆ. ಹಿಂದೆ ಹೇಗಿದ್ದರೋ ಹಾಗೇ ಇದ್ದಾರೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, 'ಪ್ರಜ್ಞೆ ಇರುವವರು ಜನರ ಕಷ್ಟದಲ್ಲಿ ಭಾಗಿಯಾಗಬೇಕು. ಆದರೆ, ವಿಪಕ್ಷದವರು ಅನಗತ್ಯ ಆರೋಪ ಮಾಡುತ್ತಿದ್ದಾರೆ. ಅವರನ್ನು ಜವಾಬ್ದಾರಿಯುತ ವಿಪಕ್ಷದವರು ಎನ್ನಬೇಕೇ?' ಎಂದು ಕೇಳಿದರು.

'ಮಿತ್ರ'ರ ನಡೆ ಮೈಸೂರು ಕಡೆ

ಒಂದನೇ ಪುಟದಿಂದ...

ಈ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು ಎಂಬ ಘೋಷಣೆಗಳು ಮುಗಿಲು ಮುಟ್ಟಿತ್ತು. ಯಾದಗಿರಿಯ ಪಿಎಸ್‌ಐ ಪರಶುರಾಮ್ ಅವರ ಸಾವಿನ ಪ್ರಕರಣವೂ ಹೋರಾಟದ ಬತ್ತಳಿಕೆಗೆ ಮತ್ತೊಂದು ಅಸ್ತ್ರವಾಗಿ ಸೇರಿತು.

ಮುಗಿಲು ಮುಟ್ಟಿದ ಹುಮ್ಮಸ್ಸು: ಭಾರಿ ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರಿಂದ ಎರಡೂ ಪಕ್ಷಗಳ ನಾಯಕರೂ ಹುಮ್ಮಸ್ಸಿನಿಂದ ಹೆಜ್ಜೆ ಹಾಕುವಂತಾಯಿತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದ ಬಿಜೆಪಿ-ಜೆಡಿಎಸ್ ಪಕ್ಷಗಳ ಕಾರ್ಯಕರ್ತರಿಗೆ ಈ ಹೋರಾಟ ಚೈತನ್ಯ ತುಂಬಿತ್ತು.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ. ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಎಚ್. ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ಸಹ ಉಸ್ತುವಾರಿ ಸುಧಾಕರ ರೆಡ್ಡಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಗುಡುಗಿದರು.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿದ್ದ 'ಮೈಸೂರು ಚಲೋ' ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಎರಡೂ ಪಕ್ಷಗಳ ಕಾರ್ಯಕರ್ತರು

ಬೆಳಿಗ್ಗೆ 8ಕ್ಕೆ ಕಾರ್ಯಕ್ರಮ ನಿಗದಿಯಾಗಿದ್ದರೂ, ವಿಜಯೇಂದ್ರ ಹಾಗೂ ಕುಮಾರಸ್ವಾಮಿ ಎರಡೂವರೆ ಗಂಟೆ ತಡವಾಗಿ ವೇದಿಕೆಗೆ ಬಂದರು. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಇಬ್ಬರು ನಾಯಕರು ಪಾದಯಾತ್ರೆ ಆರಂಭಕ್ಕೂ ಮೊದಲು ಕೆಂಗೇರಿಯ ಕೆಂಪಮ್ಮ ದೇವಿಗೆ ಪೂಜೆ ಸಲ್ಲಿಸಿದರು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಎಲ್ಲರ ಮಾತು ಮುಗಿಯುತ್ತಿದ್ದಂತೆಯೇ ಸ್ವಲ್ಪ ಸಮಯ ಮಳೆಯ ಸಿಂಚನವಾಯಿತು.

ಯಡಿಯೂರಪ್ಪ, ಕುಮಾರಸ್ವಾಮಿ ಸೇರಿದಂತೆ ಬಹುತೇಕ ಗಣ್ಯರು ಸ್ವಲ್ಪ ದೂರ ನಡೆದ ನಂತರ ಕಾರಿನಲ್ಲಿ ತೆರಳಿದರು. ವಿಜಯೇಂದ್ರ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಯಾತ್ರೆ ಮುಂದುವರಿಯಿತು.

ಯಾತ್ರೆ ಆರಂಭ ವಿಳಂಬವಾದ ಕಾರಣ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿ ಕೆಂಗೇರಿ– ಬಿಡದಿ ಮಧ್ಯೆ ಮೈಲುಗಟ್ಟಲೆ ವಾಹನಗಳು ಸಾಲು ಗಟ್ಟಿ ನಿಂತಿದ್ದವು. ಕೆಲ ವಾಹನಗಳ ಪ್ರಯಾಣಿಕರು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

'ಕಪ್ಪು–ಬಿಳುಪು ಟಿ.ವಿಯವರ ಆಸ್ತಿ ₹1,400 ಕೋಟಿ'

ಒಂದನೇ ಪುಟದಿಂದ...

'ಯಾದಗಿರಿಯಲ್ಲಿ ಆ ಪೊಲೀಸ್ ಅಧಿಕಾರಿಯ ಪತ್ನಿ ಪ್ರಕಾರ ₹25 ಲಕ್ಷ ಲಂಚ ಹಣ ಕೊಡಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಗೃಹ ಸಚಿವ ಪರಮೇಶ್ವರ ಅವರು ಉತ್ತರ ಕೊಡಲಿ' ಎಂದು ಸವಾಲು ಹಾಕಿದರು.

'ನಾನು ಬಣ್ಣ ಬದಲಾಯಿಸಿದ್ದೇನೆ ಎಂದು ಪರಮೇಶ್ವರ ಅವರು ಹೇಳಿದ್ದಾರೆ. ನನ್ನದು ಒರಿಜಿನಲ್ ಬಣ್ಣ, ಅದು ಎಂದೂ ಬದಲಾಗದು' ಎಂದು ತಿರುಗೇಟು ನೀಡಿದರು.

'ಶಕ್ತಿ ಕಳೆದುಕೊಂಡಿರುವ ಜೆಡಿಎಸ್, ಕಾಂಗ್ರೆಸ್ ಪಕ್ಷವನ್ನು ಎದುರಿಸಲು ಬಿಜೆಪಿ ಜತೆಗೆ ಸೇರಿಕೊಂಡಿದೆ ಎಂದು ಸಿ.ಡಿ. ಶಿವು ಹೇಳಿದ್ದಾರೆ. ನಿಮ್ಮನ್ನು ಬುಡ ಸಮೇತ ಕಿತ್ತೊಗೆಯಲು ನಾವು ಜೊತೆಯಾಗಿದ್ದೇವೆ' ಎಂದರು.

> **ಕಾಂಗ್ರೆಸ್ಸಿನ ಡಿಎನ್‌ಎಯಲ್ಲೇ ಭ್ರಷ್ಟಾಚಾರ ಹಾಸುಹೊಕ್ಕಾಗಿದೆ. ಈಗ ರಾಜ್ಯ ಸರ್ಕಾರ ಭ್ರಷ್ಟತನ ಮುಚ್ಚಿಹಾಕಲು ರಾಜ್ಯಪಾಲರನ್ನು ಬೆದರಿಸುವ ಕೆಲಸ ಮಾಡುತ್ತಿದೆ**
> **ಪ್ರಲ್ಹಾದ ಜೋಶಿ.** ಕೇಂದ್ರ ಸಚಿವ

> **ರಾಜ್ಯಪಾಲರು ನೀಡಿದ ಒಂದು ನೋಟಿಸ್‌ಗೇ ಕಾಂಗ್ರೆಸ್ ನಾಯಕರು ಗಡಗಡ ನಡುಗುತ್ತಿದ್ದಾರೆ. ಕಾಂಗ್ರೆಸ್ ಒಡೆದ ಮನೆಯಾಗಿದೆ**
> **ಆರ್. ಅಶೋಕ** ವಿಧಾನಸಭೆ ವಿರೋಧ ಪಕ್ಷದ ನಾಯಕ

ಮೊದಲ ದಿನ ಬಿಜೆಪಿಯದೇ ಹವಾ

ಬೆಂಗಳೂರು: ಮೊದಲ ದಿನ ಎಲ್ಲೆಡೆ ಬಿಜೆಪಿ ಕಾರ್ಯಕರ್ತರೇ ತುಂಬಿದ್ದರು. ಕೇಸರಿ ಶಾಲು ಧರಿಸಿದ್ದರು. ಪಾದಯಾತ್ರೆ ಹಾದಿಯ ಇಕ್ಕೆಲಗಳಲ್ಲಿ ಬಿಜೆಪಿ ಬಾವುಟಗಳೇ ರಾರಾಜಿಸುತ್ತಿದ್ದವು. ಬಿಜೆಪಿ ಕಾರ್ಯಕರ್ತರೇ ಹೆಚ್ಚಿದ್ದರಿಂದ 'ಕೇಸರಿ' ಲಹರಿ ಆವರಿಸಿತ್ತು.

ಕೇಂದ್ರ ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಮಾಜಿ ಸಚಿವ ಡಿ.ವಿ.ಸದಾನಂದಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ ಕಾರ್ಯಕ್ರಮದಲ್ಲಿ ಇದ್ದರು.

ದಿಢೀರ್ ಪ್ರತ್ಯಕ್ಷವಾದ ಪ್ರೀತಂ ಗೌಡ: ಕೆಂಗೇರಿಯಿಂದ ಆರಂಭವಾದ ನಡಿಗೆಯಲ್ಲಿ ಎಲ್ಲೂ ಕಾಣಿಸಿಕೊಳ್ಳದ ಪ್ರೀತಂ ಗೌಡ ಬಿಡದಿ ಸಮೀಪಿಸುವಾಗ ಯಾತ್ರೆಯ ಮಧ್ಯೆ ದಿಢೀರ್ ಪ್ರತ್ಯಕ್ಷರಾದರು. ಬಿಜೆಪಿ ಕಾರ್ಯಕರ್ತರು ಪ್ರೀತಂಗೆ ಜಯಕಾರ ಹಾಕಿದರು. ಇದರಿಂದ ಜೆಡಿಎಸ್ ನಾಯಕರು ಕೆಲ ಕಾಲ ಮುಜುಗರ ಅನುಭವಿಸಿದರು.

ಬಿಜೆಪಿ ಭಿನ್ನರ ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಸಂಸದ ಪ್ರತಾಪಸಿಂಹ ಕೆಂಗೇರಿಯ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಸನಗೌಡ ಪಾಟೀಲ ಯತ್ನಾಳ, ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ ಅವರು ಭಾಗವಹಿಸಲಿಲ್ಲ. ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಸಹ ಭಾಗಿಯಾಗಿರಲಿಲ್ಲ. ಅವರ ಮನೆಯಲ್ಲಿ ಕಾರ್ಯಕ್ರಮವಿದ್ದು, ಭಾನುವಾರ ಭಾಗವಹಿಸುವರು ಎಂದು ಬಿಜೆಪಿ ನಾಯಕರು ಮಾಹಿತಿ ನೀಡಿದರು.

'ಸಿ.ಎಂ ಬೆಂಗಲಿಗರಿಂದ 300 ನಿವೇಶನ ಕಬಳಿಕೆ'

ಬೆಂಗಳೂರು: ಮೈಸೂರು ಚಲೋ ಪಾದಯಾತ್ರೆ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಶಕ್ತಿ ಹೊಂದಿದೆ. ಸುಳ್ಳು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದ ಸರ್ಕಾರ ವಚನಭ್ರಷ್ಟವಾಗಿದೆ ಎಂದು ಬಿ.ವೈ.ವಿಜಯೇಂದ್ರ ಟೀಕಿಸಿದರು.

ಮೈಸೂರಿನ ಮುಡಾದಿಂದ ಮುಖ್ಯಮಂತ್ರಿ 14 ನಿವೇಶನ ಪಡೆದ ನಂತರ ಅವರ ಬೆಂಬಲಿಗರು 300 ನಿವೇಶನ ಕಬಳಿಸಿದ್ದಾರೆ. ಅವುಗಳ ಮೌಲ್ಯ ₹5 ಸಾವಿರ ಕೋಟಿ. ಇದನ್ನು ಮುಡಾ ಅಧ್ಯಕ್ಷ ಮರಿಗೌಡರೇ ಹೇಳಿದ್ದಾರೆ. ಭ್ರಷ್ಟಾಚಾರದ ಹಣವನ್ನು ಸೋನಿಯಾ ಗಾಂಧಿ ಕುಟುಂಬಕ್ಕೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಪಟ್ನಾ ಹೈಕೋರ್ಟ್ ಆದೇಶ ರದ್ದುಪಡಿಸಿದ ಸುಪ್ರೀಂ ಕೋರ್ಟ್

ಪಾಲಿಸಲಾಗದ ಷರತ್ತು ಬೇಡ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆರೋಪಿಯೊಬ್ಬರಿಗೆ ಜಾಮೀನು ನೀಡಬಹುದು ಎಂಬ ತೀರ್ಮಾನಕ್ಕೆ ಬಂದ ನಂತರ ನ್ಯಾಯಾಲಯಗಳು, ಪಾಲಿಸಲು ಸಾಧ್ಯವೇ ಇಲ್ಲದಂತಹ ಷರತ್ತುಗಳನ್ನು ವಿಧಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪತ್ನಿಯು ಘನತೆಯಿಂದ ಜೀವನ ನಡೆಸಲು ಸಾಧ್ಯವಾಗುವಂತೆ, ಆಕೆಯ ಎಲ್ಲ ಆರ್ಥಿಕ ಹಾಗೂ ಭೌತಿಕ ಅಗತ್ಯಗಳನ್ನು ಪೂರೈಸುವುದಾಗಿ ಪ್ರಮಾಣಪತ್ರ ಸಲ್ಲಿಸುವಂತೆ ವ್ಯಕ್ತಿಯೊಬ್ಬನಿಗೆ ಸೂಚಿಸುವುದು 'ಕಾರ್ಯಸಾಧುವೇ ಅಲ್ಲದ ಷರತ್ತು' ಎಂದು ನ್ಯಾಯಮೂರ್ತಿಗಳಾದ ಸಿ.ಟಿ. ರವಿಕುಮಾರ್ ಮತ್ತು ಪಿ.ಕೆ. ಮಿಶ್ರಾ ಅವರು ಇದ್ದ ವಿಭಾಗೀಯ ಪೀಠ ಹೇಳಿದೆ.

ಆರೋಪಿಗೆ ಬಂಧನ ಪೂರ್ವದ ಜಾಮೀನು ಮಂಜೂರು ಮಾಡುವಾಗ, ಪಾಲಿಸಲು ಸಾಧ್ಯವಿಲ್ಲದಂತಹ ಷರತ್ತುಗಳನ್ನು ವಿಧಿಸುವುದು ಸರಿಯಲ್ಲ ಎಂದು ಹಲವು ತೀರ್ಪುಗಳು ಹೇಳುತ್ತಿರುವಾಗಲೂ, ಇಂತಹ ಷರತ್ತುಗಳಿರುವ ಆದೇಶಗಳು ಬರುತ್ತಿರುವುದು ನೋವುಂಟುಮಾಡುವ ಸಂಗತಿ ಎಂದು ಪೀಠವು ಹೇಳಿದೆ.

ಆರೋಪಿಯನ್ನು ಬಂಧಿಸದಂತೆ ಆತನಿಗೆ ಜಾಮೀನು ನೀಡುವ ಉದ್ದೇಶವು ಆತನ ಉಪಸ್ಥಿತಿ ಇರುವಂತೆ ನೋಡಿಕೊಳ್ಳುವುದು, ವಿಚಾರಣೆಯು ನ್ಯಾಯಸಮ್ಮತವಾಗಿ ಇರುವಂತೆ ಖಾತರಿಪಡಿಸುವುದು ಹಾಗೂ ತನಿಖಾ ಪ್ರಕ್ರಿಯೆಗೆ ಅಡ್ಡಿಗಳು ಎದುರಾಗದಂತೆ ನೋಡಿಕೊಳ್ಳುವುದು ಎಂದು ಪೀಠ ಹೇಳಿದೆ.

ವೈವಾಹಿಕ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಪತಿಗೆ ಜಾಮೀನು ಮಂಜೂರು ಮಾಡುವಾಗ, 'ಪತ್ನಿಯ ಎಲ್ಲ ಭೌತಿಕ ಹಾಗೂ ಆರ್ಥಿಕ ಅಗತ್ಯಗಳನ್ನು ಪೂರೈಸುವುದಾಗಿ ಪ್ರಮಾಣಪತ್ರ ಸಲ್ಲಿಸಬೇಕು' ಎಂಬ ಷರತ್ತು ವಿಧಿಸಿದ್ದ ಪಟ್ನಾ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್‌ನ ಈ ಪೀಠವು ರದ್ದುಪಡಿಸಿದೆ.

'ಜಾಮೀನು ಮಂಜೂರು ಮಾಡುವಾಗ ಪಾಲಿಸಲು ಸಾಧ್ಯವಾಗುವ ಷರತ್ತುಗಳನ್ನು ವಿಧಿಸುವ ಅಗತ್ಯವನ್ನು ನಾವು ಒತ್ತಿಹೇಳುತ್ತಿದ್ದೇವೆ' ಎಂದು ಅದು ಹೇಳಿದೆ.

ಪ್ರಕರಣ ಇತ್ಯರ್ಥವಾದರೆ ಸಾಕು ಎನ್ನುತ್ತಾರೆ ಜನ: ಸಿಜೆಐ

ನವದೆಹಲಿ (ಪಿಟಿಐ): ನ್ಯಾಯಾಲಯಗಳ ವಿಚಾರಗಳಲ್ಲಿ ಜನರಿಗೆ ಅದೆಷ್ಟು ಸಾಕಾಗಿಹೋಗಿರುತ್ತದೆ ಅಂದರೆ, ಅವರಿಗೆ ಪ್ರಕರಣಗಳು ಇತ್ಯರ್ಥವಾದರೆ ಸಾಕು ಎಂಬಂತಾಗಿರುತ್ತದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಹೇಳಿದ್ದಾರೆ.

ವ್ಯಾಜ್ಯಗಳ ಇತ್ಯರ್ಥಕ್ಕೆ ಪರ್ಯಾಯ ವ್ಯವಸ್ಥೆಯಾಗಿ ಲೋಕ ಅದಾಲತ್‌ಗಳನ್ನು ಬಳಸಿಕೊಳ್ಳುವುದರ ಮಹತ್ವದ ಬಗ್ಗೆ ಹೇಳುವಾಗ ಸಿಜೆಐ ಚಂದ್ರಚೂಡ್ ಅವರು ಹೀಗೆ ಹೇಳಿದ್ದಾರೆ.

ಕೋರ್ಟ್‌ಗಳಲ್ಲಿ ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಲಾಗುತ್ತದೆ, ರಾಜಿ ಸಂಧಾನದ ಮೂಲಕ ಬಗೆಹರಿಸಲಾಗುತ್ತದೆ. ವಾದಿಗಳು ಹಾಗೂ ಪ್ರತಿವಾದಿಗಳು ಪರಸ್ಪರ ಒಪ್ಪಿ ಇತ್ಯರ್ಥಪಡಿಸಿದ ಪ್ರಕರಣಗಳ ವಿಚಾರದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ.

'ಕೋರ್ಟ್ ಪ್ರಕ್ರಿಯೆಗಳೇ ಶಿಕ್ಷೆಯಂತೆ ಆಗಿರುವುದು ನ್ಯಾಯಮೂರ್ತಿಗಳಾದ ನಮಗೆ ಕಳವಳ ಮೂಡಿಸುವ ಸಂಗತಿ' ಎಂದು ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಲೋಕ ಅದಾಲತ್ ಸಪ್ತಾಹದ ಕೊನೆಯಲ್ಲಿ ಹೇಳಿದ್ದಾರೆ.ಪ್ರತಿ ಹಂತದಲ್ಲಿಯೂ ಲೋಕ ಅದಾಲತ್ ಆರಂಭಿಸುವುದಕ್ಕೆ ವಕೀಲರು ಹಾಗೂ ನ್ಯಾಯಮೂರ್ತಿಗಳಿಂದ ತಮಗೆ ಭಾರಿ ಸಹಕಾರ ದೊರೆಯಿತು ಎಂದು ಅವರು ಸಂತಸ ಹಂಚಿಕೊಂಡಿದ್ದಾರೆ.

ವಿಶೇಷ ಲೋಕ ಅದಾಲತ್ ಕಾರ್ಯಕ್ರಮವು ಆರಂಭದಲ್ಲಿ ಏಳು ನ್ಯಾಯಪೀಠಗಳೊಂದಿಗೆ ಆರಂಭವಾಯಿತು. ಆದರೆ ಗುರುವಾರದ ಹೊತ್ತಿಗೆ 13 ಪೀಠಗಳು ಅದಾಲತ್‌ನಲ್ಲಿ ಭಾಗಿಯಾಗಿದ್ದವು ಎಂದು ಅವರು ಹೇಳಿದ್ದಾರೆ.

'ಬಿಭವ್ ಬಂಧನ ಅಗತ್ಯವಾಗಿತ್ತು'

ನವದೆಹಲಿ (ಪಿಟಿಐ): ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಅವರ ಮೇಲಿನ ಹಲ್ಲೆ ಪ್ರಕರಣದ ಆರೋಪಿ ಬಿಭವ್ ಕುಮಾರ್ (ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ಆಪ್ತ) ಬಂಧನ ಅಗತ್ಯವಾಗಿದ್ದು, ಪೊಲೀಸರು ಕಾನೂನಿನ ಪ್ರಕಾರ ನಡೆದುಕೊಂಡಿದ್ದಾರೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ತನ್ನ ಬಂಧನವನ್ನು ಕಾನೂನುಬಾಹಿರ ಎಂದು ಪ್ರತಿಪಾದಿಸಿ ಬಿಭವ್ ಸಲ್ಲಿಸಿದ್ದ ಅರ್ಜಿಯಲ್ಲಿ ಯಾವುದೇ ಅರ್ಹತೆ ಇಲ್ಲ ಎಂದು ಹೇಳಿದ ಹೈಕೋರ್ಟ್, ಅವರ ಅರ್ಜಿಯನ್ನು ಶುಕ್ರವಾರ ವಜಾಗೊಳಿಸಿತ್ತು. ಆ ಕುರಿತು ಆದೇಶವನ್ನು ಶನಿವಾರ ಪ್ರಕಟಿಸಿದೆ.

ಕೇಜ್ರಿವಾಲ್ ಅವರ ಅಧಿಕೃತ ನಿವಾಸದಲ್ಲಿ ಮಾಲಿವಾಲ್ ಅವರ ವಿರುದ್ಧ ಮೇ 13ರಂದು ಹಲ್ಲೆ ನಡೆಸಿದ್ದ ಆರೋಪವನ್ನು ಬಿಭವ್ ಕುಮಾರ್ ಎದುರಿಸುತ್ತಿದ್ದಾರೆ. ಅವರನ್ನು ಪೊಲೀಸರು ಮೇ 18ರಂದು ಬಂಧಿಸಿದ್ದರು. ಪ್ರಸ್ತುತ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪರಿಸರ ಪ್ರಕರಣಗಳ ಇತ್ಯರ್ಥಕ್ಕೆ 'ಹಸಿರು ಪೀಠ' ಸ್ಥಾಪಿಸಲು ಮನವಿ

ನವದೆಹಲಿ (ಪಿಟಿಐ): ಪರಿಸರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಮತ್ತು ತ್ವರಿತವಾಗಿ ಇತ್ಯರ್ಥಗೊಳಿಸಲು ಎಲ್ಲ ಹೈಕೋರ್ಟ್‌ಗಳಲ್ಲಿ 'ಹಸಿರು ಪೀಠ'ಗಳನ್ನು ಸ್ಥಾಪಿಸುವಂತೆ ಒತ್ತಾಯಿಸಿ ವಕೀಲರೊಬ್ಬರು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

ವಕೀಲರು ಮತ್ತು ಪರಿಸರ ಹೋರಾಟಗಾರರಾದ ಆಕಾಶ್ ವಸಿಷ್ಠ ಅವರು ಈ ಪತ್ರ ಬರೆದಿದ್ದು, ದೇಶವು ಹಿಂದೆಂದೂ ಕಾಣದ ಪ್ರಕೃತಿ ವಿಕೋಪಗಳಿಗೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದ್ದಾರೆ.

ದೇಶದಲ್ಲಿರುವ ಹೈಕೋರ್ಟ್‌ಗಳಲ್ಲಿ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ತ್ವರಿತ ಮತ್ತು ಪರಿಣಾಮಕಾರಿ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಅವರು ಮನವಿ ಮಾಡಿದ್ದಾರೆ.

ಪ್ರತಿಭಟನೆ ಮಳೆ ನೀರು ನುಗ್ಗಿ ಮೂವರು ವಿದ್ಯಾರ್ಥಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾವ್ಸ್ ಐಎಎಸ್ ಸ್ಟಡಿ ಸರ್ಕಲ್ ವಿರುದ್ಧ ನವದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ತಾಜ್ ಮಹಲ್‌ಗೆ 'ಗಂಗಾಜಲ': ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಲಖನೌ: ಹಿಂದೂ ಸಂಘಟನೆಯಾದ 'ಅಖಿಲ ಭಾರತ ಹಿಂದೂ ಮಹಾಸಭಾ'ದ (ಎಬಿಎಚ್‌ಎಂ) ಇಬ್ಬರು ಕಾರ್ಯಕರ್ತರು ಶನಿವಾರ ತಾಜ್ ಮಹಲ್‌ಗೆ ತೆರಳಿ ನೆಲಮಾಳಿಗೆಯಲ್ಲಿರುವ ಸಮಾಧಿ ಬಳಿ 'ಗಂಗಾಜಲ'ವನ್ನು ಪ್ರೋಕ್ಷಿಸಿದರು. ಈ ಸಂಬಂಧ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ನೀಡಿದ ದೂರಿನ ಮೇರೆಗೆ ಇಬ್ಬರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಸಿಐಎಸ್‌ಎಫ್ ಗಂಗಾಜಲ ಪ್ರೋಕ್ಷಿಸಿದ ಮಹಾಸಭಾದ ವಿನೇಶ್ ಚೌಧರಿ ಹಾಗೂ ಶ್ಯಾಮ್ ಕುಮಾರ್ ಅವರನ್ನು ವಶಕ್ಕೆ ಪಡೆದು, ನಂತರ ಪೊಲೀಸರಿಗೆ ಒಪ್ಪಿಸಿದ್ದಾರೆ. 'ನೆಲಮಾಳಿಗೆ ಇರುವ ಜಾಗದಲ್ಲಿ ಮೊದಲು ಶಿವಮಂದಿರ ಇತ್ತು. ಮಂದಿರವನ್ನು ಕೆಡವಿ ಶಹಜಹಾನ್ ರಾಜ ಮಸೀದಿ ನಿರ್ಮಿಸಿದ್ದಾರೆ' ಎನ್ನುವುದು ಹಿಂದೂ ಕಾರ್ಯಕರ್ತರ ವಾದ. ಈ ಜಾಗವನ್ನು ಅವರು 'ತೇಜೋ ಮಹಾಲಯ' ಎಂದು ಕರೆಯುತ್ತಾರೆ.



ಈ ಕುರಿತು ಪ್ರತಿಕ್ರಿಯಿಸಿದ ಪೊಲೀಸ್ ಆಯುಕ್ತ, 'ಈ ಇಬ್ಬರು ಯುವಕರು ಪ್ರವಾಸಿಗರಂತೆ ತಾಜ್ ಮಹಲ್ ಪ್ರವೇಶಿಸಿದ್ದಾರೆ. ಬಳಿಕ ಆವರಣದಲ್ಲಿ 'ಗಂಗಾಜಲ' ಚಿಮುಕಿಸಿದ್ದಾರೆ. ಈ ಕುರಿತು ಅಲ್ಲಿ ನಿಯೋಜನೆಯಾಗಿರುವ ಸಿಐಎಸ್‌ಎಫ್ ಸಿಬ್ಬಂದಿ ನೀಡಿದ ದೂರಿನ ಮೇರೆಗೆ ಯುವಕರನ್ನು ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ.

ಈ ಸಂಬಂಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಗಂಗಾಜಲವನ್ನು ಪ್ರೋಕ್ಷಣೆ ಮಾಡಿರುವ ವಿಡಿಯೊವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಇಬ್ಬರ ಮೇಲೆಯೂ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ವಿವಿಧ ಹಿಂದೂ ಸಂಘಟನೆಗಳ ಕಾರ್ಯಕರ್ತರು ಶಿವರಾತ್ರಿಯಂದು ಶಿವ ಚಾಲೀಸಾ ಪಠಿಸಿದ್ದರು; ತಾಜ್ ಮಹಲ್ ಒಳಗೆ ಕೇಸರಿ ಧ್ವಜ ಹಾರಿಸಿದ ಘಟನೆಯೂ ಈ ಹಿಂದೆ ನಡೆದಿದೆ.

ಕೃಷಿ ಹವಾಮಾನ ಘಟಕ ಸ್ಥಗಿತ: ಕಾಂಗ್ರೆಸ್ ತರಾಟೆ

ನವದೆಹಲಿ (ಪಿಟಿಐ): ಬ್ಲಾಕ್ ಮಟ್ಟದಲ್ಲಿ ರೈತರಿಗೆ ಹವಾಮಾನ ಸೇವೆಗಳನ್ನು ನೀಡುತ್ತಿದ್ದ 199 ಜಿಲ್ಲಾ ಕೃಷಿ-ಹವಾಮಾನ ಘಟಕಗಳನ್ನು ಸ್ಥಗಿತಗೊಳಿಸಿದ ನಿರ್ಧಾರ ಸಮರ್ಥಿಸಿಕೊಂಡಿರುವ ನೀತಿ ಆಯೋಗದ ವಿರುದ್ಧ ಕಾಂಗ್ರೆಸ್ ಶನಿವಾರ ಕಿಡಿಕಾರಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಅವರು 'ಎಕ್ಸ್'ನಲ್ಲಿ ಮಾಧ್ಯಮ ವರದಿಯೊಂದನ್ನು ಹಂಚಿಕೊಂಡಿದ್ದು, ಸರಿಯಾಗಿ ಕಾರ್ಯನಿರ್ವಹಿಸದ ಕಾರಣ ನೀಡಿ, ಈ ವರ್ಷದ ಮಾರ್ಚ್‌ನಲ್ಲಿ ನೀತಿ ಆಯೋಗವು ಕೃಷಿ ಹವಾಮಾನ ಸಲಹಾ ಕಚೇರಿಗಳನ್ನು ಮುಚ್ಚಿಸಿದೆ ಮತ್ತು ಖಾಸಗೀಕರಣಕ್ಕೆ ಪ್ರಯತ್ನಿಸಿದೆ ಎಂದು ಆರೋಪಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆಯು 199 ಜಿಲ್ಲಾ ಕೃಷಿ ಹವಾಮಾನ ಘಟಕಗಳನ್ನು ಮುಚ್ಚಿದೆ. ಈ ಘಟಕಗಳು ಎಲ್ಲ ರೈತರಿಗೆ ಬ್ಲಾಕ್ ಮಟ್ಟದಲ್ಲಿ ಉಚಿತವಾಗಿ ಬಿತ್ತನೆ, ರಸಗೊಬ್ಬರಗಳ ಬಳಕೆ, ಕೊಯ್ಲು ಮತ್ತು ದಾಸ್ತಾನು ಹಾಗೂ ಇನ್ನಿತರ ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತಿದ್ದವು ಎಂದು ಅವರು ಹೇಳಿದ್ದಾರೆ.

ಪ್ರತಿ ವರ್ಷ ಈ ಘಟಕಗಳಿಗೆ ಸುಮಾರು ₹45 ಕೋಟಿ ವೆಚ್ಚ ಮಾಡಿದ್ದರೆ, ಇವುಗಳಿಂದ ಆದ ಲಾಭ ಸುಮಾರು ₹15,000 ಕೋಟಿ ಎನ್ನುವುದು ತಜ್ಞರ ಲೆಕ್ಕಾಚಾರ. ಈ ಘಟಕಗಳನ್ನು ಸ್ಥಗಿತಗೊಳಿಸಿರುವ ನಿರ್ಧಾರವನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಗುಜರಾತ್‌ನ ಕೃಷಿ ಪವನಶಾಸ್ತ್ರಜ್ಞರ ಸಂಘ ಸೇರಿ ಹಲವಾರು ಪ್ರಮುಖ ಭಾಗಿದಾರರು ವಿರೋಧಿಸಿದ್ದಾರೆ ಎಂದು ಅವರು ಗಮನ ಸೆಳೆದಿದ್ದಾರೆ.

'ಜಿಲ್ಲಾ ಕೃಷಿ–ಹವಾಮಾನ ಘಟಕಗಳ ಸೇವೆಗಳನ್ನು ಖಾಸಗೀಕರಣಗೊಳಿಸಲು ಮತ್ತು ಇದರಿಂದ ಹಣ ಗಳಿಸಲು ನೀತಿ ಆಯೋಗವು ಸೂಚಿಸಿದೆ ಎನ್ನುವುದನ್ನು ಮಾಹಿತಿ ಹಕ್ಕಿನಡಿ ಪಡೆದಿರುವ ದಾಖಲೆಗಳು ಬಹಿರಂಗಪಡಿಸಿವೆ. ವಾಸ್ತವವಾಗಿ, ನೀತಿ ಆಯೋಗವು ತನ್ನ ನಿರ್ಧಾರ ಸಮರ್ಥಿಸಿಕೊಳ್ಳಲು ಅವುಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎನ್ನುವ ಸಬೂಬು ನೀಡಿದೆ. ದತ್ತಾಂಶವು ಸ್ವಯಂಚಾಲಿತವಾಗಿರುವುದರಿಂದ ಘಟಕಗಳನ್ನು ಸ್ಥಗಿತಗೊಳಿಸಿರುವುದಾಗಿ ವಾದಿಸಿದೆ' ಎಂದು ಟೀಕಿಸಿದ್ದಾರೆ.

ಪರಿಶಿಷ್ಟರಿಗೆ ಒಳಮೀಸಲಾತಿ ಕುರಿತ ಪ್ರಕರಣ

ತೀರ್ಪು ವಿರೋಧಿಸಿದ ಎಲ್‌ಜೆಪಿ

ಪಟ್ನಾ (ಪಿಟಿಐ): ಪರಿಶಿಷ್ಟ ಜಾತಿಗಳಿಗೆ (ಎಸ್‌ಸಿ) ನೀಡುವ ಶೇ 15ರಷ್ಟು ಪ್ರಮಾಣದ ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಕೇಂದ್ರ ಸಚಿವ, ಎಲ್‌ಜೆಪಿ ಮುಖ್ಯಸ್ಥ ಚಿರಾಗ್ ಪಾಸ್ವಾನ್ ಶನಿವಾರ ವಿರೋಧಿಸಿದ್ದಾರೆ. ತೀರ್ಪನ್ನು ಮರುಪರಿಶೀಲಿಸುವಂತೆ ಪಕ್ಷವು ಸುಪ್ರೀಂ ಕೋರ್ಟ್ ಅನ್ನು ಕೋರಲಿದೆ ಎಂದಿದ್ದಾರೆ.

ಚಿರಾಗ್ ಪಾಸ್ವಾನ್

ತೀರ್ಪಿನ ಸಂಬಂಧ ಪತ್ರಿಕಾಗೋಷ್ಠಿ ನಡೆಸಿದ ಸಚಿವ ಚಿರಾಗ್, 'ಎಸ್‌ಸಿ ಕೋಟಾದಲ್ಲಿ ಕೆನೆಪದರ ಕಲ್ಪಿಸುವುದನ್ನು ಸಮರ್ಥಿಸಲು ಸಾಧ್ಯವಿಲ್ಲ. ಶತ ಶತಮಾನಗಳಿಂದ ಅಸ್ಪೃಶ್ಯತೆಯನ್ನು ಅನುಭವಿಸಿಕೊಂಡು ಬಂದಿರುವವರ ಅಭ್ಯುದಯದ ಆಶಯದಿಂದ ಎಸ್‌ಸಿ ಸಮುದಾಯಕ್ಕೆ ಮೀಸಲಾತಿಯನ್ನು ನೀಡಲಾಗಿದೆ. ಒಳಮೀಸಲಾತಿ ನೀಡುವುದರಿಂದ ಈ ಆಶಯಕ್ಕೆ ಧಕ್ಕೆ ಆಗಲಿದೆ' ಎಂದು ಚಿರಾಗ್ ಪ್ರತಿಕ್ರಿಯೆ ನೀಡಿದ್ದಾರೆ.

'ಇಡೀ ತೀರ್ಪಿನಲ್ಲಿ ಎಲ್ಲಿಯೂ ಅಸ್ಪೃಶ್ಯತೆ ಎನ್ನುವ ಪದವನ್ನೇ ನ್ಯಾಯಾಲಯ ಉಲ್ಲೇಖಿಸಿಲ್ಲ. ಎಸ್‌ಸಿ ಸಮುದಾಯಕ್ಕೆ ಸೇರಿದ ಬಹುಪಾಲು ಮಂದಿಗೆ ಶಿಕ್ಷಣದ ಅವಕಾಶ ದಕ್ಕಿರಬಹುದು. ತುಸು ಮಟ್ಟಿಗೆ ಅನುಕೂಲಸ್ಥರೂ ಆಗಿರಬಹುದು. ಆದರೆ, ಇವರೂ ಅಸ್ಪೃಶ್ಯತೆಯನ್ನು ಅನುಭವಿಸುತ್ತಾರೆ. ಆದ್ದರಿಂದ, ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರವನ್ನು ಸಮರ್ಥನೆ ಮಾಡಿಕೊಳ್ಳಲಾಗದು' ಎಂದರು.

ಇದೇ ವೇಳೆ ಜೆಡಿಯು ಪಕ್ಷವು ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿದೆ. 'ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಹಲವು ವರ್ಷಗಳ ಹಿಂದೆಯೇ ರಾಜ್ಯದಲ್ಲಿ 'ಮಹಾದಲಿತ' ಎನ್ನುವ ವರ್ಗವನ್ನು ರೂಪಿಸಿದ್ದರು. ಸುಪ್ರೀಂ ಕೋರ್ಟ್‌ನ ಈ ತೀರ್ಪು ನಿತೀಶ್ ಅವರ ಆ ನಿರ್ಧಾರಕ್ಕೆ ಮುದ್ರೆ ಒತ್ತಿದಂತಿದೆ' ಎಂದು ಜೆಡಿಯು ಹೇಳಿಕೊಂಡಿದೆ. ಎನ್‌ಡಿಎ ಮೈತ್ರಿಕೂಟದ ಸದಸ್ಯ ಪಕ್ಷವಾದ ಜೆಡಿಯುದ ಈ ನಡೆ ಕುರಿತು ಚಿರಾಗ್ ಅವರು ಪ್ರತಿಕ್ರಿಯಿಸಲು ನಿರಾಕರಿಸಿದರು.

ಕೆನೆಪದರ: ಅಠವಳೆ ವಿರೋಧ

ಮುಂಬೈ (ಪಿಟಿಐ): ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಗೂ ಕೆನೆಪದರ ನೀತಿ ಅನುಸರಿಸಬಹುದು ಎಂದು ಎಂದು ಸುಪ್ರೀಂ ಕೋರ್ಟ್ ಹೇಳಿರುವುದಕ್ಕೆ ಕೇಂದ್ರ ಸಚಿವ ರಾಮದಾಸ್ ಅಠವಳೆ ವಿರೋಧ ವ್ಯಕ್ತಪಡಿಸಿದ್ದಾರೆ.

ರಾಮದಾಸ್ ಅಠಾವಳೆ

ಪರಿಶಿಷ್ಟ ಜಾತಿಯಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹೆಚ್ಚು ಹಿಂದುಳಿದವರ ಅಭಿವೃದ್ಧಿಯ ಉದ್ದೇಶದಿಂದ ಆ ಜಾತಿಗಳಿಗೆ ಸೇರಿದವರಿಗೆ ಮೀಸಲಾತಿ ಕಲ್ಪಿಸಲು, ಒಳಮೀಸಲು ಮಾಡುವ ಸಾಂವಿಧಾನಿಕ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಐತಿಹಾಸಿಕ ತೀರ್ಪು ಪ್ರಕಟಿಸಿದೆ. ಇದೇ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯಲ್ಲಿ ಕೆನೆಪದರ ನೀತಿ ಅಳವಡಿಸಬಹುದೆಂದೂ ಅಭಿಪ್ರಾಯಪಟ್ಟಿತ್ತು. ಈ ಬೆನ್ನಲ್ಲೇ ಅಠವಳೆ ಈ ಹೇಳಿಕೆ ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅಠವಳೆ ಅವರು, 'ಹಿಂದುಳಿದಿರುವ ಜಾತಿಗಳಿಗೆ ಒಳ ಮೀಸಲು ನ್ಯಾಯವನ್ನು ಕಲ್ಪಿಸುತ್ತದೆ. ಇತರೆ ಹಿಂದುಳಿದ ವರ್ಗ (ಒಬಿಸಿ), ಸಾಮಾನ್ಯ ವರ್ಗದಲ್ಲೂ ಇದೇ ರೀತಿಯ ಒಳಮೀಸಲು ಬೇಕು' ಎಂದು ಹೇಳಿದರು.

ಅಮಿತ್ ಶಾ ವಿರುದ್ಧ ಹಕ್ಕುಚ್ಯುತಿ ಮಂಡಿಸಿದ ಕಾಂಗ್ರೆಸ್

ಗೃಹ ಇಲಾಖೆ: ಚರ್ಚೆಗೆ 'ಇಂಡಿಯಾ' ಪಟ್ಟು?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಭೂಕುಸಿತ ವಿಚಾರವಾಗಿ ಸದನದ ದಾರಿ ತಪ್ಪಿಸಿದ ಆರೋಪ
- ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆ ಬಗ್ಗೆ ಚರ್ಚೆಗೆ ವಿಪಕ್ಷಗಳ ಪಟ್ಟು?

ನವದೆಹಲಿ: ಗೃಹ ಸಚಿವ ಅಮಿತ್ ಶಾ ಅವರ ಸಚಿವಾಲಯದ ಕಾರ್ಯವೈಖರಿ ಕುರಿತು ರಾಜ್ಯಸಭೆಯಲ್ಲಿ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಮುಂದಿಟ್ಟಿರುವ ಬೇಡಿಕೆಯನ್ನು ನಿರಾಕರಿಸಲಾಗಿದೆ. ಆದರೆ, ಇದೇ ವಿಷಯವನ್ನು ಸೋಮವಾರದ ಕಲಾಪದಲ್ಲಿ ಮತ್ತೆ ಪ್ರಸ್ತಾಪಿಸಲು 'ಇಂಡಿಯಾ' ಸಿದ್ಧತೆ ನಡೆಸಿದೆ.

ಗೃಹ ಸಚಿವಾಲಯದ ಬದಲು ಅಮಿತ್ ಶಾ ನಿರ್ವಹಿಸುತ್ತಿರುವ ಮತ್ತೊಂದು ಖಾತೆಯಾದ ಸಹಕಾರ ಸಚಿವಾಲಯದ ಕುರಿತು ಸೋಮವಾರದ ಕಲಾಪದಲ್ಲಿ ಚರ್ಚಿಸಲು ರಾಜ್ಯಸಭೆಯ ಕಲಾಪ ಪಟ್ಟಿಯಲ್ಲಿ ಸೇರಿಸಲಾಗಿದೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ತಮ್ಮ ಸಚಿವಾಲಯಕ್ಕೆ ಸಂಬಂಧಿಸಿದ ಚರ್ಚೆಗೆ ಉತ್ತರ ನೀಡಿದ ನಂತರ ಸಹಕಾರ ಸಚಿವಾಲಯದ ವಿಷಯ ಚರ್ಚೆಗೆ ಬರಲಿದೆ.

'ಇಂಡಿಯಾ'ದ ಬೇಡಿಕೆ ತಿರಸ್ಕರಿಸಿರುವುದನ್ನು ಸೋಮವಾರದ ಕಲಾಪದಲ್ಲಿ ಬಲವಾಗಿ ಖಂಡಿಸಲಾಗುವುದು ಎಂದು ವಿರೋಧ ಪಕ್ಷದ ನಾಯಕರೊಬ್ಬರು ಹೇಳಿದರು. ರಾಜ್ಯಸಭೆಯ ನಿರ್ಧಾರವನ್ನು ಖಂಡಿಸಿ ಸಭಾಪತಿ ಜಗದೀಪ್ ಧನಕರ್ ಅವರಿಗೆ ಮತ್ತೊಮ್ಮೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಗೃಹ ಸಚಿವಾಲಯದ ಕಾರ್ಯವೈಖರಿ ಕುರಿತ ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿ 'ಇಂಡಿಯಾ' ಒಕ್ಕೂಟದ ಪಕ್ಷಗಳು ಮತ್ತು ಬಿಜೆಡಿ ಗುರುವಾರ ಧನಕರ್ ಅವರಿಗೆ ಪತ್ರ ಬರೆದಿದ್ದವು.

ಟಿಎಂಸಿ ನಾಯಕ ಡೆರಿಕ್ ಒಬ್ರಿಯಾನ್ ಅವರು, 'ರಾಜ್ಯಸಭೆಯಿಂದ ನಾವು ಇದನ್ನು ನಿರೀಕ್ಷಿಸಿರಲಿಲ್ಲ. ರಕ್ಷಣಾ ಸಚಿವಾಲಯ ಮತ್ತು ಗೃಹ ಸಚಿವಾಲಯದ ಕಾರ್ಯವೈಖರಿ ಕುರಿತು ಚರ್ಚೆ ನಡೆಸುವಂತೆ ಕೋರಿದ್ದೆವು. ಆದರೆ, ಚರ್ಚೆಯಿಂದ ಸರ್ಕಾರ ದೂರ ಸರಿದಿದೆ' ಎಂದು ಹೇಳಿದರು.

ವಿರೋಧ ಪಕ್ಷಗಳು ಸೋಮವಾರದ ಕಲಾಪದಲ್ಲಿ ಮಣಿಪುರ ಹಿಂಸಾಚಾರ, ಜಮ್ಮು–ಕಾಶ್ಮೀರದಲ್ಲಿ ಉಗ್ರರ ದಾಳಿ, ಜನಗಣತಿ–2021ರ ವಿಳಂಬ, ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆ ಬಗ್ಗೆ ಚರ್ಚಿಸಲು ಪಟ್ಟು ಹಿಡಿಯಲಿವೆ ಎಂದು ಮೂಲಗಳು ತಿಳಿಸಿವೆ.

ವಯನಾಡ್ ಭೂಕುಸಿತ ವಿಚಾರವಾಗಿ ಸದನದ ದಾರಿ ತಪ್ಪಿಸಿದ ಆರೋಪದ ಮೇಲೆ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದೆ. ಈ ವಿಚಾರವಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲೂ ಸಿದ್ಧತೆ ನಡೆಸಿದೆ ಎಂದು ತಿಳಿಸಿವೆ.

ಲೋಕಸಭೆಯಲ್ಲಿ ಸೋಮವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ವಸತಿ ಮತ್ತು ನಗರಾಭಿವೃದ್ಧಿ, ಮೀನುಗಾರಿಕೆ, ಪಶುಸಂಗೋಪನೆ ಸಚಿವಾಲಯಗಳ ಬಗ್ಗೆ ಚರ್ಚೆ ನಡೆಯಲಿದೆ.

ಅಪಹರಣ ಆರೋಪ: ಮುಸ್ಲಿಂ ವ್ಯಕ್ತಿ ಮನೆಗೆ ಬೆಂಕಿ

ಬರೇಲಿ (ಪಿಟಿಐ): ತಮ್ಮ ಸಮುದಾಯದ ಮಹಿಳೆಯನ್ನು ಅಪಹರಿಸಿದ್ದಾರೆಂದು ಮುಸ್ಲಿಂ ವ್ಯಕ್ತಿಯೊಬ್ಬರ ಮನೆಯನ್ನು ಧ್ವಂಸ ಮಾಡಿ, ಬೆಂಕಿಹಚ್ಚಿರುವುದು ಉತ್ತರ ಪ್ರದೇಶದ ಬರೇಲಿಯ ಚಂದೂಪುರ ಶಿವನಗರ ಗ್ರಾಮದಲ್ಲಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

ಘಟನೆ ಬಗ್ಗೆ ಗೊತ್ತಾಗುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ್ದ ಪೊಲೀಸರ ಮೇಲೂ ಉದ್ರಿಕ್ತ ಸ್ಥಳೀಯರ ಗುಂಪು ದಾಳಿ ನಡೆಸಿತ್ತು ಎಂದು ಹೇಳಿದರು.

ಈ ಪ್ರಕರಣಕ್ಕೆ ಸಂಬಂಧಿಸಿ, ನಿರ್ಲಕ್ಷ್ಯ ಆರೋಪದ ಮೇಲೆ ಶಿರೌಲಿ ಠಾಣೆಯ ಠಾಣಾಧಿಕಾರಿ, ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಬರೇಲಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅನುರಾಗ್ ಆರ್ಯ ಅವರು, 'ಮೈಕು ಲಾಲ್ ಅವರ 20 ವರ್ಷ ವಯಸ್ಸಿನ ಮಗಳು ಮತ್ತು 21 ವರ್ಷ ವಯಸ್ಸಿನ ಸದ್ದಾಂ ಅವರು ನಾಪತ್ತೆಯಾಗಿದ್ದರು. ಆಗಸ್ಟ್ 1ರಂದು ಅವರನ್ನು ಪತ್ತೆ ಮಾಡಲಾಯಿತು. ಮಹಿಳೆಯ ತಂದೆ ಮತ್ತು ಗ್ರಾಮಸ್ಥರ ಕೋರಿಕೆ ಮೇರೆಗೆ ಆಕೆಯನ್ನು ಅವರಿಗೆ ಹಸ್ತಾಂತರಿಸಲಾಗಿತ್ತು. ವಿಚಾರಣೆಗಾಗಿ ಸದ್ದಾಂನನ್ನು ವಶಕ್ಕೆ ಪಡೆಯಲಾಗಿತ್ತು' ಎಂದು ಅವರು ತಿಳಿಸಿದರು.

ಈ ಮಧ್ಯೆ ಶುಕ್ರವಾರ ರಾತ್ರಿ ದುಷ್ಕರ್ಮಿಗಳು ಸದ್ದಾಂ ಅವರ ನಿವಾಸವನ್ನು ಧ್ವಂಸ ಮಾಡಿದ್ದಾರೆ. ನಂತರ ಬೆಂಕಿ ಹಚ್ಚಿದ್ದಾರೆ ಎಂದು ತಿಳಿಸಿದರು.

ಘಟನೆ ಬೆನ್ನಲ್ಲೇ ಎರಡೂ ಕಡೆಯಿಂದ ಎಫ್‌ಐಆರ್ ದಾಖಲಾಗಿದೆ. ಚಂದೂಪುರ ಶಿವನಗರದಲ್ಲಿ ಸದ್ಯ ಪರಿಸ್ಥಿತಿಯು ನಿಯಂತ್ರಣದಲ್ಲಿದೆ. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್: ಪ್ಯಾರಿಸ್‌ಗೆ ತೆರಳಲು ಪಂಜಾಬ್ ಸಿ.ಎಂಗೆ ಅನುಮತಿ ನಿರಾಕರಣೆ

ಚಂಡೀಗಢ (ಪಿಟಿಐ): ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಹಾಕಿ ತಂಡವನ್ನು ಬೆಂಬಲಿಸುವ ಉದ್ದೇಶದಿಂದ ಪ್ಯಾರಿಸ್‌ಗೆ ಭೇಟಿ ನೀಡಲು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ನಿರ್ಧರಿಸಿದ್ದು, ಇದಕ್ಕೆ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದೆ ಎಂದು ಅಧಿಕೃತ ಮೂಲವೊಂದು ತಿಳಿಸಿದೆ.

ಆಗಸ್ಟ್ ನಾಲ್ಕರಂದು ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಬೆಂಬಲಿಸಲಿಕ್ಕಾಗಿ, ಆ.3ರಿಂದ 9ರವರೆಗೆ ಪ್ಯಾರಿಸ್‌ಗೆ ಭೇಟಿ ನೀಡಲು ಅನುಮತಿ ನೀಡುವಂತೆ ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಿರುವ ಮಾನ್ ಮನವಿ ಮಾಡಿದ್ದರು.

ಮಾನ್ ಅವರು ಝಡ್ ಪ್ಲಸ್ ಭದ್ರತೆ ಹೊಂದಿದ್ದಾರೆ. ಅಲ್ಪಾವಧಿಯಲ್ಲಿ ಇದನ್ನು ವ್ಯವಸ್ಥೆ ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಶುಕ್ರವಾರ ಸಂಜೆ ಮುಖ್ಯಮಂತ್ರಿ ಕಚೇರಿಗೆ ಈ ಕುರಿತಂತೆ ಮಾಹಿತಿ ನೀಡಲಾಗಿದೆ ಎಂದು ರಾಜ್ಯ ಸರ್ಕಾರದ ಮೂಲಗಳು ತಿಳಿಸಿವೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ವಿಜೇತವಾಗಿದ್ದ ಆಸ್ಟ್ರೇಲಿಯಾ ತಂಡವನ್ನು ಭಾರತ ತಂಡವು ಮಣಿಸಿದೆ. 1972ರ ಬಳಿಕ ಐತಿಹಾಸಿಕ ಗೆಲುವು ದಾಖಲಿಸಿದೆ.

'ಆಸ್ಟ್ರೇಲಿಯಾವನ್ನು 3–2 ಗೋಲುಗಳಿಂದ ಮಣಿಸಿದ್ದು ಹೆಮ್ಮೆಯ ವಿಷಯ. ಮಹತ್ವದ ಪಂದ್ಯದಲ್ಲಿ ಎರಡು ಗೋಲು ಗಳಿಸುವ ಮೂಲಕ ಹರ್ಮನ್‌ಪ್ರೀತ್ ಸಿಂಗ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು' ಎಂದು ಮಾನ್ ಅಭಿನಂದನೆ ಸಲ್ಲಿಸಿದ್ದಾರೆ.

ಬಾಲಕ ಚಲಾಯಿಸುತ್ತಿದ್ದ ಎಸ್‌ಯುವಿ ಡಿಕ್ಕಿ ಮಹಿಳೆ ಸಾವು

ಕಾನ್ಪುರ (ಪಿಟಿಐ): 17 ವರ್ಷದ ಬಾಲಕನೊಬ್ಬ ಅತಿ ವೇಗವಾಗಿ ಎಸ್‌ಯುವಿ ಚಾಲನೆ ಮಾಡಿ, ಸ್ಕೂಟಿಗೆ ಡಿಕ್ಕಿ ಹೊಡೆದ ಪರಿಣಾಮ 42 ವರ್ಷದ ಮಹಿಳೆ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಮಹಿಳೆಯ 13 ವರ್ಷದ ಪುತ್ರಿಗೆ ತೀವ್ರಗಾಯಗಳಾಗಿವೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ ಪ್ರಕರಣ ದಾಖಲಾಗಿದೆ. ಕಾರು ಚಲಾಯಿಸುತ್ತಿದ್ದ ಬಾಲಕ 12ನೇ ತರಗತಿ ವಿದ್ಯಾರ್ಥಿಯಾಗಿದ್ದು, ಘಟನೆ ನಡೆದ ಸಂದರ್ಭದಲ್ಲಿ ಕಾರಿನಲ್ಲಿ ಆತನ ಮೂವರು ಸಹಪಾಠಿಗಳು ಇದ್ದರು. ಅಪಘಾತದ ಬಳಿಕ ಆತನ ಸಹಪಾಠಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಬಾಲಕನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಆತನ ತಂದೆಯನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಬಾಲಕನ ಬಳಿ ವಾಹನ ಚಾಲನಾ ಪರವಾನಗಿ ಇರಲಿಲ್ಲ. ಪ್ರಾಥಮಿಕ ತನಿಖೆಯ ಪ್ರಕಾರ, ಬಾಲಕನು ತನ್ನ ಸ್ನೇಹಿತರ ಜತೆ ಕಾರಿನಲ್ಲಿ ಸಾಹಸ ಮಾಡಲು ಯತ್ನಿಸುತ್ತಿದ್ದ' ಎಂದು ಡಿಸಿಪಿ (ದಕ್ಷಿಣ) ರವೀಂದ್ರ ಕುಮಾರ್ ಮಾಹಿತಿ ನೀಡಿದ್ದಾರೆ.

'ತನ್ನ ಗಮನಕ್ಕೆ ತಾರದೆ ಮಗ ಕಾರನ್ನು ಚಲಾಯಿಸಲು ತೆಗೆದುಕೊಂಡು ಹೋಗಿದ್ದ' ಎಂದು ಬಾಲಕನ ತಂದೆ ಹೇಳಿಕೆ ನೀಡಿರುವುದಾಗಿ ಡಿಸಿಪಿ ತಿಳಿಸಿದ್ದಾರೆ.

ಘಟನಾ ಸ್ಥಳದಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಅಪಘಾತದ ದೃಶ್ಯ ಸೆರೆಯಾಗಿದೆ. ಮಗಳನ್ನು ಹಿಂಬದಿ ಕೂರಿಸಿಕೊಂಡು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಮಹಿಳೆ, ವಾಹನವನ್ನು ಬಲಕ್ಕೆ ತಿರುಗಿಸಲು ಯತ್ನಿಸಿದಾಗ, ಎದುರುಗಡೆಯಿಂದ ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಮೃತ ಮಹಿಳೆಯನ್ನು ಭಾವನಾ ಮಿಶ್ರಾ (42) ಎಂದು ಗುರುತಿಸಲಾಗಿದೆ. ತೀವ್ರ ಗಾಯಗೊಂಡಿರುವ ಬಾಲಕಿ ಮೇಘವಿ ಮಿಶ್ರಾ (13) ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಎನ್‌ಟಿಎ ವೆಬ್‌ಸೈಟ್‌ನಲ್ಲಿ ಹೆಚ್ಚಿನ ಮಾಹಿತಿ ಏಕಿಲ್ಲ?'

ನವದೆಹಲಿ (ಪಿಟಿಐ): ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ವೆಬ್‌ಸೈಟ್‌ನಲ್ಲಿ ಸಂಸ್ಥೆಯ ಕುರಿತು ಅಗತ್ಯ ಮಾಹಿತಿ ಏಕೆ ಇಲ್ಲ ಎಂದು ಪ್ರಶ್ನಿಸಿ ರಾಜ್ಯಸಭೆಯ ಟಿಎಂಸಿ ಸದಸ್ಯೆ ಸಾಗರಿಕಾ ಘೋಷ್ ಅವರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದಿದ್ದಾರೆ.

ನೃತ್ಯ ಕಲಾವಿದೆ ಯಾಮಿನಿ ಕೃಷ್ಣಮೂರ್ತಿ ನಿಧನ

ನವದೆಹಲಿ (ಪಿಟಿಐ): ಭರತನಾಟ್ಯ ಮತ್ತು ಕೂಚುಪುಡಿಯ ಹೆಸರಾಂತ ನೃತ್ಯ ಕಲಾವಿದೆ ಯಾಮಿನಿ ಕೃಷ್ಣಮೂರ್ತಿ (84) ಅವರು ಇಲ್ಲಿನ ಅಪೊಲೊ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ವಯೋ ಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು ಏಳು ತಿಂಗಳಿಂದ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದರು ಎಂದು ಅವರ ಕಾರ್ಯದರ್ಶಿ ಗಣೇಶ್ ತಿಳಿಸಿದ್ದಾರೆ. ಯಾಮಿನಿ ಅವರಿಗೆ ಇಬ್ಬರು ಸಹೋದರಿಯರಿದ್ದಾರೆ.

ಯಾಮಿನಿ ಅವರ ಪಾರ್ಥಿವ ಶರೀರವನ್ನು ದೆಹಲಿಯ ಹೌಜ್ ಖಾಸ್‌ನಲ್ಲಿನ 'ಯಾಮಿನಿ ಸ್ಕೂಲ್ ಆಫ್ ಡಾನ್ಸ್'ಗೆ ಭಾನುವಾರ ಬೆಳಿಗ್ಗೆ 9ಕ್ಕೆ ತರಲಾಗುವುದು ಎಂದು ಅವರು ಹೇಳಿದರು.

ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿಯಲ್ಲಿ 1940ರ ಡಿಸೆಂಬರ್ 20ರಂದು ಅವರು ಜನಿಸಿದ್ದರು. ಸಂಸ್ಕೃತ ವಿದ್ವಾಂಸ ಎಂ. ಕೃಷ್ಣಮೂರ್ತಿ ಅವರ ತಂದೆ. ಅವರು ಐದನೇ ವಯಸ್ಸಿನಿಂದಲೇ ಭರತನಾಟ್ಯ ಕಲಿಕೆಯಲ್ಲಿ ತೊಡಗಿದ್ದರು.

ಯಾಮಿನಿ ಅವರು 28ನೇ ವಯಸ್ಸಿನಲ್ಲಿದ್ದಾಗಲೇ 1968ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತರಾಗಿದ್ದರು. 2001ರಲ್ಲಿ ಪದ್ಮಭೂಷಣ, 2016ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಗಳು ಅವರಿಗೆ ಸಂದಿವೆ. 1977ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಅವರು ಭಾಜನರಾಗಿದ್ದರು.

ಮಾದಕವಸ್ತು–ಭಯೋತ್ಪಾದನಾ ಜಾಲದಲ್ಲಿ ತೊಡಗಿದ್ದ ಉದ್ಯೋಗಿಗಳು

ಆರು ಮಂದಿ ಸರ್ಕಾರಿ ಉದ್ಯೋಗಿಗಳು ವಜಾ

ಪ್ರಜಾವಾಣಿ ವಾರ್ತೆ

ಶ್ರೀನಗರ: ಮಾದಕವಸ್ತುಗಳ ಸಾಗಣೆ ಜಾಲದಲ್ಲಿ ಭಾಗಿಯಾಗಿದ್ದ ಆರು ಮಂದಿ ಸರ್ಕಾರಿ ಉದ್ಯೋಗಿಗಳನ್ನು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಶನಿವಾರ ಕೆಲಸದಿಂದ ವಜಾ ಮಾಡಿದ್ದಾರೆ. ಈ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ಹೆಚ್ಚುತ್ತಿರುವ ಮಾದಕವಸ್ತು ಸಾಗಾಟದಾರರು–ಭಯೋತ್ಪಾದಕರ ಜಾಲವನ್ನು ನಿಗ್ರಹಿಸುವ ಮಹತ್ವದ ಕಾರ್ಯಕ್ಕೆ ಮುಂದಾಗಿದ್ದಾರೆ.

ಈ ಜಾಲಕ್ಕೆ ಸಂಬಂಧಿಸಿ ಜುಲೈ ತಿಂಗಳೊಂದರಲ್ಲಿಯೇ ಒಟ್ಟು ಎಂಟು ಮಂದಿ ಸರ್ಕಾರಿ ಉದ್ಯೋಗಿಗಳನ್ನು ವಜಾ ಮಾಡಲಾಗಿದೆ. ಈ ಜಾಲವನ್ನು ತೊಡೆದು ಹಾಕುವುದಕ್ಕಾಗಿ ಹಲವು ವರ್ಷಗಳ ಹಿಂದೆ ರೂಪಿಸಲಾಗಿದ್ದ 'ಗಡಿ ತಂತ್ರ' ಯೋಜನೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಇಲಾಖೆಯ ಐದು ಮಂದಿ ಹಾಗೂ ಒಬ್ಬ ಶಿಕ್ಷಕನನ್ನು ಶನಿವಾರ ವಜಾ ಮಾಡಲಾಗಿದೆ.

ಪಾಕಿಸ್ತಾನ ಹಾಗೂ ಐಎಸ್‌ಐ ಸಂಘಟನೆಯು ಭಾರತದಲ್ಲಿ ನಡೆಸುತ್ತಿದ್ದ ಈ ಜಾಲದಲ್ಲಿ ಈ ಆರು ಮಂದಿ ಶಾಮೀಲಾಗಿದ್ದರ ಕುರಿತು ತನಿಖೆ ನಡೆಸಲಾಗಿತ್ತು. ಆ ಬಳಿಕವೇ ಅವರನ್ನು ವಜಾ ಮಾಡಲಾಗಿದೆ. ಭಾರತ ಸಂವಿಧಾನದ ವಿಧಿ 311(2) (ಸಿ) ಅನ್ನು ಬಳಸಿ ಈ ಕ್ರಮ ಕೈಗೊಳ್ಳಲಾಗಿದೆ.

'ಮಾದಕವಸ್ತು ಕಳ್ಳಸಾಗಣೆಯಿಂದ ಬಂದ ಹಣದಲ್ಲಿ ಒಂದೂ ರೂಪಾಯಿಯನ್ನೂ ಬಿಡದಂತೆ ಎಲ್ಲವನ್ನೂ ವಶಕ್ಕೆ ಪಡೆಯಲಾಗುವುದು. ಹಣ ಮಾಡಿಕೊಂಡವರು ಸಾರ್ವಜನಿಕರಿರಬಹುದು ಅಥವಾ ಸರ್ಕಾರಿ ಉದ್ಯೋಗಿ ಅಥವಾ ಪೊಲೀಸ್ ಆಗಿರಬಹುದು. ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ' ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಮುಖ್ಯಸ್ಥ ಆರ್.ಆರ್. ಸ್ವೈನ್ ಅವರು ತಿಳಿಸಿದರು.

ಯಾರ ಮೇಲೆ ಯಾವ ಆರೋಪ...

ಕಾನ್‌ಸ್ಟೆಬಲ್ ಫಾರೂಕ್ ಅಹಮದ್ ಶೇಕ್: ಮಾದಕವಸ್ತುಗಳನ್ನು ಪಾಕಿಸ್ತಾನದಿಂದ ಜಮ್ಮು ಮತ್ತು ಕಾಶ್ಮೀರದ ನಗರ ಪ್ರದೇಶಗಳಿಗೆ ಮೂವರು ಕಳ್ಳಸಾಗಣೆ ಮಾಡುತ್ತಿದ್ದರು.

ಕಾನ್‌ಸ್ಟೆಬಲ್ ಖಾಲಿದ್ ಹುಸೇನ್ ಶಾ: ಮಾದಕವಸ್ತು ಕಳ್ಳಸಾಗಣೆ ನಡೆಸಲು ಖಾಲಿದ್ ತಮ್ಮ ಪೊಲೀಸ್ ಹುದ್ದೆಯನ್ನು ಬಳಸಿಕೊಂಡಿದ್ದಾರೆ. ಇವರ ಬಳಿಯೂ 557 ಗ್ರಾಂ ಬ್ರೌನ್‌ಶುಗರ್ ಇತ್ತು.

ಕಾನ್‌ಸ್ಟೆಬಲ್ ರಹಮತ್ ಶಾ: ಇವರಿಂದ 806 ಗ್ರಾಂ ಬ್ರೌನ್‌ಶುಗರ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕಾನ್‌ಸ್ಟೆಬಲ್ ಇರ್ಷಾದ್: 'ಲಶ್ಕರ್ ಎ ತಯಬಾ' ಉಗ್ರ ಸಂಘಟನೆಯ ಭಯೋತ್ಪಾದಕರಿಗೆ ಸಾರಿಗೆ, ವಸತಿಯನ್ನು ಕಲ್ಪಿಸುತ್ತಿದ್ದ ಜೊತೆಗೆ ಹಣವನ್ನೂ ಪೂರೈಸುತ್ತಿದ್ದರು. ಇವರ ಬಳಿಯಿಂದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಾನ್‌ಸ್ಟೆಬಲ್ ಸೈಫ್: 'ಹಿಜ್ಬುಲ್ ಮುಜಾಹಿದೀನ್' ಉಗ್ರ ಸಂಘಟನೆಯೊಂದಿಗೆ ಸಂಪರ್ಕವಿದ್ದ ಮಾದಕ ವಸ್ತು ಸಾಗಾಟದಾರ. ಮಾದಕವಸ್ತು ಕಳ್ಳಸಾಗಣೆಯಿಂದ ಬಂದ ಹಣವನ್ನು ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಸುತ್ತಿದ್ದರು. ಇವರ ಬಂಧನದ ವೇಳೆ ಹವಾಲಾ ಮೂಲಕ ಹಣ ವರ್ಗಾವಣೆ ಮಾಡಿದ್ದಕ್ಕೆ ಸಂಬಂಧಿಸಿ ಸಾಕ್ಷ್ಯ ದೊರೆತಿದೆ.

ಶಿಕ್ಷಕ ನಜಮ್ ದಿನ್: ಸರ್ಕಾರಿ ಶಾಲೆಯ ಶಿಕ್ಷಕ. 'ಹಿಜ್ಬುಲ್ ಮುಜಾಹಿದೀನ್' ಉಗ್ರ ಸಂಘಟನೆಗಾಗಿ ಸಾರಿಗೆ, ವಸತಿ ವ್ಯವಸ್ಥೆ ಕಲ್ಪಿಸುವ ವ್ಯಕ್ತಿಯಿಂದ ಹಣ ಪಡೆದುಕೊಂಡು ಭಯೋತ್ಪಾದನಾ ಚಟುವಟಿಕೆಗೆ ಬಳಸಿದ್ದಾರೆ. ಬಂಧನದ ವೇಳೆ ಇವರಿಂದ ಐದು ಕೆ.ಜಿ ಹೆರಾಯಿನ್ ವಶಪಡಿಸಿಕೊಳ್ಳಲಾಗಿದೆ.

ಸಂಸತ್ತಿನಲ್ಲಿ ಭದ್ರತಾ ಲೋಪ ಆರೋಪ ಪಟ್ಟಿ ಕೋರ್ಟ್ ಗಣನೆಗೆ

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಸಲ್ಲಿಸಿರುವ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ದೆಹಲಿ ನ್ಯಾಯಾಲಯ ಶನಿವಾರ ಪರಿಗಣನೆಗೆ ತೆಗೆದುಕೊಂಡಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ಎಲ್ಲ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ಪಡೆದ ಬಳಿಕ, ಪೊಲೀಸರು ಹೆಚ್ಚುವರಿ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ಈ ಆರೋಪ ಪಟ್ಟಿಯನ್ನು ಪರಿಗಣನೆಗೆ ತೆಗೆದುಕೊಂಡ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ದೀಪ್ ಕೌರ್ ಅವರು, ಈ ಪ್ರಕರಣದಲ್ಲಿ ಆರು ಆರೋಪಿಗಳ ವಿರುದ್ಧ ಹಲವು ಸಾಕ್ಷ್ಯಾಧಾರಗಳು ಇವೆ ಎಂದು ಹೇಳಿದರು.

ನ್ಯಾಯಾಂಗ ಬಂಧನ ವಿಸ್ತರಣೆ: ಆರೋಪಿಗಳಾದ ಡಿ. ಮನೋರಂಜನ್, ಲಲಿತ್ ಝಾ, ಅಮೋಲ್ ಶಿಂದೆ, ಮಹೇಶ್ ಕುಮಾವತ್, ಸಾಗರ್ ಶರ್ಮಾ ಮತ್ತು ನೀಲಂ ಆಜಾದ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸೆಪ್ಟೆಂಬರ್ 9ರವರೆಗೆ ವಿಸ್ತರಿಸಿ ನ್ಯಾಯಾಧೀಶರು ಆದೇಶಿಸಿದರು. ಅಂದು ಪ್ರಕರಣದ ವಿಚಾರಣೆಯೂ ನಡೆಯಲಿದೆ.

ಈ ಆರು ಆರೋಪಿಗಳ ವಿರುದ್ಧ ಪೊಲೀಸರು ಜೂನ್ 7ರಂದು ಸುಮಾರು 1000 ಪುಟಗಳ ಆರೋಪ ಪಟ್ಟಿ ಸಲ್ಲಿಸಿದ್ದರು.

ಸಂಸತ್ ಮೇಲಿನ ದಾಳಿ ಪ್ರಕರಣದ ಸ್ಮರಣೆಯ ಸಂದರ್ಭದಲ್ಲಿ ಸಾಗರ್ ಶರ್ಮಾ ಮತ್ತು ಡಿ.ಮನೋರಂಜನ್ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದಿದ್ದರು. ಘೋಷಣೆಗಳನ್ನು ಕೂಗುತ್ತಾ 'ಸ್ಮೋಕ್ ಕ್ಯಾನ್' ಹಾರಿಸಿ ದಾಂದಲೆ ಎಬ್ಬಿಸಿದ್ದರು. ಅದೇ ಸಮಯಕ್ಕೆ ಸಂಸತ್ ಭವನದ ಹೊರಗೆ ಅಮೋಲ್ ಶಿಂದೆ ಮತ್ತು ನೀಲಂ ಆಜಾದ್ ಬಣ್ಣದ ಹೊಗೆ ಹಾರಿಸಿ ಘೋಷಣೆ ಕೂಗಿದ್ದರು.

ಮನಮಿಡಿದ ನಾಡಿನಲ್ಲಿ ಸೌಹಾರ್ದದ 'ಸಂಸ್ಕಾರ'

ವಯನಾಡ್ ಜಿಲ್ಲೆಯಲ್ಲಿ ಭೂಕುಸಿತ ನಡೆದ ಸ್ಥಳದಲ್ಲಿ ರಕ್ಷಣಾ ತಂಡದ ಸದಸ್ಯರು ಶನಿವಾರ ಮೃತದೇಹಗಳಿಗಾಗಿ ಶೋಧ ಕಾರ್ಯ ನಡೆಸಿದರು –ಪಿಟಿಐ ಚಿತ್ರ

• ವಿಕ್ರಂ ಕಾಂತಿಕೆರೆ

ದುರಂತದ ನೆಲದಿಂದ

ಮೇಪ್ಪಾಡಿ (ವಯನಾಡ್ ಜಿಲ್ಲೆ): ನಾಲ್ಕು ಗ್ರಾಮಗಳನ್ನು ಸರ್ವನಾಶ ಮಾಡಿದ ಗುಡ್ಡ ಕುಸಿತ ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಅಂತ್ಯಸಂಸ್ಕಾರ, ದುರಿತ–ದುಃಖದ ನಡುವೆ ಧಾರ್ಮಿಕ ಸೌಹಾರ್ದಕ್ಕೆ ಸಾಕ್ಷಿಯಾಗಿದೆ.

ಮುನ್ನೂರಕ್ಕೂ ಅಧಿಕ ಮಂದಿಯ ಜೀವವನ್ನೂ ಅದಕ್ಕಿಂತಲೂ ಹೆಚ್ಚು ಮಂದಿಯ ಜೀವನವನ್ನೂ ಕಸಿದ ದುರಂತದಲ್ಲಿ ಮಡಿದವರ ಅಂತ್ಯಸಂಸ್ಕಾರ ಮೇಪ್ಪಾಡಿ ಪಟ್ಟಣದ ಆರುನೂರು ಮೀಟರ್ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ನಡೆಯುತ್ತಿದೆ. ರುದ್ರಭೂಮಿ, ಕಬರಸ್ತಾನ ಮತ್ತು ಚರ್ಚ್‌ನ ಸ್ಮಶಾನದಲ್ಲಿ ಆಯಾ ಸಮುದಾಯದವರ ಸಂಸ್ಕಾರ ನಡೆಯುತ್ತಿದ್ದರೂ ಉಳಿದುಕೊಳ್ಳುವ ಜಾಗ, ಅನ್ನ–ಆಹಾರ, ನೆರವು ಇತ್ಯಾದಿಗಳಿಗೆ ಧರ್ಮದ ಗಡಿ ಇಲ್ಲ.

ಹಿಂದೂ ಪದ್ಧತಿಯಂತೆ ಸಂಸ್ಕಾರ ಮಾಡಲು ಮೇಪ್ಪಾಡಿ ಪಟ್ಟಣದಲ್ಲಿರುವ ಮಾರಿಯಮ್ಮ ದೇವಸ್ಥಾನಕ್ಕೆ ಸೇರಿದ ಜಾಗವನ್ನು ಸಜ್ಜುಗೊಳಿಸಲಾಗಿದೆ. ಈ ಸ್ಮಶಾನ ದುರಂತದಲ್ಲಿ ಮಡಿದವರಿಗಾಗಿಯೇ ದಿಢೀರ್ ಸಜ್ಜುಗೊಂಡಿದೆ. ಇದರ ಸಮೀಪದಲ್ಲೇ ಇದೆ, ಸಿಎಸ್‌ಐ ಹೋಲಿ ಇಮ್ಯಾನುಯೆಲ್ ಚರ್ಚ್. ಅಲ್ಲಿ ಕ್ರೈಸ್ತರ ಸಿಎಸ್‌ಐ ಪಂಗಡದವರ ಸಂಸ್ಕಾರ ಮಾಡಲಾಗುತ್ತದೆ. ಕ್ಯಾಥೊಲಿಕ್ ಮತ್ತು ಆರ್ಥೊಡಾಕ್ಸ್ ಪದ್ಧತಿಯವರ ಸಂಸ್ಕಾರ ಚೂರಲ್‌ಮಲ ಚರ್ಚ್ ಪ್ರದೇಶದಲ್ಲಿ ಮಾಡಲಾಗುತ್ತಿದೆ. ಮಾರಿಯಮ್ಮ ದೇವಸ್ಥಾನದ ಒಂದು ಎಕರೆಯಷ್ಟು ಜಾಗವನ್ನು ಸಂಸ್ಕಾರಕ್ಕಾಗಿ ಬಿಟ್ಟುಕೊಡಲಾಗಿದೆ. ಇಲ್ಲಿ ಕೆಲಸ ಮಾಡುವವರಿಗೂ ಮೃತರ ಸಂಬಂಧಿಕರಿಗೂ ವಿಶ್ರಾಂತಿ ಮತ್ತು ರಾತ್ರಿ ತಂಗಲು ಇಮ್ಯಾನುಯೆಲ್ ಚರ್ಚ್‌ನಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ.

ಇಲ್ಲಿಂದ ಅರ್ಧ ಕಿಲೊಮೀಟರ್ ದೂರದಲ್ಲಿ ಮೇಪ್ಪಾಡಿ ಮಾಲ್ ಮುಸ್ಲಿಂ ಜಮಾತ್ ಮಸೀದಿ ಇದೆ. ಸುತ್ತ ಸಣ್ಣಪುಟ್ಟ 10 ಮಸೀದಿಗಳಿವೆ. ಅಲ್ಲೆಲ್ಲ ಇಸ್ಲಾಂ ಧರ್ಮದವರ ಸಂಸ್ಕಾರ ಆಗುತ್ತದೆ. ಅದರೆ ಸಮೀಪದ ಕಾಳಜಿ ಕೇಂದ್ರದಲ್ಲಿರುವವರನ್ನು ಭೇಟಿಯಾಗಲು ಬರುವವರೆಲ್ಲರೂ ಮಸೀದಿಯ ಆವರಣದಲ್ಲಿ ತಂಗುತ್ತಾರೆ. ಅವರಿಗೆ ಚಿಕನ್ ಬಿರಿಯಾನಿ, ನೀರು, ಬಿಸ್ಕತ್, ತಂಪುಪಾನೀಯಗಳು ಇತ್ಯಾದಿ ವಿತರಣೆ ಆಗುತ್ತದೆ.

ಇತರ ಧರ್ಮದವರಿಗೂ ಅವಕಾಶ: ಮಾರಿಯಮ್ಮ ದೇವಸ್ಥಾನದ ಜಾಗದಲ್ಲಿ ದೇವಸ್ಥಾನ ಟ್ರಸ್ಟ್ ಸಮಿತಿ ಮತ್ತು ಸೇವಾಭಾರತಿ ಕಾರ್ಯಕರ್ತರು ಗ್ಯಾಸ್, ಕಟ್ಟಿಗೆ ಇತ್ಯಾದಿಗಳನ್ನು ಬಳಸಿ ಸಂಸ್ಕಾರ ಮಾಡುತ್ತಾರೆ. ಒಂದೇ ಹೊತ್ತು 15 ದೇಹಗಳನ್ನು ದಹಿಸುವ ಸೌಲಭ್ಯ ಇಲ್ಲಿದೆ.

'ಇತರ ಧರ್ಮದವರಿಗೆ ಅವರ ಪದ್ಧತಿಯಂತೆ ಸಂಸ್ಕಾರ ಮಾಡಲು ಅವಕಾಶ ನೀಡಲಾಗುವುದು. ಗುರುತು ಪತ್ತೆಯಾಗದ ದೇಹಗಳನ್ನು ಶವಾಗಾರದ ಸಮೀಪವೇ ಮಣ್ಣಿನಲ್ಲಿ ಹೂತಿಡುತ್ತಿದ್ದಾರೆ. ಆ ದೇಹಗಳನ್ನು ಶಾಶ್ವತವಾಗಿ ಹುಗಿದಿಡುವುದಾದರೆ ಇಲ್ಲಿ ಅವಕಾಶ ನೀಡಲಾಗುವುದು' ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷೆ ಬಬಿತಾ ಗೋಪಿನಾಥ್ ತಿಳಿಸಿದರು.

'ನೆರವು ನೀಡುವಂತೆ ಮಲಬಾರ್ ದೇವಸ್ವಂ ಮಂಡಳಿ ಸೂಚಿಸಿತ್ತು. ಖಾಲಿ ಜಾಗ ಇದ್ದುದರಿಂದ ಅದನ್ನು ಸಂಸ್ಕಾರಕ್ಕೆ ಮೀಸಲಿಡಲು ಮುಂದಾದೆವು. ಶವಾಗಾರ ಹತ್ತಿರದಲ್ಲೇ ಇರುವುದರಿಂದ ಅನುಕೂಲ ಆಗುತ್ತಿದೆ' ಎಂದು ಅವರು ಹೇಳಿದರು.

ಗುರುತು ನೀಡಿದ ಉಂಗುರ: ದುರಂತದಲ್ಲಿ ಸಾವಿಗೀಡಾದ ಮಹಿಳೆಯ ಕೈಯನ್ನು ಶನಿವಾರ ಸಂಸ್ಕರಿಸಲಾಯಿತು. ಚೂರಲ್‌ಮಲ ಸರ್ಕಾರಿ ಶಾಲೆಯ ಸಮೀಪದ ಮನೆಯಲ್ಲಿ ವಾಸವಾಗಿದ್ದ ಜಿಶಾ (45) ಅವರ ಕೈ ಮಲಪ್ಪುರಂ ಜಿಲ್ಲೆಯ ನಿಲಂಬೂರ್‌ನಲ್ಲಿ ಲಭಿಸಿತ್ತು. ಉಂಗುರವನ್ನು ಗಮನಿಸಿದ ಸಂಬಂಧಿಕರು ಮೃತದೇಹದ ಗುರುತು ಪತ್ತೆ ಮಾಡಿದ್ದರು. ಶನಿವಾರ ಸಂಜೆಗತ್ತಲಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. ಜಿಶಾ, ಅವರ ಪತಿ ಮುರುಗನ್, ಮಗ ಅಕ್ಷಯ್, ಮುರುಗನ್ ಅವರ ಸಹೋದರ ರಾಜನ್, ರಾಜನ್ ಪತ್ನಿ ವಿನೀತಾ ಮತ್ತು ತಾಯಿ ತಂಗಮ್ಮ ಕೆಸರುನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದರು. ನಾಲ್ಕೂವರೆ ವರ್ಷದ ಅಕ್ಷಯ್ ಮೃತದೇಹ ಮೊದಲ ದಿನವೇ ಚೂರಲ್ ಮಲದಲ್ಲಿ ಪತ್ತೆಯಾಗಿತ್ತು. ಇತರರ ಬಗ್ಗೆ ಮಾಹಿತಿ ಇಲ್ಲ ಎಂದು ಸಂಬಂಧಿಕ ಜೋಜೊ 'ಪ್ರಜಾವಾಣಿ'ಗೆ ತಿಳಿಸಿದರು.

ಭೂಕುಸಿತದಿಂದ ಮಡಿದ ಜಿಷಾ ಅವರ ಕೈಯ ಗುರುತು ಹಿಡಿದು ಅದರ ಅಂತ್ಯಸಂಸ್ಕಾರವನ್ನು ಕುಟುಂಬದ ಸದಸ್ಯರು ನಡೆಸಿದರು –ಪ್ರಜಾವಾಣಿ ಚಿತ್ರ–ಫಕ್ರುದ್ದೀನ್ ಎಚ್

ಮೃತರ ಸಂಬಂಧಿಕರಿಗೆ ಗುಡಿ, ಚರ್ಚ್, ಮಸೀದಿಗಳಲ್ಲಿ ಆಶ್ರಯ: ಅಂತ್ಯಕ್ರಿಯೆಗೆ ಪರಸ್ಪರ ನೆರವು

ದಾರಿ ತೋರಲು ಶ್ವಾನಗಳು

ಬೆಟ್ಟ–ಗುಡ್ಡ, ಕಾನನದ ದುರ್ಗಮ ಹಾದಿಗಳಲ್ಲಿ ಶನಿವಾರ ಹುಡುಕಾಟ ಆರಂಭವಾಗಿದ್ದು ಇದಕ್ಕೆ ಸೇನೆ, ಪೊಲೀಸ್ ಮತ್ತು ತಮಿಳುನಾಡು ಅಗ್ನಿಶಾಮಕ ದಳದ 11 ಶ್ವಾನಗಳನ್ನು ಬಳಸಲಾಗಿದೆ. ಯಂತ್ರಗಳನ್ನು ಸಾಗಿಸಲು ಸಾಧ್ಯವಾಗದಲ್ಲಿ ಶ್ವಾನಗಳ ಜೊತೆ ಸಿಬ್ಬಂದಿ ತೆರಳುತ್ತಿದ್ದಾರೆ. ಪ್ರತಿಕೂಲ ಹವಾಮಾನದಲ್ಲೂ ದುರ್ಗಮ ಹಾದಿಯಲ್ಲೂ ಸಾಗಲು ವಿಶೇಷ ತರಬೇತಿ ಪಡೆದ ಶ್ವಾನಗಳು ಇವು. ವಯನಾಡ್ ಶ್ವಾನದಳದ ಮ್ಯಾಗಿ, ಕೊಚ್ಚಿ ನಗರ ಪೊಲೀಸ್ ಶ್ವಾನದಳದ ಮಾಯ, ಮರ್ಫಿ, ನಿಲಂಬೂರಿನ ಇಡುಕ್ಕಿ ಶ್ವಾನದಳದ ಏಂಜಲ್ ಮುಂತಾದವು ಕೂಡ ಇದರಲ್ಲಿವೆ. ಮೃತದೇಹಗಳು ಇರುವುದು ಗೊತ್ತಾದರೆ ಕೆಲವು ಶ್ವಾನಗಳು ಬೊಗಳುತ್ತವೆ. ಕೆಲವು ನೆಲವನ್ನು ಬಗೆಯುತ್ತವೆ. ಇನ್ನು ಕೆಲವು ಬಾಲ ಆಡಿಸುತ್ತವೆ.

ಸಾಕುಪ್ರಾಣಿಗಳಿನ್ನು ಅನಾಥವಲ್ಲ

ದುರಂತದ ಸಂದರ್ಭದಲ್ಲಿ ಜೀವ ಉಳಿಸಿಕೊಂಡ ಸಾಕುಪ್ರಾಣಿಗಳು ಅನಾಥವಾಗದಂತೆ ನೋಡಿಕೊಳ್ಳಲು ಕೇರಳ ಪಶುಸಂಗೋಪನೆ ಇಲಾಖೆ ಮುಂದಾಗಿದೆ. ಮನೆಮಂದಿಯನ್ನು ಹುಡುಕಾಡುತ್ತಿರುವ ಮತ್ತು ಅಸ್ವಸ್ಥವಾಗಿರುವ ಪ್ರಾಣಿಗಳ ದತ್ತುಯೋಜನೆ ಆರಂಭಿಸಲಾಗಿದ್ದು ಇದಕ್ಕಾಗಿ 24 ತಾಸು ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ತೆರೆಯಲಾಗಿದೆ. ಗಾಯಗೊಂಡ ಪ್ರಾಣಿಗಳನ್ನು ಇಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಜೀವಂತ ಅಥವಾ ಸತ್ತ ಪ್ರಾಣಿ ಪಕ್ಷಿಗಳು ಸಿಕ್ಕಿದರೆ ಕಂಟ್ರೋಲ್ ರೂಂಗೆ ಒಪ್ಪಿಸುವಂತೆ ತಿಳಿಸಲಾಗಿದೆ.



ದುರಂತ ಮತ್ತು ಹಬ್ಬಗಳಲ್ಲಿ ಕೇರಳದ ಜನರಿಗೆ ಜಾತಿ–ಧರ್ಮವಿಲ್ಲ. ನೋವಿನ ಸಂದರ್ಭದಲ್ಲಿ ಜೊತೆಗೂಡಿ ನೆರವಾಗುವುದು ಕೇರಳದ ಸಂಸ್ಕೃತಿಯ ಭಾಗ
ಬಬಿತಾ ಗೋಪಿನಾಥ್
ಮಾರಿಯಮ್ಮ ದೇವಸ್ಥಾನದ ಅಧ್ಯಕ್ಷೆ

ದುರಂತಗಳು ಸಂಭವಿಸಿದಾಗ ಧರ್ಮದ ವಿಷಯ ಮಧ್ಯಪ್ರವೇಶಿಸುವುದಿಲ್ಲ. ಮಸೀದಿ ಮಾಡುತ್ತಿರುವ ಸೇವೆಗೆ ಬೇರೆ ಧರ್ಮದವರೂ ಕೈಜೋಡಿಸಿದ್ದಾರೆ.
ಅಲಿ ಮಾಸ್ಟರ್
ಮುಸ್ಲಿಂ ಜಮಾತ್ ಮಸೀದಿ ಕಾರ್ಯದರ್ಶಿ

ಚರ್ಚ್‌ನ ಸಭಾಂಗಣದಲ್ಲೂ ಕೊಠಡಿಗಳಲ್ಲೂ ಎಲ್ಲರಿಗೆ ಉಳಿದುಕೊಳ್ಳಲು ಅವಕಾಶ ನೀಡಲಾಗಿದೆ. ಈಗ ಇಲ್ಲಿ ಧರ್ಮದ ಗಡಿ ಇಲ್ಲ. ಎಲ್ಲರೂ ಮನುಷ್ಯರು
ಸುನಿತಾ ಜೇಮ್ಸ್
ಇಮ್ಯಾನುಯೆಲ್ ಚರ್ಚ್ ಖಜಾಂಚಿ

ಅನೇಕ ಕಡೆಗಳಲ್ಲಿ ಶವಸಂಸ್ಕಾರಕ್ಕೆ ನೆರವಾಗಿದ್ದೇನೆ. ಇಂಥ ದಯನೀಯ ಸ್ಥಿತಿ ಎಲ್ಲೂ ಎದುರಾಗಲಿಲ್ಲ. ಪ್ರತಿ ಸಂಸ್ಕಾರದಲ್ಲೂ ಬಿಕ್ಕುತ್ತಿದ್ದೇನೆ
ರಾಧಾಕೃಷ್ಣನ್
ಸೇವಾ ಭಾರತಿ ಕಾರ್ಯಕರ್ತ

ಶಾಲೆಯ ಪುನರ್ ನಿರ್ಮಾಣದ ಭರವಸೆ

ಮುಂಡಕ್ಕೈಯಲ್ಲಿ ನೆಲಸಮಗೊಂಡಿರುವ ಸರ್ಕಾರಿ ಶಾಲೆಯ ಕಟ್ಟಡ ಪುನರ್ ನಿರ್ಮಾಣದ ಭರವಸೆ ಮೂಡಿದೆ. ಹಾನಿಗೊಳಗಾದ ಪ್ರದೇಶಗಳಿಗೆ ಶನಿವಾರ ಭೇಟಿ ನೀಡಿದ ಲೆಫ್ಟಿನೆಂಟ್ ಕರ್ನಲ್, ಚಿತ್ರನಟ ಮೋಹನ್‌ಲಾಲ್ ತಮ್ಮ ತಂದೆ ತಾಯಿ ಹೆಸರಿನಲ್ಲಿ ಸ್ಥಾಪಿಸಿರುವ ವಿಶ್ವಶಾಂತಿ ಫೌಂಡೇಶನ್ ವತಿಯಿಂದ ಶಾಲೆ ಕಟ್ಟಡ ಪುನರ್ ನಿರ್ಮಿಸಲು ₹ 3 ಕೋಟಿ ನೀಡುವುದಾಗಿ ಘೋಷಿಸಿದರು. ಮುಂಡಕ್ಕೈಯಲ್ಲಿರುವ 'ವನರಾಣಿ' ಕಾಫಿ ಎಸ್ಟೇಟ್ ಆರು ವರ್ಷಗಳ ಹಿಂದೆ ಮೋಹನ್‌ಲಾಲ್ ಅವರ ಮಾಲೀಕತ್ವದಲ್ಲಿತ್ತು. ದುರಂತ ಭೂಮಿಯ ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ 122 ಇನ್ಫೆಂಟ್ರಿ ಬೆಟಾಲಿಯನ್‌ನ ಲೆಫ್ಟಿನೆಂಟ್ ಕರ್ನಲ್ ಆಗಿದ್ದಾರೆ ಮೋಹನ್‌ಲಾಲ್.


ಭೂಕುಸಿತ ಪ್ರದೇಶಗಳಿಗೆ ನಟ ಮೋಹನ್‌ಲಾಲ್ ಭೇಟಿ ನೀಡಿದರು. –ಪಿಟಿಐ ಚಿತ್ರ

ವಯನಾಡ್‌ನಲ್ಲಿ 100 ಮನೆ ನಿರ್ಮಾಣ: ಸಿ.ಎಂ

ಪ್ರಜಾವಾಣಿ ವಾರ್ತೆ

ಹಾಸನ: 'ಕೇರಳದ ವಯನಾಡ್‌ನಲ್ಲಿ ಭೂಕುಸಿತದಿಂದ ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ. ಅಲ್ಲಿ ರಾಜ್ಯ ಸರ್ಕಾರದಿಂದ ನೂರು ಮನೆಗಳನ್ನು ನಿರ್ಮಿಸಿ ಕೊಡಲಿದ್ದೇವೆ. ಕೇರಳದ ಮುಖ್ಯಮಂತ್ರಿ ಜೊತೆ ಈ ಬಗ್ಗೆ ಚರ್ಚಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಭೂಕುಸಿತದ ಸ್ಥಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಮನೆಗಳನ್ನು ನಿರ್ಮಿಸುವ ಸ್ಥಳ ಮತ್ತು ವೆಚ್ಚದ ಬಗ್ಗೆ ನಂತರ ತೀರ್ಮಾನಿಸಲಾಗುವುದು. ನಾಪತ್ತೆಯಾಗಿರುವವರಲ್ಲಿ ಕನ್ನಡಿಗರೆಷ್ಟು ಎನ್ನುವುದು ರಕ್ಷಣಾ ಕಾರ್ಯಾಚರಣೆ ಬಳಿಕವೇ ತಿಳಿಯಲಿದೆ' ಎಂದರು.

ಅವೈಜ್ಞಾನಿಕ ಕಾಮಗಾರಿ: 'ದೊಡ್ಡತಪ್ಪಲೆಯಲ್ಲಿ ಹಣ ಉಳಿಸುವ ಉದ್ದೇಶದಿಂದ ಕಡಿಮೆ ಭೂಮಿ ಸ್ವಾಧೀನ ಮಾಡಿಕೊಂಡಿದ್ದು, ಬಳಿಕ ಖರ್ಚು ಉಳಿಸಲು 90 ಡಿಗ್ರಿಯಲ್ಲಿ ಗುಡ್ಡಗಳನ್ನು ಕತ್ತರಿಸಿದ್ದೀರಿ. ಇದು ಅವೈಜ್ಞಾನಿಕವಲ್ಲವೇ? ಗುಡ್ಡಗಳನ್ನು 30 ರಿಂದ 45 ಡಿಗ್ರಿಯಲ್ಲಿ ಕತ್ತರಿಸಿ ತಡೆಗೋಡೆ ನಿರ್ಮಿಸಿದ್ದರೆ ಕುಸಿತ ತಡೆಯಬಹುದಿತ್ತಲ್ಲವೇ' ಎಂದು ಇದೇ ವೇಳೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಪ್ರಶ್ನಿಸಿದರು.

'ಇಲ್ಲಿನ ಒಟ್ಟಾರೆ ಸ್ಥಿತಿಗತಿ ಕುರಿತು ಕೇಂದ್ರ ಸಚಿವ ಗಡ್ಕರಿ ಅವರಿಗೆ ಪತ್ರ ಬರೆಯಿರಿ' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದ ಮುಖ್ಯಮಂತ್ರಿ, 'ಗಡ್ಕರಿ ಅವರನ್ನು ಖುದ್ದು ಭೇಟಿ ಮಾಡಿ ವಿವರಿಸುವೆ' ಎಂದರು.

ಒಂದು ತಿಂಗಳ ಪಡಿತರ ಉಚಿತ

ಮುಂಡಕ್ಕೈ ಮತ್ತು ಚೂರಲ್‌ಮಲ ಪ್ರದೇಶದ ಎಲ್ಲ ವರ್ಗಗಳ ಜನರಿಗೆ ಆಗಸ್ಟ್ ತಿಂಗಳಲ್ಲಿ ಉಚಿತ ಪಡಿತರ ವಿತರಿಸಲಾಗುವುದು ಎಂದು ಕೇರಳದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಜಿ.ಆರ್.ಅನಿಲ್ ಹೇಳಿದ್ದಾರೆ.

'ಪಡಿತರವನ್ನು ಇದುವರೆಗೆ ಆದ್ಯತೆಯ ವರ್ಗದವರಿಗೆ ಉಚಿತವಾಗಿ ಮತ್ತು ಆದ್ಯತೆಯೇತರ ವರ್ಗದವರಿಗೆ ಕಡಿಮೆ ದರದಲ್ಲಿ ನೀಡಲಾಗುತ್ತಿತ್ತು. ಆದರೆ, ಆಗಸ್ಟ್ ತಿಂಗಳ ಪಡಿತರ ಎರಡೂ ವರ್ಗದವರಿಗೆ ಉಚಿತವಾಗಿ ನೀಡಲಾಗುತ್ತದೆ' ಎಂದರು.

ಅಂತ್ಯಸಂಸ್ಕಾರಕ್ಕೆ ಮಾರ್ಗಸೂಚಿ

ವಯನಾಡ್ (ಪಿಟಿಐ): ಭೂಕುಸಿತದ ಸ್ಥಳದಲ್ಲಿ ಅವಶೇಷಗಳಡಿಯಿಂದ ಹೊರತೆಗೆದಿರುವ ಕೆಲವು ಮೃತದೇಹಗಳ ಗುರುತು ಹಿಡಿಯಲು ಇನ್ನೂ ಸಾಧ್ಯವಾಗಿಲ್ಲ ಮತ್ತು ಅವುಗಳನ್ನು ಕೊಂಡೊಯ್ಯಲು ಯಾರೂ ಮುಂದೆ ಬಂದಿಲ್ಲ.

ಅವಶೇಷಗಳಡಿ ದೊರೆತಿರುವ ಮಾನವನ ಅಂಗಾಂಗಗಳು ಮತ್ತು ಇನ್ನೂ ಗುರುತು ಹಿಡಿಯಲು ಆಗದೇ ಇರುವ ಮೃತದೇಹಗಳ ಅಂತ್ಯ ಸಂಸ್ಕಾರಕ್ಕೆ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಪ್ರತಿಯೊಂದು ಮೃತದೇಹ ಅಥವಾ ದೇಹದ ಅಂಗಾಂಗಗಳಿಗೆ ನಿರ್ದಿಷ್ಟ ಗುರುತಿನ ಸಂಖ್ಯೆ ನಿಗದಿಪಡಿಸಬೇಕು ಎಂದು ವಿಕೋಪ ನಿರ್ವಹಣಾ ಇಲಾಖೆಯು ಹೊರಡಿಸಿದ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಮೃತದೇಹದ ಫೋಟೊ, ವಿಡಿಯೊ ಮತ್ತು ಸಂಗ್ರಹಿಸುವ ಎಲ್ಲ ಮಾದರಿಗಳಲ್ಲಿ (ಹಲ್ಲು, ಡಿಎನ್‌ಎ) ಅದೇ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.

ಮೃತದೇಹದ ಗುರುತು ಪತ್ತೆ ಹಚ್ಚಿ ಸಂಬಂಧಿಕರಿಗೆ ಹಸ್ತಾಂತರಿಸಲು ಪೊಲೀಸರು ಎಲ್ಲ ಪ್ರಯತ್ನ ಮಾಡಬೇಕು. ಆದರೂ ವಾರಸುದಾರರ ಬಗ್ಗೆ ಮಾಹಿತಿ ಲಭ್ಯವಾಗದಿದ್ದರೆ, ಶವವನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಬೇಕು ಎಂದು ಹೇಳಿದೆ.

'ಮೃತದೇಹಗಳನ್ನು ಹೂಳುವ ಮೂಲಕ ಅಂತ್ಯಸಂಸ್ಕಾರ ಮಾಡಬೇಕು. ಬೇರೆ ವಿಧಾನದಲ್ಲಿ ಮಾಡುವಂತಿಲ್ಲ. ಹೂಳುವ ಜಾಗದಲ್ಲೂ ಗುರುತಿನ ಸಂಖ್ಯೆ ನಮೂದಿಸಬೇಕು. ಅಂತ್ಯ ಸಂಸ್ಕಾರದ ವೇಳೆ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಹಾಜರಿರಬೇಕು' ಎಂದು ಸ್ಪಷ್ಟಪಡಿಸಿದೆ.

ಮುಂಡಕ್ಕೈನಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಜೀವನೋಪಾಯಕ್ಕಾಗಿ ಬಂದಿದ್ದರು

ಜೀವನೋಪಾಯಕ್ಕಾಗಿ ಬಿಹಾರದಿಂದ ವಯನಾಡ್‌ಗೆ ಬಂದಿದ್ದವರಲ್ಲಿ ಕೆಲವರು ದುರಂತದಲ್ಲಿ ನಾಪತ್ತೆಯಾಗಿದ್ದು, ಅವರಲ್ಲಿ ರಂಜಿತ್ ಕುಮಾರ್ ಒಬ್ಬರು. ರಂಜಿತ್ ಅವರ ವಿವಾಹವನ್ನು ಮುಂಬರುವ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿತ್ತು.

'ರಂಜಿತ್ ಮದುವೆಗೆ ಸಿದ್ಧತೆ ನಡೆದಿತ್ತು. ಮದುವೆ ಖರ್ಚಿಗಾಗಿ ಹಣ ಸಂಪಾದಿಸಲು ಕೆಲಸ ಹುಡುಕಿಕೊಂಡು ವಯನಾಡ್‌ಗೆ ಬಂದಿದ್ದರು. ಆದರೆ ಪ್ರಕೃತಿಯು ಬೇರೆಯದೇ ಯೋಜನೆ ಹೊಂದಿತ್ತು' ಎಂದು ರಂಜಿತ್ ಅವರನ್ನು ಹುಡುಕಿಕೊಂಡು ಬಿಹಾರದಿಂದ ಇಲ್ಲಿಗೆ ಬಂದಿರುವ ಅವರ ಸಹೋದರ ರವಿ ಕುಮಾರ್ ದುಃಖದಿಂದ ಹೇಳಿದರು. ಬಿಹಾರದ ಇಬ್ಬರು ಸುರಕ್ಷಿತವಾಗಿದ್ದಾರೆ. ಒಬ್ಬ ಮಹಿಳೆಯ ಮೃತದೇಹ ದೊರೆತಿದೆ. ರಂಜಿತ್ ಒಳಗೊಂಡಂತೆ ಇತರ ಮೂವರು ಪತ್ತೆಯಾಗಿಲ್ಲ' ಎಂದರು.

218 ಮೃತದೇಹಗಳು ಪತ್ತೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಯನಾಡ್ ಜಿಲ್ಲೆಯ ಚೂರಲ್‌ಮಲ ಮತ್ತು ಮುಂಡಕ್ಕೈನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ನಾಪತ್ತೆಯಾದವರಿಗೆ ಶೋಧಕಾರ್ಯ ಶನಿವಾರವೂ ಮುಂದುವರಿಯಿತು.

ಇದುವರೆಗೆ 218 ಮೃತದೇಹಗಳು ಪತ್ತೆಯಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. 200 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ಅನಧಿಕೃತ ಮೂಲಗಳ ಪ್ರಕಾರ ಸತ್ತವರ ಸಂಖ್ಯೆ 365. 67 ಮೃತದೇಹಗಳ ಗುರುತು ಪತ್ತೆಯಾಗಿಲ್ಲ. ಶನಿವಾರ ಶೋಧ ಕಾರ್ಯದ ವೇಳೆ 15 ಮೃತದೇಹಗಳು ದೊರೆತಿವೆ.

ರಕ್ಷಣಾ ಕಾರ್ಯಾಚರಣೆ ಅಂತಿಮ ಘಟ್ಟಕ್ಕೆ ತಲುಪಿದ್ದು, ಶನಿವಾರ ಮಧ್ಯಾಹ್ನದವರೆಗಿನ ಮಾಹಿತಿ ಪ್ರಕಾರ ಸುಮಾರು 206 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ಗರಿಷ್ಠ ಸಂಖ್ಯೆಯ ಜೀವಗಳನ್ನು ರಕ್ಷಿಸುವುದು ನಮ್ಮ ಗುರಿಯಾಗಿತ್ತು. ಅವಶೇಷಗಳ ಅಡಿಯಲ್ಲಿ ಯಾರಾದರೂ ಜೀವಂತವಾಗಿದ್ದರೆ, ಅವರನ್ನು ಉಳಿಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶನಿವಾರ ಹೇಳಿದರು.

'ಪತ್ತೆಯಾದ ಮೃತದೇಹಗಳಲ್ಲಿ ಹೆಚ್ಚಿನವು ಚಾಲಿಯಾರ್ ನದಿಯಲ್ಲಿ ಶೋಧ ಕಾರ್ಯದ ವೇಳೆ ದೊರೆತಿವೆ. ಅಲ್ಲಿ ಶೋಧ ಕಾರ್ಯಕ್ಕೆ 40 ತಂಡಗಳನ್ನು ನಿಯೋಜಿಸಲಾಗಿದೆ. ಡ್ರೋನ್‌ಗಳು, ಥರ್ಮಲ್ ರೇಡಾರ್ ಸ್ಕ್ಯಾನರ್ ಹಾಗೂ 11 ಶ್ವಾನಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಒಂದೇ ಕುಟುಂಬದ 8 ಮಂದಿ ಮೃತದೇಹ ಪತ್ತೆ– (ಸಿದ್ದಾಪುರ ವರದಿ): 'ವಯನಾಡ್ ಭೂಕುಸಿತ ದುರಂತದ ನಂತರ ನಾಪತ್ತೆಯಾಗಿದ್ದ, ಕುಶಾಲನಗರ ತಾಲ್ಲೂಕಿನ ನೆಲ್ಯಹುದಿಕೇರಿ ಮೂಲದ ದಿವ್ಯಾ (35), ಅವರ ಪುತ್ರ ಲಕ್ಷ್ಮೀಶ್ ಹಾಗೂ ಕುಟುಂಬದ ಆರು ಮಂದಿ ಮೃತಪಟ್ಟಿದ್ದಾರೆ. ಮೃತದೇಹಗಳು ಶುಕ್ರವಾರ ಪತ್ತೆಯಾಗಿವೆ. ಇನ್ನೊಬ್ಬರು ಪತ್ತೆಯಾಗಿಲ್ಲ' ಎಂದು ಕುಟುಂಬದವರು ತಿಳಿಸಿದ್ದಾರೆ. ದಿವ್ಯಾ ವಯನಾಡ್‌ನ ಮಿಮ್ಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು.

'ತಾಯಿ ಹಾಗೂ ಮಗನ ಮೃತದೇಹ ಒಟ್ಟಿಗೇ ಪತ್ತೆಯಾಗಿದ್ದು, ಕರುಳು ಹಿಂಡುವಂತಿದೆ' ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ನೆಲ್ಯಹುದಿಕೇರಿಯ ನಲ್ವತ್ತೇಕರೆ ನಿವಾಸಿ ಪೊನ್ನಮ್ಮ ಎಂಬವರ ಮಗಳು ದಿವ್ಯಾ ಕೇರಳದ ಚೂರಲ್‌ಮಲದ ಯುವಕನನ್ನು ವಿವಾಹವಾಗಿದ್ದರು.

ಸಂತ್ರಸ್ತರಿಗೆ ಪುನವರ್ಸತಿ ಕಲ್ಪಿಸಲು ಕೇರಳ ಸರ್ಕಾರ ಯೋಜನೆ

ಸುರಕ್ಷಿತ ಸ್ಥಳದಲ್ಲಿ ಟೌನ್‌ಷಿಪ್ ನಿರ್ಮಾಣ

ತಿರುವನಂತಪುರ (ಪಿಟಿಐ): ಭೂಕುಸಿತದಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸಲು ಸುರಕ್ಷಿತ ಪ್ರದೇಶದಲ್ಲಿ ಟೌನ್‌ಶಿಪ್ ಸ್ಥಾಪಿಸಲಾಗುವುದು ಎಂದು ಕೇರಳ ಸರ್ಕಾರ ಶನಿವಾರ ಪ್ರಕಟಿಸಿದೆ.

ಬದುಕುಳಿದವರಿಗೆ ಸಮಗ್ರವಾದ ಪುನವರ್ಸತಿ ಯೋಜನೆಯನ್ನು ರೂಪಿಸಿ, ಕಾರ್ಯಗತಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂತ್ರಸ್ತರಿಗೆ ಭೂಮಿ ನೀಡುವ ಮತ್ತು ಮನೆಗಳನ್ನು ನಿರ್ಮಿಸುವ ಕೊಡುಗೆಗಳೊಂದಿಗೆ ಹಲವರು ಮುಂದೆ ಬಂದಿದ್ದಾರೆ ಎಂದು ಹೇಳಿದರು. ಕೊಡುಗೆಗಳನ್ನು ನೀಡುವವರ ಜತೆ ಸಮನ್ವಯ ಸಾಧಿಸಲು ಕಂದಾಯ ಇಲಾಖೆಯ ಜಂಟಿ ಆಯುಕ್ತರ ನೇತೃತ್ವದಲ್ಲಿ 'ಹೆಲ್ಪ್ ಫಾರ್ ವಯನಾಡ್' ಹೆಸರಿನಲ್ಲಿ ಸೆಲ್‌ವೊಂದನ್ನು ಆರಂಭಿಸಲಾಗಿದೆ.

ಭೂಕುಸಿತ ಪ್ರದೇಶದಲ್ಲಿನ ಮಕ್ಕಳ ಶಿಕ್ಷಣಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಶಿಕ್ಷಣ ಸಚಿವರು ವಯನಾಡ್‌ಗೆ ಭೇಟಿ ನೀಡಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ವತಿಯಿಂದ 100 ಮನೆಗಳನ್ನು ನಿರ್ಮಿಸಿಕೊಡುತ್ತಾರೆ ಎಂದು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಹೇಳಿದ್ದಾರೆ. ಅದರಲ್ಲಿ 25 ಮನೆಗಳ ನಿರ್ಮಾಣದ ಜವಾಬ್ದಾರಿಯನ್ನು ಸತೀಶನ್ ಅವರೇ ವಹಿಸಿಕೊಂಡಿದ್ದಾರೆ' ಎಂದು ತಿಳಿಸಿದರು.

'ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 100 ಮನೆಗಳನ್ನು ನಿರ್ಮಿಸಿಕೊಡುವುದಾಗಿ ತಿಳಿಸಿದ್ದಾರೆ. ಅವರಿಗೆ ಕರೆಮಾಡಿ ಕೃತಜ್ಞತೆ ಸಲ್ಲಿಸಿದ್ದೇನೆ' ಎಂದರು.

ಇದಲ್ಲದೆ, ಶೋಭಾ ರಿಯಾಲ್ಟಿ ಸಮೂಹ ಮತ್ತು ಕೋಯಿಕ್ಕೋಡ್ ಮೂಲದ ಉದ್ಯಮಿಯೊಬ್ಬರು ತಲಾ 25 ಮನೆಗಳನ್ನು ನಿರ್ಮಿಸಿಕೊಡಲು ಮುಂದೆ ಬಂದಿದ್ದಾರೆ ಎಂದು ಹೇಳಿದರು.

ಸಂವಹನಕ್ಕೆ ಹ್ಯಾಮ್ ರೇಡಿಯೊ ನೆರವು

ಭೂಕುಸಿತದ ಸ್ಥಳದಲ್ಲಿ ಪರಸ್ಪರ ಸಂವಹನಕ್ಕೆ ಹ್ಯಾಮ್ ರೇಡಿಯೊದ (ಹವ್ಯಾಸಿ ರೇಡಿಯೊ) ನೆರವು ಪಡೆಯಲಾಗುತ್ತಿದೆ. ಉತ್ಸಾಹಿಗಳ ತಂಡವೊಂದು ಹ್ಯಾಮ್ ರೇಡಿಯೊ ಆರಂಭಿಸುವ ಮೂಲಕ ಸಂವಹನ ಜಾಲವನ್ನು ಸ್ಥಾಪಿಸಿದೆ. ಕಲ್ಪೆಟ್ಟದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿ ಈ ರೇಡಿಯೊ ಕೇಂದ್ರ ಸ್ಥಾಪಿಸಲಾಗಿದ್ದು, ದುರಂತ ಸ್ಥಳದಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ ಜತೆ ಸಂವಹನ ಸಾಧಿಸಲು ನೆರವಾಗಿದೆ.

'ದುರಂತ ನಡೆದ ಸ್ಥಳದಲ್ಲಿ ಮೊಬೈಲ್ ಫೋನ್ ಸೇವೆ ಬಹಳ ಸೀಮಿತ ಪ್ರಮಾಣದಲ್ಲಿ ಲಭ್ಯವಿವೆ. ಆದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ಹ್ಯಾಮ್ ರೇಡಿಯೊ ಸಹಾಯ ಮಾಡಿದೆ' ಎಂದು ಅಧಿಕೃತ ಪ್ರಕಟಣೆ ಶನಿವಾರ ತಿಳಿಸಿದೆ. ಜಿಲ್ಲಾಧಿಕಾರಿ ಡಿ.ಆರ್.ಮೇಘಶ್ರೀ ಅವರು ಹ್ಯಾಮ್ ರೇಡಿಯೊ ಆಪರೇಟರ್‌ಗಳನ್ನು ಭೇಟಿಯಾಗಿ ಅವರ ಸೇವೆಯನ್ನು ಶ್ಲಾಘಿಸಿದ್ದಾರೆ.

ಟೀಕೆಗೆ ಗುರಿಯಾದ ಚೆನ್ನಿತ್ತಲ ನಿರ್ಧಾರ

ತಿರುವನಂತಪುರ (ಪಿಟಿಐ): ವಯನಾಡ್ ಭೂಕುಸಿತ ಸಂತ್ರಸ್ತರಿಗೆ ನೆರವಾಗಲು ಆರಂಭಿಸಿರುವ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ತಮ್ಮ ಒಂದು ತಿಂಗಳ ವೇತನ ನೀಡುವುದಾಗಿ ಕಾಂಗ್ರೆಸ್‌ನ ನಾಯಕ ರಮೇಶ್ ಚೆನ್ನಿತ್ತಲ ಹೇಳಿದ್ದಾರೆ. ಆದರೆ ಅವರ ಈ ನಿರ್ಧಾರವನ್ನು ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಸುಧಾಕರನ್ ಟೀಕಿಸಿದ್ದಾರೆ.


ರಮೇಶ್ ಚೆನ್ನಿತ್ತಲ

ಸಿ.ಎಂ ಪರಿಹಾರ ನಿಧಿಗೆ ಒಂದು ತಿಂಗಳ ವೇತನವನ್ನು ನೀಡುವ ನಿರ್ಧಾರವನ್ನು ಚೆನ್ನಿತ್ತಲ ಅವರು ಪಕ್ಷದ ಅಧಿಕೃತ ಸಾಮಾಜಿಕ ಮಾಧ್ಯಮದ ಖಾತೆಯಲ್ಲಿ ಶುಕ್ರವಾರ ಸಂಜೆ ಪ್ರಕಟಿಸಿದ್ದರು.

ಪಕ್ಷದ ನಾಯಕ ತೆಗೆದುಕೊಂಡ ನಿರ್ಧಾರದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿರುವ ಸುಧಾಕರನ್, ಸಿಪಿಎಂ ನೇತೃತ್ವದ ಸರ್ಕಾರ ಆರಂಭಿಸಿರುವ ಪರಿಹಾರ ನಿಧಿಗೆ ದೇಣಿಗೆ ನೀಡುವ ಅಗತ್ಯವಿರಲಿಲ್ಲ. ಸರ್ಕಾರದ ಪರಿಹಾರ ನಿಧಿಗೆ ದೇಣಿಗೆ ನೀಡುವಂತೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಯಾವುದೇ ಸೂಚನೆ ಕೊಟ್ಟಿಲ್ಲ' ಎಂದಿದ್ದಾರೆ.

ಶಾಸಕ, ಪುತ್ರನ ಮೇಲೆ ಎಫ್‌ಐಆರ್

ಒಂದನೇ ಪುಟದಿಂದ...

ಪ್ರತಿಭಟನೆ: ಪರಶುರಾಮ್ ಸಾವಿಗೆ ಕಾರಣರಾದ ಶಾಸಕರು ಹಾಗೂ ಅವರ ಪುತ್ರನ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಕುಟುಂಬದವರು ಶುಕ್ರವಾರ ರಾತ್ರಿ ಒತ್ತಾಯಿಸಿದ್ದರು. ಆದರೆ, ಪೊಲೀಸ್ ಇಲಾಖೆಯಿಂದ ತಕ್ಷಣಕ್ಕೆ ಸ್ಪಂದನೆ ಸಿಕ್ಕಿರಲಿಲ್ಲ. ಶನಿವಾರ ಬೆಳಿಗ್ಗೆ ಚಿತ್ತಾಪುರ ರಸ್ತೆಯ ಜಿಲ್ಲಾ ಆಸ್ಪತ್ರೆ ಮುಖ್ಯದ್ವಾರದ ಮುಂದೆ ಪರಿಶಿಷ್ಟ ಸಮುದಾಯದ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ರಸ್ತೆ ಬಂದ್ ಮಾಡಿ, ಪ್ರತಿಭಟಿಸಿದರು. ಪ್ರತಿಭಟನೆಯಿಂದ ಐದಾರು ಕಿ.ಮೀ ವರೆಗೆ ನೂರಾರು ವಾಹನಗಳು ರಸ್ತೆ ಮೇಲೆ ನಿಂತಿದ್ದವು. ಸುಮಾರು 6 ಗಂಟೆ ರಸ್ತೆ ತಡೆ ನಡೆಸಲಾಯಿತು.

'ಶಾಸಕರು ಮತ್ತು ಅವರ ಪುತ್ರ ಲಕ್ಷಾಂತರ ರೂಪಾಯಿ ಬೇಡಿಕೆ ಇಟ್ಟಿದ್ದರಿಂದ ಒತ್ತಡಕ್ಕೆ ಒಳಗಾಗಿ ಪರಶುರಾಮ್ ಜೀವ ಕಳೆದುಕೊಂಡಿದ್ದಾರೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಗೀತಾ ಅವರ ಎದುರು ಆಕ್ರೋಶ ಹೊರಹಾಕಿದ ಪರಶುರಾಮ್ ಅವರ ಪತ್ನಿ ಶ್ವೇತಾ ಅವರು, 'ನಿಮ್ಮ ಮಗಳಿಗೆ ಈ ರೀತಿ ಆಗಿದ್ದರೆ ಸುಮ್ಮನಿರುತ್ತಿದ್ದಿರಾ? ನನ್ನ ಪತಿಯ ಸಾವಿಗೆ ನ್ಯಾಯ ಒದಗಿಸಿ' ಎಂದು ಆಗ್ರಹಿಸಿದರು.

ಶಾಸಕರ ವಿರುದ್ಧ ಪ್ರಕರಣ ದಾಖಲಿಸುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟುಹಿಡಿದರು. ಪ್ರತಿಭಟನೆ ನಡೆಸಿದ ಐದಾರು ಗಂಟೆಗಳ ಬಳಿಕ ಪ್ರಕರಣ ದಾಖಲಿಸಿಕೊಳ್ಳಲಾಯಿತು. ನಂತರ ಪ್ರತಿಭಟನೆ ಕೈಬಿಡಲಾಯಿತು.

ಪ್ರಕರಣ ದಾಖಲು: ಶ್ವೇತಾ ಅವರು ನೀಡಿದ ದೂರಿನ್ವಯ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಮೊದಲನೇ ಆರೋಪಿ ಹಾಗೂ ಅವರ ಪುತ್ರ ಪಂಪನಗೌಡ (ಸನ್ನಿಗೌಡ) ಎರಡನೇ ಆರೋಪಿ ಎಂದು ನಮೂದಿಸಿ ನಗರ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಾಗಿದೆ.

ಪ್ರಕರಣ ದಾಖಲಾಗುತ್ತಿದ್ದಂತೆಯೇ ಶಾಸಕ ಮತ್ತು ಅವರ ಪುತ್ರನ ಮೊಬೈಲ್‌ಗಳು ಸ್ವಿಚ್ಡ್ ಆಫ್ ಆಗಿವೆ. ಬಂಧನ ಭೀತಿಯಿಂದ ತಲೆಮರೆಸಿಕೊಂಡಿರುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿಬರುತ್ತಿವೆ.

ನಗರದ ಹೊರವಲಯದ ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಪರಶುರಾಮ್ ಮರಣೋತ್ತರ ಪರೀಕ್ಷೆ ಮಾಡಲಾಯಿತು. ನಂತರ ಕುಟುಂಬಸ್ಥರಿಗೆ ಶವ ಹಸ್ತಾಂತರಿಸಲಾಯಿತು. ಶನಿವಾರ ಸಂಜೆ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಸೋಮನಾಳದಲ್ಲಿ ಅಂತ್ಯಕ್ರಿಯೆ ನಡೆಯಿತು. ಕಾರಟಗಿ ಹಾಗೂ ಕನಕಗಿರಿಯಲ್ಲಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದವು.

ಎಂಟು ಸರ್ಕಾರಿ ನೌಕರಿ ಪಡೆದಿದ್ದ ಪರಶುರಾಮ್

ಪ್ರಜಾವಾಣಿ ವಾರ್ತೆ

ಕೊಪ್ಪಳ: ಯಾದಗಿರಿಯಲ್ಲಿ ಮೃತಪಟ್ಟಿರುವ ಪಿಎಸ್‌ಐ ಪರಶುರಾಮ್ ಕಡುಬಡತನದ ನಡುವೆಯೂ ಉತ್ತಮವಾಗಿ ಓದಿ ಎಂಟು ಸರ್ಕಾರಿ ನೌಕರಿಗಳನ್ನು ಪಡೆದುಕೊಂಡಿದ್ದರು.

ಕಾರಟಗಿ ತಾಲ್ಲೂಕಿನ ಸೋಮನಾಳ ಗ್ರಾಮದ ಪರಶುರಾಮ್ ಪಿಎಸ್‌ಐ ಆಗಿದ್ದೇ ಸಾಹಸದ ಕಥೆ. ಬುದ್ಧಿವಂತಿಕೆ ಮತ್ತು ಕಠಿಣ ಪರಿಶ್ರಮದಿಂದ ಒಂದಾದ ಮೇಲೊಂದು ಸರ್ಕಾರಿ ನೌಕರಿ ಗಳಿಸಿಕೊಂಡಿದ್ದರು.

ಪರಶುರಾಮ್ ಪೋಷಕರು ಸೋಮನಾಳ ಗ್ರಾಮದಲ್ಲಿ ಕೃಷಿ ಕೆಲಸ ಮಾಡುತ್ತಿದ್ದರು. ಧಾರವಾಡದ ಕೆಸಿಡಿ ಕಾಲೇಜಿನಲ್ಲಿ ಪದವಿ ಓದುವಾಗಲೇ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಮಾಡಿಕೊಂಡಿದ್ದರು. ಪದವಿ ಪೂರ್ಣಗೊಳಿಸುತ್ತಲೇ ಮೊದಲು ಜೈಲ್‌ನಲ್ಲಿ ವಾರ್ಡನ್ ಆಗಿ ಮೊದಲ ಸರ್ಕಾರಿ ನೌಕರಿ ಪಡೆದುಕೊಂಡಿದ್ದರು. ಐದು ವರ್ಷ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಕೆಲಸ ನಿರ್ವಹಿಸಿ, ನಂತರ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಒಂದು ವರ್ಷ ಎಫ್‌ಡಿಎ ಆಗಿದ್ದರು. ಈ ವೇಳೆ ಕೆಎಸ್‌ಆರ್‌ಟಿಸಿಯಲ್ಲಿ ಸಂಚಾರ ಇನ್‌ಸ್ಪೆಕ್ಟರ್, ಪಿಡಿಒ ಸೇರಿದಂತೆ ಹಲವು ಹುದ್ದೆಗಳಿಗೆ ಆಯ್ಕೆಯಾಗಿದ್ದರು. ಆದರೆ, ಪಿಎಸ್‌ಐ ಆಗಬೇಕೆನ್ನುವ ಕನಸು ನನಸು ಮಾಡಿಕೊಳ್ಳಲು ನೌಕರಿ ಮಾಡುತ್ತಲೇ ಪ್ರಯತ್ನಿಸುತ್ತಿದ್ದರು. ಸತತ ಪ್ರಯತ್ನದಿಂದಾಗಿ 2017ರಲ್ಲಿ ಪಿಎಸ್‌ಐ ಆಗಿ ಆಯ್ಕೆಯಾಗಿದ್ದರು.

ಒಂದು ಸರ್ಕಾರಿ ನೌಕರಿ ಪಡೆಯುವುದೇ ಕಠಿಣವಾಗಿರುವ ಈಗಿನ ದಿನಮಾನಗಳಲ್ಲಿ ಎಂಟು ಸರ್ಕಾರಿ ನೌಕರಿ ಪಡೆದಿದ್ದ ಪರಶುರಾಮ್ ಬದುಕು ಅನೇಕರಿಗೆ ಪ್ರೇರಣೆಯಾಗಿತ್ತು ಎಂದು ಅವರ ಸ್ನೇಹಿತರು ನೆನಪಿಸಿಕೊಂಡರು. ಯುವಕರಿಗೆ ಓದಿಗೆ ಸದಾ ಸ್ಫೂರ್ತಿ ತುಂಬುತ್ತಿದ್ದರು. ಕೆಲಸ ನಿರ್ವಹಿಸುತ್ತಿದ್ದಾಗಲೇ ಬಾಹ್ಯ ಅಭ್ಯರ್ಥಿಯಾಗಿ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

ಬೆಂಗಳೂರಿಗೆ ಹೋಗಿ ನೌಕರಿ ಪಡೆಯುವ ಮೊದಲು ಎರಡು ತಿಂಗಳು ಬೆಂಗಳೂರಿನಲ್ಲಿ ಗಾಲ್ಫ್ ಮೈದಾನದಲ್ಲಿ ನೀರು ಹರಿಸುವುದು, ಚೆಂಡು ತಂದುಕೊಡುವ ಕೆಲಸ ಮಾಡುತ್ತಿದ್ದರು ಎಂದು ಸ್ನೇಹಿತರು ನೆನಪಿಸಿಕೊಂಡರು.

25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ ಶೂಟಿಂಗ್: ಭಾಕರ್ ಕೈತಪ್ಪಿದ ಮೂರನೇ ಪದಕ

ಮನ ಗೆದ್ದ ಮನು

• ಸಿದ್ದಿ ಕಿರಣ್

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಶನಿವಾರ ನಡೆದ ಮಹಿಳೆಯರ 25 ಮೀ ಸ್ಪೋರ್ಟ್ಸ್ ಪಿಸ್ತೂಲ್ ಶೂಟಿಂಗ್ ಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ಭಾರತದ ಮನು ಭಾಕರ್ ನಿರಾಶೆಯಿಂದ ಪ್ರೇಕ್ಷಕರತ್ತ ಕೈಬೀಸಿ ನಿರ್ಗಮಿಸಿದರು
ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಶತೋಹು, ಫ್ರಾನ್ಸ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕಗಳ 'ಹ್ಯಾಟ್ರಿಕ್' ಸಾಧಿಸುವ ಮನು ಭಾಕರ್ ಕನಸು ಕಮರಿತು. ಕಳೆದೊಂದು ವಾರದಲ್ಲಿ ಎರಡು ಕಂಚಿನ ಪದಕಗಳನ್ನು ಜಯಿಸಿ ದಾಖಲೆ ಮಾಡಿದ್ದ ಭಾರತದ ಮನು ಶನಿವಾರ ನಿರಾಶೆ ಅನುಭವಿಸಿದರು.

22 ವರ್ಷದ ಮನು ಅವರು ಶತೋಹು ಶೂಟಿಂಗ್ ರೇಂಜ್‌ನಲ್ಲಿ ನಡೆದ 25 ಮೀ ಸ್ಪೋರ್ಟ್ಸ್ ಪಿಸ್ತೂಲ್ ಶೂಟಿಂಗ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು. ಅಲ್ಪ ಅಂತರದಲ್ಲಿ ಪದಕ ಕೈತಪ್ಪಿತು. ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿರುವ ಭಾರತದ ಮೊದಲ ಕ್ರೀಡಾಪಟು ಎಂಬ ದಾಖಲೆಯನ್ನು ಮನು ಈಗಾಗಲೇ ಬರೆದಿದ್ದಾರೆ.

ಕ್ರೀಡಾಪ್ರೇಮಿಗಳ ಎದೆಬಡಿತ ಹೆಚ್ಚಿಸಿದ್ದ ಫೈನಲ್ ಸುತ್ತಿನಲ್ಲಿ ಚಿನ್ನದ ಪದಕ ಜಯಿಸುವ ಕನಸಿನೊಂದಿಗೆ ಕಣಕ್ಕಿಳಿದ ಮನು ಅವರಿಗೆ ಕಠಿಣ ಪೈಪೋಟಿ ಎದುರಾಯಿತು. ಆರಂಭಿಕ ಹಂತದಲ್ಲಿ ಅವರ ಪ್ರದರ್ಶನವು ಸಾಧಾರಣವಾಗಿತ್ತು. ಆದರೂ ಪದಕ ಗೆಲುವಿನ ಅವಕಾಶವನ್ನು ಅವರು ಬಿಟ್ಟುಕೊಡಲಿಲ್ಲ. ನಂತರದ ಹಂತದಲ್ಲಿ ಅವರು ಎರಡನೇ ಸ್ಥಾನಕ್ಕೂ ಏರಿದ್ದರು. ಆದರೆ ಎಂಟನೇ ಸರಣಿಯ ಶೂಟಿಂಗ್‌ನಲ್ಲಿ ಮನು ಒತ್ತಡಕ್ಕೊಳಗಾದಂತೆ ಕಾಣಿಸಿದರು.

ಈ ಸುತ್ತಿನಲ್ಲಿ ಹಂಗೇರಿಯ ವೆರೊನಿಕಾ ಮೆಯರ್ ಎದುರಿನ ಶೂಟ್ ಆಫ್‌ನಲ್ಲಿ ಮನು ನಾಲ್ಕನೇ ಸ್ಥಾನಕ್ಕೆ ಇಳಿದರು. ಮನು ಅವರು ಮೂರನೇ ಪದಕ ಗೆದ್ದು ಹೊಸ ಇತಿಹಾಸ ಬರೆಯುವುದನ್ನು ಕಣ್ತುಂಬಿಕೊಳ್ಳಲು ರೇಂಜ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಅಭಿಮಾನಿಗಳು, ಮಾಧ್ಯಮ ಪ್ರತಿನಿಧಿಗಳು ಮತ್ತು ಕೋಚ್‌ಗಳು ಮೌನಕ್ಕೆ ಜಾರಿದರು.

ಕಳೆದೊಂದು ವಾರದಿಂದ ತಮ್ಮ ಮೇಲಿನ ಒತ್ತಡದ ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸಿದ್ದ ಮನು ಎರಡು ಸ್ಪರ್ಧೆಗಳಲ್ಲಿ ಪದಕಗಳನ್ನು ಜಯಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ, ಇಲ್ಲಿ ಅವರು ಒತ್ತಡಕೊಳಗಾದರು. ಅವರು ಮೂರು ಮತ್ತು ನಾಲ್ಕನೇ ಸುತ್ತುಗಳಲ್ಲಿ ತೆಗೆದುಕೊಂಡಿದ್ದ ಕಡಿಮೆ ಅಂಕಗಳು ಅವರಿಗೆ ಕೊನೆಯಲ್ಲಿ ಕಂಟಕವಾದವು. ಕೊನೆಯ ಸುತ್ತಿನಲ್ಲಿ ಮನು ತಮ್ಮೆಲ್ಲ ಏಕಾಗ್ರತೆ ಸಾಮರ್ಥ್ಯವನ್ನು ಪಣಕ್ಕೊಡ್ಡಿದರು. ಅವರು 3 ಅಂಕ ಪಡೆದರೆ, ಮೇಯರ್ಸ್ 4 ಅಂಕ ಗಳಿಸಿ ಗೆದ್ದರು.

ಅಭಿಮಾನಿಗಳತ್ತ ಕೈಬೀಸಿ ಕೃತಜ್ಞತೆ ಸಲ್ಲಿಸಿದ ಅವರು ನಿರಾಶೆಯ ಮುಖಭಾವ ಹೊತ್ತು ಭಾರವಾದ ಹೆಜ್ಜೆಗಳೊಂದಿಗೆ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು. ನೆರವು ಸಿಬ್ಬಂದಿ ಅವರ ಕೈಕುಲುಕಿ ಭುಜ ತಟ್ಟಿ ಸಮಾಧಾನ ಮಾಡಿದರು. ಪದಕ ಕೈತಪ್ಪಿಸಿಕೊಂಡ ಮನು ಕ್ರೀಡಾಪ್ರೇಮಿಗಳ ಮನ ಗೆದ್ದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಶನಿವಾರ ನಡೆದ ಮಹಿಳೆಯರ 25 ಮೀ ಸ್ಪೋರ್ಟ್ಸ್ ಪಿಸ್ತೂಲ್ ಶೂಟಿಂಗ್ ಫೈನಲ್‌ನಲ್ಲಿ ಪದಕ ಗೆದ್ದವರು (ಎಡದಿಂದ), ಕೆಮಿಲಿ ಜೆದ್ರೆಝುವಾಸ್ಕಿ (ಫ್ರಾನ್ಸ್–ಬೆಳ್ಳಿ), ಜೀನ್ ಯಾಂಗ್ (ದಕ್ಷಿಣ ಕೊರಿಯಾ–ಚಿನ್ನ), ವೆರೊನಿಕಾ ಮೆಯರ್ (ಹಂಗೇರಿ–ಕಂಚು) –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಬೆಂಬಿಡದ ಚತುರ್ಥ ಸ್ಥಾನ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ಭಾರತೀಯರಲ್ಲಿ ಮನು ಭಾಕರ್ ನಾಲ್ಕನೇಯವರಾಗಿದ್ದಾರೆ.

2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಪುರುಷರ 50 ಮೀ ರೈಫಲ್ ಪ್ರಾನ್ ವಿಭಾಗದಲ್ಲಿ ಜಾಯ್‌ದೀಪ್ ಕರ್ಮಾಕರ್ ಅವರು ಅಲ್ಪಅಂತರದಲ್ಲಿ ಕಂಚಿನ ಪದಕ ಕೈತಪ್ಪಿಸಿಕೊಂಡಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಪುರುಷರ 10 ಮೀ ಏರ್ ರೈಫಲ್‌ನಲ್ಲಿ ಅಭಿನವ್ ಬಿಂದ್ರಾ ಮತ್ತು ಈ ವರ್ಷದ ಒಲಿಂಪಿಕ್ಸ್‌ನಲ್ಲಿ 10 ಮೀ ಏರ್ ರೈಫಲ್‌ನಲ್ಲಿ ಅರ್ಜುನ್ ಬಬೂತಾ ಅವರು ನಾಲ್ಕನೇ ಸ್ಥಾನ ಪಡೆದರು.

ಸ್ಕೀಟ್: ಅನಂತ್‌ಗೆ 24ನೇ ಸ್ಥಾನ

ಭಾರತದ ಅನಂತ್ ಜೀತ್ ಸಿಂಗ್ ನರೂಕಾ ಅವರು ಸ್ಕೀಟ್ ವಿಭಾಗದಲ್ಲಿ 24ನೇ ಸ್ಥಾನ ಪಡೆದರು. ಒಟ್ಟು 30 ಸ್ಪರ್ಧಿಗಳಿದ್ದ ಸುತ್ತಿನಲ್ಲಿ ಅವರು ಆಡಿದರು. ಐದು ಅರ್ಹತಾ ಸುತ್ತುಗಳಲ್ಲಿ 125 ಅಂಕಗಳಿಗೆ 116 ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಭಾರತದ ಮಹೇಶ್ವರಿ ಚವ್ಹಾಣ್ ಅವರು 71 ಪಾಯಿಂಟ್‌ಗಳೊಂದಿಗೆ ಎಂಟನೇ ಸ್ಥಾನ ಪಡೆದರು. ಉದಯೋನ್ಮುಖ ಶೂಟರ್ ರೈಜಾ ದಿಲ್ಲೋನ್ ಅವರು 25ನೇ ಸ್ಥಾನ ಪಡೆದರು.

ಸೇನ್–ಆಕ್ಸೆಲ್ಸನ್ ಜಿದ್ದಾಜಿದ್ದಿ

ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಸೆಮಿಫೈನಲ್ ಇಂದು

ಪ್ಯಾರಿಸ್ (ಪಿಟಿಐ): ಒಲಿಂಪಿಕ್ ಕೂಟದ ಬ್ಯಾಡ್ಮಿಂಟನ್‌ನಲ್ಲಿ ಪುರುಷರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದ ಭಾರತದ ಮೊದಲ ಆಟಗಾರ ಲಕ್ಷ್ಯ ಸೇನ್ ಅವರು ಭಾನುವಾರ ಹಾಲಿ ಚಾಂಪಿಯನ್ ವಿಕ್ಟರ್ ಆಕ್ಸೆಲ್ಸನ್ ಅವರನ್ನು ಎದುರಿಸಲಿದ್ದಾರೆ.

ಶುಕ್ರವಾರ ನಡೆದಿದ್ದ ರೋಚಕ ಕ್ವಾರ್ಟರ್‌ಫೈನಲ್‌ನಲ್ಲಿ ಲಕ್ಷ್ಯ ಅವರು ಚೀನಾ ತೈಪೆಯ ಚೌ ಟೀನ್ ಚೆನ್ ವಿರುದ್ಧ ಜಯಿಸಿದ್ದರು. 22 ವರ್ಷದ ಲಕ್ಷ್ಯ ಅವರಿಗೆ ಇದು ಚೊಚ್ಚಲ ಒಲಿಂಪಿಕ್ಸ್. ಆದರೆ ವಿಕ್ಟರ್ ಅನುಭವಿಯಾಗಿದ್ದಾರೆ. ಅವರು ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಮತ್ತು ಟೋಕಿಯೊದಲ್ಲಿ ಚಿನ್ನ ಜಯಿಸಿದ್ದರು. ಎರಡು ಸಲ ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ.

ಲಕ್ಷ್ಯ ಅವರು ಬೆಂಗಳೂರಿನ ಪ್ರಕಾಶ ಪಡುಕೋಣೆ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ ಪಡುಕೋಣೆ ಮತ್ತು ವಿಮಲ್‌ಕುಮಾರ್ ಅವರು ಲಕ್ಷ್ಯಗೆ ಕೋಚ್ ಆಗಿದ್ದಾರೆ.

14 ವಿಶ್ವ ರ್‍ಯಾಂಕಿಂಗ್

22 ವಯಸ್ಸು

ಲಕ್ಷ್ಯ ಸೇನ್

ಲಕ್ಷ್ಯ ಸೇನ್ (ಭಾರತ)			
ವಿಶ್ವ ಚಾಂಪಿಯನ್‌ಷಿಪ್	ಸಿಂಗಲ್ಸ್	2021	ಕಂಚು
ಥಾಮಸ್ ಕಪ್	ತಂಡ	2022	ಚಿನ್ನ
ಕಾಮನ್‌ವೆಲ್ತ್ ಕೂಟ	ಸಿಂಗಲ್ಸ್	2022	ಚಿನ್ನ
ಕಾಮನ್‌ವೆಲ್ತ್ ಕೂಟ	ಮಿಶ್ರ ತಂಡ	2022	ಬೆಳ್ಳಿ
ಏಷ್ಯನ್ ಗೇಮ್ಸ್	ತಂಡ	2022	ಬೆಳ್ಳಿ
ಏಷ್ಯನ್	ಮಿಶ್ರ ತಂಡ	2023	ಕಂಚು
ಏಷ್ಯನ್	ತಂಡ ವಿಭಾಗ	2020	ಕಂಚು
ಯೂತ್ ಒಲಿಂಪಿಕ್ಸ್	ಮಿಶ್ರ ತಂಡ	2018	ಚಿನ್ನ

2 ವಿಶ್ವ ರ್‍ಯಾಂಕಿಂಗ್

30 ವಯಸ್ಸು

ವಿಕ್ಟರ್ ಆಕ್ಸೆಲ್ಸನ್

ವಿಕ್ಟರ್ ಆಕ್ಸೆಲ್ಸನ್ (ಡೆನ್ಮಾರ್ಕ್)			
ಒಲಿಂಪಿಕ್ಸ್	ಸಿಂಗಲ್ಸ್	2020	ಚಿನ್ನ
ಒಲಿಂಪಿಕ್ಸ್	ಸಿಂಗಲ್ಸ್	2016	ಕಂಚು
ವಿಶ್ವ ಚಾಂಪಿಯನ್‌ಷಿಪ್	ಸಿಂಗಲ್ಸ್	2017	ಚಿನ್ನ
ವಿಶ್ವ ಚಾಂಪಿಯನ್‌ಷಿಪ್	ಸಿಂಗಲ್ಸ್	2022	ಚಿನ್ನ
ವಿಶ್ವ ಚಾಂಪಿಯನ್‌ಷಿಪ್	ಸಿಂಗಲ್ಸ್	2014	ಕಂಚು
ಸುಧೀರ್‌ಮನ್ ಕಪ್	ಮಿಶ್ರ ತಂಡ	2013	ಕಂಚು
ಥಾಮಸ್‌ಕಪ್	ತಂಡ	2012	ಕಂಚು
		2016	ಚಿನ್ನ
		2018	ಕಂಚು
		2020	ಕಂಚು
		2022	ಕಂಚು
ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್	ಸಿಂಗಲ್ಸ್	2010	ಚಿನ್ನ
ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್	ಸಿಂಗಲ್ಸ್	2011	ಬೆಳ್ಳಿ

ನಾಲ್ಕನೇ ಚಿನ್ನ ಗೆದ್ದ ಲಿಯೊ

ಈಜುಕೊಳದಲ್ಲಿ ಸಂಚಲನ ಮೂಡಿಸಿದ ಫ್ರಾನ್ಸ್‌ನ ನವತಾರೆ

ಫ್ರಾನ್ಸ್ ದೇಶದ ಲಿಯೊ ಮಾರಷಾ ಅವರು ಪುರುಷರ 200 ಮೀ ವೈಯಕ್ತಿಕ ಮೆಡ್ಲೆ ಈಜು ಸ್ಪರ್ಧೆಯಲ್ಲಿ ಗುರಿಯತ್ತ ಮುನ್ನುಗ್ಗಿದರು
–ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಪ್ಯಾರಿಸ್ (ಎಎಫ್‌ಪಿ): ಆತಿಥೇಯ ಫ್ರಾನ್ಸ್ ದೇಶದ ಲಿಯೊ ಮಾರಷಾ ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಈಜು ಸ್ಪರ್ಧೆಯ 200 ಮೀ ವೈಯಕ್ತಿಕ ಮೆಡ್ಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದರು. ಇದರೊಂದಿಗೆ ಕಳೆದೊಂದು ವಾರದಲ್ಲಿ ನಾಲ್ಕನೇ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು.

ಅಮೆರಿಕದ ದಿಗ್ಗಜ ಈಜುಪಟು ಮೈಕೆಲ್ ಪೆಲ್ಪ್ಸ್ 2008ರಲ್ಲಿ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ವಿಭಾಗದಲ್ಲಿ ನಾಲ್ಕು ಚಿನ್ನದ ಪದಕ ಜಯಿಸಿದ್ದರು. ಆ ದಾಖಲೆಯನ್ನು ಲಿಯೋ ಸರಿಗಟ್ಟಿದರು. ಶುಕ್ರವಾರ ತಡರಾತ್ರಿ (ಭಾರತೀಯ ಕಾಲಮಾನ) ನಡೆದ 200 ಮೀ ವೈಯಕ್ತಿಕ ಮೆಡ್ಲೆಯಲ್ಲಿ ಅವರು 1ನಿಮಿಷ, 54.06ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇತಿಹಾಸದಲ್ಲಿ ಇದುವರೆಗೆ ಈ ಸ್ಪರ್ಧೆಯಲ್ಲಿ ಹೆಚ್ಚು ವೇಗದಲ್ಲಿ ಗುರಿ ಮುಟ್ಟಿದ ದಾಖಲೆಪಟ್ಟಿಯಲ್ಲಿ ಅವರು ಎರಡನೇ ಸ್ಥಾನ ಪಡೆದರು.

ಇದೇ ವಿಭಾಗದಲ್ಲಿ ಬ್ರಿಟನ್‌ನ ಡಂಕನ್ ಸ್ಕಾಟ್ ಬೆಳ್ಳಿ ಮತ್ತು ಚೀನಾ ವಾಂಗ್ ಶನ್ ಕಂಚಿನ ಪದಕ ಗಳಿಸಿದರು.

ಲಾ ಡಿಫೆನ್ಸಾ ಅರೆನಾದಲ್ಲಿ ಆತಿಥೇಯ ದೇಶದ ಅಭಿಮಾನಿಗಳಿಗೆ ಸಂಭ್ರಮದ ಹೊನಲು ಹರಿಯಿತು. ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರೂ ಈ ಸಂದರ್ಭದಲ್ಲಿ ಜನರೊಂದಿಗೆ ಇದ್ದು ಸಂಭ್ರಮಿಸಿದರು.

'ಈ ವಾರ ಎಲ್ಲವೂ ಕರಾರುವಾಕ್ ಆಗಿದೆ. ಯಾವುದೇ ಲೋಪವೂ ಆಗಿಲ್ಲ' ಎಂದು 22 ವರ್ಷದ ಲಿಯೋ ಸಂತಸ ವ್ಯಕ್ತಪಡಿಸಿರು.

ಅವರು ಈಗಾಗಲೇ 200 ಮೀ ಬಟರ್‌ಫ್ಲೈ, 200 ಮೀ ಬ್ರೆಸ್ಟ್‌ಸ್ಟ್ರೋಕ್ ಮತ್ತು 400 ಮೀ ವೈಯಕ್ತಿಕ ಮೆಡ್ಲೆಯಲ್ಲಿ ಚಿನ್ನದ ಪದಕಗಳನ್ನು ಜಯಿಸಿದ್ದಾರೆ.

'ಇದು ಆರಂಭವಷ್ಟೇ. ನನ್ನ ಮುಂದಿನ ಗುರಿ ಲಾಸ್ ಏಂಜಲೀಸ್. ನಾನು ನಿಜಕ್ಕೂ ಉತ್ಸುಕನಾಗಿರುವೆ' ಎಂದು ಮುಂದಿನ ಸಲದ (2028) ಒಲಿಂಪಿಕ್ಸ್‌ನಲ್ಲಿಯೂ ಪದಕ ಗೆಲ್ಲುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಪ್ಯಾರಿಸ್ ಕೂಟದಲ್ಲಿ ಅವರು ಎರಡು ರಿಲೆ ಸ್ಪರ್ಧೆಗಳಲ್ಲಿ ತಮ್ಮ ದೇಶದ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಚಿನ್ನದೊಂದಿಗೆ ಝೆಂಗ್ ಕ್ವಿನ್‌ವೆ

ಟೆನಿಸ್ ಸಿಂಗಲ್ಸ್: ಚೀನಾದ ಝೆಂಗ್‌ಗೆ ಚಿನ್ನದ ಪದಕ

ಪ್ಯಾರಿಸ್ (ಎಎಫ್‌ಪಿ): ಝೆಂಗ್ ಕ್ವಿನ್‌ವೆನ್ ಒಲಿಂಪಿಕ್ಸ್‌ನ ಟೆನಿಸ್ ಮಹಿಳಾ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು. ಈ ಮೂಲಕ ಸಿಂಗಲ್ಸ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಚೀನಾದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ 21 ವರ್ಷ ವಯಸ್ಸಿನ ಝೆಂಗ್ ಅವರು ಶನಿವಾರ ನಡೆದ ಫೈನಲ್‌ನಲ್ಲಿ 6–2, 6–3ರಿಂದ ಕ್ರೊವೇಷ್ಯಾದ ಡೋನಾ ವೆಕಿಚ್ ಅವರನ್ನು ಸುಲಭವಾಗಿ ಮಣಿಸಿದರು. ಅವರು ಈ ವರ್ಷ ಆಸ್ಟ್ರೇಲಿಯಾ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು. ಟೆನಿಸ್‌ನಲ್ಲಿ ಚೀನಾಕ್ಕೆ ದಕ್ಕಿದ ಎರಡನೇ ಚಿನ್ನದ ಪದಕ ಇದಾಗಿದೆ. 2004ರ ಅಥೆನ್ಸ್ ಕೂಟದಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ (ಲಿ ಟಿಂಗ್ ಮತ್ತು ಸನ್ ಟಿಯಾಂಟಿಯನ್) ಮೊದಲ ಸ್ವರ್ಣ ಜಯಿಸಿತ್ತು.

ಭಾನುವಾರ ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಮತ್ತು ಸ್ಪೇನ್ ಕಾರ್ಲೋಸ್ ಅಲ್ಕರಾಜ್ ಸೆಣಸಾಡುವರು.

ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದ ದೀಪಿಕಾ ಕುಮಾರಿ

ಭಾರತದ ಬಿಲ್ಗಾರರ ಸವಾಲು ಅಂತ್ಯ

ಭಾರತದ ದೀಪಿಕಾ ಕುಮಾರಿ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಭಾರತದ ಆರ್ಚರಿ ಪಟುಗಳ ಸವಾಲು ಶನಿವಾರ ಅಂತ್ಯಗೊಂಡಿತು. ಕೊನೆಯ ಭರವಸೆಯಾಗಿದ್ದ ಅನುಭವಿ ದೀಪಿಕಾ ಕುಮಾರಿ ಮಹಿಳೆಯರ ವೈಯಕ್ತಿಕ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು.

ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ದೀಪಿಕಾ 6–4 ಅಂತರದಲ್ಲಿ ಜರ್ಮನಿಯ ಮಿಷೆಲ್ ಕ್ರೊಪ್ಪೆನ್ ವಿರುದ್ಧ ಜಯ ಸಾಧಿಸಿ ಎಂಟರ ಘಟ್ಟ ತಲುಪಿ ಚೊಚ್ಚಲ ಪದಕದ ಭರವಸೆ ಮೂಡಿಸಿದ್ದರು. ಆದರೆ, ಅಲ್ಲಿ ತೀವ್ರ ಒತ್ತಡಕ್ಕೆ ಸಿಲುಕಿದ ಅವರು 4–6ರಿಂದ ದಕ್ಷಿಣ ಕೊರಿಯಾದ ಸುಹ್ಯೆನ್ ನಾಮ್ ಅವರಿಗೆ ಶರಣಾದರು. ಹೀಗಾಗಿ, ಪದಕದ ಕನಸು ಈ ಬಾರಿಯೂ ನನಸಾಗಲಿಲ್ಲ.

ಮೊದಲ ಮೂರು ಸೆಟ್ ಅಂತ್ಯಕ್ಕೆ 4–2ರ ಮುನ್ನಡೆ ಪಡೆದಿದ್ದ 30 ವರ್ಷ ವಯಸ್ಸಿನ ದೀಪಿಕಾ, ಸೆಮಿಫೈನಲ್ ಪ್ರವೇಶಿಸುವ ಹೊಸ್ತಿಲಲ್ಲಿದ್ದರು. ಆದರೆ, ನಾಲ್ಕನೇ ಸೆಟ್‌ನ ಎರಡನೇ ಬಾಣ ಗುರಿ ತಪ್ಪಿದ್ದು ಅವರಿಗೆ ದುಬಾರಿಯಾಯಿತು. ನಾಲ್ಕು ಸೆಟ್‌ಗಳ ಮುಕ್ತಾಯಕ್ಕೆ ಉಭಯ ಸ್ಪರ್ಧಿಗಳು 4–4 ಸಮಬಲ ಹೊಂದಿದ್ದರು. ನಿರ್ಣಾಯಕ ಸೆಟ್‌ನಲ್ಲಿ ದೀಪಿಕಾ ಮುನ್ನಡೆ ಪಡೆಯಲು ವಿಫಲವಾದರು. ನಿಖರವಾಗಿ ಗುರಿಯಿಟ್ಟ 19 ವರ್ಷ ವಯಸ್ಸಿನ ನಾಮ್ ಮುಂದಿನ ಸುತ್ತು ಪ್ರವೇಶಿಸಿದರು.

ಈ ಹಿಂದೆ ಶಾಂಘೈನಲ್ಲಿ ನಡೆದ ವಿಶ್ವಕಪ್‌ನಲ್ಲಿ ನಾಮ್ ಅವರನ್ನು ಸೆಮಿಫೈನಲ್‌ಲ್ಲಿ ದೀಪಿಕಾ ಪರಾಭವಗೊಳಿಸಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದರು. ಆದರೆ, ಇಲ್ಲಿ ಅದು ಪುನರಾವರ್ತನೆಯಾಗಲಿಲ್ಲ.

ತಂಡ ವಿಭಾಗದ ಪಂದ್ಯದಲ್ಲಿ ಕಳಪೆ ಪ್ರದರ್ಶನಕ್ಕಾಗಿ ದೀಪಿಕಾ ವಿರುದ್ಧ ಟೀಕೆಗಳು ವ್ಯಕ್ತವಾಗಿದ್ದವು. ಆದರೆ, ವೈಯಕ್ತಿಕ ಸ್ಪರ್ಧೆಯಲ್ಲಿ ಸುಧಾರಿತ ಪ್ರದರ್ಶನ ನೀಡಿ ಗಮನ ಸೆಳೆದರು.

ಭಜನ್‌ಗೆ ನಿರಾಸೆ: ಭಾರತದ 18 ವರ್ಷ ವಯಸ್ಸಿನ ಭಜನ್ ಕೌರ್ ಅವರು 16ರ ಘಟ್ಟದ ಪಂದ್ಯದಲ್ಲಿ ಇಂಡೊನೇಷ್ಯಾದ ದಿಯಾನಂದ ಚೊಯಿರುನಿಸಾ ವಿರುದ್ಧ ಶೂಟ್ ಆಫ್‌ನಲ್ಲಿ ಪರಾಭವಗೊಂಡರು.

ಐದು ಸೆಟ್‌ಗಳಲ್ಲಿ ಭಜನ್ 28–29, 27–25, 26–28, 28–28, 27–26 ಸಮಬಲ ಸಾಧಿಸಿದ್ದರು. ಆದರೆ, ಶೂಟ್ ಆಫ್‌ನಲ್ಲಿ ಎಡವಿದರು. ಅಲ್ಲಿ ಭಾರತದ ಬಿಲ್ಗಾರ್ತಿ 8 ಅಂಕ ಪಡೆದರೆ, ಎದುರಾಳಿ ಆಟಗಾರ್ತಿ 9 ಸ್ಕೋರ್ ಪಡೆದು ಮುಂದಿನ ಸುತ್ತು ಪ್ರವೇಶಿಸಿದರು.

ಅಂಕಿತಾ ಭಕತ್ ಮತ್ತು ಧೀರಜ್ ಬೊಮ್ಮದೇವರ ಅವರನ್ನು ಒಳಗೊಂಡ ಮಿಶ್ರ ತಂಡವು ಶುಕ್ರವಾರ ನಾಲ್ಕನೇ ಸ್ಥಾನ ಪಡೆದಿತ್ತು. ಇದು ಆರ್ಚರಿಯಲ್ಲಿ ಭಾರತದ ಅತ್ಯುತ್ತಮ ಪ್ರದರ್ಶನವಾಗಿದೆ.

ಲಿಮ್ ಸಿಹ್ಯೆನ್‌ಗೆ ಚಿನ್ನ: ಮಹಿಳೆಯರ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳು ದಕ್ಷಿಣ ಕೊರಿಯಾ ಪಾಲಾದವು. ಫೈನಲ್‌ನಲ್ಲಿ ಲಿಮ್ ಸಿಹ್ಯೆನ್ ಮತ್ತು ಸುಹ್ಯೆನ್ ನಾಮ್ ಮುಖಾಮುಖಿಯಾಗಿದ್ದು, 7–3 ಅಂತರದಿಂದ ಲಿಮ್ ಗೆದ್ದರು. ಕಂಚಿನ ಪದಕವನ್ನು ಆತಿಥೇಯ ಫ್ರಾನ್ಸ್‌ನ ಲಿಸಾ ಬಾರ್ಬೆಲಿನ್ ಗೆದ್ದುಕೊಂಡರು.

ಪದಕ ಪಟ್ಟಿ				
ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	16	11	9	36
ಅಮೆರಿಕ	12	24	21	57
ಫ್ರಾನ್ಸ್	12	14	15	41
ಆಸ್ಟ್ರೇಲಿಯಾ	12	7	6	25
ಬ್ರಿಟನ್	10	10	13	33
ದ.ಕೊರಿಯಾ	9	7	5	21
ಜಪಾನ್	8	5	9	22
ಇಟಲಿ	6	8	5	19
ನೆದರ್‌ಲೆಂಡ್ಸ್	6	4	4	14
ಭಾರತ	0	0	3	3

ಪಟ್ಟಿಯಲ್ಲಿ ಭಾರತ 50ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಶೂಟಿಂಗ್
ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್ ಕ್ವಾಲಿಫಿಕೇಷನ್ ಸ್ಟೇಜ್–1: ವಿಜಯವೀರ್ ಸಿಧು, ಅನಿಶ್ ಮಧ್ಯಾಹ್ನ 12.30

ಪುರುಷರ ಹಾಕಿ
ಕ್ವಾರ್ಟರ್‌ಫೈನಲ್ ಪಂದ್ಯ: ಭಾರತ ವಿರುದ್ಧ ಬ್ರಿಟನ್, ಮಧ್ಯಾಹ್ನ 1.30

ಅಥ್ಲೆಟಿಕ್ಸ್
ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್ ಮೊದಲ ಸುತ್ತು: ಪಾರುಲ್ ಚೌಧರಿ, ಮಧ್ಯಾಹ್ನ 1.35
ಪುರುಷರ ಲಾಂಗ್‌ಜಂಪ್, ಅರ್ಹತಾ ಸುತ್ತು: ಜೆಸ್ವಿನ್ ಅಲ್ಡ್ರಿನ್ ಮಧ್ಯಾಹ್ನ 2.30

ಬಾಕ್ಸಿಂಗ್
ಮಹಿಳೆಯರ 75 ಕೆ.ಜಿ. ಕ್ವಾರ್ಟರ್‌ಫೈನಲ್: ಲವ್ಲಿನಾ ಬೊರ್ಗೊಹೈನ್ ವಿರುದ್ಧ ಲಿ ಕ್ವಿಯಾನ್ (ಚೀನಾ) ಮಧ್ಯಾಹ್ನ 3.02

ಬ್ಯಾಡ್ಮಿಂಟನ್
ಪುರುಷರ ಸಿಂಗಲ್ಸ್ ಸೆಮಿಫೈನಲ್: ಲಕ್ಷ್ಯ ಸೇನ್ ವಿರುದ್ಧ ವಿಕ್ಟರ್ ಆ್ಯಕ್ಸೆಲ್‌ಸನ್ (ಡೆನ್ಮಾರ್ಕ್), ಮಧ್ಯಾಹ್ನ 3.30

ಸೇಲಿಂಗ್
ಪುರುಷರ ಡಿಂಘಿ ರೇಸ್ 7 ಮತ್ತು 8: ವಿಷ್ಣು ಸರವಣನ್, ಮಧ್ಯಾಹ್ನ 3.35
ಮಹಿಳೆಯರ ಡಿಂಘಿ ರೇಸ್ 7 ಮತ್ತು 8: ನೇತ್ರಾ ಕುಮಾನನ್, ಸಂಜೆ 6.05

ನೇರ ಪ್ರಸಾರ ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ ಆ್ಯಪ್

ತಜಿಂದರ್‌ಪಾಲ್‌ಗೆ 29ನೇ ಸ್ಥಾನ

ಪ್ಯಾರಿಸ್ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಎರಡು ಬಾರಿ ಚಿನ್ನದ ಪದಕ ವಿಜೇತ ತಜಿಂದರ್‌ಪಾಲ್ ಸಿಂಗ್ ತೂರ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನ ಶಾಟ್‌ಪಟ್ ಫೈನಲ್ ಪ್ರವೇಶಿಸುವಲ್ಲಿ ವಿಫಲರಾದರು. ಎ ಗುಂಪಿನ ಸ್ಪರ್ಧೆಯಲ್ಲಿ 15ನೇ ಸ್ಥಾನ ಮತ್ತು ಒಟ್ಟಾರೆ 29ನೇ ಸ್ಥಾನ ಪಡೆದರು.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಆಕ್ಷೇಪ

ಬಾಕ್ಸರ್‌ಗಳ ವಿರುದ್ಧ ದ್ವೇಷಭಾಷಣ

ಇಮಾನೆ ಖೆಲಿಫ್ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಪಿ/ ಎಎಫ್‌ಪಿ/ ರಾಯಿಟರ್ಸ್): ಬಾಕ್ಸರ್‌ಗಳಾದ ಇಮಾನೆ ಖೆಲಿಫ್ ಮತ್ತು ಲಿನ್ ಯು–ಟಿಂಗ್ ಅವರ ವಿರುದ್ಧ ಕೇಳಿಬರುತ್ತಿರುವ 'ದ್ವೇಷದ ಮಾತು'ಗಳು ಯಾವುದೇ ಕಾರಣಕ್ಕೆ ಸಮ್ಮತಾರ್ಹವಲ್ಲ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಅಧ್ಯಕ್ಷ ಥಾಮಸ್ ಬಾಕ್ ತೀಕ್ಷ್ಣವಾಗಿ ಹೇಳಿದ್ದಾರೆ.

'ರಾಜಕೀಯ ಪ್ರೇರಿತ... ಸಾಂಸ್ಕೃತಿಕ ಸಮರದಲ್ಲಿ ನಾವು ಭಾಗಿಯಾಗವುದಿಲ್ಲ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. 26ರಂದು ಆರಂಭವಾದ ಪ್ಯಾರಿಸ್ ಒಲಿಂಪಿಕ್ಸ್ ಈಗ ಅರ್ಧ ಹಾದಿ ಕ್ರಮಿಸಿದೆ.

'ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯಸೂಚಿ ಆಧಾರಿತ ದ್ವೇಷ ಮತ್ತು ನಿಂದನೆಯ ಮಾತುಗಳು ಕೇಳಿಬಂದಿವೆ. ಇದು ಯಾವುದೇ ಕಾರಣಕ್ಕೆ ಸ್ವೀಕಾರಾರ್ಹವಲ್ಲ' ಎಂದಿದ್ದಾರೆ.

ಅಲ್ಜೀರಿಯಾದ ಖೆಲಿಫ್ ಮತ್ತು ತೈವಾನ್‌ನ ಲಿನ್ ಅವರ ಡಿಎನ್‌ಎ ಪರೀಕ್ಷೆಯ ವೇಳೆ ಪುರುಷರ ಕ್ರೋಮೋಸೋಮ್ ಅಂಶಗಳು ಕಂಡುಬಂದಿದ್ದವು. ಇದೇ ಕಾರಣಕ್ಕೆ ಅವರನ್ನು ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ದೆಹಲಿಯಲ್ಲಿ 16 ತಿಂಗಳ ಹಿಂದೆ ನಡೆದ ವಿಶ್ವ ಚಾಂಪಿಯನ್‌ಷಿಪ್ ವೇಳೆ ಅನರ್ಹಗೊಳಿಸಿತ್ತು.

ಆದರೆ ಐಒಸಿ ಅವರಿಗೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡಿತ್ತು. ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಸ್ಪರ್ಧೆಯನ್ನು ಐಒಸಿ ನಡೆಸುತ್ತಿದೆ. ಟೋಕಿಯೊದಲ್ಲೂ ಐಒಸಿಯೇ ಬಾಕ್ಸಿಂಗ್ ಸ್ಪರ್ಧೆ ನಡೆಸಿತ್ತು. ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಲು ವಿಫಲವಾಗಿರುವ ಕಾರಣ ರಷ್ಯಾ ನೇತೃತ್ವದ ಬಾಕ್ಸಿಂಗ್ ಸಂಸ್ಥೆ (ಐಬಿಎ) ಯನ್ನು ಐಒಸಿ ಮಾನ್ಯಮಾಡಿಲ್ಲ.

ಖೆಲಿಫ್ ಅವರಿಗೆ ಆನ್‌ಲೈನ್‌ನಲ್ಲಿ ಶೋಷಣೆಯಾಗುತ್ತಿದೆ ಎಂದು ಪ್ರತಿಭಟಿಸಿ ಅಲ್ಜೀರಿಯಾ ಒಲಿಂಪಿಕ್ ಮತ್ತು ಕ್ರೀಡಾ ಸಮಿತಿ ಐಒಸಿಗೆ ಶನಿವಾರ ಅಧಿಕೃತವಾಗಿ ದೂರು ಸಲ್ಲಿಸಿದೆ.

66 ಕೆ.ಜಿ. ವಿಭಾಗದ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಖೆಲಿಫ್ ಪ್ರಹಾರ ತಾಳಲಾರದೇ ಕೇವಲ 46 ಸೆಕೆಂಡುಗಳಲ್ಲಿ ಸೆಣಸಾಟ ತ್ಯಜಿಸಿ ಕಣ್ಣೀರು ಹಾಕಿದ್ದ ಇಟಲಿಯ ಏಂಜೆಲಾ ಕ್ಯಾರಿನಿ ಅವರಿಗೆ ಉದ್ಯಮಿ ಎಲಾನ್ ಮಸ್ಕ್, ಲೇಖಕಿ ಜೆ.ಕೆ. ರೋಲಿಂಗ್ ಸೇರಿದಂತೆ ಹಲವು ಖ್ಯಾತನಾಮರು ಶುಕ್ರವಾರ ಬೆಂಬಲ ಸೂಚಿಸಿದ್ದರು.

ಪ್ರಕರಣಕ್ಕೆ ತುಪ್ಪ ಸುರಿದ ಐಬಿಎ: ಇದೇ ವೇಳೆ, ಖೆಲಿಫಾ ಎದುರು ಗುರುವಾರ ಸೋತಿದ್ದ ಇಟಲಿಯ ಬಾಕ್ಸರ್ ಏಂಜೆಲಾ ಕ್ಯಾರಿನಿ ಅವರಿಗೆ ಒಂದು ಲಕ್ಷ ಡಾಲರ್ (₹83.75 ಲಕ್ಷ) ನೀಡುವುದಾಗಿ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಪ್ರಕಟಿಸಿ, ವಿವಾದಕ್ಕೆ ತುಪ್ಪಸುರಿದಿದೆ. ಬಾಕ್ಸಿಂಗ್‌ನ ಪ್ರತಿ ವಿಭಾಗದಲ್ಲಿ ಚಿನ್ನ ಗೆದ್ದವರಿಗೆ 1 ಲಕ್ಷ ಡಾಲರ್ ನೀಡುವುದಾಗಿ ಸಂಸ್ಥೆ ಎರಡು ತಿಂಗಳ ಹಿಂದೆ ಪ್ರಕಟಿಸಿತ್ತು.

ತಂದೆಯ ಅಸಮಾಧಾನ: ಇದೇ ವೇಳೆ, ಅಲ್ಜೀರಿಯಾದ ಟಿಯಾರೆಟ್‌ನಿಂದ ಮಾತನಾಡಿರುವ ಇಮಾನೆ ತಂದೆ ಅಮರ್ ಖೆಲಿಫ್, 'ನನ್ನ ಮಗಳು ಕುಟುಂಬಕ್ಕೆ ಗೌರವ ತಂದವಳು. ಅವಳ ವಿರುದ್ಧ ನಡೆಯುತ್ತಿರುವ ವಾಗ್ದಾಳಿ ಅನೈತಿಕವಾದುದು' ಎಂದು ಟೀಕಿಸಿದ್ದಾರೆ.

ಅಲ್ಜೀರಿಯಾ ರಾಜಧಾನಿ ಅಲ್ಜೀರ್ಸ್‌ನಿಂದ ಸುಮಾರು 300 ಕಿ.ಮಿ. ದೂರವಿರುವ ಹಳ್ಳಿಯಲ್ಲಿ ಹುಟ್ಟಿರುವ ಇಮಾನೆ, ಕಟ್ಟಾ ಸಾಂಪ್ರದಾಯಿಕ ದೇಶದಲ್ಲಿ ಬಾಕ್ಸಿಂಗ್‌ಗೆ ಬರಲು ಹಲವು ಅಡೆತಡೆ ಎದುರಿಸಬೇಕಾಯಿತು.

ಈ ಮಧ್ಯೆ ಎಎಫ್‌ಪಿ ಜೊತೆ ಮಾತನಾಡಿರುವ ಇಮಾನೆ 'ನಾನು ದೇಶದ ಹೆಣ್ಣು ಮಕ್ಕಳಿಗೆ ಮತ್ತು ಪುಟ್ಟ ಮಕ್ಕಳಿಗೆ ಸ್ಫೂರ್ತಿಯಾಗಲು ಬಯಸಿದ್ದೇನೆ ಎಂದಿದ್ದಾರೆ.

ಸೆಮಿಗೆ ಇಮಾನೆ

ಇದೇ ವೇಳೆ ಇಮಾನೆ 66 ಕೆ.ಜಿ. ವಿಭಾಗದ ಸೆಮಿಫೈನಲ್ ತಲುಪಿದ್ದಾರೆ. ಶನಿವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಹಂಗೇರಿಯ ಅನ್ನಾ ಲುಕಾ ಅವರನ್ನು ಸರ್ವಾನುಮತದ ತೀರ್ಪಿನ ಮೂಲಕ ಮಣಿಸಿದರು.

ಸಿಮೊನ್ ಬೈಲ್ಸ್‌ಗೆ ಹ್ಯಾಟ್ರಿಕ್ ಚಿನ್ನ



ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಜಿಮ್ನಾಸ್ಟಿಕ್ಸ್ ತಾರೆ ಸಿಮೊನ್ ಬೈಲ್ಸ್ ಶನಿವಾರ ಒಲಿಂಪಿಕ್ಸ್‌ನ ಮಹಿಳೆಯರ ವಾಲ್ಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಇದರೊಂದಿಗೆ ಅವರು ಒಲಿಂಪಿಕ್ಸ್‌ನಲ್ಲಿ ಏಳನೇ ಮತ್ತು ಪ್ಯಾರಿಸ್‌ನಲ್ಲಿ ಮೂರನೇ ಚಿನ್ನ ಜಯಿಸಿದರು.

ವಾಲ್ಟ್ ಸ್ಪರ್ಧೆಯಲ್ಲಿ ಬೆರಗುಗೊಳಿಸುವ ಕಸರತ್ತು ನಡೆಸಿದ ಅವರು 15.300 ಪಾಯಿಂಟ್ಸ್‌ಗಳೊಂದಿಗೆ ಹ್ಯಾಟ್ರಿಕ್ ಚಿನ್ನಕ್ಕೆ ಕೊರಳೊಡ್ಡಿದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಮತ್ತು ಹಾಲಿ ವಿಶ್ವ ಚಾಂಪಿಯನ್ ಬ್ರೆಜಿಲ್‌ನ ರೆಬೆಕಾ ಆಂಡ್ರೇಡ್ (14.966) ಬೆಳ್ಳಿ ಗೆದ್ದರೆ, ಅಮೆರಿಕದ ಜೇಡ್ ಕ್ಯಾರಿ (14.466) ಕಂಚು ತಮ್ಮದಾಗಿಸಿಕೊಂಡರು.

27 ವರ್ಷ ವಯಸ್ಸಿನ ಬೈಲ್ಸ್ ಕೆಲ ದಿನಗಳ ಹಿಂದೆ ತಂಡ ವಿಭಾಗದಲ್ಲಿ ಮತ್ತು ಆಲ್‌ರೌಂಡ್ ವಿಭಾಗದಲ್ಲಿ ಸ್ವರ್ಣ ಗೆದ್ದಿದ್ದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಇನ್ನೂ ಎರಡು ಸ್ಪರ್ಧೆಗಳಲ್ಲಿ ಕಣಕ್ಕಿಳಿಯಲಿದ್ದಾರೆ. ಸೋಮವಾರ ನಡೆಯುವ ಫ್ಲೋರ್ ಎಕ್ಸೈಸ್ ಮತ್ತು ಬ್ಯಾಲೆನ್ಸ್ ಭೀಮ್‌ನಲ್ಲಿ ಅವರು ಪದಕ ಜಯಿಸುವ ವಿಶ್ವಾಸದಲ್ಲಿದ್ದಾರೆ.

ಸೇಂಟ್ ಲೂಸಿಯಾದ ಜೂಲಿಯನ್ ಅಲ್ಫ್ರೆಡ್ (ಮಧ್ಯ) ಗುರಿಯತ್ತ ಮುನ್ನುಗ್ಗಿದರು. ಅಮೆರಿಕದ ಶಕ್ಯಾರಿ ರಿಚರ್ಡ್‌ಸನ್ (ಎಡಕ್ಕೆ) ಮತ್ತು ಮೆಲಿಸಾ ಜೆಫರ್ಸನ್ (ಬಲ) ಕೂಡ ಅವರೊಂದಿಗೆ ಇದ್ದರು –ಎಎಫ್‌ಪಿ ಚಿತ್ರ

ಜೂಲಿಯನ್ ವೇಗದ ರಾಣಿ

ಪ್ಯಾರಿಸ್ (ಎಎಫ್‌ಪಿ): ಸೇಂಟ್ ಲೂಸಿಯಾದ ಉದಯೋನ್ಮುಖ ತಾರೆ ಜೂಲಿಯನ್ ಆಲ್ಫ್ರೆಡ್ ಒಲಿಂಪಿಕ್ಸ್‌ನ 100 ಮೀಟರ್ ಓಟದ ಸ್ಪರ್ಧೆಯಲ್ಲಿ ವೇಗದ ಓಟಗಾರ್ತಿಯಾಗಿ ಹೊರಹೊಮ್ಮಿದರು.

ಈ ವಿಭಾಗದಲ್ಲಿ ಪ್ರಶಸ್ತಿ ಜಯಿಸುವ ಫೇವರಿಟ್ ಆಗಿದ್ದ ಅಮೆರಿಕದ ಶಕ್ಯಾರಿ ರಿಚರ್ಡ್‌ಸನ್ ಅವರನ್ನು ಹಿಂದಿಕ್ಕಿದ ಜೂಲಿಯನ್ ಅಚ್ಚರಿ ಮೂಡಿಸಿದರು. ಶನಿವಾರ ತಡರಾತ್ರಿ (ಭಾರತೀಯ ಕಾಲಮಾನ) ನಡೆದ ಫೈನಲ್‌ನಲ್ಲಿ 23 ವರ್ಷ ವಯಸ್ಸಿನ ಜೂಲಿಯಾನ್ 10.72 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಈ ಒಲಿಂಪಿಕ್ಸ್‌ನಲ್ಲಿ ಮೊದಲ ಪದಕ ಜಯಿಸಿದ ಕೆರೀಬಿಯನ್ ದ್ವೀಪದ ಮಹಿಳೆಯೆಂಬ ಹೆಗ್ಗಳಿಕೆಯೂ ಅವರದ್ದಾಯಿತು.

ಇದಕ್ಕೂ ಮುನ್ನ ಯಾವುದೇ ಹೊರಾಂಗಣದ ಕೂಟಗಳಲ್ಲಿ ಅವರು ಪ್ರಥಮ ಸ್ಥಾನ ಗಳಿಸಿರಲಿಲ್ಲ. ಆದರೆ ಈ ಕೂಟದಲ್ಲಿ ತಮ್ಮ ಸಾಮರ್ಥ್ಯ ಮೆರೆದರು. ಮಿಂಚಿನ ವೇಗದಲ್ಲಿ ಓಡಿ ಘಟಾನುಘಟಿಗಳಿಗೆ ಆಘಾತ ನೀಡಿದರು.

ಶಕ್ಯಾರಿ (10.87 ಸೆ) ಮತ್ತು ಮೆಲಿಸಾ ಜೆಫರ್ಸನ್ (10.92 ಸೆ) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು.

ಎರಡು ಬಾರಿ ಒಲಿಂಪಿಕ್ಸ್ ಚಾಂಪಿಯನ್ ಜಮೈಕಾದ ಶೆಲಿ ಆ್ಯನ್ ಫ್ರೆಸರ್ ಅವರು ಸೆಮಿಫೈನಲ್ ಸ್ಪರ್ಧೆಯಿಂದ ಹಿಂದೆ ಸರಿದು ಅಚ್ಚರಿ ಮೂಡಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರಯೋಜನಗಳ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

REAL ESTATE SELLING

Sites

Arkavathi Layout

55X100 PROPERTY For Sale at Arkavathi Latout, Srirampura (Revenue Title). Contact: 7676900174 6363496142

ARKAVATHI 3 Block 30x40 South BDA 1 km Airport Road. Genuine Buyers. USR-7019770736/ 8951614989.

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT. CONTACT: 8050908920/ 9986866661

BANASHANKARI II,III 30x50 40x60, Banashankari VI 30x40 40x60 50x80, Rajarajeshwarinagar 40x60 50x80 70x96. 9448483699.

BDA SITES Sale Banashankari 6th Stage, Anjanapura, Jpnagar 8th/9th Phase, 20x30, 30x40, 40x60: 9148736555

DIRECT OWNER, 4180 sqft, BDA Corner site-sale/Rent, Banashankari 2nd stage, 80 Feet Road, Near Monotype, Call :9663477722

SALE BDA Site 30x40 BSK 6th Phase 7th Block North facing direct registration No agreement No broker owner 9844270806

Basavanagudi

BASAVANAGUDI NAGASANDRA Circle 40x60,N/W Corner Semi-commercial Site Rs. 29000 per sqft Contact: 9845600007

Electronic City

SURYANAGAR PHASE-I, EAST FACING. 40X65 HIG site for Sale. KHB ALLOTMENT SITE. Contact: 7676829026

Hebbal

BDA'A' KHATA, 60'/40' East Face, Rajivgandhinagar, Hebbal, Kodigehalli gate. Call 6364712736

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Koramangala

SALE 40X60 SITE IN A QUIET AND GREENARY LOCATION OF KORAMANGALA, DETAILS 'MAHAKAAL PROPERTIES' 9900001973

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale. 9916817739

Kempegowda Layout

KEMPEGOWDA LAYOUT 7th Block, F Sector, 30x40 South Facing, Price 7000/-. Negotiable. Direct Owner, Contact: 9844947990, 8431089761.

"KEMPEGOWDA LAYOUT 1st Block K-Sector 30x40 East, near 300 feet Peripheral Ring Road. 9448432633/ 7022218837"

Mallathahalli

SITE SALE DC Conversion A-Khatha Mallathahalli, Balaji Layout 40X60 W/F, Direct Registration. No Agreement. No Broker. Owner 9880511777.

Nagarabhavi

SALE SITE Kalyan Housing Society Nagarbhavi 1453sft South East Corner 15,000/- Psqft Negotiable 9886673794

Vijayanagar

35/50 NORTH East Corner BDA Site Available for Sale. 9th Main, Vijayanagar Contact-9513355569

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

RMV BHOOPASANDRA BDA Site 29'x57' East 40' Road, off Chawla Road/Central Excise, 3.15Crore. Owner: 9980555558

Vishweshwariah Layout

"VISVESHWARAIAH LAYOUT 1st Block 20x30 East facing Site for sale Builder location, Genuine Buyers Contact: 7975775349"

VISHWESWARAIAH LAYOUT BDA SITE 9th Block, 40x60 South Facing, Price 10,700/- Negotiable. Direct Owner, Contact: 9844947990, 8431089761.

"1140 SQFT Residential BBMP Conversion Site Sale Arunachalam Layout [Attched 1st Block Vishveshwaraiah Layout]- 9845143579"

20X30 SITE For Sale Vishweshwaraiah Layout 1st 7th & 8th Block West Facing: 8217392686/ 9980433004

DIRECT OWNER 40x60 BDA Site-Sale VISHVESWARAIAH LAYOUT BLOCK-7,near KLE Law College,Adjacent to Nagarabhavi. Call:9742681666

40X60 SITE Sale Vishveshraiah Layout 5th Block Direct Owner & NGF Layout Nagarabavi 40X60 NW Corner MK Store: 8310003509

BDA 30X40 East Facing site,4th Block, Good Location,In Between 80 feet Road and Nice Road, 7500 Per Sft. Contact Buyers Only: 9945564769

Vidyaranyapura

VIDYARANYAPURA HMT Layout 40X60 BDA APPROVED Site Excellent Location 40 Feet Road For-Sale, 9738111222, 9341260828

Whitefield

WANTED SITES 1200 Upto 2400 in Whitefield, Devanahalli, Sarjapura Road. Companies Owners Welcome. Call: 9480014028.

House

J P Nagar

JP-NAGAR 2ND Near Central Mall 40X60 Old House 6,0000000/ 30X50 3 Unit House 450,00000/ 3rd Near Mini Forest, 60X90 East House, 16,5000000/- 9739995042

JP-NAGAR 3RD Near Mini Forest Commercial 42X75 Corner 5 Floors Rental Income Building 60ft Road, 12,20,00000/- 9739995042

HOUSE SALE: J.P.Nagar, 6th Phase, BDA site, E/F, 4 bedroom, Separate car shed. Contact: 9880402575.

Mysore

KRISHNAMURTHYPURAM, MYSORE 570004. House on 46x61.5-site, North facing, prime location, agents excuse. 9945689540/ 8105689819

Nagarabhavi

"30X40 NEW Building ₹1.20 Lakhs Rental income for sale ₹3.70 Crore, Opposite Hotel Nammura Thindi, Nagarabhavi. 9945309883"

Rajarajeshwari Nagar

GROUND +1 Building Sale in RR.Nagar.(Near Ideal Home) 40x60 A khata North Facing 3.60Cr. (Rental Income 50,000). 8951545457

Sadashiva Nagar

RENT 4 BHK INDEPENDENT BUNGALOW SERVANT ROOM PARTY HALL FIVE CAR PARKING 1,40,000 PM 9035883017

Vishweshwariah Layout

SALE BDA Newly Constructed Ground 1BHK, Parking with 4BHK Triplex House on 20x30 Visveswaraiah Layout 6th Block, Owner: 9886644375

Flat

Benson Town

SALE FLAT @ Nandidurg Road in Shanti Kiran Apartments 3 BHK, Area 1545 sq.ft. Contact: 9845044038

Cambridge Layout

CAMBRIDGE NEAR Saibaba Temple fully furnished studio Apartment 45 lacs onwards. ct: 9087560000

Marathahalli

"SALE 3BHK, 1635 sqft Apartment Flat 82 Lakhs Laxmi Layout, Munnekolal, Marathahalli. Call: 7760388034/ 9242135834"

Sadashiva Nagar

SALE 3BR flat facing Sankey Rd, Sadashiv Nagar Ph: Indra 9845816686

Uttarahalli

POORNAPRAGNA LAYOUT SALE 3 BHK Deluxe Flats, Ready to Move, 2250`sft. & 1850`sft. Lift`& Power Back-up CCTV. Call: 9390431249.

3/4 BHK New Luxurious Flat Sale, A khatha Ready-move 75L/ 1cr. carparking, cauvery, Vaasthu. 9844394444, 9019110623.

Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

Yelahanka

YELAHANKA RAMANASHREE California Classique Temple Tree Flat 2-BHK 1285 Sqft East Facing Rs,1.30Cr, 9738227522 9916034567

Agricultural Land

Mysore

3 ACRES Coconut yielding trees 180Nos. 3' Bore, 24/7 power. Kabini Canal water, fencing 25min Mysore Airport. Hullahalli, Nanjangud Tq., Mysore. 400mt from SH57, Tar road. Suitable for Farm house & future can be converted to residential / commercial. Contact : 9535728433 / 9916776346

Farm House/ Land/ Resorts

Mysore

Luxury Farm Land for Sale
Land : 3 Acres 13 Gunta
"A" Khata- Residential Conversion land(North-60 feet Road, West-40 feet Road, South-30 Feet Road). **General category**–Clear Title, 1KM from Mysore-Ooty Highway. 20KM from Mysore Airport. 27KM from Mysore. 2 Labour Shed, 1 Pump house Room,1 Borewell, 3 Big Water Storage Tank & both side compound wall. **Trees**-Teak wood-800, Mango-250, Silver-200, Mahagoni-100, Red Sandel-80, Sandel-80, Coconut-15, Assorted Fruits-40.
Quoted Price Per Sq ft-280/-
Please contact genuine interested buyers only. Broker excuse.
Contact : 79759-23149

Commerical

Mysore Road

FOR SALE

COMMERCIAL LAND
Warehouse Converted Land, Main road attach @ Chikallur fully compound covered, 22000 sqft. Available.Rs. 2750 /sqft (negotibale) **M : 9900040216**

Cambridge Layout

CAMBRIDGE NEAR Saibaba Temple ground, first floor CCP, 100% power backup 14k/ sft. ct: 9087560000

General

SALE GOA 5STAR HOTELS WITH CASINO. MANGALORE SALE PROPERTIES : BEACH / RIVERSIDE FOR RESORTS, INVESTMENTS, LAND NEAR MANGALORE PORT FOR WAREHOUSE/ CONTAINERS. COMMERCIAL, RESIDENTIAL LAND , AGRICULTURE FARMS. AVAILABLE READY/BUILT TO SUIT. RENTAL COMMERCIAL SPACE 15000SFT. TO 2,00,000SFT. FOR SOFTWARE / MNC, CORPORATES . 9702932709

HAL And Around

COMMERCIAL SPACE for Sale, Oxford House, 302, 2nd floor, Rustum Bagh Road, Near Manipal Hospital, Bangalore, Built up 1010 sqft, Call: 9480885373/ 8310746079

Sadashiva Nagar

MEKHRI CIRCLE- C.V.Raman Road 60x100 Commercial Property. Genuine Buyers. Contact 9845036826/ whatsapp

Commercial Building

Majestic And Around

BUILDING FOR Immediate Sale About 1000 Sq. Feet Binny Mill Road, Cottonpet. Contact 9448950350

Commercial Land

J P Nagar

SITE FOR Sale - 45x80sqft east facing Industrial Site at Visweswaraiah Industrial Layout, Alahalli, Bangalore. Contact: 9845259183

Residential/ Commercial

Devanahalli

1100 SQFT BIAAPA Approved Plot Sale at Military officers society Devanahalli Rs 3300000. M 9752121223

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED BDA & BBMP SITES Anjanapura Banashankari 6th Stage, BCC & BCMC Layout, JP.Nagar 8th 9th Phase, Vishweshwaraiah Layout, Contact: 9845138202

WANTED BDA & BBMP SITES Anjanapura, JPNagar 8th/ 9th Phase, Banashankari 6th Stage, BCC & BCMC Layout NarayanNagar Contact: 9880300791

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Vidyaranyapura

WANTED BDA 30x40 Site Vidyaranyapura/ Banashankari 6th Stage 1st, 2nd, 3rd Block. Owners Contact: 9886149578.

Industrial & Factory

Devanahalli

NEED INDUSTRIAL land or industrial convertible land of 2 to 3 acres in 10 km surrounding of KIAL. Interested sellers may call on below number. 9886020888

Hosur Road

REQUIRE INDUSTRIAL LAND 2`to`5 acres for purchase around surrounding Jigani, Indlawadi circle, Chandpaura anekal Road and Athibele 9740803686

Joint Development

Joint Venture

"URGENTLY REQUIRED- PROPERTY any dimensions in &`around Bangalore for Builders (Joint Venture or Individual). genuine Parties-Call: 9019533999/ 9731379933"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Plumbing & Maintenance

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

AVAILABLE FOR RENT / SALE
SHOWROOM / OFFICE / WAREHOUSE SPACES
• Location : Bangalore
• Area : 3,000 to 100,000 Sq. ft.
• Options : Furnished and Plug & Play Office in CBD as well as other areas.
INDEPENDENT BUNGALOW
• Location : Near UB City, Bangalore Club.
• Features : 11 Bedrooms across 3 Separate Units (Ground, First, Second Floor), Garden Area, Terrace, Outhouse.
• Suitable for : Office, Residential, Company Guest House.
• Rent : Rs. 12 Lakhs (Negotiable)
INVESTMENT PROPERTIES
• Types : Malls, Tech Parks, IT Parks, Warehouses, Star Hotels, Tented Properties.
• ROI : 5% to 12%.
• Price Range : Rs. 7 Crores to Rs. 1,000 Crores.
REQUIREMENTS
Clear Title Lands :
• Seeking : Agricultural, Residential, Commercial, Industrial Lands (1 to 100+ Acres) in Major Cities across India.
• For : Built-to-Suit Schools, Colleges, Hospitals, Star Hotels, Warehouses, Malls, etc.
Contact : Mr. SEVENRAJ
98450 20007 / 98457 17777
sevenraj@gmail.com

"COMMERCIAL OFFICE space for`Rent Banashankari 2nd-Stage 8000 Sqft single floor, 1500 Sqft, 2000 Sqft, "Sri.Ganesh Estate"- 9845286505"

'800 SFT office accommodation near Indiranagar Metro Station Bengaluru on rent 30,000. Contact 9449800807'

RENTAL NEAR Kundalahalli Gate, OldAirport Road. Near Kavery Hospital, Fully Furnished Office Space, 3000 Sft. 2 Floors DG, Lift, Water, Parking. 9342822252/ 9916922211

AVAILABLE 10000 Square Feet Commercial Building for Bank, Office, Hospitals etc in HSR 6th Sector 80+40 Feet Main Road. Call 9880022644.

Godown

4000 SQFT Factory shed Gowdon available for rent, 28HP Electricity,Near Makali Tumkur Road. 9900265678

LONG TERM OFFICE RENTAL ON OLD AIRPORT ROAD



7447 Sqft Fitted Out Office with 96 Workstations, 5 Cabins, 3 Meeting Rooms, 1Board,1 MD Cabin, 1 Cafeteria.
On Old airport road next to HAL museum.
Msg only by WhatsApp: 98450 31550 for more details. Brokers excuse !

BUSINESS

Business Offers

General

Finance

WE ARE doing Education/ Purchase/ Mortgage and Home loan,From financial Institutions, Contact Mrs. Jyothi 8971132289/9380509779.

Business to Business

Business

RETIRED/ HOUSEWIVES and others Open DMAT & Earn 5000/ per day in your bank. 8792645301

WANTED INVESTORS/ Partners on profit sharing basis for a new product manufacturing company. Ph: 9448340164/ 9480043463

WANTED BUSINESS PARTNER HOTEL BUSINESS CONTACT: 8892501007/ 9606701007

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
9845114560 | 9901641752
*Conditions apply

Established Multispeciality 40 Bedded Hospital in prime location in Chennai - T.Nagar
AVAILABLE FOR RENTAL FOR A LONG LEASE
with good advance with the following facilities:
2 Operation Theatres, ICU & NICU, X-RAY, Ultrasound
Centralised AC with fully equipped infrastructure & 100% power backup and also highly suitable for Secondary or Tertiary Collection & Treatment Center or Corporate Hospitals with Pharmacy.
IMMEDIATE OCCUPATION
Contact : +91 90432 41831
Email : shanthisellers123@gmail.com

MORE Classifieds Ads on Subsequent Pages

ಯಾತ್ರೆ: ಪ್ರಯಾಣಿಕರು ಹೈರಾಣ

‘ಮೈಸೂರು ಚಲೋ’: ಮೈಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆ, ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನ ಹಗರಣ ಖಂಡಿಸಿ ಹಾಗೂ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಜಂಟಿಯಾಗಿ ಆರಂಭಿಸಿದ ಪಾದಯಾತ್ರೆ ಪರಿಣಾಮ ಮೈಸೂರು ರಸ್ತೆಯಲ್ಲಿ ಶನಿವಾರ ಸಂಚಾರ ದಟ್ಟಣೆ ಉಂಟಾಗಿ ಪ್ರಯಾಣಿಕರು ಹಾಗೂ ಚಾಲಕರು ಹೈರಾಣಾದರು.

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ದಟ್ಟಣೆಯಿಂದ ಸಮಸ್ಯೆ ಉಂಟಾಗಿತ್ತು. ನಗರದ ವಿವಿಧ ಜಂಕ್ಷನ್‌ಗಳಲ್ಲಿ ವಾಹನ ಸವಾರರು ಕಾದುಕಾದು ಬಸವಳಿದರು.

ಕೆಂಗೇರಿಯ ನೈಸ್ ರಸ್ತೆಯ ಕೆಂಪಮ್ಮ ದೇವಸ್ಥಾನ ಬಳಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು ಮೈಸೂರು ರಸ್ತೆಯ ಮೂಲಕವೇ ಕಾರು, ಬಸ್‌ಗಳಲ್ಲಿ ಕಾರ್ಯಕರ್ತರು ದೇವಸ್ಥಾನದ ಬಳಿಗೆ ತೆರಳಿದರು. ಇದರಿಂದ ಮೈಸೂರು ರಸ್ತೆಯ ಹಲವು ಜಂಕ್ಷನ್‌ಗಳಲ್ಲಿ ದಟ್ಟಣೆ ಉಂಟಾಗಿತ್ತು.

ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್ ಬಳಿ ಸಾಲುಗಟ್ಟಿ ನಿಂತಿದ್ದ ವಾಹನಗಳು – ಪ್ರಜಾವಾಣಿ ಚಿತ್ರ/ರಂಜು ಪಿ.

ಜ್ಞಾನಭಾರತಿ ಜಂಕ್ಷನ್, ಆರ್.ವಿ.ಕಾಲೇಜು ಬಳಿ, ಕೆಂಗೇರಿ, ನೈಸ್ ರೋಡ್ ಜಂಕ್ಷನ್, ಹೆಜ್ಜಾಲ ಹಾಗೂ ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕೆಲವು ಜಂಕ್ಷನ್‌ಗಳಲ್ಲಿ ಆಂಬುಲೆನ್ಸ್‌ಗಳು ಸಿಲುಕಿ ರೋಗಿಗಳು ಪರದಾಡಿದರು. ಇನ್ನು, ಮೈಸೂರಿನತ್ತ ಹೊರಟಿದ್ದವರೂ ದಟ್ಟಣೆಯಲ್ಲಿ ಸಿಲುಕಿ ಪರದಾಡಿದರು.

ಪಾದಯಾತ್ರೆ: ಬಿ.ವೈ ವಿಜಯೇಂದ್ರ ಹೇಳಿಕೆ

‘ಮೊಟಕು ಪ್ರಶ್ನೆಯೇ ಇಲ್ಲ’

ಪ್ರಜಾವಾಣಿ ವಾರ್ತೆ

ಬಿ.ವೈ. ವಿಜಯೇಂದ್ರ

ಮೈಸೂರು: ‘ರಾಜ್ಯ ಸರ್ಕಾರದ ಹಗರಣಗಳ ವಿರುದ್ಧ ಬಿಜೆಪಿ-ಜೆಡಿಎಸ್‌ನಿಂದ ಹಮ್ಮಿಕೊಂಡಿರುವ ಮೈಸೂರು ಚಲೋ ಪಾದಯಾತ್ರೆ ಮೊಟಕಾಗುವ ಪ್ರಶ್ನೆಯೇ ಇಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಇಲ್ಲಿನ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ಶನಿವಾರ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ‘ಮುಡಾ, ವಾಲ್ಮೀಕಿ ನಿಗಮದ ಹಗರಣ, ಪರಿಶಿಷ್ಟರ ಹಣ ದುರ್ಬಳಕೆ ವಿಚಾರಕ್ಕೆ ಪಾದಯಾತ್ರೆ ಹಮ್ಮಿಕೊಂಡಿದ್ದೇವೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಅಹಿಂದ ಹೆಸರಿನಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್, ಆ ವರ್ಗಕ್ಕೆ ದ್ರೋಹ ಬಗೆದಿದೆ. ತುಳಿತಕ್ಕೊಳಗಾದವರಿಗೆ ನ್ಯಾಯ ಸಿಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು’ ಎಂದು ಹೇಳಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಮ್ಮನ್ನು ಏಕವಚನದಲ್ಲಿ ಟೀಕಿಸಿದ ಕುರಿತು ಪ್ರತಿಕ್ರಿಯಿಸಿದ ಅವರು, ‘ಅಧಿಕಾರ ಬಂದಾಗ ಕಾಂಗ್ರೆಸ್‌ನವರಿಗೆ ಹಾಗೆ ಆಗುತ್ತದೆ. ಅದರ ಬಗ್ಗೆ ಹೆಚ್ಚಾಗಿ ಮಾತನಾಡುವುದಿಲ್ಲ’ ಎಂದರು.

‘ಕಾಂಗ್ರೆಸ್‌ನದ್ದು ಪಶ್ಚಾತ್ತಾಪದ ಯಾತ್ರೆಯಷ್ಟೆ. ಭರವಸೆಗಳನ್ನು ಈಡೇರಿಸಲು ಆಗಲಿಲ್ಲ ಎಂಬ ಪಶ್ಚಾತ್ತಾಪದಲ್ಲಿ ಕಾರ್ಯಕ್ರಮ ಮಾಡುತ್ತಿದೆ. ಭ್ರಷ್ಟಾಚಾರದ ಸಮರ್ಥನೆಗೆ ಇಳಿದಿದೆ’ ಎಂದು ಟೀಕಿಸಿದರು.

‘ಎಷ್ಟು ದಿನ ಕೇಂದ್ರ ಮಂತ್ರಿ ಆಗಿರುತ್ತಾರೆ?’

ಹಾಸನ: ‘ಎಚ್.ಡಿ. ಕುಮಾರಸ್ವಾಮಿ ಎಷ್ಟು ದಿನ ಮಂತ್ರಿ ಆಗಿರುತ್ತಾರೆ ಗೊತ್ತಿದೆಯಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಪ್ರಶ್ನಿಸಿದರು.

ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಭೂಕುಸಿತದ ಸ್ಥಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ‘ಇನ್ನು ಹತ್ತು ತಿಂಗಳು ಮಾತ್ರ ಸರ್ಕಾರವಿರುತ್ತದೆ’ ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಕುಮಾರಸ್ವಾಮಿ ಎಷ್ಟು ದಿನ ಮಂತ್ರಿ ಆಗಿರುತ್ತಾರೆ ಗೊತ್ತಿದೆಯಾ’ ಎಂದು ಪ್ರಶ್ನಿಸಿದರು.

ಬಿಜೆಪಿ-ಜೆಡಿಎಸ್ ಪ್ರತ್ಯೇಕ ಸಭೆ

ಚನ್ನಪಟ್ಟಣ: ಮುಡಾದಲ್ಲಿ ನಡೆದಿದೆ ಎನ್ನಲಾದ ಹಗರಣದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಜಂಟಿಯಾಗಿ ಹಮ್ಮಿಕೊಂಡಿರುವ ಮೈಸೂರು ಚಲೊ ಪಾದಯಾತ್ರೆ ಸ್ವಾಗತಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಪ್ರತ್ಯೇಕ ಸಭೆ ನಡೆಸಿದ್ದಾರೆ.

ಕುವೆಂಪುನಗರದ ಬಿಜೆಪಿ ಕಚೇರಿಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಶುಕ್ರವಾರ ಕಾರ್ಯಕರ್ತರ ಸಭೆ ನಡೆಸಿದರೆ, ಅದೇ ದಿನ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಜಯಮುತ್ತು ಪ್ರವಾಸಿ ಮಂದಿರದಲ್ಲಿ ಪಕ್ಷದ ಕಾರ್ಯಕರ್ತರ ಪ್ರತ್ಯೇಕ ಸಭೆ ನಡೆಸಿದ್ದಾರೆ. ಇದು ಸ್ಥಳೀಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಮೈತ್ರಿ ಪಾದಯಾತ್ರೆ ಸೋಮವಾರ (ಆ.5ಕ್ಕೆ) ಚನ್ನಪಟ್ಟಣಕ್ಕೆ ಬರಲಿದ್ದು, ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಲೋಕಸಭಾ ಚುನಾವಣೆ ವೇಳೆ ಮೈತ್ರಿ ಮಾಡಿಕೊಂಡಿದ್ದ ಎರಡೂ ಪಕ್ಷಗಳು ಇಲ್ಲಿಯವರೆಗೂ ಜಂಟಿಯಾಗಿಯೇ ಸಭೆ ನಡೆಸಿದ್ದವು. ಆದರೆ, ಚನ್ನಪಟ್ಟಣ ಉಪ ಚುನಾವಣೆ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಮುನಿಸು ಶುರುವಾದ ನಂತರ ಮೊದಲ ಬಾರಿಗೆ ಪ್ರತ್ಯೇಕ ಸಭೆ ನಡೆಸಲಾಗಿದೆ.

ಈ ಸಂದರ್ಭದಲ್ಲಿ ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಪ್ರತ್ಯೇಕ ಸಭೆ ನಡೆಸಿರುವುದು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಬಹುದು. ಚನ್ನಪಟ್ಟಣ ಉಪ ಚುನಾವಣೆ ಮೇಲೂ ಪರಿಣಾಮ ಬೀರಬಹುದು. ಮೈತ್ರಿಯಲ್ಲಿ ಎಲ್ಲವೂ ಸರಿ ಇಲ್ಲ ಎಂದು ಇದು ತೋರಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ವಿಧಾನಸೌಧಕ್ಕೆ ಕಾಲ್ನಡಿಗೆ ಜಾಥಾ 15ರಂದು’

ಮೈಸೂರು: ‘ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದ ಹಣವನ್ನು ರಾಜ್ಯ ಸರ್ಕಾರ ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವುದನ್ನು ವಿರೋಧಿಸಿ ಆ.15ರಂದು ಬೆಳಿಗ್ಗೆ 11.30ಕ್ಕೆ ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಬೆಂಗಳೂರಿನ ವಿಧಾನಸೌಧಕ್ಕೆ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಕಾಲ್ನಡಿಗೆ ಜಾಥಾ ಆಯೋಜಿಸಲಾಗಿದೆ’ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಆರ್.ಮೋಹನ್‌ರಾಜ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ₹25 ಸಾವಿರ ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿದೆ. ಎಸ್‌ಸಿ, ಎಸ್‌ಟಿ ಮಕ್ಕಳ ವಿದೇಶಿ ವಿದ್ಯಾಭ್ಯಾಸಕ್ಕೆ ನೀಡುತ್ತಿದ್ದ ಅನುದಾನ, ಉತ್ತಮ ಅಂಕಕ್ಕೆ ನೀಡುತ್ತಿದ್ದ ಪ್ರೋತ್ಸಾಹಧನ ಹಾಗೂ ವಸತಿ ಶಾಲೆ ಪ್ರವೇಶಾತಿಯಲ್ಲಿ ಬದಲಾದ ನಿಬಂಧನೆಗಳು ಉದ್ದೇಶವನ್ನೇ ಬುಡಮೇಲು ಮಾಡಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ವಾಲ್ಮೀಕಿ, ಮುಡಾ ಹಗರಣಗಳ ಕುರಿತು ಸಮಗ್ರ ತನಿಖೆಗೆ ಒತ್ತಾಯಿಸಲಾಗುವುದು’ ಎಂದರು

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ದಲಿತ ಸಂಘರ್ಷ ಸಮಿತಿ (ಸೋಮಶೇಖರ್ ಬಣ), ಅಂಬೇಡ್ಕರ್ ಸೇನೆ (ಪಿ.ಮೂರ್ತಿ) ಸಂಘಟನೆಗಳು ಬೆಂಬಲ ನೀಡಿವೆ’ ಎಂದು ತಿಳಿಸಿದರು.

‘ಜನಾಂದೋಲನ’ದಲ್ಲಿ ಡಿಕೆಶಿ, ಚಲುವರಾಯಸ್ವಾಮಿ ಆರೋಪ

‘ಬಿಎಸ್‌ವೈ ಜೈಲು ಸೇರಲು ಎಚ್‌ಡಿಕೆ ಕಾರಣ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಮುಖ್ಯಮಂತ್ರಿಯಾಗಿದ್ದ ನಿಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ಜೈಲು ಸೇರುವಂತೆ ಮಾಡಿದ ಸೂತ್ರಧಾರ ಇದೇ ಎಚ್.ಡಿ. ಕುಮಾರಸ್ವಾಮಿ ಎಂಬುದು ನಿನಗೆ ಗೊತ್ತಿಲ್ಲವೇ ವಿಜಯೇಂದ್ರ?’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಪ್ರಶ್ನಿಸಿದ್ದಾರೆ.

ನಗರದಲ್ಲಿ ಶನಿವಾರ ನಡೆದ ಕಾಂಗ್ರೆಸ್‌ನ ಎರಡನೇ ದಿನದ ‘ಜನಾಂದೋಲನ’ ಕಾರ್ಯಕ್ರಮದಲ್ಲಿ ಈ ಇಬ್ಬರೂ ಕಾಂಗ್ರೆಸ್ ನಾಯಕರು, ವಿಜಯೇಂದ್ರ ಮತ್ತು ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸುತ್ತಲೇ ಪ್ರಶ್ನೆಗಳ ಸುರಿಮಳೆಗರೆದರು.

‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕಣ್ಣೀರು ಹಾಕುತ್ತಾ ವಿಧಾನಸೌಧದಿಂದ ಹೊರ ನಡೆದ ಸನ್ನಿವೇಶವನ್ನು ಅವರ ಪುತ್ರನಾದ ನೀವು ನೆನಪಿಸಿಕೊಳ್ಳಬೇಕು. ಇದೆಲ್ಲದರ ಹಿಂದಿರುವ ಏಕೈಕ ಸೂತ್ರದಾರ ಈ ಕುಮಾರಸ್ವಾಮಿ. ಅಂತಹ ವ್ಯಕ್ತಿಯನ್ನು ಜೊತೆಗಿಟ್ಟುಕೊಂಡು ಪಾದಯಾತ್ರೆ ಮಾಡುತ್ತಿದ್ದೀಯಲ್ಲ’ ಎಂದು ಡಿಕೆಶಿ ವ್ಯಂಗ್ಯವಾಡಿದರು.

‘ಕೇಂದ್ರ ಸಚಿವ ಕುಮಾರಸ್ವಾಮಿ ದೆಹಲಿವರೆಗೆ ಪಾದಯಾತ್ರೆ ಮಾಡಿದರೂ ನಮ್ಮ ಸರ್ಕಾರವನ್ನು ಅಲ್ಲಾಡಿಸಲು ಸಾಧ್ಯವಿಲ್ಲ’ ಎಂದು ಚಲುವರಾಯ ಸ್ವಾಮಿ ಅವರು ಸವಾಲು ಹಾಕಿದರು.

ಕುಮಾರಸ್ವಾಮಿ ಅವರನ್ನು ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಮಾಡಿತು. ಆದರೆ, ಅವರು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಕುಳಿತು ಶೋಕಿ ಮಾಡಿದರು ಎಂದರು.

‘ಯಡಿಯೂರಪ್ಪ ಅವರನ್ನು ಜೈಲಿಗೆ ಕಳಿಸಿದ್ದು ನಾನೇ ಎಂದು ಕುಮಾರಸ್ವಾಮಿ ಈ ಹಿಂದೆ ನನ್ನ ಬಳಿ ಹೇಳಿಕೊಂಡಿದ್ದರು. ನಿಮ್ಮಪ್ಪನನ್ನು ಜೈಲಿಗೆ ಕಳಿಸಲು ಅವರು ಏನೆಲ್ಲಾ ಕುತಂತ್ರ ಮಾಡಿದರು ಎಂಬುದು ನನಗೆ ಗೊತ್ತಿದೆ. ದಿನಕ್ಕೊಂದು ಹೇಳಿಕೆ ನೀಡುತ್ತಾ, ಗಂಟೆಗೊಂದು ಬಣ್ಣ ಬದಲಾಯಿಸುವ ಕುಮಾರಸ್ವಾಮಿ ನಡವಳಿಕೆ ಸರಿ ಇಲ್ಲವೆಂದು ನಾನು, ಬಾಲಕೃಷ್ಣ ಸೇರಿದಂತೆ ಹಲವರು ಪಕ್ಷ ತೊರೆದೆವು’ ಎಂದು ಚಲುವರಾಯಸ್ವಾಮಿ ಹೇಳಿದರು.

ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರನ್ನು ಸ್ವಾಗತಿಸಿದರು. ಸಚಿವರಾದ ಡಾ. ಎಂ.ಸಿ. ಸುಧಾಕರ್, ರಹೀಂ ಖಾನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ, ಶಾಸಕರಾದ ಬಾಲಕೃಷ್ಣ, ಆನೇಕಲ್ ಶಿವಣ್ಣ, ಪ್ರದೀಪ್ ಈಶ್ವರ್, ಇಕ್ಬಾಲ್ ಹುಸೇನ್, ರಿಜ್ವಾನ್ ಅರ್ಷದ್, ಕೊತ್ತನೂರು ಮಂಜುನಾಥ್, ಮಾಜಿ ಸಂಸದ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯರಾದ ಸುಧಾಮ್ ದಾಸ್, ಯು.ಬಿ. ವೆಂಕಟೇಶ್, ಪುಟ್ಟಣ್ಣ, ಎಸ್. ರವಿ, ನಜೀರ್ ಅಹ್ಮದ್, ರಾಮೋಜಿಗೌಡ, ಪ್ರಕಾಶ್ ರಾಥೋಡ್, ಮಾಜಿ ಶಾಸಕ ಸಿ ಎಂ ಲಿಂಗಪ್ಪ ಹಾಗೂ ಸ್ಥಳೀಯ ಮುಖಂಡರು ಇದ್ದರು.

ರಾಮನಗರದಲ್ಲಿ ಶನಿವಾರ ನಡೆದ ಜನಾಂದೋಲನ ಕಾರ್ಯಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವರು ಉದ್ಘಾಟಿಸಿದರು. ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಪಕ್ಷದ ಮುಖಂಡರು ಇದ್ದರು

‘ಭ್ರಷ್ಟಾಚಾರವೇ ಬಿಜೆಪಿ ಮನೆದೇವ್ರು’

‘ಭ್ರಷ್ಟಾಚಾರವೇ ಬಿಜೆಪಿಯ ತಾಯಿ–ತಂದೆ ಮತ್ತು ಬಂಧು–ಬಳಗ. ಭ್ರಷ್ಟಾಚಾರ ಮಾಡಿದ ಬಿಜೆಪಿಯನ್ನು ಆ ಭಗವಂತ ಮೆಚ್ಚುವುದಿಲ್ಲ’ ಎಂದು ಡಿ.ಕೆ ಶಿವಕುಮಾರ್ ಹೇಳಿದರು

‘ನನ್ನನ್ನು ಮಿಲಿಟರಿಯವರು ಬಂದು ಕರೆದುಕೊಂಡು ಹೋಗುತ್ತಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಅಂದರೆ, ಮತ್ತೊಮ್ಮೆ ನನ್ನನ್ನು ಜೈಲಿಗೆ ಹಾಕಿಸಲು ಸಂಚು ರೂಪಿಸಿದ್ದಾರೆ. ಈಗಾಗಲೇ ನಾನು ತಿಹಾರ್ ಜೈಲು ನೋಡಿದ್ದೇನೆ. ಎಲ್ಲಾ ತನಿಖೆಗಳನ್ನೂ ಎದುರಿಸಿದ್ದೇನೆ. ಯಾವುದಕ್ಕೂ ಭಯಪಡುವ ಮಗ ನಾನಲ್ಲ’ ಎಂದರು.

ಆದರೆ, ನೀವು ಅಕ್ರಮವಾಗಿ ಪಡೆದಿರುವ ನಿವೇಶನಗಳ ಕುರಿತು ಬಿಜೆಪಿಯವರು ನೀಡಿದ್ದ ಪತ್ರಿಕಾ ಜಾಹೀರಾತು ಕುರಿತು ನೀವು ಉತ್ತರಿಸಬೇಕು ಎಂದು ಡಿ.ಕೆ ಶಿವಕುಮಾರ್ ಸವಾಲು ಎಸೆದರು.

ಗಟ್ಟಿ ಹೋರಾಟಕ್ಕೆ ಸೂಚನೆ

ಮೈಸೂರಿನಲ್ಲಿ ಶಾಸಕರ ಉಪಾಹಾರ ಸಭೆ ನಡೆಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿನ ತಮ್ಮ ನಿವಾಸದಲ್ಲಿ ಕೆಲ ಸಚಿವರು ಹಾಗೂ ಜಿಲ್ಲೆಯ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರೊಂದಿಗೆ ಶನಿವಾರ ಉಪಾಹಾರ ಸಭೆ ನಡೆಸಿದ್ದು, ‘ಬಿಜೆಪಿ-ಜೆಡಿಎಸ್‌ನಿಂದ ಹಮ್ಮಿಕೊಂಡಿರುವ ಪಾದಯಾತ್ರೆಗೆ ಪ್ರತಿಯಾಗಿ ನಮ್ಮ ಪಕ್ಷದಿಂದಲೂ ಹೋರಾಟವನ್ನು ಗಟ್ಟಿಯಾಗಿ ಸಂಘಟಿಸಬೇಕು’ ಎಂದು ಸೂಚಿಸಿದ್ದಾರೆ.

‘ವಿರೋಧ ಪಕ್ಷದವರು ನನ್ನ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ದುರುದ್ದೇಶದಿಂದ ರಾಜ್ಯಪಾಲರನ್ನೂ ಬಳಸಿಕೊಳ್ಳುತ್ತಿದ್ದಾರೆ. ಬಹುಮತ ಪಡೆದ ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದ್ದಾರೆ. ಅದನ್ನು ಖಂಡಿಸಿ ನಮ್ಮ ಕಡೆಯಿಂದಲೂ ಪ್ರತಿರೋಧ ವ್ಯಕ್ತವಾಗಬೇಕು. ಪ್ರತಿಪಕ್ಷದವರ ಕುತಂತ್ರದ ಕುರಿತು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸೂಚಿಸಿದರು’ ಎಂದು ಮೂಲಗಳು ತಿಳಿಸಿವೆ.

‘ಮುಖ್ಯಮಂತ್ರಿಗೆ ತೊಂದರೆ ಕೊಟ್ಟರೆ ಸರ್ಕಾರವನ್ನು ಕೆಡವಬಹುದು ಎಂಬ ಕಾರಣದಿಂದ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿಯವರೇ ಸೃಷ್ಟಿಸಿರುವ ಬ್ಲಾಕ್‌ಮೇಲರ್ ಅನ್ನು ದೂರು ನೀಡಲು ಬಳಸಿಕೊಂಡಿದ್ದಾರೆ ಎಂದು ಕಿಡಿಕಾರಿದರು’ ಎಂದು ತಿಳಿದುಬಂದಿದೆ.

‘136 ಶಾಸಕರನ್ನೂ ಮೈಸೂರಿಗೆ ಕರೆಸಿ ಶಕ್ತಿ ಪ್ರದರ್ಶನ ಮಾಡಬೇಕು ಎಂಬ ಸಲಹೆಯೂ ವ್ಯಕ್ತವಾಯಿತು’ ಎಂದು ಮೂಲಗಳು ತಿಳಿಸಿವೆ.

‘ಆ.9ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಕಾಂಗ್ರೆಸ್ ಜನಾಂದೋಲನದಲ್ಲಿ ಕನಿಷ್ಠ 2 ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಬೇಕು. ಪ್ರಗತಿಪರರು, ಬಿಜೆಪಿ ಸರ್ಕಾರದಲ್ಲಿ ನಡೆದಿದ್ದ ಹಗರಣಗಳನ್ನು ಮನೆ ಮನೆಗೂ ಮುಟ್ಟಿಸಲು ಕಾರ್ಯಕರ್ತರು ಸಜ್ಜಾಗಬೇಕು. ಪ್ರತಿ ತಾಲ್ಲೂಕಿನಲ್ಲೂ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಚಾಮರಾಜನಗರ, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಶಾಸಕರು ಹಾಗೂ ಸಂಸದರು, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ನಗರ ಜಿಲ್ಲಾ ಸಮಿತಿಯ ಅಧ್ಯಕ್ಷ ಆರ್.ಮೂರ್ತಿ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಮನೆಯಲ್ಲಿ ನಡೆದ ದಿಢೀರ್ ಸಭೆಯ ಕುರಿತು ಬೊಕ್ಕಹಳ್ಳಿಯಲ್ಲಿ ಪ್ರತಿಕ್ರಿಯಿಸಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ‘ಬಿಜೆಪಿ–ಜೆಡಿಎಸ್‌ನವರಿಗೆ ಪ್ರತ್ಯುತ್ತರ ನೀಡುವುದಕ್ಕೆ ನಾವೂ ಸಿದ್ಧವಾಗಿದ್ದೇವೆ’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ತಮ್ಮ ನಿವಾಸದಲ್ಲಿ ಶನಿವಾರ ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಸಚಿವರು, ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು ಹಾಗೂ ಕಾಂಗ್ರೆಸ್ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHER for High School. B.A. B.Ed, Gents or Ladies (English & Social). Mathikere, Yeshwanthapura, Bangalore. Contact:9379191544

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail: info@set.edu.in
require
Lecturers for Pre-University Colleges at Bengaluru.
• Physics
Assistant Professors for Degree Colleges at Bengaluru.
• Commerce • English • Computer Science • Physical Education Director
Eligibility: Master's Degree in the relevant subject with at least 55% marks in the aggregate and at least two years teaching experience.
Library Assistant
a. Diploma Course offered by the Board of Technical Education.
b. Minimum 1 year working experience in an academic Library.
c. Basic knowledge of using computer in Library working system.
Walk-in-Interview on Thursday, 8th August 2024 @ 4:00 p.m.
Venue: Seshadripuram Educational Trust Office, No. 27, Nagappa Street, Seshadripuram, Bengaluru - 560 020.
Eligible candidates should bring handwritten application along with resume, photos & copies of testimonials at the time of Interview.
N. R. Pandith Aradhya, President — Dr. Wooday P. Krishna, Honorary General Secretary

BMS EDUCATIONAL TRUST
B.M.S COLLEGE FOR WOMEN
Autonomous Institution Affiliated to Bengaluru City University
NAAC Accreditation: "A" Grade
Late B.M.Sreenivasaiah, Founder — Late B.S.Narayan, Donor Trustee
Applications are invited for the Post of
ASSISTANT PROFESSOR
in the following departments (UG)
B.Sc.-Clinical Nutrition & Dietetics (CND), Mathematics, Computer Science, English, Management, Commerce with specialization to teach B.com -Business Data Analytics and B.Com - Accounting & Finance.
Eligibility: Master's Degree in relevant subject with 55% marks. Candidate with NET/KSET/SLET/Ph.D will be preferred.
Interested candidates with the above qualifications can upload application form in the link provided on the College website: www.bmscw.edu.in. on or before 10.08.2024 at 11.00 am
Ph: 080-26601836/26676729 — Chairperson BMSCW

WE ARE HIRING
GOPALAN COLLEGE OF ENGINEERING & MANAGEMENT
CSE/EC/Aeronautical/Basics Sciences
• ASSISTANT PROFESSOR • ASSOCIATE PROFESSOR • PROFESSOR
GOPALAN SCHOOL OF ARCHITECTURE
M.Arch, M. Design, PhD
• ASSISTANT PROFESSOR • ASSOCIATE PROFESSOR • PROFESSOR
GOPALAN COLLEGE OF COMMERCE
English/Economics/Physics/Commerce/Management/Computer Science
• ASSISTANT PROFESSOR • ASSOCIATE PROFESSOR
GOPALAN PRE-UNIVERSITY COLLEGE
CSE/Physics/Mathematics/Chemistry
• LECTURER
*Qualification as per AICTE norms
GOPALAN COLLEGES 181/1, 182/2, BEHIND SAP LABS, SEETHARAMPALYA, BASAVANAGAR, HOODI, BANGALORE- 560048
hr@gopalanfoundation.com | 080- 42229748
Apply within 7 days

WANTED ENGLISH MEDIUM TRAINED/ UNTRAINED Lady Graduates interested in Teaching Primary Classes/ Computer Faculty/ PUC Passed Girls with good English fluency to assist primary teachers. Contact in person (10.00 am- 3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Anjaneya Temple, Railway Underbridge).

WANTED EXPERIENCED LECTURERS M.A (English) Attractive Salary, Contact Principal with Original Certificates between 10.00-1.00 pm. SREE VENKATESHWARA DEGREE COLLEGE, Krishnarajapuram, Bangalore. Ph-9036068144, 9731394020, 7411135627. E-Mail: svdc.krp.bangalore@gmail.com

EDUCATION
To Place your Classified Ads Contact: 9845114560

HIGH SCHOOL COMPUTER TEACHER needed for CHITRAKOOTA CBSE School in Nagarbhavi Kengeri Ring Road, Immediately Contact: 7829647333

A REPUTED State Board English Medium School needs at BG Road Experienced Female Teachers for Kindergarten, Primary and Computer Classes Immediately. Contact: 9448344014/ 9535293469.

Multiple Vacancy

BHARATHI JEWELLERIES
Manufacturer and Wholesaler of Silver articles
No. 43/52, 2nd Main Road, Rajajinagara Industrial Town, Bangalore – 560010
Newly Opened Silver Manufacturing & Wholesale Showroom
WANTED IMMEDIATELY
• MARKETING MANAGER • SALES PERSONS • ACCOUNTANT
with well experienced in sales for wholesale silver articles showrooms.
Contact in person at the above address or Send your resume to deepakdeepu6412@gmail.com
Contact 8885558301, 9886460301 9448043051, 9986118282

Marketing & Sales

WANTED MARKETING Executive (Male) for JVR Suppliers. Ct: 9840017599

General

EARN MORE than Rs:50000 in a month part/ Full time Age above 30 years Call:9343616020

Hospital & Medical Jobs

HEJJE
A Unit of MS Ramaiah Health Pvt Limited
NOW HIRING
• Neuro-physiotherapist (Adult and Pediatric)
• Consultants (Physiatrist(PMR), Pediatrician, Neurologist, Psychiatrist)
• Dietician
• Registered Nurse
• Business Development Manager
• HR(Healthcare/Hospital)
For more vacancies or enquiries please visit www.hejje.health
Call : +91 9008999906
or
Email : ops@hejje.health

Engg/ Production Technical

CIVIL ENGINEERS with 1-5 years experience to work at our Bangalore project. interested send resumes to gvrconst@gmail.com

Wanted

FURNITURE PURCHASE SCHEME- Required Consultant /Manager/ Team Leader Capable of Managing the Scheme in Bangalore. WhatsApp 9019585095

WANTED CIVIL Diploma/ BE with two wheeler for site Supervisor in Hosur road. Contact 9980883950

Factory

REQUIRED: DIPLOMA MECHANICAL: QC ITI/ FITTER/ MACHINE OPERATOR Mysore Road, Byatarayanapura, Bangalore- 560026 Contact: 76248-34251/ 26744597/551 Email: tisaenterprises@gmail.com

MATRIMONIAL

Brides Wanted

Muslim

MUSLIM BOY 1997 Born 5'9' Businessman Income more then 10 Cr residing in Bangalore is looking for a suitable match (080-69103132)

MUSLIM BOY 1992 Born 5'10' MBBS MD/ Doctor/ UK family is residing in UAE (Native Bangalore) is looking for a match (080-69075204)

MUSLIM BOY 1994 5'11' MS in Engineering Working as an Engineer Posted in USA Texas is looking for a match 080-69072093

SUNNI MUSLIM Doctor boy 28 Years From Bangalore working in Reputed hospital looking for a suitable match (080-69070609)

PUBLIC NOTICE

RV College of Engineering®
CALLING FOR PROPOSALS – SETTING UP OF PHARMACY STORE
RV College of Engineering, Mysore Road, Bengaluru is calling for proposals from reputed Vendors for setting up of Pharmacy & General Utility items Store for a period of 3 years (shop area: apprx 115 sqft/230 sqft). Those interested reputed Vendors with qualified certifications & good financial credentials may apply within 10 days through speedpost/courier along with documents quoting their rental offers to:
The Principal, RV College of Engineering, RV Vidyaniketan Post, Mysore Road, Bengaluru – 560 059.
For further details pls ct: Mr.Sampath Kumar – 9164268298 (9am - 5pm)
Date: 2-8-2024 — Sd/- Principal

PERSONAL

Lost

LOST
I, Vikranth M S, Residing at 834, 2nd F Cross, 8th Main Road, Near Nataraja Kalyana Mantapa, 3rd Stage, Basaveshwaranagar, Bengaluru, have lost my original BDA Allotment Letter & Possession Certificate, Identification Site No. 834, while travelling. If found please contact: 9900635252

WEEKEND CORNER

SMS GROW NEW FARM SOLUTIONS LLP
MARKETING OF WATER SOLUBLE FERTILIZERS
As per the provisions of S.O 2900(E) dated 24th October 2015 in FCO 1985 issued by ministry of Agriculture and Farmers welfare, New Delhi, we intend to market the following imported 100% water soluble mixture of Fertilizers in Karnataka State.
(1) NPK-25-10-10, (2) NPK-05-05-41, (3) NPK-18-09-29, (4) NPK-07-10-30, (5) NPK-18-18-18, (6) NPK-25-05-10, (7) NPK-11-57-00, (8) NPK-10-05-30 (9) NPK-12-30-10, (10) NPK-06-08-32, (11) NPK-06-00-36 (12) NPK-15-15-15, (13) NPK-12-40-06, (14) NPK-12-05-40, (15) NPK-11-32-12, (16) NPK-05-10-35, (17) NPK-06-18-18, (18) NPK-06-30-00, (19) NPK-05-00-52 , (20) NPK-00-40-40, (21) NPK-00-40-40+TE (22) NPK-15-30-15, (23) NPK-00-30-38, (24) NPK-08-16-36, (25) NPK-09-20-20, (26) NPK-18-09-29, (27) Calcium 12%, (28) NPK-00-09-46, (29) NPK-20-50-00, (30) NPK-18-05-05, (31) NPK-13-40-13, (32) NPK-12-58-00, (33) NPK-10-15-35, (34) NPK-28-08-08
SMS GROW NEW FARM SOLUTIONS LLP
No. C-5/A1, Industrial Estate, Yelahanka, Bengaluru, Karnataka-560064.

Change of Name

I, CHANDRASHEKAR Subbaya Shetty, residing at 51, 9th Main 4th Cross Chikkabettahalli Doddabommasandra, Vidyaranyapura Post, Bangalore-57 have changed my name as Chandrashekar Shetty vide affidavit dated 02/08/2024 before Notary Rupesh Kumar.N Bangalore

SOCIAL SERVICES

Old Age Home

OLD AGE HOME Near Chellaghatta Metro Station, Fully refurbished, Airy single and double rooms furnished, vegetarian and non-vegetarian food, Medical services, Walking path, secure Atmosphere. A Home Away from Home Contact 9741908683 /6381267320 SnehaJyothi, Anchepalya, Bangalore-74

MORE Classifieds Ads on Subsequent Pages

DH DECCAN HERALD Classifieds More value, more impact — ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
For more details contact:
+91 9731810277 | +91 9886213331
+91 9901641752 | 080- 45557163/164
*Conditions apply

ಪ್ರಜಾವಾಣಿ
ಭಾನುವಾರದ ಪುರವಣಿ

ಭಾನುವಾರ, 4 ಆಗಸ್ಟ್ 2024

ಹೆಣ್ಣು ನಿರೂಪಿಸಿದ ಮಂಟೇಸ್ವಾಮಿ ಕಾವ್ಯ 13

ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಲ್ಲಿರುವ ಹೂವಿನ ಮಾರುಕಟ್ಟೆ ಏಷ್ಯಾದ ಅತಿ ದೊಡ್ಡ ಹೂವಿನ ಮಾರುಕಟ್ಟೆಗಳಲ್ಲಿ ಒಂದು. ಅಲ್ಲಿನ ವ್ಯಾಪಾರ ವಹಿವಾಟು, ಬದುಕು, ಕೋಮು ಸಾಮರಸ್ಯ, ಇತ್ಯಾದಿಗಳ ಅನಾವರಣ...

ಅಕ್ಕಾ.. ಚಿಲ್ಲರೆ ಇದ್ರೆ ಕೊಡಕ್ಕಾ... ಕೆ.ಆರ್.ಮಾರುಕಟ್ಟೆಯಲ್ಲಿ ಹೂವಿನ ವ್ಯಾಪಾರಿಯೊಬ್ಬಳು ವ್ಯವಹಾರದಲ್ಲಿ ತೊಡಗಿದ್ದ ವೇಳೆ.
ಚಿತ್ರಗಳು: ರಂಜು ಪಿ.

ಹೂ ಮಾರುಕಟ್ಟೆಯಲ್ಲಿ ನೇಯ್ದ ಬದುಕು

ಅಬ್ದುಲ್ ರಹಿಮಾನ್

ಅದು ಆಷಾಢದ ಒಂದು ಮುಂಜಾನೆ. ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯಲ್ಲಿರುವ ಹೂವಿನ ಮಾರುಕಟ್ಟೆ ಸಮೀಪಿಸುತ್ತಿದ್ದಂತೆಯೇ ವಾಹನಗಳ ಸಂಖ್ಯೆ ಏರತೊಡಗಿದವು. ಜೊತೆಗೇ ಸಾಗುತ್ತಿದ್ದ ಬಹುತೇಕ ಬಿಎಂಟಿಸಿ ಬಸ್ಸುಗಳ ಬೋರ್ಡ್‌ಗಳು 'ಕೆ.ಆರ್.ಮಾರುಕಟ್ಟೆ' ಎಂದು ತೋರುತ್ತಿದ್ದವು. ಗಾಡಿ ನಿಲ್ಲಿಸಿ ಮಾರುಕಟ್ಟೆ ಕಡೆ ನಡೆಯುತ್ತಿದ್ದಂತೆ, ಹೂವಿನ ಸುವಾಸನೆ ಬೆರೆತ ಗಾಳಿ ಮೂಗಿಗೆ ಹಿತವಾಗಿ ಬಡಿಯಿತು. ಅದೇ ಗುಂಗಿನಲ್ಲಿದ್ದಾಗ, 'ಎಷ್ಟು ಬೇಕಣ್ಣ..? ಮಾರಿಗೆ ಮೂವತ್ತು ರೂಪಾಯಿ..' ಕನಕಾಂಬರವನ್ನು ನೇಯ್ದು ಗುಡ್ಡೆ ಹಾಕಿದ್ದ ಮಹಿಳೆಯೊಬ್ಬರ ಮಾತು ಮುಗಿಯುವುದಕ್ಕೂ ಮುನ್ನವೇ ಪಕ್ಕದಲ್ಲಿ ಇನ್ನೊಂದು ಧ್ವನಿ ತೂರಿ ಬಂತು, 'ಇಲ್ಲಿ ಬಾರಣ್ಣ, ಹಾರಕ್ಕೆ ನಲ್ವತ್ತು ರೂಪಾಯಿ' ಮಲ್ಲಿಗೆಹಾರ ಮಾರುತ್ತಿದ್ದ ಮಹಿಳೆಯೊಬ್ಬರ ಒತ್ತಾಯ. ಪಕ್ಕದಲ್ಲೇ ಚಳಿಗೆ ಮುದುಡಿದ್ದ ಮಹಿಳೆಯೊಬ್ಬರ ಕ್ಷೀಣಧ್ವನಿ, 'ಒಂದಕ್ಕೆ ಐದು ರೂಪಾಯಿ, ಬೋಣಿ ಮಾಡಪ್ಪ'. ಅವರ ಮುಂದಿದ್ದ ಬುಟ್ಟಿಯಲ್ಲಿ ತಾವರೆ ಹೂವುಗಳಿದ್ದವು. 'ನೂರು ಗ್ರಾಮ್‌ಕ ಮುಪ್ಪದ್ರುವಾ, ಇಂಗ್ ವಾ' ಚೀಲದಲ್ಲಿ ಹಳದಿ ಗುಲಾಬಿಗಳನ್ನು ರಾಶಿ ಹಾಕಿದ್ದವಳ ಮನವಿ. ಬಣ್ಣ ಬಣ್ಣದ ಹೂಗಳಿಂದ ನೇಯ್ದು ಮಾಡಿದ ಹಾರಗಳನ್ನು ಹಿಡಿದ ಯುವಕನೊಬ್ಬ 'ಲೇಲೋ ಭಯ್ಯ, ಸಾಠ್ ರುಪಾಯ' ಎಂದು ಬೆನ್ನುಬಿದ್ದ. 'ಸೈಡೇ...' ಎಂದು ಕೂಗುತ್ತಾ ಬಂದ ಕೂಲಿಯೊಬ್ಬ ಜನಜಂಗುಳಿಯಲ್ಲಿ ಸರಿದು ಮಾಯವಾದ. ವಿವಿಧ ಆಕಾರದ ಹತ್ತಾರು ಚೀಲಗಳನ್ನು ಎಡಗೈಗೆ ಸಿಲುಕಿಸಿಕೊಂಡು, ಬಲಗೈಯಲ್ಲಿ ಬೀಡಿ ಸೇದುತ್ತಿದ್ದ ವೃದ್ಧರೊಬ್ಬರು ಗಿರಾಕಿಗಾಗಿ ಕಾಯುತ್ತಿದ್ದರು. ತಮಗೆ ಬೇಕಾದ ಹೂವುಗಳನ್ನು ಅರಸುತ್ತಿದ್ದ ಗ್ರಾಹಕರು, ಚೌಕಾಶಿ ಮಾಡಿ ಖರೀದಿಸಿ, ಒಂದಿಷ್ಟು ಉಳಿತಾಯ ಮಾಡಿದ ನೆಮ್ಮದಿ ತಮ್ಮದಾಗಿಸಿಕೊಂಡು ಮುಂದೆ ಸಾಗುತ್ತಿದ್ದರು.

ಬಸ್ ನಿಲ್ದಾಣದ ಕಡೆಯಿಂದ ಮಾರುಕಟ್ಟೆ ಪ್ರವೇಶಿಸುತ್ತಿದ್ದಂತೆ ಕೆಂಪು, ಹಳದಿ, ಬಿಳಿ, ಕೇಸರಿ ಬಣ್ಣದ ಗುಲಾಬಿಗಳನ್ನು ಬುಟ್ಟಿಗಳಲ್ಲಿ ತುಂಬಿಕೊಂಡು ಬಂದ ರೈತರು, ವರ್ತಕರು ಗ್ರಾಹಕರನ್ನು ಕಂಡಕೂಡಲೇ ಬೆಲೆ ಹೇಳಿ ಕರೆಯುತ್ತಾರೆ. ತಾವೇ ಬೆಳೆದು ಮಾರಾಟ ಮಾಡುವ ರೈತರು, ರೈತರಿಂದ ಖರೀದಿ ಮಾಡಿ ತಂದವರು ಗುಲಾಬಿಗಳನ್ನು 20 ಹೂವುಗಳ ಕಟ್ಟುಗಳಾಗಿ ಕಟ್ಟಿ, ಅದಕ್ಕೊಂದು ದರ ನಿಗದಿ ಪಡಿಸುತ್ತಾರೆ. ಹಸಿರುಮನೆಯಲ್ಲಿ ಬೆಳೆದ ಗುಲಾಬಿಗಳನ್ನು ಗುಚ್ಛದಂತೆ ಕಟ್ಟಿ ಮಾರಾಟ ಮಾಡುತ್ತಾರೆ. 'ಈಗ ಕಟ್ಟಿಗೆ 20 ರೂಪಾಯಿ ನಡೆಯುತ್ತಿದೆ. ಹಬ್ಬದ ಸೀಸನ್ ಶುರುವಾದ್ರೆ 200 ರೂಪಾಯಿವರೆಗೂ ಹೋಗುತ್ತದೆ' ಎಂದರು ಗುಲಾಬಿ ವ್ಯಾಪಾರಿ ಮೂರ್ತಿ. ಹೊಸಕೋಟೆ, ಚಿಕ್ಕತಿರುಪತಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಮುಂತಾದ ಕಡೆಗಳಿಂದ ಇಲ್ಲಿಗೆ ಗುಲಾಬಿ ಬರುತ್ತದೆ.

ಕೆ.ಆರ್.ಮಾರುಕಟ್ಟೆ ಇತಿಹಾಸ

'ಸಿಟಿ ಮಾರ್ಕೆಟ್' ಎಂದು ಕರೆಸಿಕೊಳ್ಳುವ ಕೆ.ಆರ್. ಮಾರುಕಟ್ಟೆ ನಿರ್ಮಾಣವಾಗಿದ್ದು 1928ರಲ್ಲಿ. ಇದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದರು. ಈ ಮಾರುಕಟ್ಟೆಗೆ ಕೃಷ್ಣರಾಜೇಂದ್ರ ಒಡೆಯರ್ ಹೆಸರಿಡಲಾಗಿದೆ. ಮೊದಲು ಈ ಸ್ಥಳದಲ್ಲಿ ನಾಡಪ್ರಭು ಕೆಂಪೇಗೌಡ ತಮ್ಮ ಸಂಬಂಧಿ ಸಿದ್ದಿ ಹೆಸರಿನಲ್ಲಿ ಕಟ್ಟಿದ್ದ 'ಸಿದ್ದಿಕಟ್ಟೆ ಕೆರೆ' ಇತ್ತು. 1791ರಲ್ಲಿ ಲಾರ್ಡ್ ಕಾರ್ನ್‌ವಾಲಿಸ್ ಮತ್ತು ಟಿಪ್ಪು ಸುಲ್ತಾನ್ ನಡುವೆ ನಡೆದ ಮೂರನೇ ಆಂಗ್ಲೋ-ಮೈಸೂರು ಯುದ್ಧದ ವೇಳೆ ರಣಭೂಮಿಯಾಗಿತ್ತು. 1905 ಆಗಸ್ಟ್ 5ರಂದು ಏಷ್ಯಾದಲ್ಲೇ ಮೊದಲು ವಿದ್ಯುತ್ ದೀಪ ಬೆಳಗಿದ್ದು ಇದೇ ಪ್ರದೇಶದಲ್ಲಿ ಎಂದು ಇತಿಹಾಸ ಕುರಿತು ಒಲವಿರುವ ಧರ್ಮೇಂದ್ರಕುಮಾರ್ ಅರೇನಹಳ್ಳಿ ಮಾಹಿತಿ ನೀಡಿದರು. ಈಗಿರುವ ಮೂರು ಮಹಡಿಯ ಕಟ್ಟಡ ನಿರ್ಮಾಣವಾಗಿದ್ದು 90ರ ದಶಕದಲ್ಲಿ.

ಮಾರುಕಟ್ಟೆ ಸಂಕೀರ್ಣದತ್ತ ಹೆಜ್ಜೆ ಹಾಕಿದರೆ ಬಗೆ ಬಗೆಯ ಹೂಗಳ ದರ್ಶನವಾಗುತ್ತದೆ. ಮಲ್ಲಿಗೆ, ಜಾಜಿ, ಸೇವಂತಿ, ಕಮಲ, ಚೆಂಡು ಹೂ, ಸುಗಂಧರಾಜ, ಜರ್ಬೆರಾ, ಕೇದಗೆ, ಕನಕಾಂಬರ, ಸೂರ್ಯಕಾಂತಿ ಹೂವುಗಳನ್ನು ಚೀಲಗಳಲ್ಲಿ ತುಂಬಿಸಿಕೊಂಡು ಮಾರುತ್ತಾರೆ. ಹೀಗೆ ಮಾರಾಟ ಮಾಡುವವರಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು. ಮುಂಜಾನೆ ಎರಡು ಗಂಟೆಗೆ ಬಂದು ಮಂಡಿಯಲ್ಲಿ ಹೂವುಗಳನ್ನು ಖರೀದಿಸಿ ಮಾರಾಟ ಮಾಡುತ್ತಾರೆ. ರಸ್ತೆಬದಿಯಲ್ಲಿ ಬೆಳಿಗ್ಗೆ 9 ಗಂಟೆವರೆಗೂ ವ್ಯಾಪಾರ ಸಾಗುತ್ತದೆ. ಹೂ ಖಾಲಿಯಾದರೆ ನೆಮ್ಮದಿ. ಇಲ್ಲದಿದ್ದರೆ ಮುಂದಿನ ದಿನಕ್ಕೆ ಕಾಪಾಡುವ ತಲೆನೋವು. ತಲೆಮಾರುಗಳಿಂದ ಇದೇ ವ್ಯಾಪಾರ ಮಾಡಿಕೊಂಡು ಬಂದವರಿದ್ದಾರೆ. ಹಲವರಿಗೆ ಹೂವು ಸ್ವಾಭಿಮಾನದ ಬದುಕು ಕೊಟ್ಟಿದೆ. ಇದರಿಂದಲೇ ಬದುಕು ಕಟ್ಟಿಕೊಂಡವರ ಸಂಖ್ಯೆ ದೊಡ್ಡದಿದೆ.

'ನಲವತ್ತು ವರ್ಷಗಳಿಂದ ಈ ವ್ಯಾಪಾರ ಬದುಕು ಕೊಟ್ಟಿದೆ. ಬೆಳಗ್ಗೆ ಮೂರು ಗಂಟೆಗೆ ಬರುತ್ತೇನೆ. ಮಾರುಕಟ್ಟೆ ಯಾವತ್ತೂ ಸಾಕೆನಿಸಿದ್ದಿಲ್ಲ. ಇವಳನ್ನು ಸಾಕಿದ್ದೇ ಈ ಕೆಲಸ ಮಾಡಿ' ಎಂದು ಪಕ್ಕದಲ್ಲಿದ್ದ ಮಗಳು ರೇಖಾ ಕಡೆಗೆ ಕೈ ತೋರಿಸಿದರು ಲಕ್ಷ್ಮೀ. ರೇಖಾರ ಮೂರು ಮಕ್ಕಳಲ್ಲಿ ದೊಡ್ಡವ ಎಸ್ಸೆಸ್ಸೆಲ್ಸಿ. ಇನ್ನಿಬ್ಬರು ಹೆಣ್ಣುಮಕ್ಕಳು ಮೂರನೇ ತರಗತಿ ಹಾಗೂ ಎಲ್.ಕೆ.ಜಿಯಲ್ಲಿ ಓದುತ್ತಿದ್ದಾರೆ. ಹೂವಿನ ವ್ಯಾಪಾರದಿಂದಲೇ ಮಕ್ಕಳ ಶಿಕ್ಷಣ ಸಾಗಿದೆ.

ಮೊಗ್ಗಿನ ಜಡೆ, ದಿಂಡು, ಹಾರ, ತುಳಸಿ, ಅಲಂಕಾರಿಕ ಸೊಪ್ಪುಗಳನ್ನು ಮಾರುವವರಲ್ಲೂ ಮಹಿಳೆಯರ ಸಂಖ್ಯೆ ಅಧಿಕ. ಗ್ರಾಹಕರ ದುಂಬಾಲು ಬಿದ್ದು, ಚೌಕಾಶಿ ಮಾಡಿ ಹೂವುಗಳನ್ನು ಗ್ರಾಹಕರಿಗೆ ದಾಟಿಸಿ, ಹಣ ಎಣಿಸಿ ಕೈಚೀಲದಲ್ಲಿ ಇರಿಸಿಕೊಂಡು ಮತ್ತೆ ಕೂಗುವ 'ಪ್ರಕ್ರಿಯೆ' ಶುರುವಾಗುತ್ತದೆ. ಯಾರಿಗೋ ಫೋನ್ ಮಾಡಿ ಅವರ ವ್ಯಾಪಾರ ವಿಚಾರಿಸುವ, ರೇಟು ಕೇಳುವ, ಮಕ್ಕಳ ಕಾಳಜಿ ವಹಿಸಿ ಮನೆಯವರೊಂದಿಗೆ ಮಾತನಾಡುವ ಮಹಿಳಾ ವ್ಯಾಪಾರಿಗಳೂ ಕಣ್ಣಿಗೆ ಬಿದ್ದರು.

13ನೇ ಪುಟಕ್ಕೆ...

ಹೆಬ್ರಿ ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ಹಕ್ಕಿಗಳ ಮಾಹಿತಿ ನೀಡಲಾಯಿತು

ಅರಿವಿನ ಅಂಗಳದಲ್ಲಿ ತೆರೆದಿದೆ ಪಕ್ಷಿ ಪ್ರಪಂಚ

ನವೀನ್ ಕುಮಾರ್ ಜಿ.

'ಕೃಷಿ ಕುಟುಂಬದಲ್ಲಿ ಜನಿಸಿದ ನನಗೆ ಹಕ್ಕಿಗಳೆಂದರೆ ಸಾಮಾನ್ಯ ವಿಷಯ. ದಿನನಿತ್ಯ ಅವುಗಳನ್ನು ಕಂಡರೂ, ಅವುಗಳೆಡೆ ಲಕ್ಷ್ಯ ಹರಿಸುತ್ತಿದ್ದುದು ಕಡಿಮೆ. ಈಗ ಹಾಗಲ್ಲ. ಸುಮಾರು 30ಕ್ಕೂ ಹೆಚ್ಚು ಹಕ್ಕಿಗಳನ್ನು ಗುರುತಿಸಬಲ್ಲೆ. ಹಕ್ಕಿಗಳ ಇಂಚರ ಕೇಳಿದರೆ ಅವುಗಳು ಯಾವ ಪ್ರಭೇದದ ಪಕ್ಷಿ ಎಂದು ಗುರುತಿಸಲು ಪ್ರಯತ್ನಿಸುತ್ತೇನೆ. ಬಾನಾಡಿಗಳ ಬಗ್ಗೆ ನಾನು ಪಡೆದುಕೊಂಡ ಅರಿವನ್ನು ಶಾಲಾ ಮಕ್ಕಳ ಜೊತೆಗೂ ಹಂಚಿಕೊಳ್ಳುತ್ತೇನೆ...'

ಇದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತಲ್ಲೂರು ಗ್ರಾಮ ಪಂಚಾಯಿತಿ ಅರಿವು ಕೇಂದ್ರದ (ಸಾರ್ವಜನಿಕ ಗ್ರಂಥಾಲಯ) ಮೇಲ್ವಿಚಾರಕಿ ದೀಪಾ ಎಸ್. ಶೆಟ್ಟಿ ಅವರ ಮಾತುಗಳು.

ಕೆಲ ತಿಂಗಳುಗಳ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಯೋಗದಲ್ಲಿ ನೇಚರ್ ಕನ್ಸರ್ವೇಷನ್ ಸಂಸ್ಥೆಯ ಅಂಗಸಂಸ್ಥೆಯಾದ 'ಅರ್ಲಿ ಬರ್ಡ್' ಅಧೀನದಲ್ಲಿ ನಡೆದ ಪಕ್ಷಿ ಶಿಕ್ಷಣ ತರಬೇತಿ ಕಾರ್ಯಕ್ರಮದಲ್ಲಿ ಇವರು ಪಾಲ್ಗೊಂಡಿದ್ದರು.

ರಾಜ್ಯದಾದ್ಯಂತ ಈ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಪಡೆದ ಅರಿವು ಕೇಂದ್ರದ ಮೇಲ್ವಿಚಾರಕರದು ಇಂತಹದ್ದೇ ಅನಿಸಿಕೆ. ಇವರೆಲ್ಲರೂ ಉತ್ಸಾಹದಿಂದಲೇ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡು ಬರುವ ಪಕ್ಷಿಗಳನ್ನು ವೀಕ್ಷಣೆ ಮಾಡುವುದರ ಜೊತೆಗೆ, ಮಕ್ಕಳಲ್ಲೂ ಇಂಥ ಹವ್ಯಾಸ ಬೆಳೆಸುವ ಕಾರ್ಯವನ್ನು ಮಾಡುತ್ತಿದ್ದಾರೆ.

500 ಗ್ರಾಮ ಪಂಚಾಯಿತಿಗಳ ಅರಿವು ಕೇಂದ್ರಗಳ (ಗ್ರಂಥಾಲಯ) ಮೇಲ್ವಿಚಾರಕರಿಗೆ ಪಕ್ಷಿಗಳ ಕುರಿತು ತರಬೇತಿ ನೀಡಲಾಗಿದೆ. ಮಕ್ಕಳಿಗೆ ಪಕ್ಷಿಗಳನ್ನು ಪರಿಚಯಿಸುವ ಮೂಲಕ ಪರಿಸರದ ಅರಿವನ್ನು ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಪಕ್ಷಿಗಳ ವೀಕ್ಷಣೆ, ಅವುಗಳ ಗುರುತಿಸುವಿಕೆ, ಸರಳವಾಗಿ ಹಕ್ಕಿಗಳ ಚಿತ್ರ ಬಿಡಿಸುವುದು, ಅವುಗಳ ಬಗೆಗಿನ ಆಟಗಳು ಸೇರಿದಂತೆ ಹಲವು ಚಟುವಟಿಕೆಗಳ ಕುರಿತು ಅರಿವು ಮೇಲ್ವಿಚಾರಕರಿಗೆ ತರಬೇತಿ ನೀಡಲಾಗಿದೆ. ಅವರು ತಮ್ಮ ಗ್ರಂಥಾಲಯಕ್ಕೆ ಬರುವ ಅಥವಾ ಸಮೀಪದ ಶಾಲೆಗಳ ಮಕ್ಕಳಿಂದ ಈ ಚಟುವಟಿಕೆಗಳನ್ನು ಮಾಡಿಸುತ್ತಿದ್ದಾರೆ.

ಈ ಯೋಜನೆ ಅಡಿಯಲ್ಲಿ ತರಬೇತಿ ಪಡೆದ ಹೆಚ್ಚಿನ ಮೇಲ್ವಿಚಾರಕರು, ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಬಾನಾಡಿಗಳ ಕುರಿತು ಅರಿವು ಮೂಡಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದಾರೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಲಾ 16 ಮಂದಿ ಅರಿವು ಕೇಂದ್ರದ ಮೇಲ್ವಿಚಾರಕರು ತರಬೇತಿ ಪಡೆದು ಪಕ್ಷಿಗಳ ಬಗ್ಗೆ ಮಾಹಿತಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

'ಪಕ್ಷಿ ಸಂಕುಲವನ್ನು ಉಳಿಸುವ ಕುರಿತು ನಾವು ಮಕ್ಕಳಿಗೆ ತಿಳಿಸುತ್ತೇವೆ. ಬಿಡುವಿನ ವೇಳೆಯಲ್ಲಿ ಅವರನ್ನು ಪಕ್ಷಿ ವೀಕ್ಷಣೆಗೂ ಕರೆದೊಯ್ಯುತ್ತೇವೆ. ನಮ್ಮ ಸುತ್ತಮುತ್ತಲಿನ ಪಕ್ಷಿಗಳನ್ನು ಗುರುತಿಸಲು ಪ್ರಯತ್ನಿಸುತ್ತಿದ್ದೇವೆ. ಮಕ್ಕಳು ಇಂತಹ ಚಟುವಟಿಕೆಗಳಲ್ಲಿ ಉತ್ಸಾಹದಿಂದಲೇ ಪಾಲ್ಗೊಳ್ಳುತ್ತಾರೆ' ಎಂದು ಉಡುಪಿ ಜಿಲ್ಲೆಯ ಹಾವಂಜೆ ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಮೇಲ್ವಿಚಾರಕಿ ಸುಮತಿ ಹೇಳುತ್ತಾರೆ.

> **“ಮಕ್ಕಳು ಬಿಡುವಿನ ವೇಳೆಯಲ್ಲಿ ಅರಿವು ಕೇಂದ್ರಕ್ಕೆ ಬರುತ್ತಾರೆ. ಹಕ್ಕಿಗಳ ಕಾರ್ಡ್‌ಗಳ ಆಟವಾಡುತ್ತಾರೆ. ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಬುದ್ಧಿ ಚುರುಕಾಗುತ್ತದೆ. ನಮ್ಮಂತೆ ಹಕ್ಕಿಗಳಿಗೂ ಬದುಕುವ ಹಕ್ಕಿದೆ ಎಂಬಂತಹ ಸಂದೇಶವನ್ನು ಪ್ರತಿ ಮಗುವಿಗೂ ಈ ಮೂಲಕ ನೀಡುತ್ತೇನೆ.”**
>
> **ಪುಷ್ಪಾವತಿ ಶೆಟ್ಟಿ** ಅರಿವು ಕೇಂದ್ರದ ಮೇಲ್ವಿಚಾರಕಿ, ಹೆಬ್ರಿ, ಉಡುಪಿ ಜಿಲ್ಲೆ

> **“ಹಕ್ಕಿಗಳೆಂದರೆ ನನಗೆ ಪ್ರಾಣ. ಶಾಲೆಗೆ ರಜೆ ಇರುವಾಗ, ಕೆಲವೊಮ್ಮೆ ಸಂಜೆ ಹೊತ್ತು ಪಂಚಾಯಿತಿ ಗ್ರಂಥಾಲಯಕ್ಕೆ ಬರುತ್ತೇನೆ. ಇಲ್ಲಿ ಬಗೆ ಬಗೆಯ ಹಕ್ಕಿಗಳ ಚಿತ್ರಗಳ ಕಾರ್ಡ್‌ಗಳಿವೆ. ಜೊತೆಗೆ ಪಝಲ್‌ಗಳು ಕೂಡ ಇವೆ. ಇವುಗಳಲ್ಲಿ ಆಟವಾಡಲು ತುಂಬಾ ಖುಷಿಯಾಗುತ್ತಿದೆ”**
>
> **ಸಹನಾ** ಹೆಬ್ರಿ ಸರ್ಕಾರಿ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿನಿ

'ಪ್ರಕೃತಿಯ ಪೆಟ್ಟಿಗೆ' ತೆರೆದಾಗ...

ಪಕ್ಷಿಗಳ ಮೂಲಕ ಪ್ರಕೃತಿಯ ಸೋಜಿಗವನ್ನು ಮಕ್ಕಳಿಗೆ ಪರಿಚಯಿಸುವ ಪಕ್ಷಿ ಶಿಕ್ಷಣ ಕಾರ್ಯಕ್ರಮಕ್ಕಾಗಿ ರೂಪಿಸಿರುವ 'ಪ್ರಕೃತಿ ಪೆಟ್ಟಿಗೆ' (ಕಿಟ್) ಹಕ್ಕಿಗಳಿಗೆ ಸಂಬಂಧಿಸಿದ ಪುಸ್ತಕ, ಪೋಸ್ಟರ್‌ಗಳನ್ನು ಹಾಗೂ ಕಲಾ ಚಟುವಟಿಕೆ, ಆಟಗಳ ಮೂಲಕ ಬಾನಾಡಿಗಳ ಬದುಕನ್ನು ತಿಳಿಯಲು ಸಹಕಾರಿಯಾಗುವ ಪರಿಕರಗಳನ್ನು ಹೊಂದಿದೆ.

ಹಕ್ಕಿಗಳ ಚಿತ್ರವಿರುವ ಆಟದ ಕಾರ್ಡ್, ಪಝಲ್‌ಗಳು, ಪಕ್ಷಿಗಳ ಚಿತ್ರಕ್ಕೆ ಬಣ್ಣ ತುಂಬುವ ಚಟುವಟಿಕೆಗೆ ಪೂರಕವಾದ ಪುಸ್ತಕಗಳು, ಪ್ರಕೃತಿಯ ಪತ್ರಿಕೆ, ಹಕ್ಕಿಗಳ ದಾಖಲೀಕರಣ ನಡೆಸಲು ಉಪಯುಕ್ತ ಮಾಹಿತಿ ಒದಗಿಸುವ ಹೊತ್ತಿಗೆಗಳೂ ಈ ಕಿಟ್‌ನಲ್ಲಿದ್ದು, ಮಕ್ಕಳನ್ನು ಆಕರ್ಷಿಸುತ್ತಿವೆ.

'ನನಗೆ ಪಕ್ಷಿ ವೀಕ್ಷಣೆ, ಅವುಗಳ ಫೋಟೊ ತೆಗೆಯುವ ಹವ್ಯಾಸ ಇದೆ. ಇದೇ ಕಾರಣದಿಂದ 'ಅರ್ಲಿ ಬರ್ಡ್' ಸಂಸ್ಥೆಯ ಸಂಪರ್ಕಕ್ಕೆ ಬಂದೆ. ಅವರು ನನ್ನನ್ನು ಈ ಯೋಜನೆಯ ಸಂಪನ್ಮೂಲ ವ್ಯಕ್ತಿಯಾಗಿಸಿ, ತರಬೇತಿ ನೀಡಿದರು. ನಾವು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ತರಬೇತಿ ನೀಡಿದೆವು' ಎಂದು ಶಿಕ್ಷಕ, ಪಕ್ಷಿ ಪ್ರೇಮಿ ಅರವಿಂದ ಕುಡ್ಲ ಅವರು, ತರಬೇತುದಾರರಾಗಿ ಕಾರ್ಯನಿರ್ವಹಿಸಿರುವ ಅನುಭವ ಹಂಚಿಕೊಂಡರು. ತರಬೇತಿಯಲ್ಲಿ ಪಾಲ್ಗೊಂಡಿರುವ ಮೇಲ್ವಿಚಾರಕರೆಲ್ಲರೂ ತಮ್ಮ ಊರಿನ ಮಕ್ಕಳಲ್ಲಿ ಪಕ್ಷಿ ವೀಕ್ಷಣೆಯ ಹವ್ಯಾಸ ಬೆಳೆಸುವ ಮಹತ್ತರವಾದ ಕಾರ್ಯ ನಡೆಸುತ್ತಿದ್ದಾರೆ. ಪಕ್ಷಿಗಳ ವಿಷಯಗಳನ್ನಿಟ್ಟುಕೊಂಡು ಹಲವಾರು ಚಟುವಟಿಕೆಗಳನ್ನೂ ಅರಿವು ಕೇಂದ್ರಗಳಲ್ಲಿ ಮತ್ತು ಸಮೀಪದ ಶಾಲೆಗಳಲ್ಲಿ ನಡೆಸುತ್ತಿದ್ದಾರೆ. ಮಕ್ಕಳಲ್ಲಿ ಪರಿಸರ ಪ್ರೇಮ ಮೂಡಿಸುವ ಪ್ರಯತ್ನ ಈ ಮೂಲಕ ಸದ್ದಿಲ್ಲದೆ ನಡೆಯುತ್ತಿದೆ.

13ನೇ ಪುಟಕ್ಕೆ...

ಮೂಡಣದತ್ತ ಚಿಕ್ಕಮೇಳದ ಹೆಜ್ಜೆ

ಇಳಿಸಂಜೆಯಲ್ಲಿ ಮಂಗಳೂರಿನ ಬೀದಿಯೊಂದರಲ್ಲಿ ಚಿಕ್ಕಮೇಳ ತಿರುಗಾಟಕ್ಕೆ ಹೊರಟಾಗ... ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಅಭಿಲಾಷ್ ಪಿ.ಎಸ್.

ಮನೆಯಂಗಳಕ್ಕೆ ಗೆಜ್ಜೆನಾದದೊಂದಿಗೆ 'ರಾಧಾಕೃಷ್ಣ'ರ ಪ್ರವೇಶವಾಗಿತ್ತು. ಹೊರಾಂಗಣದಲ್ಲಿ ಹೆಜ್ಜೆ ಹಾಕುತ್ತಿದ್ದ ಯಕ್ಷಗಾನ ಕಲಾವಿದರು ಚಾವಡಿಗೆ ಅಡಿ ಇಟ್ಟಿದ್ದರು. ಅವರಿಗೊಂದು ಸ್ವಸ್ತಿಕದ ಸ್ವಾಗತ. ಮೃದುವಾದ ಮದ್ದಳೆಯ ತಾಳ, ಮನೆಯ ಗೋಡೆಗಳಿಗೆ ಅಪ್ಪಳಿಸಿ ಪ್ರತಿಧ್ವನಿಸುತ್ತಿದ್ದ ಭಾಗವತರ ಪದ್ಯ, ಕಲಾವಿದರ ಹೆಜ್ಜೆ, ಅಭಿನಯ, ಶುಭ್ರ ಸಂಭಾಷಣೆ... 15 ನಿಮಿಷ ಮನೆಯ ಚಾವಡಿಯೇ ಯಕ್ಷಗಾನದ ವೇದಿಕೆಯಾಗಿತ್ತು. ಇಂತಹ ದೃಶ್ಯ ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಮನೆಗಳಲ್ಲಿ ಮಳೆಗಾಲದಲ್ಲಿ ಕಂಡುಬರುವುದು ಸಾಮಾನ್ಯ. 'ಚಿಕ್ಕಮೇಳ' ಎಂದೂ ಕರೆಯಲ್ಪಡುವ ಈ 'ರಾಧಾಕೃಷ್ಣ' ಮೇಳ ಇದೀಗ ತೆಂಕಣದಿಂದ ಮೂಡಣದತ್ತ ಹೆಜ್ಜೆ ಇಟ್ಟಿರುವುದು ಈಗಿನ ವಿಶೇಷ.

ಪತ್ತನಾಜೆ ಅಥವಾ ಹತ್ತನಾವಧಿ- ಇದು ಯಕ್ಷಗಾನ ಮೇಳಗಳ ಹಂಗಾಮಿನ ತಿರುಗಾಟ ಕೊನೆಗೊಳ್ಳುವ ದಿನ. ಸಾಮಾನ್ಯವಾಗಿ ಮೇ 24-25ರಂದು ಬರುವ ಈ ದಿನದಿಂದ ದೀಪಾವಳಿಯವರೆಗೆ ಎಂದರೆ ಸುಮಾರು ಆರು ತಿಂಗಳು ಬಯಲಲ್ಲಿ ಯಕ್ಷಗಾನದ ಹಬ್ಬಕ್ಕೆ ವಿರಾಮ. ಬಯಲಲ್ಲಿ ಗೆಜ್ಜೆ, ಮೃದಂಗ, ಚೆಂಡೆಯ ನಾದವಿಲ್ಲ. ಬದಲಾಗಿ ಆ ಅವಧಿಯಲ್ಲಿ ಮನೆಯ ಚಾವಡಿಯೇ ಯಕ್ಷಗಾನಕ್ಕೆ ವೇದಿಕೆ. 'ಈ ಚಿಕ್ಕಮೇಳ ಆರಂಭವಾಗಿದ್ದು ಯಕ್ಷಗಾನದ ತವರು ಎಂದು ಕರೆಸಿಕೊಳ್ಳುವ ಕುಂಬಳೆ ಸೀಮೆಯಲ್ಲಿ' ಎಂದು ಪುತ್ತಿಗೆ ಮಹತೋಭಾರ ಶ್ರೀ ಸೋಮನಾಥೇಶ್ವರ ಚಿಕ್ಕಮೇಳದ ಸಂಚಾಲಕ ಸುರೇಂದ್ರ ಪೈ ಹೇಳುತ್ತಾರೆ.

'ಹಿಂದೆ ಚೌತಿ, ನವರಾತ್ರಿ, ಅಷ್ಟಮಿಯಲ್ಲಷ್ಟೇ ಹವ್ಯಾಸಿ ಕಲಾವಿದರು ಮನೆ ಮನೆಗೆ ಹೋಗಿ ಈ ರೀತಿ ಪ್ರದರ್ಶನ ನೀಡುತ್ತಿದ್ದರು. ಇದು ಜೀವನೋಪಾಯಕ್ಕೆ ಆಗಿತ್ತು. ಕ್ರಮೇಣ ಇದು ಚಿಕ್ಕಮೇಳವಾಗಿ ಪರಿವರ್ತನೆಗೊಂಡಿತು. ಬಯಲಾಟಗಳಿಲ್ಲದ ಸಂದರ್ಭದಲ್ಲಿ ಚಿಕ್ಕಮೇಳ ಆರ್ಥಿಕವಾಗಿಯೂ ಕಲಾವಿದರಿಗೆ ನೆರವಾಯಿತು. ವೃತ್ತಿಪರ ಕಲಾವಿದರ ಮಳೆಗಾಲದ ಸಂಪಾದನೆಯ ಮೂಲವೂ ಇದಾಗಿತ್ತು. ಭಾಗವತರು, ಮೃದಂಗ, ಶ್ರುತಿ, ಪುರುಷ-ಸ್ತ್ರೀ ವೇಷಧಾರಿಗಳು- ಹೀಗೆ ಐವರು ಕಲಾವಿದರು; ಇದು ಚಿಕ್ಕಮೇಳದ ಸ್ವರೂಪ. ಪೌರಾಣಿಕ ಪ್ರಸಂಗಗಳ ಆಯ್ದಭಾಗ ಇಲ್ಲಿ ಪ್ರದರ್ಶಿಸಲ್ಪಡುತ್ತವೆ. ರಾಧಾಕೃಷ್ಣ ಸಂವಾದ, ಶ್ರೀನಿವಾಸ ಕಲ್ಯಾಣ, ಸುಧನ್ವ-ಪ್ರಭಾವತಿ ಸಂವಾದ ಹೀಗೆ ಹೆಚ್ಚೆಂದರೆ ನಾಲ್ಕೈದು ಪದ್ಯಗಳಲ್ಲಿ ಮುಗಿಸುವಂತಹದ್ದು. ಕೆಲವೆಡೆ ಮನೆಯವರ ಇಚ್ಛೆಯ ಅನುಸಾರ ಪ್ರಸಂಗಗಳನ್ನು ಆಯ್ದುಕೊಳ್ಳುವುದೂ ಇದೆ. ಚಿಕ್ಕಮೇಳಗಳು ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಪ್ರದರ್ಶನ ನೀಡುವ ದಿನ ಬೆಳಗ್ಗೆ ಅಥವಾ ಕೆಲ ದಿನಗಳ ಮುನ್ನ ಒಂದು ಪ್ರದೇಶದ ಸುಮಾರು 20-22 ಮನೆಗಳಿಗೆ ಕರಪತ್ರಗಳನ್ನು ಹಂಚಿ 'ಚಿಕ್ಕಮೇಳ' ಬರುವ ಸಮಯದ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಕೆಲವರು ಹರಕೆಯ ರೂಪದಲ್ಲೂ ಚಿಕ್ಕಮೇಳ ನಡೆಸುತ್ತಾರೆ' ಎಂದರು 35 ವರ್ಷಗಳಿಂದ ಚಿಕ್ಕಮೇಳ ನಡೆಸುತ್ತಿರುವ ಸುರೇಂದ್ರ ಪೈ.

'ಯಕ್ಷಗಾನವೇ ಆರಾಧನಾ ಕಲೆ. ಅಂತೆಯೇ ದೇವಸ್ಥಾನಗಳಿಂದ ಹೊರಡುವ ಚಿಕ್ಕಮೇಳಗಳಿಗೆ ಜನರು ಮನೆಯಲ್ಲಿ ನೀಡುವ ಅಕ್ಕಿ, ತೆಂಗಿನಕಾಯಿ, ಎಳ್ಳೆಣ್ಣೆ ಮುಂತಾದ ವಸ್ತುಗಳು ನೇರವಾಗಿ ದೇವಸ್ಥಾನಕ್ಕೆ ಸಮರ್ಪಣೆ ಆಗುತ್ತವೆ. ಚಿಕ್ಕಮೇಳ ಕೇವಲ ಆಟವಲ್ಲ. ಅದೊಂದು ಮಾಧ್ಯಮವೂ ಹೌದು. ದೇವಸ್ಥಾನದ ಪ್ರಚಾರ, ಸಂದೇಶವೂ ಇದರ ಮೂಲಕ ಆಗುತ್ತದೆ. ಯಕ್ಷಗಾನವನ್ನೇ ನಂಬಿಕೊಂಡು ಬದುಕು ಸಾಗಿಸುವ ಕಲಾವಿದರಿಗೆ ಮಳೆಗಾಲದಲ್ಲಿ ಇದೊಂದು ಉತ್ಪತ್ತಿಯ ದಾರಿ. ದಿನವೂ ಅವರಿಗೆ ವೇತನ ನೀಡಲಾಗುತ್ತದೆ. ಪೌರಾಣಿಕ ಪ್ರಸಂಗಗಳಲ್ಲಿನ ನೀತಿಪಾಠ ಮನೆಯವರ ಪರಿವರ್ತನೆಗೆ ಕಾರಣವಾಗಿದ್ದೂ ಇದೆ. ಚಿಕ್ಕಮೇಳ ನೋಡಿ ಯಕ್ಷಗಾನದತ್ತ ಆಕರ್ಷಿತರಾಗಿ ಕಲಾವಿದರಾಗಿ ಬೆಳೆದವರೂ ಇದ್ದಾರೆ' ಎನ್ನುತ್ತಾರೆ ಸುರೇಂದ್ರ ಪೈ.

'ಚಿಕ್ಕಮೇಳ'ಗಳಿಗೂ ನಿಯಮ

ಚಿಕ್ಕಮೇಳಗಳು ಹೆಚ್ಚಾಗುತ್ತಿದ್ದು ಇದಕ್ಕೊಂದು ಒಕ್ಕೂಟ ರಚನೆಯಾಗಿದೆ. ಮಂಗಳೂರಿನ ತೆಂಕುತಿಟ್ಟು ಚಿಕ್ಕಮೇಳಗಳ ಒಕ್ಕೂಟ 'ಚಿಕ್ಕಮೇಳ'ಗಳಿಗೆ ನಿಯಮಗಳನ್ನು ರೂಪಿಸಿದೆ. 'ಯಕ್ಷಗಾನದ ಸಂಪ್ರದಾಯಕ್ಕೆ ಚ್ಯುತಿ ಬರಬಾರದು ಹಾಗೂ ಅದರ ಗೌರವಕ್ಕೆ ಅಪಖ್ಯಾತಿ ಬರಬಾರದು ಎಂದು ನಿಯಮಗಳನ್ನು ರೂಪಿಸಿದ್ದೇವೆ. ಒಕ್ಕೂಟದಲ್ಲಿ 50 ಚಿಕ್ಕಮೇಳಗಳು ನೋಂದಣಿಯಾಗಿವೆ. ಶಿಸ್ತು, ಭಕ್ತಿಯೊಂದಿಗೆ ಮನೆಯ ಪ್ರವೇಶ ಮಾಡಬೇಕು, ಚೌಕಿಯಿಂದ ಹೊರಟ ಬಳಿಕ ಮದ್ಯಪಾನ, ತಂಬಾಕು ಸೇವನೆ ಮಾಡಬಾರದು, ಇಂತಿಷ್ಟೇ ಹಣ ನೀಡಿ ಎಂದು ಒತ್ತಾಯಿಸಬಾರದು. ಜೀವನೋಪಾಯಕ್ಕೆ ಎಂದು ಆರಂಭವಾದ ಚಿಕ್ಕಮೇಳ ದಂಧೆಯಾಗಬಾರದು ಎನ್ನುವ ಉದ್ದೇಶ ನಮ್ಮದು' ಎನ್ನುತ್ತಾರೆ ಒಕ್ಕೂಟದ ಅಧ್ಯಕ್ಷ ಸರಪಾಡಿ ಅಶೋಕ ಶೆಟ್ಟಿ.

13ನೇ ಪುಟಕ್ಕೆ...

ಹೆಣ್ಣು ನಿರೂಪಿಸಿದ ಮಂಟೇಸ್ವಾಮಿ ಕಾವ್ಯ

ಕೆ.ನರಸಿಂಹಮೂರ್ತಿ

'ಮಂಟೇಸ್ವಾಮಿ' ದಕ್ಷಿಣ ಕರ್ನಾಟಕದ ಜನಪದ ಅನುಭಾವಿ ಕಾವ್ಯಗಳಲ್ಲೊಂದು. ಈ ಮಹಾಕಾವ್ಯವನ್ನು ಇದುವರೆಗೆ ನೀಲಗಾರರು, ಅಂದರೆ ಪುರುಷರಷ್ಟೇ ಒಟ್ಟಿಗೇ ಕುಂತು ನಿರೂಪಿಸುವ ಮಾದರಿಯೇ ಹೆಚ್ಚು ಜನಪ್ರಿಯವಾಗಿರುವುದು. ಈ ಪುರುಷ ಕೇಂದ್ರಿತ ಸಂಪ್ರದಾಯವನ್ನು ಮುರಿದು, ಅದರ ಎದುರಿಗೆ ಆಧುನಿಕ, ಭಿನ್ನ ಮಾದರಿಯನ್ನು ನಟ ಪ್ರಕಾಶ್ ರಾಜ್ ನೇತೃತ್ವದ 'ನಿರ್ದಿಗಂತ' ತಂಡ ಈಗ ನಿರೂಪಿಸಿದೆ.

ಅದು, ಹೆಣ್ಣೊಬ್ಬಳು ಕಾವ್ಯಕಥನವನ್ನು ನಿರೂಪಿಸುವ ಮಾದರಿ. ಒಬ್ಬ ಹೆಣ್ಣೇ ಇಡೀ ಕಾವ್ಯ ನಿರೂಪಣೆಯ ನೇತೃತ್ವ ವಹಿಸಿರುವುದು. ಇದು ಈ ಕಾಲದ, ಈ ಕಾವ್ಯದ ಅಚ್ಚರಿಯ ಸಾಧ್ಯತೆ.

ಕಾವ್ಯದಲ್ಲಿ ಬರುವ ಮಹತ್ವದ 'ಕಲ್ಯಾಣ ಪಟ್ಟಣದ ಸಾಲು' ಭಾಗವು, ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿದ್ದ ಪ್ರೇಕ್ಷಕರನ್ನು ಬಸವಣ್ಣ ಮತ್ತು ಮಂಟೇಸ್ವಾಮಿ ಬದುಕಿದ್ದ ಎರಡು ಭಿನ್ನ ಕಾಲಘಟ್ಟಗಳ ನಡುವಿನ ರೋಚಕ ರಂಗ ಪಯಣಕ್ಕೂ ಕರೆದೊಯ್ದಿತ್ತು.

ಬಸವಣ್ಣನ ಕಾಲದ ಲಿಂಗಭಕ್ತಿ, ಆ ಕಾಲಕ್ಕೆ ಚಲಿಸಿ ಮಂಟೇಸ್ವಾಮಿ ಒಡ್ಡಿದ ಧಾರ್ಮಿಕ ಪ್ರತಿರೋಧ ಮತ್ತು ಈಗಿನ ಕಾಲದ ಕಾವಿಧಾರಿಗಳ ಕಡೆಗೆ ಚುಚ್ಚುನೋಟ–ಎಲ್ಲದರ ಮೇಳವಾಗಿ ಕಾವ್ಯ ಪ್ರಸ್ತುತಿ ವಿಶೇಷ ಪ್ರಯತ್ನವೇ. 'ಧರೆಗೆ ದೊಡ್ಡವ'ರನ್ನು ತೋರಿಸಲು 'ಕಲ್ಯಾಣ ಪಟ್ಟಣ'ದೆಡೆಗೆ ಕರೆದೊಯ್ಯುವ ಹೊಸ ಯಾನವಿದು. ತಂಡ ಇದನ್ನು 'ಕಾವ್ಯ ಪ್ರಯೋಗ' ಎಂದಷ್ಟೇ ಕರೆದುಕೊಂಡಿದ್ದರೂ, 'ಕಾವ್ಯ ರಂಗ ಪ್ರಯೋಗ' ಎಂದು ಉದಾರವಾಗಿ ಹೇಳಬಹುದು.

ಕಾವ್ಯಾರ್ಥಿ, ಹಾಡುಗಾರ್ತಿಯೂ ಆಗಿರುವ ನಟಿ ಶಾಲೋಮ್ ಸನ್ನುತಾ, ತಲೆದೂಗಿಸುವ ಹಾಡುಗಾರಿಕೆ ಮತ್ತು ಅಭಿನಯ, ಅಪ್ಯಾಯಮಾನವಾದ ನೃತ್ಯ, ನಿರರ್ಗಳ ನಿರೂಪಣೆಯ ಮೂಲಕ ರಂಗಕ್ಕೆ ತಂದ ಬಗೆಯು ಕಾವ್ಯದ ಕುರಿತ ಹೊಸ ವ್ಯಾಖ್ಯಾನದ ಪ್ರಯತ್ನಕ್ಕೂ ಸಾಕ್ಷಿಯಾಗಿತ್ತು.

ಈ ಪ್ರಯೋಗವು, ಮಂಟೇಸ್ವಾಮಿಯು ಗಂಡೇ, ಹೆಣ್ಣೇ ಎಂಬ ಪ್ರಶ್ನೆಗಳಾಚೆಗೆ, ಮಹಾಗುರುವಿನ ಲಿಂಗಾತೀತ ವ್ಯಕ್ತಿತ್ವದೆಡೆಗೂ ಬಿಟ್ಟ ಹೊಸ ಟಾರ್ಚ್‌ಲೈಟ್‌ನಂತೆಯೂ ಕಾಣುತ್ತದೆ. ಇದು ಭಕ್ತಿ ಸಂಗೀತವು ಕಾಣಿಸುವ, ಕೈಹಿಡಿದು ಕರೆದೊಯ್ಯುವ ಹೊಸ ಚಿತ್ತಸ್ಥಿತಿ.

ಇದುವರೆಗೆ ಸಾಂಪ್ರದಾಯಿಕ ವೇದಿಕೆಯಲ್ಲಿ ಮಂಡನೆಯಾಗುತ್ತಿದ್ದ ಕಾವ್ಯವನ್ನು, ನೀಲಗಾರರ ಮಟ್ಟುವನ್ನು ಅನುಸರಿಸಿಯೇ ಆಧುನಿಕ ವಾದ್ಯ ಸಂಗೀತದ ಮೂಲಕ ರಂಗ ವೇದಿಕೆಗೆ ರೂಪಾಂತರಿಸುವಲ್ಲಿ ವಾದ್ಯಮೇಳದ ಕಲಾವಿದರಾದ ರೋಹಿತ್, ಮುನ್ನಾ, ಅನುಷ್ ಶೆಟ್ಟಿ ಅವರ ಕೊಡುಗೆಯೂ ಇದೆ.

ಅಕಾಸ್ಟಿಕ್ ಗಿಟಾರ್, ಬೇಸ್ ಗಿಟಾರ್, ಕಹೂನ್‌ನಂಥ ಆಧುನಿಕ ವಾದ್ಯಗಳು, ಜಂಬೆ, ದುಡಿಯಂಥ ದೇಸಿ ವಾದ್ಯಗಳನ್ನು ಒಟ್ಟುಗೂಡಿಸಿ ರಂಗ ಸಂಗೀತಕ್ಕಾಗಿ ಒಗ್ಗಿಸಿಕೊಂಡ ಬಗೆಯು ಕಾವ್ಯದ ಆಸ್ವಾದನೆಗೆ ಹೊಸ ರುಚಿಯನ್ನು ಸೇರಿಸುತ್ತದೆ. 'ಅಲ್ಲಾ ಬ್ಯಾರೇ ಅಲ್ಲಾ, ಅಲ್ಲಮ ಬ್ಯಾರೇ ಅಲ್ಲಾ' ಎಂಬಂಥ ಸನ್ನಿವೇಶಗಳಲ್ಲಿ ಸೂಫಿ ಸಂಗೀತವೂ ಹೊಳೆಯುತ್ತದೆ.

ಬಸವಣ್ಣ, ಮಂಟೇಸ್ವಾಮಿ, ನೀಲಾಂಬಿಕೆ, ಅಲ್ಲಮಪ್ರಭು ಸೇರಿದಂತೆ ಪಾತ್ರಗಳನ್ನು ಕ್ಷಣಕ್ಷಣಕ್ಕೆ ಆವಾಹಿಸಿಕೊಂಡು ಸನ್ನಿವೇಶಗಳನ್ನು ಕಟ್ಟುತ್ತಾ, ಮೊದಲಿಂದ ಕೊನೆವರೆಗೂ ಇವರೆಲ್ಲರಿಂದ ದೂರ ನಿಂತ ನಿರೂಪಕಿಯಾಗಿಯೂ ಶಾಲೋಮ್ ಸನ್ನುತಾ ತಾವೊಬ್ಬ ಪಳಗಿದ ನಟಿ ಎಂಬುದನ್ನು ಸಾಬೀತು ಮಾಡುತ್ತಾರೆ. 'ಸಿದ್ದಯ್ಯಾ ಸ್ವಾಮಿ ಬನ್ನ್ಯೋ' ಎಂದು ಉದ್ದಕ್ಕೂ ಮೆಲುನಡಿಗೆಯ ಮೋಹಕ ನೃತ್ಯದಲ್ಲಿ ಇಡೀ ರಂಗಮಂದಿರವನ್ನು ಆವರಿಸುತ್ತಾರೆ. ತಂಬೂರಿಯನ್ನು ಪಾತ್ರ-ಸನ್ನಿವೇಶಗಳಿಗೆ ತಕ್ಕಂತೆ ಶೂಲ, ದೊಣ್ಣೆ, ಕಂಡಾಯ, ಬೆರಳ ತುದಿ ಹಾಗೂ ಇಡೀ ದೇಹದ ವಿಸ್ತರಣೆಯ ಸಂಕೇತವಾಗಿ ಮಾರ್ಪಡಿಸುವ ಬಗೆಯೂ ವಿಸ್ಮಯ.

ಮಂಟೇಸ್ವಾಮಿಯ ಪೂಜೆಗೆ ಅರ್ಪಿಸಬೇಕಾದ ಬಗೆಬಗೆಯ ಹೂವುಗಳ ವರ್ಣನೆಯು ಗಮನ ಸೆಳೆಯುವ ವಿಶಿಷ್ಟ ಪ್ರಯೋಗ. ಅದೊಂದು ಪ್ರತ್ಯೇಕ ಭಾಗವೆಂಬಂತೆ ಗಮನ ಸೆಳೆಯುತ್ತದೆ. ಬಸವಣ್ಣನನ್ನು, ಆತನ ಲಿಂಗದೀಕ್ಷೆಯ ಪರಿಕಲ್ಪನೆಯನ್ನು ತಿಪ್ಪೆಗುಂಡಿ ಮೇಲೆ ಕುಳಿತು ಪ್ರಶ್ನಿಸುತ್ತಾ, ತೀವ್ರ ಪ್ರತಿರೋಧ ವ್ಯಕ್ತಪಡಿಸುವ ಮಂಟೇಸ್ವಾಮಿಯ 'ಮಹಾಗುರು' ವ್ಯಕ್ತಿತ್ವದ ಬಗ್ಗೆ ಹೇಳುತ್ತಲೇ, ಈ ಕಾಲದ ಡೋಂಗಿ ಸ್ವಾಮೀಜಿಗಳ ಕುರಿತ ಕಟು ಟೀಕೆ, ವ್ಯಂಗ್ಯಗಳು ಪ್ರಯೋಗಕ್ಕೆ ಸಮಕಾಲೀನ ಮಹತ್ವವನ್ನು ದೊರಕಿಸುತ್ತವೆ.

ಮಂಟೇಸ್ವಾಮಿಯಷ್ಟೇ ನಿರಾಡಂಬರ ಎನ್ನಿಸುವಂಥ, ಪ್ರತಿಮಾತ್ಮಕವಾದ ರಂಗ ಪರಿಕರ ಕಟ್ಟಿದ ಕಲಾವಿದ ಖಾಜು ಗುತ್ತಲ್, ಕಾವ್ಯದ ಚೌಕಟ್ಟಿಗೆ ಹೊಳಪು ತುಂಬುವಂಥ ನೆರಳು-ಬೆಳಕು ವಿನ್ಯಾಸ ಮಾಡಿರುವ ಗಣೇಶ್ ಹೆಗ್ಗೋಡು ಅವರ ಕಸಬುದಾರಿಕೆಯೂ ನಿರೂಪಣೆಯ ಪರಿಣಾಮವನ್ನು ಹೆಚ್ಚಿಸಿದೆ. ಕನ್ನಡದ ಪ್ರಮುಖ 'ಪ್ರತಿರೋಧದ ಪಠ್ಯ'ವಾಗಿಯೇ ಮಂಟೇಸ್ವಾಮಿ ಕಾವ್ಯವನ್ನು ಗ್ರಹಿಸಿರುವ ನಿರ್ದೇಶಕ ಶ್ರೀಪಾದ ಭಟ್, ಆಳ ಅಧ್ಯಯನ ಮತ್ತು ಒಳನೋಟಗಳಲ್ಲೇ ಅದನ್ನು ಕಂಡಿರಿಸಿದ್ದಾರೆ.

ಮಂಟೇಸ್ವಾಮಿ ಕಾವ್ಯದ ಹಲವು ಆಕರಗಳೂ, ಕಾವ್ಯ ಪ್ರಸ್ತುತಿಯ ಟ್ಯೂನ್‌ಗಳು ಈ ಪ್ರಯೋಗದ ಸ್ವರೂಪ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಹೀಗಾಗಿ ಇದು ಅಂಥ ಕಾವ್ಯ ಸಂಕಲನ-ಟ್ಯೂನ್‌ಗಳ ಒಂದು ಹೊಸ ಎರಕ. ಸ್ವಂತದ್ದು ಎನ್ನುವಂಥದ್ದು ಅಲ್ಲ.

ಇಂಥ ವಿಶಿಷ್ಟ ಪ್ರಯೋಗವನ್ನು ಮೈಸೂರಿನ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿತ್ತು.

ಮಂಟೇಸ್ವಾಮಿ ಕಾವ್ಯ ಪ್ರಯೋಗದಲ್ಲಿ ಶಾಲೋಮ್ ಸನ್ನುತಾ ಚಿತ್ರ/ಅನೂಪ್ ರಾಘ.ಟಿ.

ಹೂ ಮಾರುಕಟ್ಟೆಯಲ್ಲಿ...

12ನೇ ಪುಟದಿಂದ...

'ಕ್ರಿಕೆಟ್ ಅಭ್ಯಾಸಕ್ಕೆ ಆರು ಗಂಟೆಗೆ ಮಗ ತೆರಳಬೇಕು. ಯಜಮಾನರಿಗೆ ಕರೆ ಮಾಡಿ ನೆನಪಿಸಿದೆ' ಮೊಗ್ಗಿನ ಜಡೆಗಳನ್ನು ಮಾರುತ್ತಿದ್ದ ಬನಶಂಕರಿಯ ಸಾವಿತ್ರಿ ಮಾತು ಮುಗಿಸುವುದಕ್ಕೂ, ಸೋನೆ ಮಳೆ ಶುರುವಾಯಿತು. ಐದು ನಿಮಿಷದ ಮಳೆ ಇಡೀ ಮಾರುಕಟ್ಟೆಯ ಚಹರೆಯನ್ನೇ ಬದಲಿಸಿತು. ಹೂವುಗಳನ್ನು ರಕ್ಷಿಸುವಲ್ಲಿ ವ್ಯಾಪಾರಿಗಳು ತಲ್ಲೀನರಾದರೆ, ಖರೀದಿ ಮುಗಿಸಿ ಹೊರಡುವ ಧಾವಂತದಲ್ಲಿ ಗ್ರಾಹಕರಿದ್ದರು. ಮಳೆಯಿಂದ ತಪ್ಪಿಸಿಕೊಳ್ಳಲು ಕಟ್ಟಡಗಳ ಚಾವಣಿಯ ಕೆಳಗೆ ಆಶ್ರಯ ಪಡೆಯುವವರ ಬಳಿ ಟೀ, ಬನ್ನು, ಬಿಸ್ಕತ್ತು ಮಾರುವವನ ವ್ಯಾಪಾರ ಭರ್ಜರಿಯಾಗಿ ಸಾಗಿತ್ತು. ತಲೆಗೆ ಪ್ಲಾಸ್ಟಿಕ್ ಚೀಲ ಕಟ್ಟಿ ಹಮಾಲಿಯವನ ಕೆಲಸ ಸಾಗುತ್ತಲೇ ಇತ್ತು. ಇಲ್ಲಿಂದ ಖರೀದಿ ಮಾಡಿ ದೇವಸ್ಥಾನಗಳ ಮುಂದೆ ಮಾರುವವರು ಆಟೊದವನ ಮರ್ಜಿಗಾಗಿ ಕಾಯುತ್ತಿದ್ದರು.

ಮಾರುಕಟ್ಟೆ ಸಂಕೀರ್ಣದೊಳಗೆ ತೆರಳಿದರೆ ಅಲ್ಲಿ ಹೂವುಗಳ ಬೇರೆಯದೇ ಲೋಕ ಅನಾವರಣಗೊಳ್ಳುತ್ತದೆ. ವಿವಿಧ ಹೂವುಗಳಿಂದ ಕಟ್ಟಿರುವ ಬಗೆ ಬಗೆಯ ಹಾರಗಳು ಕಣ್ಮನ ಸೆಳೆಯುತ್ತವೆ. ಹಾರ ಕಟ್ಟುವವರ ಕಸುಬುದಾರಿಕೆ, ಪರಿಪೂರ್ಣತೆ, ನೈಪುಣ್ಯತೆ ಬೆರಗುಗೊಳಿಸುತ್ತವೆ. ಉದ್ದಕ್ಕೆ ಇರುವ ಅಂಗಡಿಗಳ ಮುಂದೆ ಸಾಲಾಗಿ ತೂಗಿರುವ ವಿವಿಧ ಗಾತ್ರಗಳ ಹಾರಗಳನ್ನು ನೋಡುವುದೇ ಚೆಂದ. ಎತ್ತರದ ನೆಲಹಾಸು ಇರುವ ಅಂಗಡಿಯೊಳಗೆ ಕುಳಿತು ಮಾಲೆ ಕಟ್ಟುವವರ ಕಣ್ಣಲ್ಲಿ ಹಲವು ಕನಸುಗಳಿದ್ದವು. ಗುಲಾಬಿ, ಸೇವಂತಿ, ಕಮಲ, ಕನಕಾಂಬರದ ವಿವಿಧ ಗಾತ್ರಗಳ ಮಾಲೆಗಳು ಮೆರವಣಿಗೆ ಹೊರಟಂತಿತ್ತು. ದೇವರ ಅಲಂಕಾರಕ್ಕೆ, ಶುಭಕಾರ್ಯಗಳಿಗೆ ಹಾರಗಳ ತಲಾಶೆಯಲ್ಲಿ ಬಂದವರು ವ್ಯಾಪಾರ ಕುದುರಿಸುತ್ತಿದ್ದರು. 'ಇಲ್ಲಿಂದ ರಾಜ್ಯ ವಿವಿಧ ಭಾಗಗಳಿಗೆ ಹಾರಗಳು ಹೋಗುತ್ತವೆ. ಪಕ್ಕದ ಆಂಧ್ರ, ತೆಲಂಗಾಣ ತಮಿಳುನಾಡು, ಕೇರಳಕ್ಕೂ ಕಳುಹಿಸಿಕೊಡುತ್ತೇವೆ. ಹಬ್ಬ ಹಾಗೂ ಚುನಾವಣೆ ಸಮದಲ್ಲಿ ಬೇಡಿಕೆ ಹೆಚ್ಚು' ಎನ್ನುವುದು ವ್ಯಾಪಾರಿಯೊಬ್ಬರ ಮಾತು.

ಅಂಗಡಿಯೊಂದರಿಂದ ಗುಂಜೂರಿನ ಪಟೇಲಮ್ಮ ದೇವಿಯ ಅಲಂಕಾರಕ್ಕೆ ಐದಾರು ಬೃಹತ್ ಗಾತ್ರ ಹಾರಗಳನ್ನು ಸಮಿತಿ ಸದಸ್ಯರು ಖರೀದಿ ಮುಗಿಸುವುದರೊಳಗೆ ಕೂಲಿಯೊಬ್ಬ ಎಲ್ಲಿಂದಲೋ ಪ್ರತ್ಯಕ್ಷನಾಗಿದ್ದ. '15 ವರ್ಷದಿಂದ ಕೂಲಿಯಾಗಿ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಊರಲ್ಲಿ ದಿನದ ಕಮಾಯಿ ₹200 ದಾಟುವುದಿಲ್ಲ. ಇಲ್ಲಿ ₹1 ಸಾವಿರದವರೆಗೂ ದುಡಿಯುತ್ತೇನೆ' ಎಂದು ಪಶ್ಚಿಮ ಬಂಗಾಳದ ಪುರ್ನಿಯಾದ ಅರ್ಶಾದ್ ಹೇಳಿದರು.

ಅಲ್ಲಿಯೇ ಪಕ್ಕದಲ್ಲಿರುವ ಮಂಡಿಯಲ್ಲಿ ಹೂವುಗಳನ್ನು ಗುಡ್ಡೆ ಹಾಕಿ, ಕೆ.ಜಿ ಲೆಕ್ಕದಲ್ಲಿ ಮಾರಲಾಗುತ್ತದೆ. ಹರಾಜಿನಲ್ಲಿ ಕೊಳ್ಳುವವರೂ ಇದ್ದಾರೆ. ಮಾರುಕಟ್ಟೆ ದೊಡ್ಡ ವ್ಯಾಪಾರಿಗಳು ಹಿಡಿತದಲ್ಲಿದೆ. ಬೆಳಿಗ್ಗೆ ಎಂಟು ಗಂಟೆ ಹೊತ್ತಿಗೆ ಕೈಗಾಡಿ ತಳ್ಳಿಕೊಂಡು ಬರುವ ಬಿಬಿಎಂಪಿಯ ಪೌರ ಕಾರ್ಮಿಕರು ಮಾರುಕಟ್ಟೆಯನ್ನು ಒಪ್ಪವಾಗಿಸುತ್ತಾರೆ. ದಿನದ ಎರಡನೇ ಭಾಗದ ವ್ಯವಹಾರ ಆರಂಭವಾಗುತ್ತದೆ.

ಸಾಮರಸ್ಯಕ್ಕೂ ಮಾದರಿ: ಸಾವಿರಾರು ಕುಟುಂಬಗಳ ಆಧಾರಸ್ತಂಭವಾಗಿರುವ ಈ ಮಾರುಕಟ್ಟೆ, ಧಾರ್ಮಿಕ ಸಾಮರಸ್ಯದ ಪ್ರತೀಕವೂ ಹೌದು. ಒಂದು ಕಾಲದಲ್ಲಿ ಯುದ್ಧಭೂಮಿಯಾಗಿದ್ದ ಈ ಸ್ಥಳ ಈಗ ಸಹಬಾಳ್ವೆಯ ತಾಣವಾಗಿದೆ.

ಹೂವಿನ ಜಡೆಗಳನ್ನು ಮಾರುತ್ತಿರುವ ವ್ಯಾಪಾರಿ

ಜಾಮಿಯ ಮಸೀದಿಯ ಮಿನಾರಗಳಿಂದ ಕೇಳಿಬರುವ ಮುಂಜಾನೆ ಅಜಾನ್ ವೇಳೆ ಭಕ್ತಿಯಿಂದ ಕಣ್ಣು ಮುಚ್ಚುವ ಸಣ್ಣಮ್ಮ, ಉದ್ಭವಮೂರ್ತಿ ಮಹಾಗಣಪತಿ ದೇವಸ್ಥಾನದ ಘಂಟೆ ನಾದಕ್ಕೆ ಭಕ್ತಿಪರವಶರಾಗುವ ಲಿಯಾಕತ್ ಅಲಿ ನಡುವೆ ಯಾವುದೇ ಗೋಡೆಗಳಿಲ್ಲ. ಅಂಗಡಿಯೊಳಗಿನ ಸ್ಪೀಕರ್‌ಗಳಲ್ಲಿ ಸುಪ್ರಭಾತ, ಕುರಾನ್ ಶ್ಲೋಕಗಳು ಮೊಳಗುತ್ತವೆ. ಧರ್ಮ, ಭಾಷೆ, ಪ್ರಾದೇಶಿಕತೆ, ಜಾತಿಯ ಸೋಂಕುಗಳ ದುರ್ಗಂಧವನ್ನು ಬಗೆಬಗೆಯ ಹೂವುಗಳ ಸುಗಂಧ ಮುಚ್ಚಿಹಾಕಿದೆ.

ಮಾರುಕಟ್ಟೆ ಪ್ರದಕ್ಷಿಣೆ ಮುಗಿಸಿ ಟೌನ್‌ಹಾಲ್ ಕಡೆ ಹೊರಟರೆ, ದಾರಿಯ ಇಕ್ಕೆಲಗಳಲ್ಲೂ ಹೂಗುಚ್ಛ ವ್ಯಾಪಾರಿಗಳ ಸಾಲು. ಗುಚ್ಛಗಳ ಜೊತೆ ಸೆಲ್ಫಿ ಕ್ಲಿಕ್ಕಿಸುವ ಹರೆಯದ ಹುಡುಗ ಹುಡುಗಿಯರು, ರೀಲ್ಸ್ ಪ್ರಿಯರು ತಮ್ಮದೇ ಲೋಕದಲ್ಲಿ ಮುಳುಗಿದ್ದರು. ವ್ಲಾಗರ್‌ಗಳ ಪ್ರಶ್ನೆಗಳಿಗೆ ಉತ್ತರಿಸುತ್ತಲೇ, ಗ್ರಾಹಕರೊಂದಿಗೆ ವ್ಯವಹರಿಸುವ ವ್ಯಾಪಾರಿಗಳೂ ಸಿಗುತ್ತಾರೆ. ವ್ಯಾಪಾರ ಕಡಿಮೆ ಇದ್ದವರ ಮೋರೆಯಲ್ಲಿ ಬೇಸರದ ಗೆರೆಗಳು ಕಾಣಿಸುತ್ತವೆ. ಮಾಲು ಖಾಲಿಯಾದವರು ಹಣ ಎಣಿಸಿ ಸಂತೋಷದಿಂದ ಹೊರಡಲು ಅಣಿಯಾಗುತ್ತಿರುತ್ತಾರೆ. ಮೂಗಿಗೆ ಬಡಿದ ಸುವಾಸನೆಯನ್ನು ಆಘ್ರಾಣಿಸಿ ಹೊರಟರೆ, ಹೂವಿನ ಗುಂಗು ಕೆಲಹೊತ್ತು ನಿಮ್ಮನ್ನು ಆವರಿಸುತ್ತದೆ.

'ಮೂಲಸೌಕರ್ಯಗಳು ಬೇಕು'

ಮಾರುಕಟ್ಟೆ ಶತಮಾನದ ಹೊಸ್ತಿಲಿನಲ್ಲಿದ್ದರೂ, ಮೂಲಸೌಕರ್ಯ ಇಲ್ಲ ಎನ್ನುವುದು ಹಲವರ ದೂರು. ದೊಡ್ಡ ಮಾರುಕಟ್ಟೆಯಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲ. ಮಹಿಳೆಯರು ಇದರಿಂದ ಮುಜುಗರ ಅನುಭವಿಸಬೇಕಾದ ಪರಿಸ್ಥಿತಿ ಇದೆ. ಎಟಿಎಂ ಬೇಕು, ಸಂಕೀರ್ಣದೊಳಗೆ ನೆಟ್‌ವರ್ಕ್ ಸಮಸ್ಯೆಗೆ ಮುಕ್ತಿ ಬೇಕು, ಒಳಗೆ ಬರಲು ಸರಿಯಾದ ದಾರಿ ಇಲ್ಲ, ಸ್ಮಾರ್ಟ್ ಸಿಟಿ ಯೋಜನೆಯಡಿ ಬಂದರೂ ಅಂಥದ್ದೇನೂ ಪ್ರಗತಿ ಕಂಡಿಲ್ಲ, ವಿಶ್ರಾಂತಿ ಸ್ಥಳಗಳಿಲ್ಲ, ತುರ್ತು ಆರೋಗ್ಯ ಸೇವೆ ಇಲ್ಲ ಎನ್ನುವುದು ಹಲವು ವರ್ತಕರ, ಗ್ರಾಹಕರ ಅಹವಾಲು. ಮಾರುಕಟ್ಟೆಯನ್ನು ಇನ್ನಷ್ಟು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಬೇಕು ಎನ್ನುವುದು ಹಲವರ ಮನವಿ.

...ಚಿಕ್ಕಮೇಳದ ಹೆಜ್ಜೆ

12ನೇ ಪುಟದಿಂದ...

ಘಟ್ಟ ಏರಿ ಬಂದ ಚಿಕ್ಕಮೇಳ

ಕರಾವಳಿಯ ಪ್ರಮುಖ ಮೇಳಗಳು ಬೆಂಗಳೂರು, ಮುಂಬೈನಲ್ಲಿ ಯಕ್ಷಗಾನ ಬಯಲಾಟ ನಡೆಸಿವೆ. ಈಗಲೂ ಅಲ್ಲಲ್ಲಾ ಯಕ್ಷಗಾನ ಪ್ರದರ್ಶನಗಳಾಗುತ್ತಿವೆ. ಆದರೆ ಚಿಕ್ಕಮೇಳಗಳು ಘಟ್ಟ ಹತ್ತಿಬರುವುದು ಅಪರೂಪ. ಕಳೆದ ವರ್ಷ ಕಾರ್ಕಳದ ವಿಷ್ಣುಮೂರ್ತಿ ಚಿಕ್ಕಮೇಳ ಬೆಂಗಳೂರಿಗೆ ಹೆಜ್ಜೆ ಇಟ್ಟು ಹಲವು ಮನೆಗಳಲ್ಲಿ ಪ್ರದರ್ಶನ ನೀಡಿತ್ತು. ಈ ಅನುಭವ ಹಂಚಿಕೊಳ್ಳುವ ತಂಡದ ಭಾಗವತರಾದ ಮೋಹನ್ ಕಲಂಬಾಡಿ, 'ನಾನು ತಲಕಳ ಹಾಗೂ ನಾಳ ಮೇಳದ ಭಾಗವತ. ಮಳೆಗಾಲದಲ್ಲಿ ನನ್ನದೇ ಯಜಮಾನಿಕೆಯ ಚಿಕ್ಕಮೇಳ ನಡೆಸುತ್ತಿದ್ದೇನೆ. ಇಲ್ಲಿ ಚಿಕ್ಕಮೇಳ ಮಾಡುತ್ತಿದ್ದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ಇದನ್ನು ವೀಕ್ಷಿಸಿದರು. ಅವರ ಆಹ್ವಾನದ ಮೇರೆ ಬೆಂಗಳೂರಿಗೆ ತಂಡ ಕರೆದುಕೊಂಡು ಬಂದಿದ್ದೆ. ಯಲಹಂಕ ಕನ್ನಡ ಭವನದಲ್ಲಿ ಒಂದೂವರೆ ಗಂಟೆ ಪ್ರದರ್ಶನ ನೀಡಿದೆವು. ಬೆಂಗಳೂರಿನಲ್ಲಿ ದಿನಕ್ಕೆ ಗರಿಷ್ಠ ನಾಲ್ಕೈದು ಮನೆಯಲ್ಲಿ ಪ್ರದರ್ಶನ ನೀಡಲಷ್ಟೇ ಸಾಧ್ಯ. ಇಲ್ಲಿ ರಾತ್ರಿ ಹೆಚ್ಚು ಅವಧಿ ಮನೆಯಲ್ಲಿ ಪ್ರದರ್ಶನ ನೀಡಲು ಆಗುವುದಿಲ್ಲ.

ಬೆಂಗಳೂರಿನ ಮನೆಯೊಂದರಲ್ಲಿ ಕಾರ್ಕಳದ ವಿಷ್ಣುಮೂರ್ತಿ ಚಿಕ್ಕಮೇಳ.

ಚಿಕ್ಕಮೇಳದಲ್ಲಿ ಸಾಮಾನ್ಯವಾಗಿ ಚೆಂಡೆಯ ಬಳಕೆ ಇಲ್ಲ. ಏಕೆಂದರೆ ಅದು ರಣವಾದ್ಯ. ಆದರೆ ಆಹ್ವಾನಿಸುವ ಕೆಲವರು ಚೆಂಡೆಯ ಏರು ಪದ್ಯವಿರಲಿ ಎನ್ನುತ್ತಾರೆ. ಅಂತಹ ಸಂದರ್ಭದಲ್ಲಷ್ಟೇ ನಾವು ಅದನ್ನು ಬಳಸುತ್ತೇವೆ. ಈ ವರ್ಷವೂ ಬೆಂಗಳೂರಿಗೆ ತಂಡ ಕರೆದುಕೊಂಡು ಬರಲಿದ್ದೇನೆ. ಈ ಮಳೆಗಾಲದ ಅವಧಿಯಲ್ಲಿ ಘಟ್ಟ ಏರಿ ಬರುವುದೂ ಸವಾಲಿನ ವಿಷಯವಾಗಿದೆ' ಎಂದರು.

ಕಲಾವಿದರು ಪಕ್ವವಾಗುತ್ತಾರೆ: 'ಶ್ರೀಕೃಷ್ಣ ಪಾರಿಜಾತ', 'ಕೃಷ್ಣ ರಾಧಾ ವಿಲಾಸ', 'ಕೃಷ್ಣ ರುಕ್ಮಿಣಿ ಸಂವಾದ', 'ದೇವವ್ರತ ಸತ್ಯವತೀ' ಹೀಗೆ ಸ್ತ್ರೀ-ಪುರುಷ ವೇಷಕ್ಕೆ ಹೊಂದಿಕೊಂಡ 10-15 ನಿಮಿಷದ ಅವಧಿಗೆ ಪ್ರದರ್ಶನ ನೀಡುವ ಕಲಾ ಪ್ರಕಾರವಿದು. ಯಕ್ಷಗಾನದ ಪ್ರಮುಖ ಕಲಾವಿದರು ಮಳೆಗಾಲದ ತಂಡಗಳಲ್ಲಿ ಆಹ್ವಾನ ಪಡೆದುಕೊಂಡು ವಿವಿಧೆಡೆ ಒಳಾಂಗಣಗಳಲ್ಲಿ, ದೂರದೂರುಗಳಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಗಳಲ್ಲಿ ಸಕ್ರಿಯರಾಗಿರುತ್ತಾರೆ. ಆದರೆ ನಿತ್ಯ ವೇಷ ಮಾಡುವವರು ಅಥವಾ ಜೊತೆ ವೇಷ ಮಾಡುವ ಕಲಾವಿದರು ಹೆಚ್ಚು ಪ್ರಚಾರದಲ್ಲಿ ಇರುವುದಿಲ್ಲ. ಹೀಗಾಗಿ ಮಳೆಗಾಲದ ಅವಧಿಯಲ್ಲಿ ಏನು ಮಾಡುವುದು ಎನ್ನುವ ಚಿಂತೆಗೆ ಇವರು ಜಾರುತ್ತಾರೆ. ಇಂತಹ ಕಲಾವಿದರು ಚಿಕ್ಕಮೇಳದ ಭಾಗವಾಗುತ್ತಾರೆ. ಚಿಕ್ಕಮೇಳದಲ್ಲಿ ತಿರುಗುತ್ತಾ ಇವರ ಭಾಷೆ, ಮಾತು ಶುದ್ಧಿಯಾಗುತ್ತದೆ. ಹೆಜ್ಜೆ, ಅಭಿನಯ ಪಕ್ವವಾಗುತ್ತದೆ' ಎನ್ನುತ್ತಾರೆ ಮೋಹನ್ ಕಲಂಬಾಡಿ.

ತೆಂಕುತಿಟ್ಟು ಎಂದು ಕರೆಸಿಕೊಳ್ಳುವ ಕರಾವಳಿಯ ದಕ್ಷಿಣ ಭಾಗದಲ್ಲಿರುವ ಯಕ್ಷಗಾನ ಕಲಾವಿದರ ಚಿಕ್ಕಮೇಳ ಎಂಬ ಪರಿಕಲ್ಪನೆಯು ಉಡುಪಿಯ ಉತ್ತರಕ್ಕೆ ಪ್ರಚಲಿತದಲ್ಲಿರುವ ಬಡಗು ತಿಟ್ಟಿನಲ್ಲಿಯೂ ಈಗೀಗ ಕಾಣಿಸಿಕೊಳ್ಳಲಾರಂಭಿಸಿದೆ. ತೆಂಕಿನ ಚಿಕ್ಕಮೇಳವು ರಾಜಧಾನಿಗೂ ಹೆಜ್ಜೆ ಇಟ್ಟಿದ್ದರೆ, ಅತ್ತ ಬಡಗಿನ ಚಿಕ್ಕಮೇಳಗಳು ಶಿರಸಿಯತ್ತ ಹೆಜ್ಜೆ ಇಟ್ಟಿವೆ. ಕುಂದಾಪುರದ ಬೀಜಮಕ್ಕಿಯ ಶ್ರೀಮಹಾಗಣಪತಿ ಕಲಾ ತಂಡವು ಶಿರಸಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಕಳೆದ ವರ್ಷ ಚಿಕ್ಕಮೇಳ ಕಟ್ಟಿಕೊಂಡು ಹೋಗಿ ಪ್ರದರ್ಶನ ನೀಡಿತ್ತು. ಈ ವರ್ಷವೂ ಈ ತಂಡ ಮತ್ತೆ ಘಟ್ಟ ಏರಲು ಯೋಜನೆ ರೂಪಿಸಿದೆ.

ಪಕ್ಷಿ ಪ್ರಪಂಚ

12ನೇ ಪುಟದಿಂದ...

'ಹಕ್ಕಿಗಳ ಮೂಲಕ ಪರಿಸರ ಜಾಗೃತಿ'

'ಪರಿಸರ ಶಿಕ್ಷಣವನ್ನು ಗ್ರಂಥಾಲಯಗಳಲ್ಲಿ ಪರಿಚಯಿಸುವ ಉದ್ದೇಶದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಜಾರಿಗೊಳಿಸಿರುವ ಯೋಜನೆ ಇದಾಗಿದೆ. 'ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ನಾವು ಪಕ್ಷಿ ಶಿಕ್ಷಣದ ತರಬೇತಿಯನ್ನು ನೀಡಿದ್ದೇವೆ. ಕಿಟ್ ಅನ್ನು ಬಳಸಿ ಮಕ್ಕಳಿಂದ ಹೇಗೆ ಚಟುವಟಿಕೆಗಳನ್ನು ಮಾಡಿಸಬಹುದು ಎಂಬುದಾಗಿ ಕಲಿಸಿಕೊಟ್ಟಿದ್ದೇವೆ. ಅದು ಸದುಪಯೋಗವಾಗುತ್ತಿರುವುದು ಖುಷಿ ತಂದಿದೆ' ಎಂಬುದು 'ಅರ್ಲಿ ಬರ್ಡ್'ನ ಕಾರ್ಯಕ್ರಮ ಮ್ಯಾನೇಜರ್ ಅಭಿಷೇಕ ಕೃಷ್ಣಗೋಪಾಲ್ ಅವರ ಸಾರ್ಥಕ ನುಡಿ.

ಜಿಲ್ಲಾಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಪಕ್ಷಿ ಶಿಕ್ಷಣದ ಕಿಟ್ ಬಳಸುವ ಬಗ್ಗೆ ಆರಂಭದಲ್ಲಿ ತರಬೇತಿ ನೀಡಲಾಗಿದೆ. ಅವರು ಆಯಾ ಜಿಲ್ಲೆಯಿಂದ ಪಂಚಾಯತ್ ರಾಜ್ ಇಲಾಖೆಯವರು ಆಯ್ಕೆ ಮಾಡಿರುವ ಮೇಲ್ವಿಚಾರಕರಿಗೆ ಅದನ್ನು ಕಲಿಸಿಕೊಟ್ಟಿದ್ದಾರೆ. ಮೇಲ್ವಿಚಾರಕರು ತಾವು ಪಡೆದ ಅರಿವನ್ನು ಮಕ್ಕಳ ಜೊತೆ ಹಂಚಿಕೊಳ್ಳುತ್ತಿದ್ದಾರೆ. ರಾಜ್ಯದ 500 ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ಮಾರ್ಚ್ ತಿಂಗಳಲ್ಲೇ ತರಬೇತಿ ಪೂರ್ಣಗೊಳಿಸಲಾಗಿದೆ. ತರಬೇತಿ ಪಡೆದವರು ಮೇ ತಿಂಗಳಲ್ಲೇ ಚಟುವಟಿಕೆಗಳನ್ನು ಆರಂಭಿಸಿದ್ದರು. ಪೈಲಟ್ ಯೋಜನೆಯಂತೆ ಇದನ್ನು ಮಾಡಲಾಗಿದೆ. ಇದು ಯಶಸ್ವಿಯಾಗಿರುವ ಕಾರಣ ಇನ್ನೂ ಹಲವು ಪಂಚಾಯಿತಿಗಳ ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ತರಬೇತಿ ನೀಡುವ ಗುರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಹೊಂದಿದ್ದಾರೆ.

ಹಾವಂಜೆಯ ಶಾಲೆಯೊಂದರಲ್ಲಿ ಮಕ್ಕಳಿಗೆ ಹಕ್ಕಿಗಳ ಕುರಿತು ಅರಿವು ಮೂಡಿಸಲಾಯಿತು

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೋರೆದಿಂಗಳ್

ಕೋರೆದಿಂಗಳ್ (ನಾ). ವಕ್ರಚಂದ್ರ; ಬಾಲಚಂದ್ರ ರಾಮಚಂದ್ರನು ಶಿವಸಹಿತ ಶಕ್ತ್ಯಾಯುಧವನ್ನು ಬಿಡಲು ಕುಂಭಕರ್ಣನ ತಲೆಗೆ ತಾಗಿ, ಅವನ ಶಿರ ಭೂಮಿಗೆ ಉರುಳುತ್ತದೆ. ಆಗ ಕುಂಭಕರ್ಣನಿಗೆ ಆದ ಅನುಭವವನ್ನು ಕವಿ ಹೀಗೆ ಬಣ್ಣಿಸಿದ್ದಾರೆ.

ತಿರೆನುಗ್ಗಿತಾಗಸಕೆ, ತತ್ತರಿಸಿ
ರವಿಯಬಿಂಬಂ ತಾಗಿದುದು ಶಶಿಯ ಬಿಂಬಕ್ಕೆ.
ತುಂಬಿದುದು ವರ್ಣವರ್ಣ ವಿಚಿತ್ರಮೊರ್ ಜ್ಯೋತಿ
ಭುವನಾಂಡಮಂ ನಾದಮಯ ವಾಯುಮಂಡಲಂ
ನಕ್ಷತ್ರ ವೃಷ್ಟಿಮಯ ಮಾದತ್ತು, ಹಬ್ಬಿದುವು
ಹೊಗೆ ಬೆಂಕೆಗಳ್, ನೀಲಿಗೆಂಪುಗಳ್, ಸೂರ್ಯ
ಬಿಂಬಂ
ಬಡಿದ ರಭಸಕೆ ಮುರಿದ ರಭಸಕೆ ಮುರಿದ ಕೋಡಿನ
ಕೋರೆದಿಂಗಳ್
ತಿವಿಯೆ, ಸೀಳಿದು, ಪಡವಿ ಪುಡಿವೋಯ್ತು.

ಕವಿ ಮೇಲಿನ ಕಲ್ಪನಾ ಚಿತ್ರದಲ್ಲಿ ವಿಶ್ವದ ಅಲ್ಲೋಲ ಕಲ್ಲೋಲವನ್ನು ಕಡೆದಿಟ್ಟಿದ್ದಾರೆ. ಸೂಯಬಿಂಬ ಬಡಿದ ರಭಸಕ್ಕೆ ವಕ್ರಚಂದ್ರನ ಕೋಡುಮುರಿಯಿತು! ಅದು ತಿವಿದಾಗ ಭೂಮಿ ಪುಡಿಯಾಯಿತು! ಕುಂಭಕರ್ಣನ ವಧೆ ಅಸಾಧಾರಣವಾದುದು. ಆ ಮಹಾಶರೀರ ಕೆಡೆದುಬಿದ್ದಾಗ ಉಂಟಾದ ಭಯಂಕರತೆಯ ತೀವ್ರತೆಗೆ ಪ್ರತಿಮೆಯಾಗಿ ಕೋರೆದಿಂಗಳು, ಅದರ ಕೋಡು, ಅದು ಭೂಮಿಯನ್ನು ತಿವಿದದ್ದು ಒಂದು ಅತಿಶಯ ಘೋರ ಕ್ರಿಯೆ ಕಣ್ಮುಂದೆ ಸುಳಿಯುವಂತೆ ಮಾಡುತ್ತದೆ.

ಮುನ್ನೋಟ 04-08-2024 ರಿಂದ 10-08-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭ ಉತ್ತಮವಾಗಿರುತ್ತದೆ. ಆದಾಯ ವೃದ್ಧಿಸುತ್ತದೆ. ನಡವಳಿಕೆಯಿಂದ ಆದಾಯ ಮಾಡಿಕೊಳ್ಳಲು ಪ್ರಯತ್ನಪಡುವಿರಿ. ಸ್ಥಿರಾಸ್ತಿಯ ವ್ಯವಹಾರದಲ್ಲಿ ಪ್ರಗತಿ ಇರುತ್ತದೆ. ಅಧ್ಯಯನಶೀಲರಿಗೆ ಉತ್ತಮ ಫಲಿತಾಂಶ ಮತ್ತು ಸೌಕರ್ಯ ದೊರೆಯುತ್ತದೆ. ಆರೋಗ್ಯದಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ಕಾಣಬಹುದು. ಸಂಗಾತಿಯಿಂದ ನಿಮ್ಮ ಅಧ್ಯಯನಕ್ಕೆ ಸಹಕಾರ ಸಿಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಮಾಜದಿಂದ ಒಂದು ರೀತಿ ಗೌರವ ದೊರೆಯುತ್ತದೆ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ಖರ್ಚು ಹೆಚ್ಚಾಗುವ ಸಂದರ್ಭಗಳಿವೆ. ಕೃಷಿಗಾಗಿ ಹೆಚ್ಚು ಹಣ ಖರ್ಚಾಗಬಹುದು. ಬಂಧುಗಳ ನಡುವೆ ಹೊಂದಾಣಿಕೆ ಮಾಡಿಕೊಳ್ಳುವ ಅವಕಾಶಗಳು ಒದಗುತ್ತವೆ. ಸರ್ಕಾರಿ ಕೆಲಸದಲ್ಲಿರುವವರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಸರ್ಕಾರದಿಂದ ಬರಬೇಕಾದ ಆದಾಯ ಸರಾಗವಾಗಿ ಬರುತ್ತದೆ. ಬಂಧುಗಳೊಂದಿಗೆ ಉತ್ತಮ ಅನುಬಂಧ ಹೊಂದುವಿರಿ. ಕುಟುಂಬದಲ್ಲಿ ದೈವಕಾರ್ಯಕ್ಕಾಗಿ ಸಾಕಷ್ಟು ಹೊಂದಾಣಿಕೆ ಏರ್ಪಡುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಆತುರ ಬೇಡ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬರುತ್ತದೆ. ದೇಹದಲ್ಲಿ ಉಷ್ಣಾಂಶ ಜಾಸ್ತಿಯಾಗಿ ತೊಂದರೆಯಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯ ಉತ್ತಮವಾಗಿರುತ್ತದೆ. ಬಂಧುಗಳಲ್ಲಿ ಹಿರಿಯರು ನಿಮಗೆ ಸಹಕಾರ ಕೊಡುವರು. ಭೂಮಿಯಿಂದ ಆದಾಯವಿರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚು. ಕೃಷಿಯಿಂದ ಆದಾಯವಿರುತ್ತದೆ. ಹರಿತವಾದ ವಸ್ತುಗಳಿಂದ ಗಾಯವಾಗಬಹುದು ಎಚ್ಚರ ವಹಿಸಿರಿ. ರಾಜಕಾರಣಿಗಳಿಗೆ ಜನ ಬೆಂಬಲ ಕಡಿಮೆಯಾಗುವ ಸಾಧ್ಯತೆಗಳಿವೆ. ಮಕ್ಕಳ ಸಲುವಾಗಿ ವಿದೇಶಕ್ಕೆ ಹೋಗಿಬರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಬುದ್ಧಿವಂತಿಕೆ ನಿಮ್ಮ ಮೈಗೂಡಿರುತ್ತದೆ. ಆದಾಯ ಕಡಿಮೆ ಇರುತ್ತದೆ. ಸಹೋದರಿಯರ ಸಹಕಾರ ಸ್ವಲ್ಪಮಟ್ಟಿಗೆ ಸಿಗುತ್ತದೆ. ವೃತ್ತಿಯಲ್ಲಿ ಹಿರಿಯರ ಸಹಕಾರದಿಂದ ಅಭಿವೃದ್ಧಿ ಇರುತ್ತದೆ. ಮಕ್ಕಳಿಗೆ ಕೆಲಸ ಸಿಗುವ ಸಾಧ್ಯತೆಗಳಿವೆ. ರಾಜಕಾರಣಿಗಳಿಗೆ ಅಪವಾದ ಬರುವ ಸಾಧ್ಯತೆಗಳಿವೆ. ಹಿರಿಯ ಸಂಬಂಧಿಗಳು ನಿಮ್ಮ ಸಹಕಾರಕ್ಕೆ ನೀಡುವರು. ಉದ್ಯೋಗದಲ್ಲಿ ಈಗ ಸಂಪಾದನೆ ಹೆಚ್ಚಾಗುವ ಸಂದರ್ಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಹಳ ದ್ವಂದ್ವ ನಿರ್ಧಾರಗಳು ನಿಮ್ಮಲ್ಲಿರುತ್ತವೆ, ಸ್ಪಷ್ಟ ನಿರ್ಧಾರ ಬಹಳ ಮುಖ್ಯ. ಆದಾಯದಷ್ಟೇ ಖರ್ಚು ಇರುವುದರಿಂದ ಹಣ ನಿರ್ವಹಣೆಯನ್ನು ಸರಿಯಾಗಿ ಮಾಡಿ. ಕುಸ್ತಿಪಟುಗಳಿಗೆ ಉತ್ತಮ ಅವಕಾಶಗಳು ದೊರೆಯುವ ಸಾಧ್ಯತೆ ಇವೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಮನೆ ಪಾಠ ಮಾಡುವವರಿಗೆ ಆದಾಯ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಮಾಜದ ಮೇಲೆ ನಿಮಗೆ ಭಯ ಮಿಶ್ರಿತ ಗೌರವವಿರುತ್ತದೆ. ಆದಾಯ ಮಧ್ಯಮ ಗತಿಯಲ್ಲಿರುತ್ತದೆ. ಆಸ್ತಿ ವಿಚಾರದಲ್ಲಿ ಸ್ವಲ್ಪ ದಾಖಲೆಗಳ ವ್ಯತ್ಯಾಸವಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಸಾಹಸ ಕಲಾವಿದರುಗಳಿಗೆ ಕಲೆಯನ್ನು ಪ್ರದರ್ಶನ ಮಾಡುವಾಗ ತೊಂದರೆಯಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ಕೃಷಿಗೆ ಬಂಡವಾಳ ಸಿಗುತ್ತದೆ. ಸರ್ಕಾರಿ ಕೆಲಸಗಳು ಸ್ವಲ್ಪ ನಿಧಾನವಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸಮಾಜದಿಂದ ಗೌರವ ದೊರೆಯುತ್ತದೆ. ಆದಾಯ ಅವಶ್ಯಕತೆಯನ್ನು ಪೂರೈಸುತ್ತದೆ. ಕೆಲವೊಂದು ವಿಷಯಗಳಿಗೆ ನಿಖರ ಅಭಿಪ್ರಾಯ ತಿಳಿಸಿಕೊಡಿ. ನಿಮ್ಮ ಹಿತಶತ್ರುಗಳ ಬಗ್ಗೆ ಗಮನವಿರಲಿ. ರಾಜಕಾರಣಿಗಳಿಗೆ ಉತ್ತಮ ಸ್ಥಾನ ದೊರೆಯುತ್ತದೆ. ಮಕ್ಕಳಿಂದ ಸಹಕಾರ ಇರುವುದಿಲ್ಲ. ವಿದೇಶದಲ್ಲಿರುವ ಮಕ್ಕಳನ್ನು ನೋಡಲು ಹೋಗಬಹುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವಾರದ ಆರಂಭದಲ್ಲಿ ಸ್ವಲ್ಪ ಆಲಸೀತನ ನಿಮ್ಮಲ್ಲಿ ಇರುತ್ತದೆ. ಮಾತನಾಡುವಾಗ ಸೌಮ್ಯವಾಗಿದ್ದು ಶತ್ರುಗಳ ಎದೆ ನಡುಗುವಂತೆ ಮಾಡುವಿರಿ. ಹೊರದೇಶದಲ್ಲಿರುವವರು ಸ್ಥಿರಾಸ್ತಿ ಮಾಡಿಕೊಳ್ಳಲು ಸಕಾಲ. ಕೃಷಿಯಿಂದ ನಿರೀಕ್ಷಿತ ಆದಾಯವಿಲ್ಲದಿದ್ದರೂ, ನಷ್ಟವಿರುವುದಿಲ್ಲ. ಹಿರಿಯರ ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಣಬಹುದು. ಸಂಗಾತಿಯು ಮಾಡುವ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕಷ್ಟ ಸಹಿಷ್ಣುವಾಗಿರುವಿರಿ. ಮಾತಿನಲ್ಲಿ ಎಚ್ಚರಿಕೆ ಇರಲಿ. ಆದಾಯ ಸಾಮಾನ್ಯ ಗತಿಯಲ್ಲಿರುತ್ತದೆ. ಕೆಲಸ ಕಾರ್ಯಗಳಿಗೆ ಹೊಸ ಶತ್ರುಗಳು ಬರಬಹುದು. ಹೊಸ ವಿಷಯಗಳನ್ನು ಕಲಿಯುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ. ಮಹಿಳೆಯರ ಜೊತೆ ವ್ಯವಹಾರ ಮಾಡುವಾಗ ಎಚ್ಚರವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿಡಿದ ಕೆಲಸವನ್ನು ಸಾಧಿಸುವಿರಿ. ಮಾತಿನಲ್ಲಿ ಒರಟುತನ ಬೇಡ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಸಾಕಷ್ಟು ಹೆಚ್ಚುತ್ತದೆ. ಹಿರಿಯರು ತಮ್ಮ ನಡವಳಿಕೆಯಿಂದ ಸಮಾಜದಲ್ಲಿ ಗೌರವ ಪಡೆಯುವರು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ ಮತ್ತು ಉತ್ತಮ ಫಲಿತಾಂಶ ಸಿಗುತ್ತದೆ. ಕಣ್ಣಿನ ತೊಂದರೆ ಇರುವವರು ಎಚ್ಚರವಹಿಸಿರಿ. ಸರ್ಕಾರಿ ಸಾಲಗಳು ಈಗ ಸರಾಗವಾಗಿ ದೊರೆಯುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಸಂಸಾರದಲ್ಲಿ ಹಣಕಾಸಿನ ವಿಚಾರವಾಗಿ ಕಾವೇರಿದ ಮಾತುಗಳಾಗಬಹುದು. ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸುವಿರಿ. ಉಸಿರಾಟದಲ್ಲಿ ವ್ಯತ್ಯಾಸವಾದರೆ ಚಿಕಿತ್ಸೆ ಪಡೆಯಿರಿ. ಧಾರ್ಮಿಕ ಕಾರ್ಯಕ್ರಮಗಳಿಂದ ಸಂಗಾತಿ ಸಂಪಾದನೆ ಹೆಚ್ಚುತ್ತದೆ.

ಪದಬಂಧ 2853



ಮೇಲಿನಿಂದ ಕೆಳಕ್ಕೆ
1. ಬೀಳ್ಕೊಡುಗೆಯಲ್ಲಿ ಆದಾಯದ ಪಾಲು ಇದೆಯೇ? 3
2. ತಮಾಷೆಯ ನಗು ಹೀಗೆ ಆಕರ್ಷಕ 5
3. ಧ್ಯಾನಾದಿಗಳಿಗೆ ಮೀಸಲಾದ ಕಾಡು 4
4. ತೇವಾಂಶವನ್ನು ಕಳೆದುಕೊಂಡ ಖಾರದ ಕರಿ ಕಾಳು 5
5. ಒಂದೇ ಒಂದು ಕಾಸನ್ನು ಬಿಚ್ಚದೆ ಹೋಗುವ ಗುಣ 5
10. ತಮಿಳುನಾಡಿನ ಬೇಳೆ, ಆಂಧ್ರದ ಹೊದಿಗೆ 3
11. ಬಾಗಿಲ ಬಳಿ ನಡೆಯುವ ಯುದ್ಧ 3
12. ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ......, ಕಾರಣವಿಲ್ಲದೆ 3
14. ಇದು ಎರಡು ಕಲೆಗಳ ಮಿಲನ - ಕುಣಿತ ಮತ್ತು ಹಾಡುಗಾರಿಕೆ 5
15. ಇವನು ನೆಲದಲ್ಲಿ ನಡೆದಾಡುವುದಿಲ್ಲ ಆಕಾಶದಲ್ಲಿ ಪಯಣಿಸುತ್ತಾನೆ 5
16. ಪ್ರತಿದಿನವೂ ಹೊಚ್ಚ ಹೊಸದಂತಿರುವುದು 5
17. ಕುಟುಂಬದ ವಿಷಯಕ್ಕೆ ಸಂಬಂಧಿಸಿದ್ದು 4
20. ಸೊಹ್ರಾಬ್‌ನನ್ನು ಎದುರಿಸಿದ ವೀರ, ಕಾಣಿಸಿಕೊಳ್ಳುವುದಿಲ್ಲ 3

ಎಡದಿಂದ ಬಲಕ್ಕೆ
1. ಪ್ರಪಂಚದಲ್ಲೇ ಪ್ರಸಿದ್ಧ 5
4. ಪ್ರಸ್ತುತ ನಡೆಯುತ್ತಿರುವ ವಿಶ್ವಮಟ್ಟದ ಕ್ರೀಡಾಕೂಟ 4
6. ವ್ಯರ್ಥಗೊಳಿಸಿದ ದುಡ್ಡು 4
7. ಜಗದೋದ್ಧಾರನ ಎತ್ತಿ ಆಡಿಸಿದ ತಾಯಿ 3
8. ಹಳೆಗನ್ನಡ ಕಾವ್ಯದಲ್ಲಿ ಮೆಲ್ಲಗೆ 3
9. 'ಹ'ಕಾರ ಪ್ರಿಯನ ಪೀಠ, 'ಹಾಸ' ಬೀರುವ ಜಿಲ್ಲೆ 3
10. ಸಂಸ್ಕೃತದ ಹಲಸು 3
11. ಸ್ವಪ್ನದಲ್ಲಿ ಕಂಡಿದ್ದು ಮಾತ್ರವಲ್ಲ ಅದರ ಜೊತೆ ಸ್ವಪ್ನ ವಾಸ್ತವವೂ ಆಗಿದೆ 6
13. ಶುಭ ಶೋಭನಗಳಿಗೆ ಮತ್ತೆ ಬರುವುದು 6
16. ನಿಶೆಯಲ್ಲಿನ ಗುರುತು 3
17. ಪ್ರಾಸ, ಛಂದಸ್ಸುಗಳನ್ನೊಳಗೊಂಡ ಕಾವ್ಯ ಸಾಹಿತ್ಯ 3
18. ಹೇಗೆ ನೋಡಿದರೂ ಇದು ದೃಷ್ಟಿಯ ಕಣ್ಣು 3
19. ಶತಕಕ್ಕೆ ಆರು ಸೇರಿದರೂ ಅದೆಷ್ಟೋ ಆಗುತ್ತದೆ 3
21. ಕೃಷ್ಣವಂಶದ ಬೆಟ್ಟದ ಹೆಸರಿನಲ್ಲೊಂದು ಜಿಲ್ಲೆ 4
22. ಹಗಲು ಇರುಳಿಗೆ ಪರ್ಯಾಯ 4
23. ಕಾನೂನು ಮುರಿಯುವವರ ಮೇಲೆ ತೆಗೆದುಕೊಳ್ಳುವ ದಿಟ್ಟ ಹೆಜ್ಜೆ 5

ಪದಬಂಧ ಉತ್ತರ -2852

ಮೇಲಿಂದ ಕೆಳಕ್ಕೆ
1. ಅಮಲು 2.ಸಮಚಿಂತಕ 3.ಬಾಲಗೋಪಾಲ 4.ಕರುಣಾಕರ 7.ಲುಪ್ತಕಾಲ 8.ಕುಮಾರ 9.ಕುಸಿತ 13.ಕ್ಷಿಪಣಿ 15.ಪಾಲಿಸಿ 17.ಸಾಹಸಿ 18.ಕಾಡುಮನೆ 19.ಕೆದರುತಲೆ 20.ಉದಯರಾಗ 21.ರುದ್ರಭೀಕರ 22.ಬಡವ 23.ರುದ್ರಾಣಿ 27.ರುಧಿರ

ಎಡದಿಂದ ಬಲಕ್ಕೆ
1. ಅನಾಯಾಸ 3.ಬಾಲಕ 5.ಮಸಾಲ 6.ರುಮಾಲು 8.ಕುಲುಕು 10.ಸಿಡಿತ 11.ಪಾದುಕ 12.ರಕ್ಷಿತ 14.ಕಪಾಲ 16.ರಸಾಲ 18.ಕಾಣಿಕೆ 20.ಉಸಿರು 22.ಬಸಿರು 24.ದಣಿದ 25.ದ್ರವಿಡ 26.ವರುಣಿ 28.ನೆಗೆತ 29.ರಾಧಿಕ 30.ಲೆಕ್ಕಿಗ 31.ರಘುವರ

ಸೌಂದರ್ಯ ಸ್ಪರ್ಧೆ ಆತ್ಮವಿಶ್ವಾಸ ಹೆಚ್ಚಿಸುತ್ತದೆ

ಅಮೆರಿಕದ ಫ್ಲೋರಿಡಾದಲ್ಲಿ ಈಚೆಗೆ ನಡೆದ ವಿಶ್ವ ಭುವನ ಸುಂದರಿ (ಮಿಸ್ ಯುನಿವರ್ಸಲ್ ಪಟೀಟ್–2024) ಸ್ಪರ್ಧೆಯ ಕಿರೀಟ ಭಾರತದ ಕುವರಿ ಡಾ. ಶ್ರುತಿ ಹೆಗಡೆ ಮುಡಿಗೇರಿದೆ. ಈ ಸ್ಪರ್ಧೆ ಗೆದ್ದ ಮೊದಲ ಭಾರತೀಯ ಯುವತಿ. ಅವರು 'ಭಾನುವಾರದ ಪುರವಣಿ'ಗೆ ನೀಡಿದ ಸಂದರ್ಶನದಲ್ಲಿ ತಮ್ಮ ಪರಿಶ್ರಮ, ಕನಸು ಮತ್ತು ಮುಂದಿನ ಗುರಿ ಕುರಿತು ಮುಕ್ತವಾಗಿ ಮಾತನಾಡಿದ್ದಾರೆ.

ಗೌರಮ್ಮ ಕಟ್ಟಿಮನಿ

• ಸೌಂದರ್ಯ ಎನ್ನುವುದು ಒಳಗಿನದೊ (ಅಂತರಂಗ), ಹೊರಗಿನದೊ (ಬಹಿರಂಗ)?

ನಾವು ಆತ್ಮವಿಶ್ವಾಸದಿಂದ ಮಾತನಾಡಿದಾಗ, ನಮ್ಮ ಕನಸುಗಳು ಸಾಕಾರಗೊಳ್ಳುತ್ತವೆ. ನಿರ್ಧಾರ ಸ್ಪಷ್ಟವಾಗಿ ಇರುತ್ತದೆ. ಇದಕ್ಕಾಗಿ ಅಂತರಂಗದಲ್ಲಿ ಸಾಕಷ್ಟು ತಯಾರಿ ಆಗಬೇಕು. ನಾನು ಯಾರು, ನನ್ನ ಜೀವನಶೈಲಿ ಹೇಗಿರಬೇಕು ಎಂಬುವುದನ್ನು ನಾನೇ ನಿರ್ಧರಿಸಬೇಕು, ಅದಕ್ಕಾಗಿ ಬೆನ್ನುಹತ್ತಬೇಕು. ಅದಕ್ಕೆ ಪೂರಕವಾಗಿ ಬಾಹ್ಯವಾಗಿ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ.

ಅಂತರಂಗದ ಸೌಂದರ್ಯಕ್ಕೆ ಸ್ಪಷ್ಟವಾದ ವ್ಯಾಖ್ಯಾನ ಮೊದಲಿಗೆ ಮಸುಕಾಗಿರುತ್ತದೆ. ಅಂತರಂಗದ ಸೌಂದರ್ಯ ಎಂದರೇನು ಎಂದು ನಮ್ಮನ್ನೆ ನಾವು ಪ್ರಶ್ನೆ ಮಾಡಿಕೊಂಡರೆ ಸ್ಪಷ್ಟ ಉತ್ತರ ಸಿಗುವುದು ಕಷ್ಟ. ಆದರೆ, ನಮ್ಮ ಆಚಾರ–ವಿಚಾರ, ಬದುಕನ್ನು ನೋಡುವ ರೀತಿ ವಿಭಿನ್ನವಾಗಿರಬೇಕು. ನಾವು ಇಚ್ಛಿಸಿದಂತೆ ಬದುಕಬೇಕು. ಆಸೆ, ಕನಸುಗಳನ್ನು ಪೂರ್ಣಗೊಳಿಸಿಕೊಳ್ಳಲು ನಿರಂತರವಾಗಿ ಶ್ರಮಿಸಿದಾಗ ನಮ್ಮ ಅಂತರಂಗದ ಸೌಂದರ್ಯ ಸ್ಪಷ್ಟವಾಗುತ್ತದೆ. ನಡೆ–ನುಡಿ ಒಂದೇ ಆಗಿರಬೇಕು. ನಮ್ಮನ್ನು ನಾವು ಬಿಂಬಿಸಿಕೊಳ್ಳಬೇಕಾದರೆ ಬಹಿರಂಗದ ಸೌಂದರ್ಯವೂ ಮುಖ್ಯ.

• ಸೌಂದರ್ಯವನ್ನು ಸ್ಪರ್ಧೆಗೆ ಇಡುವುದು ಸರಿಯೇ?

ಎಲ್ಲರಿಗೂ ಅವರದ್ದೇ ಸೌಂದರ್ಯ ಇರುತ್ತದೆ. ಕೇವಲ ನಾಲ್ಕು ದಿನ ನಡೆಯುವ ಸ್ಪರ್ಧೆಯಿಂದ ಸೌಂದರ್ಯವನ್ನು ಅಳೆಯಲು ಸಾಧ್ಯವಿಲ್ಲ.

• ಸೌಂದರ್ಯ ಸ್ಪರ್ಧೆಯಿಂದ ಏನನ್ನು ಕಲಿಯಬಹುದು?

ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಜೀವನ ಪಾಠಗಳನ್ನು ಕಲಿಯುತ್ತೇವೆ. ಸೋಲು–ಗೆಲುವುಗಳನ್ನು ಸಮಾನಾಗಿ ನೋಡುವ ಮನೋಭಾವ ಬೆಳೆಯುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಭವಿಷ್ಯದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಮೆಟ್ಟಿ ನಿಲ್ಲುವ ಛಲ ಮೂಡುತ್ತದೆ.

• ನೀವು ಬಹುಮುಖ ಪ್ರತಿಭೆ. ನಿಮ್ಮ ಮೊದಲ ಆಯ್ಕೆ ಯಾವುದು ಮತ್ತು ಏಕೆ?

ಸಂಗೀತ, ನೃತ್ಯ, ಪೇಂಟಿಂಗ್, ಅಭಿನಯ, ಶಿಕ್ಷಣ ಎಲ್ಲವೂ ನನ್ನ ಜೀವನದ ಅವಿಭಾಜ್ಯ ಅಂಗ. ಇದೆಲ್ಲವೂ ನನಗಿಷ್ಟ. ಇದೆಲ್ಲವೂ ಇದ್ದರೆ ಮಾತ್ರ ನಾನು ಪೂರ್ಣ. ಆದರೆ, ವೈದ್ಯೆ ಆಗಬೇಕು ಎಂಬುದು ನನ್ನ ಗುರಿಯಾಗಿತ್ತು. ವೃತ್ತಿಗೆ ಮೊದಲ ಆದ್ಯತೆ, ವೈದ್ಯೆಯಾಗಿ ಮಾಡುವ ಸೇವೆ ಬೇರೆ ಯಾವ ಕ್ಷೇತ್ರದಲ್ಲೂ ಮಾಡಲು ಸಾಧ್ಯವಿಲ್ಲ. ಉಳಿದಂತೆ ಎಲ್ಲ ಕ್ಷೇತ್ರಕ್ಕೂ ಸಮಾನ ಆದ್ಯತೆ ನೀಡುವೆ.

• ಬಹುಕ್ಷೇತ್ರಗಳ ಆಸಕ್ತಿಯಿಂದ ಒಂದರಲ್ಲೇ ಫೋಕಸ್ ಆಗಿರುವುದು ಸಾಧ್ಯವೇ?

ನಾವು ಯಾವುದೇ ಕೆಲಸವನ್ನು ಇಷ್ಟಪಟ್ಟಾಗ ಅದಕ್ಕಾಗಿ ಸಮಯ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಪ್ರಶ್ನೆಯೇ ಬರುವುದಿಲ್ಲ. ಬಾಲ್ಯದಿಂದಲೂ ನೃತ್ಯ, ಸಂಗೀತ, ಚಿತ್ರ ಬಿಡಿಸುವುದು ಅಭ್ಯಾಸವಾಗಿದೆ. ಬರೀ ಓದುವುದೆಂದರೆ ಏನನ್ನೋ ಕಳೆದುಕೊಂಡಂತಾಗುತ್ತದೆ. ಇವೆಲ್ಲವನ್ನೂ ಮಾಡುವುದರಿಂದಲೇ ಏಕಾಗ್ರತೆ ಹೆಚ್ಚಿದೆ.

• ನೀವು ಯಾಕೆ ಸೌಂದರ್ಯ ಸ್ಪರ್ಧೆಯತ್ತ ಆಕರ್ಷಿತರಾದಿರಿ?

ಚಿಕ್ಕವಳಿದ್ದಾಗ ರ್‍ಯಾಂಪ್ ವಾಕ್ ಮಾಡುತ್ತಿದ್ದೆ. ನಂತರದ ದಿನಗಳಲ್ಲಿ ಶಿಕ್ಷಣದತ್ತ ಗಮನ ಹರಿಸಿದೆ. ವೈದ್ಯೆಯಾಗಲು ವೈದ್ಯಕೀಯ ಕೋರ್ಸ್ ಸೇರಿದೆ. ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಲು 5.6 ಅಡಿಗಿಂತ ಎತ್ತರ ಇರಬೇಕು ಎಂಬ ಮಾನದಂಡವಿದೆ. ನನ್ನ ಎತ್ತರ ಕಡಿಮೆ ಇರುವ ಕಾರಣಕ್ಕೆ ಸುಮ್ಮನಿದ್ದೆ. ಆದರೂ ಧೈರ್ಯದಿಂದ 'ಮಿಸ್ ಧಾರವಾಡ' ಸ್ಪರ್ಧೆಯಲ್ಲಿ ಪಾಲ್ಗೊಂಡು ವಿಜೇತಳಾದೆ. ಇದರಿಂದ ಆತ್ಮವಿಶ್ವಾಸ ಮೂಡಿ, ವಿವಿಧ ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸುವುದು ರೂಢಿಸಿಕೊಂಡೆ. ಈಗ 'ಭುವನ ಸುಂದರಿ' ಪಟ್ಟ ದಕ್ಕಿದೆ!.

• ನಿಮ್ಮಂತೆಯೇ ಕನಸು ಕಾಣುವ ಯುವತಿಯರಿಗೆ ಏನು ಹೇಳುತ್ತೀರಿ...

ಕನಸುಗಳು ನನಸಾಗಿಸಿಕೊಳ್ಳಲು ನಿರಂತರ ಪ್ರಯತ್ನದ ಜೊತೆಗೆ ಕುಟುಂಬದವರ ಬೆಂಬಲ ಮುಖ್ಯ. ಪಾಲಕರ ಒಪ್ಪಿಗೆ ಸಿಗದ ಕಾರಣ ಅನೇಕ ಯುವತಿಯರ ಕನಸು ಈಡೇರುವುದಿಲ್ಲ. ಪಾಲಕರಿಗೆ ವಾಸ್ತವವನ್ನು ತಿಳಿಸುವ ಪ್ರಯತ್ನ ಮಾಡಬೇಕು. ಸೌಂದರ್ಯ ಸ್ಪರ್ಧೆಯಲ್ಲಿ ಹಲವು ಹಂತಗಳನ್ನು ದಾಟಬೇಕು. ಸ್ಪರ್ಧೆಯ ಭಾಗವಾಗಿ ನಾನು ಬಿಕಿನಿ ಧರಿಸುತ್ತೇನೆ ಎಂದಾಗ ನನ್ನಮ್ಮ ಈ ಸ್ಪರ್ಧೆಯೇ ಬೇಡ ಎಂದಿದ್ದರು. ಸ್ಪರ್ಧೆಗೆ ಅವರನ್ನು ಕರೆದುಕೊಂಡು ಹೋದೆ, ವಾಸ್ತವ ಅರಿತು ಬೆಂಬಲ ನೀಡಿದರು.

• ಬದುಕಿನಲ್ಲಿ ಖ್ಯಾತಿ ಮುಖ್ಯವೋ, ವ್ಯಕ್ತಿತ್ವವೋ?

ಎಲ್ಲವೂ ದಕ್ಕಿದ ಮೇಲೂ, ನಾವು ನಮ್ಮತನವನ್ನು ಬಿಟ್ಟುಕೊಡಬಾರದು. ಖ್ಯಾತರಾದ ಮಾತ್ರಕ್ಕೆ ಜೀವನವೇ ಗೆದ್ದಂತಲ್ಲ. ಹಾಗೆಂದು ಖ್ಯಾತಿಯಿಂದ ದೂರ ಉಳಿಯಬೇಕಿಲ್ಲ. ಖ್ಯಾತರಾದ ಬಳಿಕ ಹೆಚ್ಚು ಜನ ನಮ್ಮನ್ನು ನೋಡುತ್ತಾರೆ, ಅನುಕರಿಸುತ್ತಾರೆ. ಖ್ಯಾತಿಯ ಜೊತೆಗೆ ಜವಾಬ್ದಾರಿಯೂ ಹೆಚ್ಚಾಗುತ್ತದೆ. ನಮ್ಮ ನಡೆ–ನುಡಿ ಜನರ ಮೇಲೆ ಪ್ರಭಾವ ಬೀರುತ್ತದೆ. ನಾವು ಮಾಡುವ ಒಳ್ಳೆಯ ಕೆಲಸಗಳು ಹೆಚ್ಚು ಜನರಿಗೆ ತಲುಪಬೇಕಾದರೆ ಖ್ಯಾತಿಯೂ ಬೇಕು.

• ನೀವು ಈಗಾಗಲೇ ಸ್ವಯಂಸೇವಾ ಸಂಸ್ಥೆ (ಎನ್‌ಜಿಒ) ಮೂಲಕ ಸಮಾಜಸೇವೆಯಲ್ಲಿ ತೊಡಗಿದ್ದೀರಿ. ನಿಮ್ಮ ಮುಂದಿನ ಗುರಿ ಮತ್ತು ಉದ್ದೇಶ?

ಕಳೆದ ವರ್ಷ 'ಶ್ರಮ' ಎಂಬ ಎನ್‌ಜಿಒ ಆರಂಭಿಸಿದ್ದೇವೆ. ಅಪ್ಪ, ಅಮ್ಮ ಇಬ್ಬರೂ ವೈದ್ಯರಾಗಿದ್ದು, ಹುಬ್ಬಳ್ಳಿ ಮತ್ತು ತುಮಕೂರಿನಲ್ಲಿ ಶಿಬಿರಗಳನ್ನು ಆಯೋಜಿಸಿ, ಬಡವರಿಗೆ ಉಚಿತ ಚಿಕಿತ್ಸೆ ನೀಡುತ್ತೇವೆ. ಸೌಲಭ್ಯ ವಂಚಿತ ಶಾಲೆಗಳಿಗೆ ಆರ್ಥಿಕ ನೆರವು ನೀಡುತ್ತೇವೆ. ಅಂಧಮಕ್ಕಳ ಶಾಲೆಗೆ, ವೃದ್ಧಾಶ್ರಮಕ್ಕೆ ಆಹಾರ ಕೊಡುವುದರ ಜೊತೆಗೆ ಇತರೆ ಸಂಘಸಂಸ್ಥೆಗಳ ಜೊತೆ ಸೇರಿ 'ವಾಕ್ ಫಾರ್ ಚಾರಿಟಿ' ಮೂಲಕ ಹಣ ಸಂಗ್ರಹಿಸಿ ಅಗತ್ಯ ಇರುವವರಿಗೆ ನೀಡುತ್ತೇವೆ. ಈ ಎಲ್ಲ ಕೆಲಸಗಳು ಮುಂದುವರಿದಿವೆ. ಮುಂದಿನ ದಿನಗಳಲ್ಲಿ ಬಡಪ್ರತಿಭಾವಂತ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡುವ ಉದ್ದೇಶವಿದೆ.

ಬಹುಮುಖ ಪ್ರತಿಭೆ ಶ್ರುತಿ

ಡಾ. ಶ್ರುತಿ ಹೆಗಡೆ ಹುಬ್ಬಳ್ಳಿಯಲ್ಲಿ ವಾಸವಿದ್ದಾರೆ. ಮೂಲತಃ ಶಿರಸಿ ತಾಲ್ಲೂಕಿನ ಮುಂಡಿಗೆಸರದವರಾದ ಡಾ.ಕೃಷ್ಣ ಹೆಗಡೆ ಹಾಗೂ ಡಾ.ಕಮಲಾ ಹೆಗಡೆ ದಂಪತಿ ಪುತ್ರಿ. ಈಗ ತುಮಕೂರಿನಲ್ಲಿ ಎಂ.ಡಿ ಅಧ್ಯಯನದಲ್ಲಿ ನಿರತರಾಗಿದ್ದಾರೆ.

ಇವರು ನೃತ್ಯಗಾರ್ತಿ, ಗಾಯಕಿ, ಕಲಾವಿದೆಯೂ ಹೌದು. ಈವರೆಗೆ ಒಟ್ಟು ಸಾವಿರಕ್ಕೂ ಹೆಚ್ಚು ನೃತ್ಯ ಪ್ರದರ್ಶನ ನೀಡಿದ್ದಾರೆ. ಧಾರಾವಾಹಿ, ಸಿನಿಮಾ, ವೆಬ್ ಸಿರೀಸ್‌ನಲ್ಲೂ ಅಭಿನಯಿಸಿದ್ದಾರೆ.

ಮಿಸ್ ಧಾರವಾಡ, ಮಿಸ್ ಇಂಟರ್ ನ್ಯಾಷನಲ್ –2023ರ ಎರಡನೇ ರನ್ನರ್ ಅಪ್, ಮಿಸ್ ಸೌತ್ ಇಂಡಿಯಾ ವಿನ್ನರ್-2018, ಮಿಸ್ ಸೌತ್ ಇಂಡಿಯಾ ಟ್ಯಾಲೆಂಟೆಡ್, ಮಿಸ್ ಐಡಿಯಲ್ ವುಮೆನ್ ಆಫ್ ದಿ ಇಯರ್, ಮಿಸ್ ಕರ್ನಾಟಕ ರನ್ನರ್ ಅಪ್ ಹಾಗೂ ಮಿಸ್ ಫಿಟ್ನೆಸ್ ಕರ್ನಾಟಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮೊದಲ ಓದು

ಬ್ಯಾರಿ ಸಂಸ್ಕೃತಿ ಸೊಗಡಿನ ಕಥೆಗಳು



ಪು: 112
₹120

ಜಿನ್ನ್ ಮತ್ತು ಪರ್ಷಿಯನ್ ಕ್ಯಾಟ್
ಲೇ: ಮುನವ್ವರ್ ಜೋಗಿಬೆಟ್ಟು
ಪ್ರ: ಕಾಂಕ್ಲೇವ್ ಮಿಡಿಯಾ ಆ್ಯಂಡ್ ಪಬ್ಲಿಷರ್
ಸಂ: 9902590303

'ಜಿನ್ನ್ ಮತ್ತು ಪರ್ಷಿಯನ್ ಕ್ಯಾಟ್' ತರುಣ ಕಥೆಗಾರ ಮುನವ್ವರ್ ಜೋಗಿಬೆಟ್ಟು ಅವರ ಮೊದಲ ಕಥಾ ಸಂಕಲನ. ಇದರಲ್ಲಿ ಹತ್ತು ಕಥೆಗಳಿವೆ. ಬಹುತೇಕ ಕಥೆಗಳು ನಾಡಿನ ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿವಿಧ ಕಥಾಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕಥೆಗಳೂ ಇದರಲ್ಲಿವೆ. 'ಜಿನ್ನ್' ಕಥೆಗೆ ಪ್ರಜಾವಾಣಿಯ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಮೊದಲ ಸ್ಥಾನ ದಕ್ಕಿದೆ.

'ಜಿನ್ನ್ ಮತ್ತು ಪರ್ಷಿಯನ್ ಕ್ಯಾಟ್' ನಂತೆಯೇ ಇಲ್ಲಿಯ ಬಹುತೇಕ ಕಥೆಗಳು ನಿಗೂಢ ಭೂಮಿಕೆಯನ್ನು ಹೊಂದಿವೆ. ಜಿನ್ನ್, ಸಿದ್ದೀಕನ ಮೂಸೆ, ಪರ್ಷಿಯನ್ ಕ್ಯಾಟ್ ಕಥೆಗಳು ಈ ಕೃತಿಯ ಜೀವಾಳ. ಮಾನವೀಯ ಅಂತಃಕರಣ ಇಲ್ಲಿನ ಕಥೆಗಳ ಸ್ಥಾಯಿ ಗುಣ. ಬ್ಯಾರಿ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದಲೂ ಈ ಕೃತಿ ಮುಖ್ಯವೆನಿಸುತ್ತದೆ.

ಈ ಕಥಾ ಸಂಕಲನದಲ್ಲಿರುವ ಸಿದ್ದೀಕನ ಮೂಸೆ ಕಥೆಯು ಮಾನವೀಯ ಅಂತಃಕರಣವನ್ನು ಧ್ವನಿಸುವುದರ ಜೊತೆಗೆ ಕರಾವಳಿ ಭಾಗದ ಸಹಬಾಳ್ವೆಯ ಕಥನವನ್ನು ಮರು ನಿರೂಪಿಸುತ್ತದೆ. ಪರ್ಷಿಯನ್ ಕ್ಯಾಟ್ ಕಥೆಯು, ಬಡವ ಶ್ರೀಮಂತರ ನಡುವಿನ ಅಂತರವನ್ನು ಬೆಕ್ಕುಗಳ ಮೂಲಕ ತೋರಿಸುತ್ತದೆ. ಜಿನ್ನ್ ಕಥೆ ನಿಗೂಢತೆಗಳ ಹೊಸಲೋಕವನ್ನು ಓದುಗರಿಗೆ ಪರಿಚಯಿಸುತ್ತದೆ.

ಬ್ಯಾರಿ ಸಂಸ್ಕೃತಿಯ ದಿಗ್ದರ್ಶನ ಈ ಕಥಾ ಸಂಕಲನದ ಹಲವು ಕಥೆಗಳಲ್ಲಿದೆ. ಈ ಹಿಂದೆ ಕೆಲವೇ ಕೆಲವು ಬ್ಯಾರಿ ಕಥೆಗಾರರು ತಮ್ಮ ಸಮುದಾಯದ ಜನರ ಸಾಂಸ್ಕೃತಿಕ ಒಳಬದುಕನ್ನು ಕನ್ನಡ ಓದುಗರಿಗೆ ಪರಿಚಯಿಸಿದ್ದರು. ಮುನವ್ವರ್ ಇಲ್ಲಿ ಅದರ ಇನ್ನೊಂದು ಆಯಾಮವನ್ನು ತೋರಿಸಿದ್ದಾರೆ. ತಮ್ಮ ಸಮಯದಾಯದ ಸೂಕ್ಷ್ಮ ವಿಚಾರಗಳನ್ನು ಸಂವೇದನಾಶೀಲರಾಗಿ ನಿರೂಪಿಸಿರುವುದು ಕಥೆಗಾರನ ಪಕ್ವತೆಗೆ ಹಿಡಿದ ಕೈಗನ್ನಡಿ. ಕಥಾ ವಸ್ತುಗಳೂ ಸ್ಥಳೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಕೆಲವೊಂದು ಪದಗಳು, ಹೆಸರುಗಳು ಕೆಲ ಓದುಗರಿಗೆ ಹೊಸತು ಎನಿಸಬಹುದು.

ಬ್ಯಾರಿ ಸಂಸ್ಕೃತಿಯ ಆಧ್ಯಾತ್ಮಿಕ ವಿವರಗಳ ಜೊತೆಗೆ ದೈನಂದಿನ ವ್ಯವಹಾರಗಳು, ಸಾಮಾನ್ಯ ಮನುಷ್ಯರ ಸಣ್ಣತನ, ದೊಡ್ಡತನ, ವಿವಿಧ ಸಮುದಾಯಗಳ ಜೊತೆಗಿನ ಅವರ ಸಹಬಾಳ್ವೆಯ ಸಹಜ ಸರಳರೇಖಾತ್ಮಕ ವಿವರಗಳು ಇಲ್ಲಿಯ ಕಥೆಗಳಲ್ಲಿ ದಟ್ಟವಾಗಿವೆ.

ಎಲ್ಲಾ ಕಥೆಯಲ್ಲಿ ಪ್ರಾದೇಶಿಕತೆ ವಿವರ, ಜನರ ವೃತ್ತಿ, ಮಾನವ ಗುಣಗಳ ಸೊಗಸಾದ ಚಿತ್ರಣವಿದೆ. ಗಂಭೀರತೆ, ನಾಟಕೀಯತೆ, ಆರ್ದ್ರತೆ, ನಿಗೂಢತೆಯ ಮಿಶ್ರಣವಿದೆ. ನಿರೂಪಣೆ, ವಿಷಯ, ಭಾಷೆ ಎಲ್ಲಾ ವರ್ಗದ ಓದುಗರಿಗೆ ಪಥ್ಯವಾಗಬಲ್ಲದು.

ಕಥೆ

ಪ. ರಾಮಕೃಷ್ಣ ಶಾಸ್ತ್ರಿ ಅವರ **ತೀರ್ಮಾನ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಉಮೇಶ ಬೇವಿನಹಳ್ಳಿ ಅವರ **ಭಗವತಿಯ ಉವಾಚ...!**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

---

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕು ಕೀಟ್ರಸ್ಪು ಕಥೆಯ

ರಾಕೆಟ್ ಪ್ರಯೋಗ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಮೋಜಿನ ENGLISH

'K' ಅಕ್ಷರದಿಂದ ಪ್ರಾರಂಭವಾಗುವ ನಾಲ್ಕಕ್ಷರದ ಪದಗಳನ್ನು ಬರೆಯಿರಿ

1	K			
2	K			
3	K			
4	K			
5	K			
6	K			
7	K			
8	K			
9	K			
10	K			

ಗಣಿತದಲ್ಲಿ ಗರ್ದಿ ಗಮ್ಮತ್ತು

ಒಂದೇ ಗುರಿ: ಚಿ–ಹ್ನಾಟ

ಇಲ್ಲಿ 1ರಿಂದ 9 ಅಂಕಿಗಳನ್ನು ಕೊಡಲಾಗಿದೆ. ನಡುವೆ ಚಿಹ್ನೆ ಹಾಕಿ ಲೆಕ್ಕ ಮಾಡಿದರೆ ಉತ್ತರ ಒಂದು ಬರುವಂತೆ ಪ್ರಯತ್ನಿಸಿ

5		3		2	=	1
6		4		9	=	1
8		7		1	=	1

ಪದ 'ರ'ಗಳೆ ಆಟ

ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ 'ರ'ಕಾರದ ಎರಡು ಅಕ್ಷರಗಳನ್ನು ಅಕ್ಷರ ಪಟ್ಟಿಯಿಂದ ಆಯ್ದು ಸೇರಿಸಿ ಅರ್ಥಬದ್ಧ ಪದರಚಿಸಿ

ಅಕ್ಷರಪಟ್ಟಿ			
ರಾ	ರೂ	ರಾ	ರ
ರು	ರೂ	ರೀ	ರು
ರೂ	ರ	ರ	ರಾ
ರೂ	ರು	ರ	ರಿ
ರೂ	ರ	ರಾ	ರಿ

1	ಶಿ		
2	ಕ		
3	ಜ		
4	ನೂ		
5	ತೌ		
6	ಪ		
7	ಮು		
8	ಬೇ		
9	ಊ		
10	ಶ		

ಪದ–ಶೋಧ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆರಿಸಿ ಜೋಡಿಸಿ ಒಂದು ವಿಷಸರ್ಪದ ಹೆಸರನ್ನು ಹುಡುಕಿ

1.ಕೊಡಚಾದ್ರಿ
2.ಒಳನೋಟ
3.ಕುಲದೈವ
4.ಆಮಂತ್ರಣ
5.ಡಮರುಗ
6.ಬಲವಂತ

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ತೊ	ಬ	ಕೂ	ದು
ಚ	ಉ	ಮೆ	ಹು
ನ	ಜೀ	ಬ	ನ

1		ರಿ	ಗೆ
		ರಿ	ಗೆ
2		ವ	ಣೆ
		ವ	ಣೆ
3		ಟ್ಟಿ	ಲು
		ಟ್ಟಿ	ಲು
4		ಡು	ಕು
		ಡು	ಕು
5		ರ	ಕ
		ರ	ಕ
6		ಡಿ	ಸು
		ಡಿ	ಸು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಜೀಕಳಿ–ಓಕಳಿ 2.ಸಕಲ–ವಿಕಲ 3.ಬಸಳೆ–ಮೊಸಳೆ 4.ವಂದನೆ–ನಿಂದನೆ 5.ಗುಜರಿ–ಹಾಜರಿ 6.ಕೆಳದಿ–ಹಳದಿ

ಜಾಣಪದ ಆಟ: 1.ಮುತ್ತುರತ್ನ 2.ದೃಷ್ಟಿಬೊಟ್ಟು 3.ಗಡಿಪಾರು 4.ಕರದಂಟು 5.ಇತಿಮಿತಿ 6.ಗಾಳಿಪಟ 7.ಕರವಸ್ತ್ರ 8.ವನವಾಸ 9.ಮನಸಾಕ್ಷಿ 10.ದನಕರು

ಪದಶೋಧ: ಮರಕುಟಿಗ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಮನ್ವಿತ್ ರಾಜ್ ಎಚ್.ಆರ್.
ರಾಯಚೂರು

ಭಷಿತ ಎಂ.
ಬೆಂಗಳೂರು

ಅರ್ಫಾ ಎಂ.ಮುಜಾವರ್
ಜಮಖಂಡಿ

ಪ್ರೇಕ್ಷಿತ ಎಸ್.
ಮೈಸೂರು

ಶೌರ್ಯ ಎಸ್.
ಕಡೂರು

ಸಾಧ್ವಿ ದೊಮನಾಳ
ವಿಜಯಪುರ

ಫ್ರಾನ್ಸ್ ಕಡಲತೀರದ ವಿಶಿಷ್ಟ ದ್ವೀಪ

ಫ್ರಾನ್ಸ್ ಕಡಲತೀರದ ವಿಶಿಷ್ಟ ದ್ವೀಪ 'ಮಾಂಟ್ ಸೇಂಟ್ ಮೈಕೆಲ್' ವಿಶ್ವ ಪಾರಂಪರಿಕ ತಾಣ. ಇಷ್ಟೇ ಅಲ್ಲದೇ ಭೂ ವೈಜ್ಞಾನಿಕ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಸೊಗಸಾದ ವಾಸ್ತುಶಿಲ್ಪದಿಂದ ಪ್ರವಾಸಿಗರನ್ನು ನೂರಾರು ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ದು ವಿಸ್ಮಿತರನ್ನಾಗಿಸುತ್ತದೆ.

ಕೋಟೆಯೊಳಗಿನ ಉದ್ಯಾನದ ನೋಟ

ಪ್ರಹ್ಲಾದ ಪರ್ವತಿ

ಫ್ರಾನ್ಸ್ ಮಧ್ಯಕಾಲೀನ ನಗರಗಳು, ಆಲ್ಪೈನ್ ಹಳ್ಳಿಗಳು ಮತ್ತು ಮೆಡಿಟರೇನಿಯನ್ ಕಡಲತೀರಗಳನ್ನು ಒಳಗೊಂಡ ದೊಡ್ಡ ದೇಶ. ಈ ದೇಶವು ಪ್ರಪಂಚದಲ್ಲಿ ಹೆಚ್ಚು ಪಾರಂಪರಿಕ ತಾಣಗಳನ್ನು ಹೊಂದಿದೆ. ವಾರ್ಷಿಕವಾಗಿ 8 ಕೋಟಿ ಪ್ರವಾಸಿಗರನ್ನು ಸೆಳೆಯುವ ಪಶ್ಚಿಮ ಯುರೋಪಿನ ಈ ಗಣರಾಜ್ಯವು, ಉತ್ತರದಲ್ಲಿ ಇಂಗ್ಲಿಷ್ ಕಡಲ್ಗಾಲುವೆ, ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಹಾಗೂ ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರ ಪಡೆದಿರುವ ಪಕೃತಿ ಸೌಂದರ್ಯದ ನೆಲೆಯಾಗಿದೆ. ಈ ದೇಶದ ನಾರ್ಮಂಡಿ ಕಡಲತೀರದ ಅಂಚಿನಲ್ಲಿರುವ 'ಮಾಂಟ್ ಸೇಂಟ್ ಮೈಕೆಲ್' ದ್ವೀಪ ಪ್ರವಾಸಿತಾಣವಾಗಿ ಜನಪ್ರಿಯವಾಗಿದೆ. ಐಫೆಲ್ ಗೋಪುರದ ನಂತರ ಫ್ರಾನ್ಸ್‌ನಲ್ಲಿ ಅತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದು ಇದೇ ದ್ವೀಪ.

ಈ ತಾಣಕ್ಕೆ ತಲುಪಲು ಮೂರು ಕಿ.ಮೀ. ದೂರವಿರುವಾಗಲೇ ಕಂಡ ಈ ದ್ವೀಪ ತನ್ನ ಸೌಂದರ್ಯದಿಂದ ಮೋಡಿ ಮಾಡಿತು. ಸುತ್ತಲೂ ಜಲರಾಶಿ, ಹಿಂಭಾಗದಲ್ಲಿ ಇಂಗ್ಲಿಷ್ ಕಾಲುವೆಯ ಹರಿವನ್ನು ಕಂಡಾಗ ಪ್ರಕೃತಿ ಮಧ್ಯದಲ್ಲಿ ಮಾನವ ಪ್ರಯತ್ನದ ನಿರಂತರ ಸಾಧನೆಯ ಸಂಕೇತದಂತೆ ಈ ದ್ವೀಪ ಕಂಡಿತು. ತೆರೆಗಳ ಅಂಗಳದ ಉಬ್ಬರವಿಳಿತದ ಈ ಕಲ್ಲಿನದ್ವೀಪವನ್ನು ಈಗ ಸುಸಜ್ಜಿತವಾದ ಸೇತುವೆ ಮೂಲಕ ಮುಖ್ಯ ಭೂಭಾಗಕ್ಕೆ ಸಂಪರ್ಕಿಸಲಾಗಿದೆ. ವಾಹನ ಪಾರ್ಕಿಂಗ್ ಸ್ಥಳದಿಂದ ಕಾಲ್ನಡಿಗೆ ಇಲ್ಲವೇ ಉಚಿತ ಬಸ್ ಮೂಲಕ ದ್ವೀಪ ತಲುಪಬಹುದು.

ವಾಯವ್ಯ ಕರಾವಳಿಯಿಂದ ಒಂದು ಕಿ.ಮೀ ದೂರದಲ್ಲಿ 'ಕೌಸ್ನಾನ್' ನದಿ ಮುಖಭಾಗದಲ್ಲಿರುವ ಈ ದ್ವೀಪವು ಏಳು ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಉಬ್ಬರದ ಸಮಯದಲ್ಲಿ ಇದು ಸಂಪೂರ್ಣವಾಗಿ ಮುಳುಗಿ ನಡುಗಡ್ಡೆಯಂತಾಗುತ್ತದೆ. ಉಬ್ಬರ ಕಡಿಮೆಯಾದಾಗ ಪ್ರವೇಶಾವಕಾಶ ತೆರೆದುಕೊಳ್ಳುತ್ತದೆ. ಈ ದ್ವೀಪ ತನ್ನೊಳಗೆ ಪ್ರಾಚೀನ ಚರ್ಚ್, ಮ್ಯೂಸಿಯಂ, ಉದ್ಯಾನ, ಕೋಟೆ ಹಾಗೂ ಜನವಸತಿ ಇಟ್ಟುಕೊಂಡಿರುವುದನ್ನು ಕಂಡಾಗ ಅಲ್ಲಿ ಇತಿಹಾಸ ಉಸಿರಾಡುತ್ತಿರುವ ಅನುಭವವಾಯಿತು.

ವಿಶಿಷ್ಟ ಕಟ್ಟಡ: ಸಂತ ಮೈಕೆಲರ ಮಧ್ಯಕಾಲೀನ ಈ ಆಬಿ(ವಾಸಿಸುವ ಜಾಗ) ವಿಶಿಷ್ಟ ಕಟ್ಟಡವಾಗಿದೆ. ಬೃಹತ್ ಬಂಡೆಯ ಮೇಲೆ ರಚಿತವಾದ ಈ ಚರ್ಚ್ ಸುತ್ತಲೂ ಕೋಟೆ ಕಟ್ಟಲಾಗಿದೆ.



ನಾರ್ಮಂಡಿ ಕಡಲತೀರದಲ್ಲಿರುವ 'ಮಾಂಟ್ ಸೇಂಟ್ ಮೈಕೆಲ್' ದ್ವೀಪ

ಸಮುದ್ರದ ಉಬ್ಬರ ಇಳಿಕೆಯಾಗುವ ಋತುವಿನಲ್ಲಿ ಮಾಂಟ್ ಸೇಂಟ್ ಮೈಕೆಲ್ ದ್ವೀಪಕ್ಕೆ ನಡೆದೇ ಹೋಗಬಹುದು

ಮುಖ್ಯ ಪ್ರವೇಶದ್ವಾರದ ಎಡಭಾಗದ ಕಮಾನುಗಳನ್ನು ದಾಟಿದ ನಂತರ ಬಲಭಾಗದಲ್ಲಿ ಚರ್ಚ್ ಮತ್ತು ಎಡಭಾಗದಲ್ಲಿರುವ ಆಬಿ ಕಟ್ಟಡಗಳ ನಡುವಿನ ಕಾಲುದಾರಿಯಲ್ಲಿ ಸಾಗಿದಾಗ ಗ್ರಾಂಡ್ ಡಿಗ್ರೆ ಎನ್ನುವ ಚಾವಣಿ ತಲುಪುತ್ತೇವೆ. ಇಲ್ಲಿಂದ ಕೊಲ್ಲಿಯಲ್ಲಿ ಕಾಣುವ ಸೌಂದರ್ಯವನ್ನು ಸವಿಯುವುದರ ಜೊತೆಗೆ ನಿಯೋ ಗೋಥಿಕ್ ಶೈಲಿಯ ಚರ್ಚ್ ಗೋಪುರ, ಅದರ ಮೇಲಿರುವ ಸಂತ ಮೈಕೆಲರ ಪ್ರತಿಮೆಯನ್ನು ನೋಡಬಹುದು. ಆಬಿಯ ಚರ್ಚ್ ಅನ್ನು ಬಂಡೆಯ ಮೇಲ್ಭಾಗದಲ್ಲಿ 80 ಮೀಟರ್ ಎತ್ತರದಲ್ಲಿ ನಿರ್ಮಿಸಲಾಗಿದೆ. ಇಲ್ಲಿಂದ ನೀರಿನೊಂದಿಗೆ ಹೆಣೆದುಕೊಂಡ ಈ ದ್ವೀಪದ ರಮಣೀಯ ನೋಟ ಪರವಶಗೊಳಿಸುತ್ತದೆ.

ವಾಸ್ತುಶಿಲ್ಪದ ಮೇರು ಕೃತಿ: ದ್ವೀಪದ ಚರ್ಚ್ ವಿಭಿನ್ನ ಅವಧಿಯ ಮತ್ತು ಶಿಲ್ಪಕಲಾ ಶೈಲಿಗಳ ಮಿಶ್ರಣ ಹೊಂದಿದೆ. ಇದು ರೋಮನೆಸ್ಕ್ ಶೈಲಿಯಲ್ಲಿತ್ತು. ಮಾಂಟ್ ಆಬಿಯು ಮಧ್ಯಕಾಲೀನ ವಾಸ್ತುಶಿಲ್ಪದ ಮೇರು ಕೃತಿಯಾಗಿದ್ದು, ಇದು ಮೂರು ಹಂತದ ರಚನೆಯಾಗಿದೆ. ಕಟ್ಟಡದಲ್ಲಿ ಸನ್ಯಾಸಿಗಳು ವಾಸಿಸುತ್ತಿದ್ದ ಮರ್ವೀಲ್ ಕಟ್ಟಡ, ನೆಲಮಹಡಿಯಲ್ಲೊಂದು ನೆಲಮಾಳಿಗೆ, ಸನ್ಯಾಸಿಗಳು ಅಧ್ಯಯನ ಮತ್ತು ಧ್ಯಾನ ಮಾಡುವ 'ನೈಟ್' ಕೋಣೆ, ಮಧ್ಯಂತರದಲ್ಲಿ ಆತಿಥೇಯರ ಕೊಠಡಿಗಳಿವೆ. ಮೇಲಿನ ಹಂತದಲ್ಲಿ ಗ್ರಾನೈಟ್ ಕಲ್ಲು ಮತ್ತು ಅಮೃತಶಿಲೆ ಬಳಸಿ ಎರಡು ಸಾಲುಗಳ ಕಮಾನಿನ ಮೂಲೆಯಲ್ಲಿ ಸೂಕ್ಷ್ಮ ಕೆತ್ತನೆಗಳು ಆಕರ್ಷಕವಾಗಿದೆ. ಮೇಲ್ಭಾಗದಲ್ಲಿ ನಿಗೂಢಮಾರ್ಗಗಳಲ್ಲಿ ಸಂಚರಿಸಿ ಸನ್ಯಾಸಿಗಳ ಗೃಹ ಮತ್ತು ಭೋಜನಶಾಲೆ ನೋಡಬಹುದು. ಇದರ ಬದಿಯಲ್ಲಿ ಚಾಪೆಲ್ ಇದೆ. ಇಲ್ಲಿನ ನವರಂಗ, ನೆಲಮಹಡಿ ಮತ್ತು ಬಣ್ಣದ ಗಾಜಿನಕಿಟಕಿಗಳ ಎತ್ತರ ರೋಮನೆಸ್ಕ್ ವಾಸ್ತುಶಿಲ್ಪದ ಉತ್ಕೃಷ್ಟ ಉದಾಹರಣೆಗಳಾಗಿವೆ. ಬ್ರಿಟನ್ನರ ಮುತ್ತಿಗೆಯಿಂದ ಆಬಿಯ ಬಹುಭಾಗ ಅಗ್ನಿಗಾಹುತಿಯಾಗಿದ್ದರಿಂದ ಮತ್ತೆ ಎತ್ತರದ ತೆಳ್ಳಗಿನ ಕೆತ್ತಿದ ಕಮಾನುಗಳೊಂದಿಗೆ ಗೋಥಿಕ್ ಶೈಲಿಯಲ್ಲಿ ಚರ್ಚ್ ಅನ್ನು ವಿಸ್ತರಿಸಲಾಯಿತು. ಮುಂದಿನ ಶತಮಾನಗಳಲ್ಲಿ ಇವು ಮರುವಿನ್ಯಾಸಗೊಂಡು ರೋಮನೆಸ್ಕ್ ವಾಸ್ತು ಸೌಂದರ್ಯ ಶೈಲಿಯಲ್ಲಿ ನಿರ್ಮಾಣಗೊಂಡವು.

ಮಾಂಟ್ ಟೊಂಬೆ: ಈ ಅನನ್ಯ ದ್ವೀಪ ಸುದೀರ್ಘ ಇತಿಹಾಸ ಹೊಂದಿದ್ದು, ವಿಭಿನ್ನ ಉದ್ದೇಶಗಳಿಗೆ ಬಳಕೆಯಾಗಿದೆ. 5ನೆಯ ಶತಮಾನದಲ್ಲಿ ಐರಿಷ್ ಸನ್ಯಾಸಿಗಳಿಂದ ಇದು ಮಾಂಟ್ ಟೊಂಬೆ ಎಂದು ಸ್ಥಾಪಿತವಾಗಿ, ಕಾಲಾಂತರದಲ್ಲಿ ಮಾಂಟ್ ಸೇಂಟ್ ಮೈಕೆಲ್ ಎಂದಾಯಿತು. ತದನಂತರ 300 ವರ್ಷಗಳು ಗ್ಯಾಲೋ ರೋಮನ್ ಸಂಸ್ಕೃತಿಯ ಕೇಂದ್ರವಾಗಿ ಕಾರ್ಯನಿರ್ವಹಿಸಿತು. ಇದನ್ನು ಫ್ರಾಂಕ್ಸರು (ಇವರಿಂದಲೇ ಫ್ರಾನ್ಸ್ ಹೆಸರು ಬಂದಿದೆ) ವಶಪಡಿಸಿಕೊಂಡಾಗ ಕೆಲ ಸಮಯ ತೀರ್ಥಯಾತ್ರಾ ತಾಣವಾಗಿತ್ತು. ಬಿಷಪ್ ಆಬರ್ಟರು ಅರ್ಚಾಂಗೆಲ್ಲರ ಗೌರವಾರ್ಥಕವಾಗಿ ಈ ಮಾಂಟ್ ಸೇಂಟ್ ಮೈಕೆಲ್ ದ್ವೀಪದಲ್ಲಿ ಸಣ್ಣ ಪ್ರಾರ್ಥನಾ ಮಂದಿರ ಸ್ಥಾಪಿಸಿದರು. 10ನೆಯ ಶತಮಾನದಲ್ಲಿ ಇದು ಬೆನೆಡಿಕ್ಟನ್ನರ ವಾಸಸ್ಥಾನದ ಭವ್ಯ ಆಬಿಯಾಗಿ ವಿಕಸನಗೊಂಡಿತು. ಹೀಗಾಗಿ ಎಲ್ಲಡೆಯಿಂದ ಯಾತ್ರಿಕರನ್ನು ಮತ್ತು ವಿದ್ವಾಂಸರನ್ನು ತನ್ನತ್ತ ಸೆಳೆದು ಮಧ್ಯಕಾಲೀನ ಶತಮಾನದ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಕೆಲವು ವರ್ಷ ಅಧಿಕಾರದ ಸ್ಥಳವಾಗಿ ಅಂತಿಮವಾಗಿ ಆಯಕಟ್ಟಿನ ಭದ್ರಕೋಟೆಯಾಗಿ ಮತ್ತು ಫ್ರೆಂಚ್ ಕ್ರಾಂತಿ ವಿರೋಧಿಸಿದವರನ್ನು ಹಿಡಿದಿಟ್ಟುಕೊಳ್ಳುವ ಕಾರಾಗೃಹವಾಗಿತ್ತು.

ಅಜೇಯ ಕೋಟೆ: ಇಲ್ಲಿನ ಕೋಟೆಯು ದಪ್ಪನೆಯ ಕಲ್ಲಿನಗೋಡೆ, ಕಾಲ್ದಾರಿ, ಸುತ್ತುವರೆದ ರಕ್ಷಣಾತ್ಮಕ ಗೋಪುರಗಳಂತಹ ಮಿಲಟರಿ ರಕ್ಷಣಾ ವಿಧಾನಗಳ ಪ್ರಾವಿಣ್ಯತೆಯಿಂದ ಹೆಸರುವಾಸಿಯಾಗಿದೆ. 30 ವರ್ಷಗಳು ಇಂಗ್ಲಿಷರ ಮುತ್ತಿಗೆಗಳನ್ನು ಯಶಸ್ವಿಯಾಗಿ ಎದುರಿಸಿದ್ದರಿಂದಾಗಿ ಈ ಕೋಟೆಯನ್ನು 'ಅಜೇಯ ಕೋಟೆ' ಎಂದು ಬಣ್ಣಿಸಲಾಗಿದೆ. ಆಬಿಯ ಜೊತೆಗೆ 1 ಸಾವಿರ ವರ್ಷಗಳಿಂದ ಈ ಕೋಟೆಯ ಹೊರವಲಯದಲ್ಲಿ (14ನೇ ಶತಮಾನದ ಹೊತ್ತಿಗೆ) ಒಂದು ಹಳ್ಳಿಯೇ ಕೋಟೆ ಗೋಡೆಗಳಗುಂಟ ಬೆಳೆಯಿತು. 18ನೆಯ ಶತಮಾನದ ವೇಳೆಗೆ ಆಡಳಿತಾಧಿಕಾರಿಗಳು, ಮಠಾಧೀಶರು ಈ ಸ್ಥಳವನ್ನು ತೊರೆದಿದ್ದರಿಂದ ಈ ಆಬಿ ರಾಜ್ಯದ ಆಸ್ತಿಯಾಯಿತು. 1874 ರಲ್ಲಿ ಈ ಆಬಿಯನ್ನು ಸ್ಮಾರಕವೆಂದು ಘೋಷಿಸಿದ ನಂತರ 1979 ರಲ್ಲಿ ಯುನೆಸ್ಕೋ ಇದನ್ನು ವಿಶ್ವ ಪಾರಂಪರಿಕ ತಾಣವೆಂದು ಪರಿಗಣಿಸಿದೆ. ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುವ ಈ ಕಟ್ಟಡವನ್ನು ಖ್ಯಾತ ಫ್ರೆಂಚ್ ಲೇಖಕ, ಚಿಂತಕ ವಿಕ್ಟರ್ ಹ್ಯೂಗೋ ಇದನ್ನು 19ನೇ ಶತಮಾನದ 'ಅದ್ಭುತ ಪಿರಮಿಡ್' ಎಂದು ಕರೆದಿದ್ದಾರೆ.

ಕೋಟೆಯ ಕೆಳಭಾಗದಲ್ಲಿರುವ ಕೌಸ್ನಾನ್ ನದಿಯ ಹೂಳಿನಲ್ಲಿ ಮಕ್ಕಳಾದಿಯಾಗಿ ಪ್ರವಾಸಿಗರು ಸಂಚರಿಸಿ ದ್ವೀಪದ ಹೆಬ್ಬಾಗಿಲಿಗೆ ಬಂದು ಕೆಸರಾದ ತಮ್ಮ ಕಾಲು ತೊಳೆದುಕೊಂಡು ಒಳಗೆ ಬರುವ ದೃಶ್ಯ ವಿಸ್ಮಯ ಮೂಡಿಸಿತು. ಹಾಲಿವುಡ್ ಸೇರಿದಂತೆ ಅನೇಕರಿಗೆ ಈ ಆಬಿ ಸ್ಫೂರ್ತಿ ನೀಡಿದೆ. ಕೆಲವು ಚಿತ್ರಗಳು ಇಲ್ಲಿ ಚಿತ್ರೀಕರಣಗೊಂಡಿವೆ. ಅಚ್ಚುಕಟ್ಟಾದ ವ್ಯವಸ್ಥೆ, ಸುರಕ್ಷತೆ ಮತ್ತು ಸ್ವಚ್ಛತೆಯ ಕಾರಣಗಳಿಂದ ಪ್ರತಿ ವರ್ಷ ಈ ದ್ವೀಪ 30 ಲಕ್ಷ ಪ್ರವಾಸಿಗರನ್ನು ಸೆಳೆಯುತ್ತಿದೆ.

ದ್ವೀಪದ ವಿಶಿಷ್ಟ ಜೀವವೈವಿಧ್ಯ, ಪರಿಸರ ಸಂರಕ್ಷಣೆಗೆ ಸಾಕಷ್ಟು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಕೊಲ್ಲಿಯ ಉಬ್ಬರವಿಳಿತದ ಹರಿವು ನಿಯಂತ್ರಿಸಲು, ಹೂಳು ತುಂಬುವಿಕೆಯನ್ನು ತಡೆಗಟ್ಟಲು ಹೈಡ್ರಾಲಿಕ್ ಅಣೆಕಟ್ಟು ಹಾಗೂ ದ್ವೀಪ ಪ್ರವೇಶಿಸಲು ಎತ್ತರದ ಪಾದಚಾರಿ ಸೇತುವೆ ನಿರ್ಮಾಣವಾಗಿದ್ದರಿಂದ ವೀಕ್ಷಣೆ ಸುಲಭವಾಗಿದೆ. ಪಾಶ್ಚಿಮಾತ್ಯ ಪ್ರಪಂಚದ ಅದ್ಭುತ ಎಂದು ಕರೆಯಲಾದ ಈ ವಿಶ್ವ ಪಾರಂಪರಿಕ ತಾಣ, ಭೂ ವೈಜ್ಞಾನಿಕ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಸೊಗಸಾದ ವಾಸ್ತುಶಿಲ್ಪ ಮತ್ತು ಪ್ರಾಚೀನತೆಯಿಂದ ಈ ದ್ವೀಪ ನಮ್ಮನ್ನು ಶತಮಾನಗಳಷ್ಟು ಹಿಂದಕ್ಕೆ ಕರೆದೊಯ್ದ ಅನುಭವದಿಂದ ವಿಸ್ಮಿತರನ್ನಾಗಿಸುತ್ತದೆ. ಫ್ರಾನ್ಸ್ ಪರಂಪರೆಯ ವಾಸ್ತುಶಿಲ್ಪ, ನೈಸರ್ಗಿಕ ಸೌಂದರ್ಯ ಹಾಗೂ ಇತಿಹಾಸ ಸಂಯೋಜನೆ–ಈ ಮಾಂತ್ರಿಕ ಸೌಂದರ್ಯದ ದ್ವೀಪಕ್ಕೆ ಒಮ್ಮೆ ಭೇಟಿ ನೀಡಬೇಕು. ❖

ADVERTORIAL

ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ನಿಮ್ಮ ಉತ್ತರಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ ನಲ್ಲಿ ಸಲ್ಲಿಸಲು ಬರುವ ಮಂಗಳವಾರದೊಳಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ಉಚಿತ **"ವೀಣಾ ವರ್ಲ್ಡ್ ಟೂರ್ ಇಂದೋರ್ ಉಜ್ಜಯಿನಿ ಮಂಡು"** (ಟೂರ್ ಕೋಡ್ STUM) ಅವಕಾಶ ನಿಮ್ಮದಾಗಿಸಿಕೊಳ್ಳಿ. ಅದೃಷ್ಟಶಾಲಿ ವಿಜೇತರ ಹೆಸರನ್ನು 18 ಆಗಸ್ಟ್ 2024ರಂದು ಪ್ರಕಟಗೊಳ್ಳುವ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು.

1. ಬಾಹ್ಯಾಕಾಶದಲ್ಲಿ ತಿನ್ನಲಾದ ಮೊದಲ ಘನ ಆಹಾರ ಯಾವುದು?
2. ಸೌದಿ ಅರೇಬಿಯಾವನ್ನು ಆಫ್ರಿಕಾದಿಂದ ಬೇರ್ಪಡಿಸುವ ಕೊಲ್ಲಿ ಯಾವುದು?
3. ಮೇರಿ ಕೋಮ್ ಅವರು ಬಾಕ್ಸಿಂಗ್ ಕ್ರೀಡೆಯಲ್ಲಿ ಆಸಕ್ತಿ ಹೊಂದಲು ಪ್ರೇರಣೆಯಾದವರು ಯಾರು?
4. ವಿಶ್ವಸಂಸ್ಥೆಯ ಮಹಾಧಿವೇಶನದ ಅಧ್ಯಕ್ಷತೆ ವಹಿಸಿದ್ದ ಮೊದಲ ಭಾರತೀಯ ಮಹಾಧಿವೇಶನದ?
5. ಜುರಾಸಿಕ್ ಪಾರ್ಕ್‌ನಲ್ಲಿ ಪಾರ್ಕ್‌ನ ಮಾಲೀಕ ಜಾನ್ ಹ್ಯಾಮಂಡ್ ಪಾತ್ರ ಅಭಿನಯಿಸಿದವರು ಯಾರು?
6. ಸುಭಾಷ್ ಚಂದ್ರ ಬೋಸ್‌ರವರು ಯಾವ ದೇಶದೊಂದಿಗೆ ಒಪ್ಪಂದ ಮಾಡಿಕೊಂಡು ಭಾರತದ ಸೈನಿಕರನ್ನು ಆಜಾದ್ ಹಿಂದ್ ಫೌಜ್ ಹೆಸರಿನಲ್ಲಿ ಸಂಘಟಿಸಿದರು?
7. ಯಾವ ಕಲಾ ಪ್ರಕಾರವನ್ನು ಆಲಂಕಾರಿಕ ಕೈಬರಹ ಅಥವಾ ಹ್ಯಾಂಡ್ ರಿಟನ್ ಲೆಟರಿಂಗ್ ಎಂದು ಕರೆಯಲಾಗುತ್ತದೆ?

21ನೇ ಜುಲೈ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆಯ ಅದೃಷ್ಟಶಾಲಿ ವಿಜೇತರು
ವೀಣಾ ವರ್ಲ್ಡ್ **"ಹೈಲೈಟ್ಸ್ ಆಫ್ ರಾಜಸ್ಥಾನ್"** (ಟೂರ್ ಕೋಡ್ RJUP)
ಕರೆ ಮಾಡಿ ಗಂಗರಾಜ್ ದೊಡ್ಡಬಳ್ಳಾಪುರ ವಿವೇಕಾನಂದ ನಗರ, ಬೆಂಗಳೂರು ಗ್ರಾಮೀಣ
ಅಭಿನಂದನೆಗಳು

veenaworld.com
Toll-Free: 1800 22 7979
Email: travel@veenaworld.com

ಏಡ್ರಿಯಾಟಿಕ್ ಮುತ್ತು!

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ನನ್ನ ಮುಂದಿದ್ದ ಜಲರಾಶಿಯನ್ನೇ ನೋಡುತ್ತಾ ಕಡಲದಂಡೆಯ ಅಮೃತಶಿಲೆಯ ಮೆಟ್ಟಿಲುಗಳ ಮೇಲೆ ನಾನು ಕೂರುತ್ತಿದ್ದಂತೆಯೇ ಸಮುದ್ರ ಹಾಡಲು ಶುರು ಮಾಡಿತು! ನಾನು ತಮಾಷೆ ಮಾಡುತ್ತಿಲ್ಲ, ಸಮುದ್ರ ನಿಜವಾಗಿಯೂ ಇಂಪಾಗಿ ಹಾಡಿತು! ಮೇಲೆ ಆಕಾಶದಲ್ಲಿ ಸೂರ್ಯ ಪ್ರಜ್ವಲಿಸುತ್ತಿದ್ದರೆ ಕೆಳಗೆ ಸಮುದ್ರದ ಅಲೆಗಳು ಅಮೃತಶಿಲೆಯ ಮೆಟ್ಟಿಲುಗಳಿಗೆ ಮುತ್ತಿಕ್ಕುತ್ತಿದ್ದವು. ಇದರ ಜೊತೆಗೆ ಅಲ್ಲಿ ಹೊಮ್ಮುತ್ತಿದ್ದ ಹಿತಕರ ಸಂಗೀತಕ್ಕೆ ನನ್ನ ಕಿವಿಗಳು ಮನಸೋತಿದ್ದವು. ಅಂದಂತೆ, ಕ್ರೊಯೇಷಿಯಾಕ್ಕೆ ಅದು ನನ್ನ ಮೊದಲ ಭೇಟಿ. ವಾಹನ ಚಾಲನೆ ಮಾಡುತ್ತಾ ಆ ದೇಶವನ್ನು ಸುತ್ತಾಡಬೇಕು ಎಂದು ನಿರ್ಧಾರ ಮಾಡಿದ್ದ ನಾನು ಜದಾರ್ ನಗರವನ್ನು ತಲುಪಿದ್ದೆ. ಕಾರನ್ನು ಪಾರ್ಕಿಂಗ್ ಮಾಡಿ ಜದಾರ್ ಸೀ ಆರ್ಗನ್ ಗೆ ತೆರಳಿದೆ. ಅದೊಂದು ಅಸಾಧಾರಣ ವಾಸ್ತುಶಿಲ್ಪ ಅದ್ಭುತವೇ ಸೈ. ಅದು ರಮಣೀಯವಾದ ಕ್ರೊಯೇಷಿಯಾದ ಏಡ್ರಿಯಾಟಿಕ್ ಸಮುದ್ರ ದಂಡೆಯಲ್ಲಿರುವ ಅನನ್ಯ ಸಂಗೀತ ವಾದನವೂ ಹೌದು.

ಇದು, ಜದಾರ್‌ನ ರಿವಾ ಪ್ರೊಮೆನೇಡ್‌ನ ಪಶ್ಚಿಮದ ಕೊನೆಯಲ್ಲಿದೆ. ಏಡ್ರಿಯಾಟಿಕ್ ಸಮುದ್ರಕ್ಕೆ ಇಳಿಯುವ ವಿಶಾಲ ಅಮೃತಶಿಲೆಯ ಮೆಟ್ಟಿಲುಗಳು ಸೀ ಆರ್ಗನ್‌ನ ಭಾಗವೇ ಆಗಿವೆ. ಈ ಮೆಟ್ಟಿಲುಗಳ ಅಡಿಭಾಗದಲ್ಲಿ ಕಣ್ಣಿಗೆ ಕಾಣದಂತಿರುವ ಟ್ಯೂಬುಗಳು ಮತ್ತು ಚೇಂಬರ್‌ಗಳ ವ್ಯವಸ್ಥೆ ಕೆಲಸ ಮಾಡುತ್ತದೆ. ಈ ವ್ಯವಸ್ಥೆ ಅಲ್ಲಲ್ಲಿ ಪುಟ್ಟ ರಂಧ್ರಗಳನ್ನು ಹೊಂದಿದ್ದು ಈ ರಂಧ್ರಗಳ ಸರಣಿ ಮೂಲಕ ಮೇಲ್ಮೈಗೆ ಸಂಪರ್ಕಿತಗೊಂಡಿರುತ್ತದೆ. ಅಲೆಗಳು ಕಡಲದಂಡೆಗೆ ಬಂದು ಬಡಿದಾಗ ಸಮುದ್ರದ ನೀರು ಈ ರಂಧ್ರಗಳ ಮೂಲಕ ಚೇಂಬರ್‌ಗಳನ್ನು ತಲುಪಿ ಸ್ವರಬದ್ಧ ನಾದಗಳನ್ನು ಸೃಷ್ಟಿಸುತ್ತದೆ. ಪ್ರಕೃತಿ ಹಾಗೂ ಸೀ ಆರ್ಗನ್‌ನ ಸಾಮರಸ್ಯವು ಅಲ್ಲಿ ಇಡೀ ಕಡಲ ದಂಡೆಯನ್ನು ಮೈಮರೆಸುವ ಗಾನದಿಂದ ಆವರಿಸುತ್ತದೆ. ಮತ್ತೊಂದು ವಿಶೇಷವೆಂದರೆ, ಇಲ್ಲಿ ಹೊರಹೊಮ್ಮುವ ಸಂಗೀತದ ನಾದವು ಸಮುದ್ರದ ಅಲೆಗಳ ತೀವ್ರತೆ ಹಾಗೂ ಲಯಕ್ಕೆ ತಕ್ಕಂತೆ ಕ್ಷಣಕ್ಷಣವೂ ವಿಭಿನ್ನತೆಯಿಂದ ಕೂಡಿರುತ್ತದೆ. ಪ್ರವಾಸಿಗರಿಗೆ ಕ್ರಿಯಾತ್ಮಕವೆನ್ನಿಸಿ ಅವರನ್ನು ಪರವಶಗೊಳಿಸುವಂತಹನ ಶ್ರವಣಾನುಭವ ಉಂಟುಮಾಡಬೇಕೆಂಬ ಧ್ಯೇಯದಿಂದ ವಾಸ್ತುಶಿಲ್ಪಿ ನಿಕೋಲ ಬಾಯ್ ಅವರಿಂದ ವಿನ್ಯಾಸಗೊಂಡ ಅನನ್ಯ ಸಂಗೀತ ವಾದನ ಇದಾಗಿದೆ. ಆ ಮೆಟ್ಟಿಲುಗಳ ಮೇಲೆ ಕುಳಿತು ಸಮುದ್ರದ ಅಲೆಗಳಿಂದ ಸೃಷ್ಟಿಯಾಗುವ ನಾದಕ್ಕೆ ನಾನು ಕಿವಿಯಾದ ಸಂದರ್ಭದಲ್ಲಿ ನಿಕೋಲ ಬಾಯ್ ಅವರಿಗೆ ಮನಸ್ಸಿನಲ್ಲೇ ಧನ್ಯವಾದ ಸಲ್ಲಿಸಿದೆ. ಜೊತೆಗೆ, ಕಲಾತ್ಮಕತೆ, ವಾಸ್ತುಶಿಲ್ಪ ಮತ್ತು ನಿಸರ್ಗವನ್ನು ಸರಿಸಾಟಿ ಇಲ್ಲದಂತೆ ಬೆಸೆದು, ನೋಡುಗರಿಗೆ ಮರೆಯಲಾಗದ ಇಂದ್ರಿಯಾನುಭವ ಉಂಟುಮಾಡುವ ಅವರ ನಾವೀನ್ಯತೆಯಿಂದ ಕೂಡಿದ ಆವಿಷ್ಕಾರಕ್ಕೆ ಬೆರಗುಗೊಂಡೆ. ಅಲ್ಲದೆ, ಸಂಗೀತದ ಆಕರ್ಷಣೆಗಿಂತ ಮಿಗಿಲಾದ ಅನುಭವವನ್ನು ಕೂಡ ಈ ಸೀ ಆರ್ಗನ್ ನೀಡುತ್ತದೆ; ಇದು, ಜದಾರ್ ನಗರವು ಸಮುದ್ರದೊಂದಿಗೆ ಹಾಗೂ ಕಡಲ ಪರಂಪರೆಯೊಂದಿಗೆ ಹೊಂದಿರುವ ಆಳವಾದ ಸಂಬಂಧವನ್ನೂ ಸಂಕೇತಿಸುತ್ತದೆ. ಇಲ್ಲಿನ ಆಹ್ಲಾದಕರ ನಾದಗಳನ್ನು ಆಲಿಸಲು ಸ್ಥಳೀಯರು ಹಾಗೂ ಪ್ರವಾಸಿಗರು ಸಮುದ್ರ ತೀರದಲ್ಲಿನ ನಡಿಗೆ ಪಥದುದ್ದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜಮಯಿಸುತ್ತಾರೆ. ಏಡ್ರಿಯಾಟಿಕ್ ಕಡಲಂಚಿನ ದಿಗಂತದಲ್ಲಿನ ಸೂರ್ಯಾಸ್ತಮಾನ ಕಣ್ತುಂಬಿಕೊಳ್ಳುತ್ತಾರೆ. ನಿಸರ್ಗದ ಸೌಂದರ್ಯ ಹಾಗೂ ಅದರ ಶಕ್ತಿಗೆ ಮನಸೋಲುತ್ತಾರೆ. ಜದಾರ್‌ಗೆ ಭೇಟಿಕೊಡುವ ಪ್ರವಾಸಿಗರು ದಿನದ ಯಾವುದೇ ಸಮಯದಲ್ಲಿ ಈ ಸೀ ಆರ್ಗನ್ ಹೊಮ್ಮಿಸುವ ನಾದವನ್ನು ಅನುಭವಿಸಬಹುದು. ಆದರೆ, ಸೂರ್ಯ ಮುಳುಗುತ್ತಾ ಪಶ್ಚಿಮದ ಅಂಚಿನಲ್ಲಿ ಕಡಲಿಗೆ ಇಳಿಯುವ ಹೊತ್ತಿನಲ್ಲಿ ಅದರ ಮಾಯೆ ಇನ್ನಷ್ಟು ವಿಶೇಷವಾಗಿರುತ್ತದೆ. ಆಕಾಶವು ಕಿತ್ತಳೆ ಹಾಗೂ ನಸುಗೆಂಪು ರಂಗುಗಳನ್ನು ಬಳಿದಂತೆ ಕಾಣುವ ಸಂದರ್ಭದಲ್ಲಿ ಸಮುದ್ರದಿಂದ ಹೊಮ್ಮುವ ನಾದವು ಪ್ರಕೃತಿಯ ವರ್ಣವೈಭವಕ್ಕೆ ಸರಿಸಾಟಿಯಾದ ಹಿಮ್ಮೇಳದಂತಿರುತ್ತದೆ!

ನನ್ನ ಕೆಲಸದ ಭಾಗವಾಗಿ ನಾನು ಆಗಾಗ ಪ್ರವಾಸ ಮಾಡುತ್ತಲೇ ಇರುತ್ತೇನೆ. ಹೀಗೆ ಬೇರೆಡೆಗಳಿಗೆ ಹೋದಾಗಲೆಲ್ಲಾ ಹೊಸ ಜಾಗಗಳಿಗಾಗಿ, ವಿಶಿಷ್ಟತಾಣಗಳಿಗಾಗಿ ಹಾಗೂ ಸದಾ ನೆನಪಿನಲ್ಲಿರುವಂತಹ ಅನುಭವಗಳಿಗಾಗಿ ಹುಡುಕಾಡುತ್ತಿರುತ್ತೇನೆ. ಇಂತಹ ಶೋಧನೆಗಳು "ವೀಣಾ ವರ್ಲ್ಡ್" ಒದಗಿಸುವ ಪ್ರವಾಸ ವ್ಯವಸ್ಥೆಗಳು ಮತ್ತು ರಜೆ ದಿನಗಳ ಭಾಗವಾಗಿರುತ್ತವೆ ಎಂದು ಇಲ್ಲಿ ಹೇಳಬಯಸುತ್ತೇನೆ. ಇವು ಪ್ರವಾಸದ ಸಮೃದ್ಧ ಅನುಭವಗಳನ್ನು "ವೀಣಾ ವರ್ಲ್ಡ್"ನ ಎಲ್ಲಾ ಅತಿಥಿಗಳು ತಮ್ಮದಾಗಿಸಿಕೊಳ್ಳುವುದನ್ನು ಖಾತರಿಗೊಳಿಸುತ್ತವೆ. ಕ್ರೊಯೇಷಿಯಾಕ್ಕೆ ನಾನು ಇತ್ತೀಚೆಗೆ ನೀಡಿದ್ದ ಭೇಟಿ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಇತಿಹಾಸ, ಪ್ರಕೃತಿ ಸೌಂದರ್ಯ ಹಾಗೂ ಅನಿರೀಕ್ಷಿತ ಮುದಗಳಿಂದ ಕೂಡಿದ ಪ್ರವಾಸ ಇದಾಗಿತ್ತು.

ನಾನು ನನ್ನ ಪ್ರವಾಸದ ಸಾಕಷ್ಟು ಸಮಯವನ್ನು ಜದಾರ್‌ನಲ್ಲಿ ಅಲ್ಲಿನ ವಾಸ್ತುಶಿಲ್ಪ ಮತ್ತು ಪ್ರಾಚೀನ ಅವಶೇಷಗಳನ್ನು ವಿಸ್ಮಯದೊಂದಿಗೆ ವೀಕ್ಷಿಸುತ್ತಾ ಕಳೆದೆ. ಜಡೇರಾ ಎಂಬ ಪುರಾತನ ರೋಮನ್ ವಸಾಹತುವು, ಆಧುನಿಕ ಕಾಲದಲ್ಲಿ ಜದಾರ್ ಎಂದು ಹೆಸರಾಗಿ ಏಡ್ರಿಯಾಟಿಕ್ ಸಾಗರ ಪ್ರದೇಶದ ಪ್ರಮುಖ ವಹಿವಾಟು ನೆಲೆಯಾಗಿ ಪ್ರವರ್ಧಮಾನಕ್ಕೆ ಬಂದಿದೆ. ಈ ನಗರದ ರೋಮನ್ ಕುರುಹುಗಳನ್ನು ಅಲ್ಲಿ ಜತನದಿಂದ ಸಂರಕ್ಷಿಸಲಾಗಿರುವ ಫೋರಂ ಹಾಗೂ ಭವ್ಯ ಗೋಡೆಗಳಲ್ಲಿ ಕಾಣಬಹುದಾಗಿದೆ. ತದನಂತರ, ಜದಾರ್ 15ನೇ ಶತಮಾನದಲ್ಲಿ ವೆನೀಷಿಯನ್ ಆಳ್ವಿಕೆಗೆ ಒಳಪಟ್ಟು ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪರಂಪರೆಗೆ ತನ್ನ ಕೊಡುಗೆ ಮುಂದುವರಿಸಿತು. ಜದಾರ್‌ನಿಂದ ಮುಂದೆ ನಾನು ಪ್ಲಿಟ್‌ವಿಸ್ ಲೇಕ್ಸ್ ನ್ಯಾಷನಲ್ ಪಾರ್ಕ್‌ಗೆ ಪಯಣ ಬೆಳೆಸಿದೆ. ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳಲ್ಲಿ ಒಂದಾದ ಇದು ಸರಣಿ ಜಲಪಾತಗಳು ಹಾಗೂ ಪಚ್ಚೆ ಹಸಿರಿನ ಸರೋವರಗಳಿಗೆ ಹೆಸರಾದ ಸ್ಥಳವಾಗಿದೆ.

ಪ್ಲಿಟ್‌ವಿಸ್ ನ್ಯಾಷನಲ್ ಪಾರ್ಕ್‌ನ ಸೊಬಗಿನ ಬಗ್ಗೆ ನಾನು ಮುಂಚೆಯೇ ಕೇಳಿ ತಿಳಿದಿದ್ದೆ ಎಂಬುದೇನೊ ಸರಿಯೇ. ಆದರೆ, ಅದನ್ನು ಕಣ್ಣಾರೆ ನೋಡಿದಾಗ ಆದ ಆನಂದವನ್ನು ಮಾತುಗಳಲ್ಲಿ ಹೇಳುವುದು ಕಷ್ಟಸಾಧ್ಯ! ಒಂದರ ಮೇಲೊಂದರಂತೆ ಸ್ತರೋಪಾದಿಯಲ್ಲಿ 16 ಸರೋವರಗಳು, ಇವುಗಳನ್ನು ಪರಸ್ಪರ ಜೋಡಿಸುವ ಜಲಪಾತಗಳು, ಸುಣ್ಣದ ಕಲ್ಲಿನ ಆಳಕಣಿವೆಗಳಿಂದ ಕೂಡಿದ 295 ಚದರ ಕಿಲೋಮೀಟರ್‌ನಲ್ಲಿ ಹರಡಿಕೊಂಡಿರುವ ಮೀಸಲು ಅರಣ್ಯ, ಇವುಗಳನ್ನು ಒಮ್ಮೆ ಕಣ್ಮುಂದೆ ತಂದುಕೊಂಡರೆ ನಂದನದ ತುಣುಕಿನಂತಹ ಪ್ಲಿಟ್‌ವಿಸ್ ನ್ಯಾಷನಲ್ ಪಾರ್ಕ್‌ನ ಸೌಂದರ್ಯಾತಿಶಯ ನಿಮಗೆ ಒಂದಿಷ್ಟು ನಿಲುಕಬಹುದೇನೋ!

ಈ ಉದ್ಯಾನದಲ್ಲಿ ಮರದ ಹಲಗೆ ಹಾಸುಗಳ ಮೇಲೆ ಉದ್ದಕ್ಕೂ ನಡೆಯುತ್ತಾ ಹೋದಂತೆ ಸ್ವರ್ಗದಂತಿರುವ ಅಲ್ಲಿನ ಪ್ರಕೃತಿಯ ಅಪ್ಪಟ ಸೊಬಗಿಗೆ ನಾನು ಬೆರಗಾಗಿ ಹೋದೆ. ಅಲ್ಲಿನ ಒಂದೊಂದು ದಿಕ್ಕಿನ ಸೌಂದರ್ಯವೂ ಹಿಂದಿನ ಕ್ಷಣದ ಮನಸೂರೆಗೊಳ್ಳುವ ನೋಟದ ರಮ್ಯತೆಯನ್ನು ಮೀರಿಸುವಂತಿದೆ. ಇಲ್ಲಿನ ವಾಕ್‌ವೇಗಳು ಹಾಗೂ ಕಾಲುದಾರಿಗಳು ನೀರಿನ ಸುತ್ತ ಬಳಸಿ ಸಾಗುತ್ತವೆ. ಮೇಲುಸ್ತರದಲ್ಲಿರುವ 12 ಸರೋವರಗಳು ಮತ್ತು ಕೆಳಸ್ತರದಲ್ಲಿರುವ 4 ಸರೋವರಗಳನ್ನು ಎಲೆಕ್ಟ್ರಿಕ್ ದೋಣಿಯು ಸಂಪರ್ಕಿಸುತ್ತದೆ. ಕೆಳಸ್ತರದ 4 ಸರೋವರಗಳು 78 ಮೀಟರ್ ಎತ್ತರದಿಂದ ಧುಮ್ಮಿಕ್ಕಿ ವೆಲಿಕಿ ಸ್ಲ್ಯಾಪ್ ಎಂಬ ಜಲಪಾತ ರೂಪಿಸುತ್ತವೆ. ಇಲ್ಲಿಗೆ ಬಂದ ಮೇಲೆ, ಈ ಜಾಗಕ್ಕೆ ಇನ್ನೂ ಮುಂಚೆಯೇ ಬಂದು ಇನ್ನಷ್ಟು ಸಮಯ ಕಳೆಯಬೇಕಿತ್ತು ಎಂಬ ವಿಷಾದ ನನ್ನನ್ನು ಮುತ್ತಿಕೊಂಡಿದ್ದು ಸುಳ್ಳಲ್ಲ. ಆದರೆ, ಏನು ಮಾಡುವುದು, ಒಂದೇ ಬದುಕಿನಲ್ಲಿ ಎಲ್ಲವೂ ಸಿಗಲು ಸಾಧ್ಯವೇ?

ಏನನ್ನಾದರೂ ಹೊಸತನ್ನು ಹಾಗೂ ತನ್ನದೇ ಹೆಗ್ಗುರುತಿನಿಂದ ಕೂಡಿರುವ ವಿಶಿಷ್ಟವಾದುದನ್ನು ಅನ್ವೇಷಿಸಬೇಕು ಎಂಬ ತುಡಿತದಿಂದ ನಾನು ಕ್ರೊಯೇಷಿಯಾಗೆ ಭೇಟಿ ನೀಡಲು ನಿರ್ಧರಿಸಿದ್ದೆ. ನಾನು ಅಲ್ಲಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಕ್ರೊಯೇಷಿಯಾ ದೇಶವು ಭಾರತದ ಪ್ರವಾಸಿಗರಲ್ಲಿ ಅಷ್ಟೇನೂ ಜನಪ್ರಿಯವಾಗಿರಲಿಲ್ಲ. ಅಲ್ಲಿನ ಸೊಬಗಿನಿಂದ ಆಕರ್ಷಿತನಾದ ನಾನು ಬಹಳ ಸಮಯದ ನಂತರ ನನ್ನ ಸುತ್ತಾಟದ ಹಂಬಲವನ್ನು ನಿಜವಾಗಿಯೂ ಸಂತೃಪ್ತಗೊಳಿಸುವಂತಹ ದೇಶವೊಂದನ್ನು ಕಂಡುಕೊಂಡಿದ್ದೆ. ಆ ದೇಶದ ರಾಜಧಾನಿ ಡುಬ್ರೋವ್‌ನಿಕ್ ನಗರದಲ್ಲಿ ಬಾಡಿಗೆ ಕಾರು ಪಡೆದು ಸುತ್ತಾಟ ಶುರು ಮಾಡಿದಾಗ ಅಲ್ಲಿಯ ಎಡಬದಿಯ ಡ್ರೈವಿಂಗ್ ನಿಯಮ ನನಗೆ ಸ್ವಲ್ಪ ಆತಂಕ ಉಂಟು ಮಾಡಿತ್ತು. ಆದರೆ, ನಾನು ಅದಕ್ಕೆ ಬೇಗನೆ ಹೊಂದಿಕೊಂಡು ಅಲ್ಲಿನ ರಸ್ತೆಗಳಲ್ಲಿ ಸರಾಗವಾಗಿ ಚಾಲನೆ ಮಾಡತೊಡಗಿದೆ. ಈ ಮಧ್ಯೆ ಅಚಾನಕ್ಕಾಗಿ ಕೆಲವು ಸಾಹಸದ ಅನುಭವಗಳೂ ನನಗಾದವು. ಒಂದು ಸಲ ನಾನು ಗೂಗಲ್ ಮ್ಯಾಪ್ ಅನುಸರಿಸುತ್ತಾ ಡ್ರೈವಿಂಗ್ ಮಾಡಿಕೊಂಡು ರಸ್ತೆಯೊಂದರ ಕೊನೆ ತಲುಪಿದೆ. ಆದರೆ ಮುಂದೆ ನೋಡಿದರೆ ರಸ್ತೆ ಅಲ್ಲಿಗೇ ಮುಕ್ತಾಯ! ಅಲ್ಲಿಂದ ಮುಂದಕ್ಕೆ ಫೆರಿಯಲ್ಲಿ ಹೋಗಬೇಕು. ನನ್ನ ಕಾರಿನ ಸಮೇತ ಫೆರಿಯೊಳಕ್ಕೆ ಧಾವಿಸಿ ಅದರಲ್ಲಿ ಪಯಣಿಸಿ ನಿಗದಿತ ಸ್ಥಳ ತಲುಪಿದೆ. ಕ್ರೊಯೇಷಿಯಾ ಜನಜೀವನದ ಮಟ್ಟಿಗೆ ಹೇಳುವುದಾದರೆ ಅಲ್ಲಿನ ಅಪಾರ ಜಲರಾಶಿಯು ವಹಿಸುವ ಪಾತ್ರ ಪ್ರಧಾನವಾದುದು. ಸ್ಫಟಿಕದಂತಹ ಅಲ್ಲಿನ ನೀರಿನ ಪರಿಶುದ್ಧತೆಯು ಕ್ರೊಯೇಷಿಯನ್ನರಿಗೆ ತಮಗೆ ಯಾವಾಗ ಬೇಕೋ ಆಗ ಬೇಕೆನಿಸಿದ ಜಾಗದಲ್ಲಿ ಈಜಾಡುವ ಅವಕಾಶ ಕಲ್ಪಿಸುತ್ತದೆ. ನಾವು ಕೂಡ ನಮ್ಮ ಕಾರನ್ನು ನಿಲ್ಲಿಸಿ ಸಾರ್ವಜನಿಕ ಕಡಲ ತೀರದಲ್ಲಿ ಇಳಿದು ಸಮುದ್ರದ ಪರಿಶುಭ್ರ ನೀರಿನಲ್ಲಿ ಸ್ವಚ್ಛಂದವಾಗಿ ಈಜಾಡಿ ಖುಷಿಪಟ್ಟೆವು.

ಕ್ರೊಯೇಷಿಯಾ ರಾಜಧಾನಿ ನಗರವಾದ ಡುಬ್ರೋವ್‌ನಿಕ್ "ಪರ್ಲ್ ಆಫ್ ದಿ ಏಡಿಯಾಟ್ರಿಕ್"(ಏಡ್ರಿಯಾಟಿಕ್ ಮುತ್ತು) ಎಂದೂ ಕರೆಯಲಾಗುತ್ತದೆ. ಮಧ್ಯಕಾಲೀನ ಯುಗದ ಗೋಡೆಗಳಿಂದ ಸುತ್ತುವರಿದಿರುವ ಹಾಗೂ ಏಡ್ರಿಯಾಟಿಕ್ ಸಾಗರದ ಹೊಳೆಯುವ ನೀರಿಗೆ ಮುಖಮಾಡಿ ನಿಂತಿರುವ ಡುಬ್ರೋವ್‌ನಿಕ್ ಚಿರಂತನ ಸೊಬಗನ್ನು ಹೊರಸೂಸುವ ನಗರವಾಗಿದೆ. ಅಲ್ಲಿನ ಓಲ್ಡ್ ಟೌನ್ ನಲ್ಲಿನ ಚಕ್ರವ್ಯೂಹ ನೆನಪಿಸುವ ಬಳಸು ರಸ್ತೆಗಳಲ್ಲಿ ನಾನು ಅಡ್ಡಾಡಿದಾಗ ರಾಜರು ಮತ್ತು ವರ್ತಕರ ಹಿಂದಿನ ಯುಗಮಾನಕ್ಕೆ ಸಂಚರಿಸಿದ ಅನುಭವವಾಯಿತು. ಫೋರ್ಟ್ ಲೊವ್ರಿಜೆನಿಕ್‌ನ ಭಭ್ಯ ಗೋಡೆಗಳಿಂದ ಹಿಡಿದು ಸೇಂಟ್ ಬ್ಲೆಸೆಯ ಚರ್ಚಿನ ಬರೋಕ್ ವೈಭವದವರೆಗೆ ಡುಬ್ರೋವ್‌ನಿಕ್‌ನ ಪ್ರತಿಯೊಂದು ಮೂಲೆಯೂ ತನ್ನ ಹಿಂದಿನ ಕಥಾರಹಸ್ಯಗಳನ್ನು ಪಿಸುಗುಟ್ಟಿದ್ದಂತೆ ಭಾಸವಾಗುತ್ತಿತ್ತು. ನಾನು ಡುಬ್ರೋವ್‌ನಿಕ್‌ನಲ್ಲಿ ಚಿತ್ರೀಕರಣಗೊಂಡ ಎಚ್‌ಬಿಒ ಸರಣಿಯ "ಗೇಮ್ ಆಫ್ ಥ್ರೋನ್ಸ್" 'ರಣಿ ನೋಡುವುದನ್ನು ಆರಂಭಿಸುವುದಕ್ಕೆ ಬಹಳ ಮುಂಚೆಯೇ ಆ ನಗರಕ್ಕೆ ಭೇಟಿ ಕೊಟ್ಟಿದ್ದೆ. ಡುಬ್ರೋವ್‌ನಿಕ್ ಅನ್ನು ಟಿ.ವಿ.ಯಲ್ಲಿ ಬಿಂಬಿಸಿದಂತೆ ಕೇವಲ ರಾಜರ ನೆಲೆವೀಡು ಎಂಬುದಕ್ಕೆ ಹೊರತಾಗಿ ಅಲ್ಲಿನ ನೈಜ ಚಹರೆಗಳೊಂದಿಗೆ ನೋಡಿದ್ದಕ್ಕೆ ನನಗೆ ಸಂತೋಷವಾಗುತ್ತಿದೆ. ಕೆಲವೊಮ್ಮೆ ಯಾವುದೇ ಸ್ಥಳವೊಂದನ್ನು ಪರದೆಯ ಮೇಲೆ ಬಿಂಬಿತವಾಗುವುದಕ್ಕಿಂತ ವಿಭಿನ್ನ ರೀತಿಯಲ್ಲಿ ಅನುಭವಿಸುವುದು ಉತ್ತಮ ಎಂಬುದನ್ನು ನೀವು ಸಹ ಒಪ್ಪುತ್ತೀರಾ ಅಲ್ಲವೇ?

ಕ್ರೊಯೇಷಿಯಾದಲ್ಲಿ ಯಾನ ಮುಂದುವರಿಸಿದ ನಾನು ಐತಿಹಾಸಿಕ ನಗರ ಸ್ಪ್ಲಿಟ್‌ಗೆ ತೆರಳಿದೆ. ಇದು ಪ್ರಾಚೀನ ಅವಶೇಷಗಳು ಆಧುನಿಕ ಬದುಕಿನೊಂದಿಗೆ ಮೇಳೈಸಿಕೊಂಡಿರುವ ನಗರ. ರೋಮನ್ ಚಕ್ರವರ್ತಿಯಿಂದ 4ನೇ ಶತಮಾನದಲ್ಲಿ ನಿರ್ಮಿತವಾದ ಡಿಯೋಕ್ಲೆಷಿಯನ್ ಅರಮನೆಯ ಮೊಗಸಾಲೆಗಳಲ್ಲಿ ಅಡ್ಡಾಡುವಾಗ ಹಿಂದಿನ ಶತಮಾನಗಳ ಶಬ್ದ ತರಂಗಗಳು ಪ್ರತಿಧ್ವನಿಸಿದಂತಾದವು. ಹತ್ತಿರದಲ್ಲೇ ಇರುವ ಆಕರ್ಷಕ ಹ್ವಾರ್ ದ್ವೀಪದ ಪಸೆಯಿಂದ ಕೂಡಿದ ಕಡಲ ದಂಡೆಗಳು ಮತ್ತು ರಮಣೀಯ ದ್ರಾಕ್ಷಿ ತೋಟಗಳು ಕ್ರೊಯೇಷಿಯಾದ ಸಮೃದ್ಧ ಕಡಲನಂಟಿನ ಪರಂಪರೆಗೆ ಕಿಟಕಿಗಳಂತೆ ಗೋಚರಿಸಿದವು.

ಕ್ರೊಯೇಷಿಯಾದಲ್ಲಿನ ಪ್ರಯಾಣದುದ್ದಕ್ಕೂ ನೆರೆಯ ನಾಗರಿಕತೆಗಳ ಪ್ರಭಾವದಿಂದ ರೂಪುಗೊಂಡ ಅಲ್ಲಿನ ಸಮೃದ್ಧ ಚರಿತ್ರೆ ಹಾಗೂ ಸಾಂಸ್ಕೃತಿಕ ಪರಂಪರೆಯಿಂದ ನಾನು ವಿಸ್ಮಿತನಾದೆ. ಜದಾರ್‌ನಲ್ಲಿನ ವೆನೇಷಿಯನ್ ವಾಸ್ತುಶಿಲ್ಪದಿಂದ ಹಿಡಿದು ಸ್ಪ್ಲಿಟ್‌ನಲ್ಲಿ ಕಂಡುಬರುವ ದಂತಕತೆಯೆಂದೇ ಹೆಸರಾಗಿರುವ ವರ್ತಕ ಅನ್ವೇಷಕ ಮಾರ್ಕೋ ಪೋಲೋ ಪರಂಪರೆಯವರೆಗೆ ಕ್ರೊಯೇಷಿಯಾದ ಇತಿಹಾಸವು ವರ್ತಮಾನದೊಂದಿಗೆ ಹೆಣೆದುಕೊಂಡಿರುವ ಪರಿ ಅನನ್ಯ. ಕ್ರೊಯೇಷಿಯಾದ ಅತ್ಯಂತ ಹಳೆಯ ಐಸ್ ಕ್ರೀಮ್ ಪಾರ್ಲರ್ ಸ್ಲಾಡೊಲೆಡರ್ನ ಡೊನಾಟ್ ದಲ್ಲಿ ಗೆಲಟೊ ಸ್ಕೂಪ್ ಮೆಲ್ಲುವಾಗ ಮಂತ್ರಮುಗ್ಧಗೊಳಿಸುವ ಈ ನಾಡಿನ ಸಮಯಾತೀತ ಸೆಳೆತದ ಗುಂಗಿಗೆ ನನಗರಿವಿಲ್ಲದಂತೆಯೇ ನಾನು ಜಾರಿಬಿಟ್ಟಿದ್ದೆ!

ಇಂತಹ ಮಧುರ ನೆನಪುಗಳನ್ನು ಒಳಗೊಂಡ ಕ್ರೊಯೇಷಿಯಾದ ನನ್ನ ಪ್ರಯಾಣವು ಬರಿಯ ಸುತ್ತಾಟವಾಗಿರಲಿಲ್ಲ; ಅದು ನನ್ನ ಹೃದಯವನ್ನು ಹಲವಾರು ರೀತಿಗಳಲ್ಲಿ ಸಮ್ಮೋಹನಗೊಳಿಸಿದ ಪರಿವರ್ತಕ ಅನುಭವವಾಗಿತ್ತು. ಈ ಮನಮೋಹಕ ದೇಶದಿಂದ ವಾಪಸ್ ಹೊರಟಾಗ ಜದಾರ್‌ನಿಂದ ಸ್ಪ್ಲಿಟ್‌ವಿಸ್, ಅಲ್ಲಿಂದ ಡುಬ್ರೋವ್‌ನಿಕ್ ಹೀಗೆ ಸಾಗಿದ್ದ ನನ್ನ ಯಾನದ ವಿಶಿಷ್ಟ ನೆನಪುಗಳು ಈ ಎದೆಯಾಳದಲ್ಲಿ ಯಾವತ್ತಿಗೂ ರಿಂಗಣಿಸುತ್ತಲೇ ಇರುತ್ತವೆ ಎಂಬುದು ನನಗೆ ಖಾತರಿಯಾಗಿತ್ತು!

ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನಿಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ಚಲೋ, ಬಾಗ್ ಭರೋ, ನಿಕಲ್ ಪಡೋ! ಈ ಬಾರಿ ಯೂರೋಪಿನಲ್ಲಿ ನೀವು ನೋಡಿರದ ಪ್ರದೇಶಗಳನ್ನು ಕಣ್ತುಂಬಿಕೊಳ್ಳಲು... ವೀಣಾ ವರ್ಲ್ಡ್ ನೊಂದಿಗೆ!

ಪೂರ್ವ ಯೂರೋಪ್ ಪೂರ್ತಿ 15 ದಿನಗಳು 300000 - 305000	ಕ್ರೊಯೇಷಿಯಾ ಸ್ಲೋವೇನಿಯಾ ಸ್ಲೊವೇಕಿಯಾ ಹಂಗೆರಿ (11D) 255000 - 260000	ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ 8 ದಿನಗಳು - 200000	ಬೆಸ್ಟ್ ಆಫ್ ಹಂಗೆರಿ 8 ದಿನಗಳು 210000
ಬಾಲ್ಟಿಕ್ ಯೂರೋಪ್- ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8ಡಿ) 215000	ಬಾಲ್ಟಿಕ್ ಯೂರೋಪ್+ ಸ್ಕಾಂಡಿನೇವಿಯಾ 15 ದಿನಗಳು - 415000	ಬಾಲ್ಟಿಕ್ ಯೂರೋಪ್+ ಪೂರ್ವ ಯೂರೋಪ್ 23 ದಿನಗಳು - 450000	ಬಾಲ್ಟಿಕ್ ಯೂರೋಪ್+ ಸ್ಕಾಂಡಿನೇವಿಯಾ+ಪೂರ್ವ ಯೂರೋಪ್(30D) 675000
ಜಾರ್ಜಿಯಾ ಅರ್ಮೇನಿಯಾ ಅಝುರ್ ಬೈಜಾನ್ 10 ದಿನಗಳು - 190000	ಬೆಸ್ಟ್ ಆಫ್ ಜಾರ್ಜಿಯಾ 7 ದಿನಗಳು 150000	ಬೆಸ್ಟ್ ಆಫ್ ಬಾಕು 7 ದಿನಗಳು 125000	ಉಜ್ಬೆಕಿಸ್ತಾನ ಕಝುಕಿಸ್ತಾನ ಕಿರ್ಗಿಸ್ತಾನ - 9 ದಿನಗಳು 177000 - 180000

*T&C Apply

Email: travel@veenaworld.com | veenaworld.com
Veena World Bengaluru: 887 997 2217
Toll-Free: 1800 22 7979
VEENA WORLD
Travel. Explore. Celebrate Life.

ಕ್ವಾರ್ಟರ್‌ಫೈನಲ್ ಹಣಾಹಣಿ ಇಂದು: ಆರು ಗೋಲು ಗಳಿಸಿರುವ ಹರ್ಮನ್‌ಪ್ರೀತ್ ಮೇಲೆ ಕಣ್ಣು

ಉತ್ಸಾಹಿ ಭಾರತ ತಂಡಕ್ಕೆ ಬ್ರಿಟನ್ ಎದುರಾಳಿ

ಪ್ಯಾರಿಸ್ (ಪಿಟಿಐ): ಟೋಕಿಯೊ ಕ್ರೀಡೆಗಳ ಬೆಳ್ಳಿ ವಿಜೇತ ಆಸ್ಟ್ರೇಲಿಯಾದ ಮೇಲೆ ಶುಕ್ರವಾರ ಚಾರಿತ್ರಿಕ ಜಯ ದಾಖಲಿಸಿದ ನಂತರ ಭಾರತ ಹಾಕಿ ತಂಡದ ಆತ್ಮವಿಶ್ವಾಸ ವೃದ್ಧಿಸಿದೆ. ಈ ಉತ್ಸಾಹದ ಇಂಧನ ತುಂಬಿಕೊಂಡು ಭಾರತ ತಂಡ ಭಾನುವಾರ ನಡೆಯುವ ಒಲಿಂಪಿಕ್ಸ್ ಹಾಕಿ ಕ್ವಾರ್ಟರ್ ಫೈನಲ್‌ನಲ್ಲಿ ಪಂದ್ಯದಲ್ಲಿ ಬ್ರಿಟನ್ ತಂಡವನ್ನು ಎದುರಿಸಲಿದೆ.

ಭಾರತ ತನ್ನ ಅತ್ಯುತ್ತಮ ಆಟವನ್ನು ಆಸ್ಟ್ರೇಲಿಯಾ ವಿರುದ್ಧ 'ಬಿ' ಗುಂಪಿನ ಕೊನೆಯ ಪಂದ್ಯಕ್ಕೆ ಬಾಕಿಯಿಟ್ಟಂತೆ ಆಡಿ 3–2 ರಿಂದ ಭಾರತ ಗೆದ್ದಿತು. ಒಲಿಂಪಿಕ್ಸ್‌ನಲ್ಲಿ 52 ವರ್ಷಗಳ ನಂತರ ಆಸ್ಟ್ರೇಲಿಯಾ ವಿರುದ್ಧ ಸಂಪಾದಿಸಿದ ಮೊದಲ ಜಯ ಅದಾಗಿತ್ತು. ಹಾಕಿಯನ್ನು ಆಸ್ಟ್ರೋಟರ್ಫ್‌ನಲ್ಲಿ ಆಡುವುದಕ್ಕಿಂತ ಮುಂಚಿನ ಕಾಲದಲ್ಲಿ ಆ ಗೆಲುವು ಒಲಿದಿತ್ತು.

ಆಸ್ಟ್ರೇಲಿಯಾ ವಿರುದ್ಧ ಗೋಲಿನ ಸಂಭ್ರಮ ಆಚರಿಸಿದ ಭಾರತ ತಂಡದ ಆಟಗಾರರು. –ಪಿಟಿಐ ಚಿತ್ರ

ಭಾರತ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. ಹಾಲಿ ಚಾಂಪಿಯನ್ ಬೆಲ್ಜಿಯಂ ಮೊದಲನೇ ಸ್ಥಾನ ಗಳಿಸಿತು. ಭಾರತ ಎದುರಾಳಿಯಾಗಿರುವ ಬ್ರಿಟನ್ 'ಎ' ಗುಂಪಿನಲ್ಲಿ ಮೂರನೇ ಸ್ಥಾನ ಪಡೆದಿದೆ.

ಆಸ್ಟ್ರೇಲಿಯಾ ವಿರುದ್ಧ ಭಾರತ ಆಕ್ರಮಣಕಾರಿಯಾಗಿ ಆಡಿತ್ತು. ಪಂದ್ಯದಲ್ಲಿ ಎದ್ದುಕಂಡ ಅಂಶವೆಂದರೆ ಮನ್‌ಪ್ರೀತ್ ಸಿಂಗ್ ಮತ್ತು ಉಪನಾಯಕ ಹಾರ್ದಿಕ್ ಸಿಂಗ್ ನೇತೃತ್ವದ ಮಿಡ್‌ಫೀಲ್ಡ್ ಮತ್ತು ಫಾರ್ವರ್ಡ್ ಲೈನ್‌ನ ಹೊಂದಾಣಿಕೆ. ಫಾರ್ವರ್ಡ್ ವಿಭಾಗದಲ್ಲಿ ಗುರ್ಜಂತ್ ಸಿಂಗ್ ಮತ್ತು ಸುಖಜೀತ್ ಆಟ ಎದ್ದುಕಂಡಿತು.

ಈ ಎರಡು ವಿಭಾಗದ ಸಮನ್ವಯದಿಂದ ಭಾನುವಾರದ ಪಂದ್ಯದಲ್ಲಿ ವಿಶ್ವದ ನಂಬರ್ ಎರಡನೇ ತಂಡವನ್ನು ಹಿಮ್ಮೆಟ್ಟಿಸಲು ಭಾರತ ತಂಡ ಗಮನಹರಿಸಲಿದೆ.

ಅಭಿಷೇಕ್ ಮುಂಚೂಣಿ ಪಡೆಯಲ್ಲಿ ಚುರುಕಾಗಿದ್ದಾರೆ. ಈ ಕ್ರೀಡೆಗಳಲ್ಲಿ ಅವರು ಆಸ್ಟ್ರೇಲಿಯಾ ವಿರುದ್ಧ ಸೇರಿ ಎರಡು ಗೋಲುಗಳನ್ನು ಗಳಿಸಿದ್ದಾರೆ. ನಾಯಕ ಹರ್ಮನ್‌ಪ್ರೀತ್ ಈ ಕ್ರೀಡೆಗಳಲ್ಲಿ ಸ್ಥಿರ ಪ್ರದರ್ಶನ ನೀಡಿದ್ದಾರೆ. ಶುಕ್ರವಾರ ಗಳಿಸಿದ ಎರಡು ಗೋಲು ಸೇರಿದಂತೆ ಆರು ಗೋಲು ಗಳಿಸಿದ್ದಾರೆ.

ರಕ್ಷಣೆಯಲ್ಲಿ ಅಮಿತ್ ರೋಹಿದಾಸ್ ಮತ್ತು ಜರ್ಮನ್‌ಪ್ರೀತ್ ಹೆಗಲಾಗಿದ್ದಾರೆ. ಕೊನೆಯ ಸಲ ಅಂತರರಾಷ್ಟ್ರೀಯ ಸ್ಪರ್ಧಾಕಣದಲ್ಲಿರುವ ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಎದುರಾಳಿಗಳ ಹಲವು ಗೋಲು ಯತ್ನಗಳನ್ನು ಭಗ್ನಗೊಳಿಸಿದ್ದಾರೆ. ಈ ಪಂದ್ಯವೂ ಅವರಿಗೆ ಸತ್ವಪರೀಕ್ಷೆ.

ಇತರ ಕ್ವಾರ್ಟರ್‌ಫೈನಲ್ಸ್
- ಬೆಲ್ಜಿಯಂ–ಸ್ಪೇನ್
- ಆಸ್ಟ್ರೇಲಿಯಾ–ನೆದರ್ಲೆಂಡ್ಸ್
- ಜರ್ಮನಿ–ಅರ್ಜೆಂಟೀನಾ

ಬಾಕ್ಸಿಂಗ್: ನಿಶಾಂತ್ ದೇವ್‌ಗೆ ನಿರಾಶೆ

ಪ್ಯಾರಿಸ್ (ಪಿಟಿಐ): ಭಾರತದ ನಿಶಾಂತ್ ದೇವ್ ಶನಿವಾರ ನಡೆದ 71 ಕೆ.ಜಿ ವಿಭಾಗದ ಪುರುಷರ ಬಾಕ್ಸಿಂಗ್ ಕ್ವಾರ್ಟರ್‌ಫೈನಲ್‌ನಲ್ಲಿ ಸೋತರು. ಇದರಿಂದಾಗಿ ಭಾರತಕ್ಕೆ ಮತ್ತೊಂದು ಪದಕ ಕೈತಪ್ಪಿತು.

23 ವರ್ಷದ ನಿಶಾಂತ್ ಅವರು 1–4ರಿಂದ ಮೆಕ್ಸಿಕೊದ ಮಾರ್ಕೊ ವೆರ್ಡೆ ವಿರುದ್ಧ ಸೋತರು. ಈ ಒಲಿಂಪಿಕ್ಸ್‌ನಲ್ಲಿ ಸೋತು ನಿರ್ಗಮಿಸಿದ ಐದನೇ ಬಾಕ್ಸರ್ ನಿಶಾಂತ್. ಮೆಕ್ಸಿಕೊದ ಬಾಕ್ಸರ್ ಅವರ ಪಂಚ್‌ಗಳು ನಿಖರವಾಗಿದ್ದವು. ಇದರಿಂದಾಗಿ ಆರಂಭದಿಂದಲೂ ಅವರು ಮೇಲುಗೈ ಸಾಧಿಸಿದರು.

ನಿಶಾಂತ್ ಅವರು ಎಂಟರ ಘಟ್ಟದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದ್ದರೆ ಭಾರತಕ್ಕೆ ಪದಕ ಲಭಿಸುತ್ತಿತ್ತು. ಇದೀಗ ಬಾಕ್ಸಿಂಗ್ ಅಂಕಣದಲ್ಲಿ ಮಹಿಳೆಯರ ವಿಭಾಗದಲ್ಲಿ ಲವ್ಲಿನಾ ಬೊರ್ಗೊಹೈನ್ ಕ್ವಾರ್ಟರ್‌ಫೈನಲ್ ಆಡಲಿದ್ದಾರೆ.

ಭಾರತದ ನಿಶಾಂತ್ ದೇವ್ (ಕೆಂಪು) ಅವರು ಮೆಕ್ಸಿಕೊದ ಮಾರ್ಕೊ ಅಲೊನ್ಸೊ ವೆರ್ಡೆ ಅವರಿಗೆ ಪಂಚ್ ನೀಡಿದ ಕ್ಷಣ –ಪಿಟಿಐ ಚಿತ್ರ

ಶ್ರೀಲಂಕಾ ತಂಡದ ವಿರುದ್ಧ ಎರಡನೇ ಏಕದಿನ ಪಂದ್ಯ ಇಂದು

ಭಾರತಕ್ಕೆ ಪಿಚ್, ಸ್ಪಿನ್ ಬೌಲರ್‌ಗಳ ಸವಾಲು

ಭಾರತದ ತಂಡದ ಕುಲದೀಪ್ ಯಾದವ್ –ಎಎಫ್‌ಪಿ ಚಿತ್ರ

ಕೊಲಂಬೊ (ಪಿಟಿಐ): ಭಾರತ ತಂಡ ಭಾನುವಾರ ಇಲ್ಲಿ ಶ್ರೀಲಂಕಾ ವಿರುದ್ಧ ಎರಡನೇ ಏಕದಿನ ಪಂದ್ಯವನ್ನು ಆಡಲಿದ್ದು, ಮಂದಗತಿಯ ಪಿಚ್ ಮತ್ತು ಅದರಲ್ಲಿ ಆತಿಥೇಯ ತಂಡದ ನಿಧಾನಗತಿಯ ಬೌಲರ್‌ಗಳನ್ನು ನಿಭಾಯಿಸಲು ತಂತ್ರಗಾರಿಕೆ ರೂಪಿಸುವತ್ತ ಚಿತ್ತಹರಿಸಲಿದೆ.

ಮೊದಲ ಏಕದಿನ ಪಂದ್ಯದಲ್ಲಿ 3 ವಿಕೆಟ್‌ಗೆ 130 ರನ್ ಗಳಿಸಿ ಗೆಲುವಿನತ್ತ ದಾಪುಗಾಲು ಹಾಕುವಂತೆ ಕಾಣುತ್ತಿದ್ದ ಭಾರತ ನಂತರ, ಲಂಕಾದ ಸ್ಪಿನ್ನರ್‌ಗಳೆದುರು ಪರದಾಡಿತು. 231 ರನ್‌ಗಳ ಗುರಿ ಎದುರಿಸಿದ್ದ ಪ್ರವಾಸಿ ತಂಡ ಅಂತಿಮವಾಗಿ 230 ರನ್ ಗಳಿಸಿದ್ದರಿಂದ ಪಂದ್ಯ ರೋಚಕ ಟೈ ಆಯಿತು.

ನಾಯಕ ರೋಹಿತ್ ಶರ್ಮಾ ಅವರ ಅಬ್ಬರದ ಆಟ ಅಂತ್ಯಗೊಂಡ ನಂತರ ಲಂಕಾ ತನ್ನ ಯೋಜನೆಗೆ ತಕ್ಕಂತೆ ಭಾರತದ ಬ್ಯಾಟರ್‌ಗಳನ್ನು ಜಾಣ್ಮೆಯಿಂದ ಕಟ್ಟಿಹಾಕಿತು. ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್ ಮತ್ತು ಶ್ರೇಯಸ್ ಅಯ್ಯರ್ ಅಂಥ ಅನುಭವಿ ಬ್ಯಾಟರ್‌ಗಳೇ ನಿಖರವಾಗಿ ಬೌಲ್ ಮಾಡುತ್ತಿದ್ದ ಸ್ಪಿನ್ನರ್‌ಗಳನ್ನು ನಿಭಾಯಿಸಲು ಪರದಾಡಿದರು.

ವೆಲ್ಲಾಳಗೆ ಅವರು ವಿರಾಟ್ ಅವರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲಿಲ್ಲ. ಹಸರಂಗ ಅಂತಿಮವಾಗಿ ಅವರ ವಿಕೆಟ್ ಪಡೆದರು. ಅಯ್ಯರ್ ಅವರೊಬ್ಬರೇ ವೇಗದ ಬೌಲರ್‌ಗೆ (ಅಸಿತ್ ಫರ್ನಾಂಡೊ) ವಿಕೆಟ್ ಒಪ್ಪಿಸಿದ್ದು. ಲಂಕಾದ ನಾಯಕ ಚರಿತ್ ಅಸಲಂಕ ಅವರು ನಾಯಕತ್ವದ ವಿಷಯದಲ್ಲಿ ಪೂರ್ಣ ಅಂಕ ಗಳಿಸಿದರು. ಸ್ಪಿನ್ ಚೆನ್ನಾಗಿ ಆಡುವ ಕೆ.ಎಲ್. ರಾಹುಲ್ ಸಹ ಹಸರಂಗ ಅವರ ಮೋಡಿಗೆ ವಿಕೆಟ್ ನೀಡಬೇಕಾಯಿತು.

ಲಂಕಾ ಕಡೆ ಪಥುಮ್ ನಿಸಾಂಕ ಮತ್ತು ವೆಲ್ಲಾಳಗೆ ಅರ್ಧ ಶತಕಗಳನ್ನು ಬಾರಿಸಿದರು. ಒಂದೆಡೆ ವಿಕೆಟ್‌ಗಳು ಬೀಳುತ್ತಿದ್ದರೂ ವೆಲ್ಲಾಳಗೆ ಅವರು ಕುಲದೀಪ್, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರನ್ನು ಪರಿಣಾಮಕಾರಿಯಾಗಿ ಆಡಿದರು. ಸ್ಕೂಪ್, ರಿವರ್ಸ್ ಸ್ವೀಪ್‌ಗಳನ್ನು ಆಡಲು ಅವರು ಹಿಂಜರಿಯಲಿಲ್ಲ. ಒಂದೆಡೆ ಶುಭಮನ್ ಗಿಲ್ ಸೇರಿ ನಾಲ್ವರು ಸ್ಪಿನ್ನರ್‌ಗಳು 30 ಓವರುಗಳಲ್ಲಿ 126 ರನ್ ತೆತ್ತು 4 ವಿಕೆಟ್ ಪಡೆದರು. ಇನ್ನೊಂದೆಡೆ ಲಂಕನ್ನರು 37.5 ಓವರುಗಳಲ್ಲಿ 167 ರನ್ ನೀಡಿ 9 ವಿಕೆಟ್ ಪಡೆದಿದ್ದು ಗಮನಾರ್ಹ.

'ಇನಿಂಗ್ಸ್‌ನ ಕೆಲವು ಹಂತಗಳಲ್ಲಿ ಮಾತ್ರ ನಮ್ಮ ಬ್ಯಾಟಿಂಗ್ ಉತ್ತಮವಾಗಿತ್ತು. ಆದರೆ ಜೊತೆಯಾಟಗಳು ಬರಬೇಕಾಗಿದ್ದವು' ಎಂದು ಬೌಲಿಂಗ್ ಕೋಚ್ ಸಾಯಿರಾಜ ಬಹುತುಳೆ ಅಭಿಪ್ರಾಯಪಟ್ಟರು.

ಮೊದಲ ಪಂದ್ಯದ 'ಟೈ' ಮಾಡಿಕೊಂಡ ಲಂಕಾ ತಂಡ ಈಗ ಎರಡನೇ ಪಂದ್ಯವನ್ನು ಹೆಚ್ಚು ವಿಶ್ವಾಸದಿಂದ ಆಡಲಿಳಿಯಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್

ಶ್ರೀಲಂಕಾ ನಾಯಕ ಚರಿತ್ ಅಸಲಂಕ – ಎಎಫ್‌ಪಿ ಚಿತ್ರ

ಶೀಘ್ರದಲ್ಲಿ ಹೊಸ ಎನ್‌ಸಿಎ ಉದ್ಘಾಟನೆ: ಜಯ್

ಬೆಂಗಳೂರು: ಅತ್ಯಾಧುನಿಕ ಸೌಲಭ್ಯಗಳು ಇರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯು ಶೀಘ್ರದಲ್ಲಿ ಉದ್ಘಾಟನೆಯಾಗಲಿದೆ.

ನಗರದ ಹೊರವಲಯದಲ್ಲಿರುವ ಜಕ್ಕೂರು ಸಮೀಪ ಎನ್‌ಸಿಎಗಾಗಿ ಹೊಸ ಕಟ್ಟಡ ನಿರ್ಮಾಣ ಮಾಡಲಾಗಿದ್ದು ಮತ್ತಿತರ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕಳೆದ ಹಲವು ವರ್ಷಗಳಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎನ್‌ಸಿಎ ಕಾರ್ಯನಿರ್ವಹಿಸುತ್ತಿದೆ.

'ಶೀಘ್ರದಲ್ಲಿಯೇ ಎನ್‌ಸಿಎ ಉದ್ಘಾಟನೆಯಾಗಲಿದೆ. ತರಬೇತಿ, ಪುನಶ್ಚೇತನ ಮತ್ತು ಕ್ರೀಡಾ ವಿಜ್ಞಾನದ ಸೌಲಭ್ಯಗಳು ಇಲ್ಲಿವೆ. ಅಭ್ಯಾಸಕ್ಕಾಗಿ 45 ಪಿಚ್‌ಗಳು, ವಿಶ್ವದರ್ಜೆಯ ಮೈದಾನಗಳು, ಒಳಾಂಗಣ ಪಿಚ್‌ಗಳು ಮತ್ತು ಒಲಿಂಪಿಕ್ಸ್ ದರ್ಜೆಯ ಈಜುಕೊಳ ನಿರ್ಮಿಸಲಾಗಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

'ಅಕಾಡೆಮಿಯ ಸೌಲಭ್ಯಗಳು ಸಿದ್ಧಗೊಂಡಿವೆ. ಶೀಘ್ರದಲ್ಲಿಯೇ ಉದ್ಘಾಟಿಸಲಾಗುವುದೆಂದು ತಿಳಿಸಲು ಅತ್ಯಂತ ಹರ್ಷವಾಗುತ್ತಿದೆ' ಎಂದೂ ಅವರು ಉಲ್ಲೇಖಿಸಿದ್ದಾರೆ.

ಇನ್ನಷ್ಟು ಕ್ರೀಡಾ ಸುದ್ದಿಗಳು 11

ಕ್ವಾರ್ಟರ್‌ಫೈನಲ್‌ನಲ್ಲಿ 0–1 ರಿಂದ ಸೋತ ಅರ್ಜೆಂಟೀನಾ

'ಪ್ರತಿಕಾರದ ಪಂದ್ಯ'ದಲ್ಲಿ ಗೆದ್ದ ಫ್ರಾನ್ಸ್

ಪ್ಯಾರಿಸ್ (ಎಎಫ್‌ಪಿ): ಅರ್ಜೆಂಟೀನಾ ವಿರುದ್ಧ ಫ್ರಾನ್ಸ್‌ನ ಪ್ರತೀಕಾರದ ಪಂದ್ಯ ಶುಕ್ರವಾರ ರಾತ್ರಿ ಗಲಾಟೆ, ಗದ್ದಲಗಳಿಂದ ಅಂತ್ಯಗೊಂಡಿತು. ಜಾನ್‌–ಫಿಲಿಪ್ ಮಟೇಟಾ ಅವರು ಗಳಿಸಿದ ಗೋಲಿನಿಂದ ಫ್ರಾನ್ಸ್ ತೀವ್ರ ಕಾವೇರಿದ್ದ ಈ ಕ್ವಾರ್ಟರ್‌ಫೈನಲ್ ಪಂದ್ಯವನ್ನು 1–0ಯಿಂದ ಗೆದ್ದುಕೊಂಡಿತು.

ಫ್ರಾನ್ಸ್, ಈಗಾಗಲೇ ಸೆಮಿಫೈನಲ್ ತಲುಪಿರುವ ಸ್ಪೇನ್, ಮೊರಾಕೊ ಮತ್ತು ಈಜಿಪ್ಟ್ ತಂಡಗಳ ಸಾಲಿಗೆ ಸೇರಿತು.

ಆಗಸ್ಟ್ 5ರಂದು ನಡೆಯುವ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ಎದುರಾಳಿ ಈಜಿಪ್ಟ್. ಒಲಿಂಪಿಕ್ಸ್ ಇತಿಹಾಸದಲ್ಲಿ ಈಜಿಪ್ಟ್ ಇದೇ ಮೊದಲ ಬಾರಿ ನಾಲ್ಕರ ಘಟ್ಟ ತಲುಪಿದೆ. ಅದು ಮಾರ್ಸೆಯಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ 'ಪೆನಾಲ್ಟಿ ಶೂಟೌಟ್' ನಂತರ 5–4 ಗೋಲುಗಳಿಂದ (ನಿಗದಿ ಅವಧಿ 1–1) ಪರಗ್ವೆ ತಂಡವನ್ನು ಸೋಲಿಸಿತ್ತು. ಮೊರಾಕೊ 4–0 ಗೋಲುಗಳಿಂದ ಅಮೆರಿಕವನ್ನು ಸೋಲಿಸಿತ್ತು.

ಆದರೆ ಬೊರ್ಡೊದ ಕ್ರೀಡಾಂಗಣದಲ್ಲಿ ಪಂದ್ಯದ ಮುಕ್ತಾಯವಾಗುತ್ತಿದ್ದಂತೆ, ಎದುರಾಳಿ ಆಟಗಾರರು ಮತ್ತು ನೆರವು ಸಿಬ್ಬಂದಿ ಪರಸ್ಪರ ಗಲಾಟೆಗಿಳಿದರು. ಆಟಗಾರರು ಪಿಚ್‌ನಿಂದ ಹೊರಹೋಗುವವರೆಗೆ ಉದ್ವಿಗ್ನ ವಾತಾವರಣ ನೆಲೆಸಿತು. ಆತಿಥೇಯ ಪ್ರೇಕ್ಷಕರೂ ಒಕ್ಕೊರಲಿನಿಂದ ತಮ್ಮ ತಂಡವನ್ನು ಬೆಂಬಲಿಸಿದರು.

ಜುಲೈ ಮಧ್ಯದಲ್ಲಿ ನಡೆದ ಕೊಪಾ ಅಮೆರಿಕ ಫೈನಲ್ ಪಂದ್ಯದ ನಂತರ ಅರ್ಜೆಂಟೀನಾ ಆಟಗಾರರು ಸಂಭ್ರಮಾಚರಣೆ ವೇಳೆ ಜನಾಂಗೀಯ ನಿಂದನೆಯ ಗೀತೆ ಹಾಡಿದ್ದರು. ಇದು ಫ್ರಾನ್ಸ್‌ನ ಪ್ರಮುಖ ಆಟಗಾರ ಕೀಲಿಯನ್ ಎಂಬಾಪೆ ಮತ್ತಿತರರನ್ನು ಗುರಿಯಾಗಿಸಿತ್ತು. ಈ ಬಗ್ಗೆ ತನಿಖೆ ನಡೆಸುವುದಾಗಿ ಫಿಫಾ ಹೇಳಿತ್ತು. ಹೀಗಾಗಿ ಇತ್ತಂಡಗಳು ಈ ಪಂದ್ಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದವು.

2022ರಲ್ಲಿ ವಿಶ್ವಕಪ್ ಫೈನಲ್‌ನಲ್ಲಿ ಈ ಎರಡು ತಂಡಗಳು ಎದುರಾಗಿದ್ದ ವೇಳೆ, ಅರ್ಜೆಂಟೀನಾ ಪೆನಾಲ್ಟಿಯಲ್ಲಿ ಪಂದ್ಯ ಗೆದ್ದಿತ್ತು. ಪಂದ್ಯದ ಐದನೇ ನಿಮಿಷ ಮಟೇಟಾ ಅವರಿಂದ ಬಂದ 'ಕಾರ್ನರ್'ನಲ್ಲಿ ಮೈಕೆಲ್ ಒಲಿಸ್ ಗೋಲ್‌ಪೋಸ್ಟ್ ಸನಿಹದಿಂದ ಚೆಂಡನ್ನು ಬಲೆಯೊಳಕ್ಕೆ ಆಕರ್ಷಕವಾಗಿ ಹೆಡ್ ಮಾಡಿದರು.

ಪಂದ್ಯ ಮುಗಿದ ಕೆಲವೇ ಕ್ಷಣಗಳಲ್ಲಿ ಅರ್ಜೆಂಟೀನಾ ಆಟಗಾರರ ಬೆಂಚ್‌ನತ್ತ ತೆರಳಿ ಪ್ರಚೋದಿಸಿದ್ದಕ್ಕೆ ಫ್ರೆಂಚ್ ಮಿಡ್‌ಫೀಲ್ಡರ್ ಎಂಜೊ ಮಿಲೊಟ್ ಅವರಿಗೆ 'ರೆಡ್ ಕಾರ್ಡ್' ದರ್ಶನವಾಯಿತು.

ಆದರೆ ಈ ನಿರ್ಧಾರದ ಬಗ್ಗೆ ಫ್ರಾನ್ಸ್ ಕೋಚ್ ಥಿಯರಿ ಹೆನ್ರಿ ಅಸಮಾಧಾನಗೊಂಡರು. 'ಹೂಟರ್' ನಂತರ ಪಿಚ್‌ನಿಂದ ಆಚೆಯಿರುವಾಗ ಕಾರ್ಡ್ ತೋರಿಸಿದ್ದಕ್ಕೆ ಆಕ್ಷೇಪಿಸಿದರು.

ಡುರಾಂಡ್ ಕಪ್: ಬಿಎಫ್‌ಸಿಗೆ ಎರಡನೇ ಜಯ

ಬೆಂಗಳೂರು: ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡ 133ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಇಂಟರ್ ಕಾಶಿ ಎಫ್‌.ಸಿ ವಿರುದ್ಧ 3–0 ಗೋಲುಗಳಿಂದ ಸುಲಭ ಜಯ ಸಾಧಿಸಿತು.

ಶನಿವಾರ ನಡೆದ 'ಬಿ' ಗುಂಪಿನ ಪಂದ್ಯವು ಏಕಪಕ್ಷೀಯವಾಗಿತ್ತು. ಬಿಎಫ್‌ಸಿ ಪರವಾಗಿ 17ನೇ ನಿಮಿಷದಲ್ಲಿ ಎಡ್ಗರ್ ಮೆಂಡೆಜ್, 77ನೇ ನಿಮಿಷದಲ್ಲಿ ಆಲ್ಬರ್ಟೊ ನೊಗುರಾ ಮತ್ತು 83ನೇ ನಿಮಿಷದಲ್ಲಿ ನಾಯಕ ಸುನಿಲ್ ಚೆಟ್ರಿ ಚೆಂಡನ್ನು ಗುರಿ ಸೇರಿಸಿದರು.

ಬುಧವಾರ ಮೊದಲ ಪಂದ್ಯದಲ್ಲಿ ಬಿಎಫ್‌ಸಿ 4–0ರಿಂದ ಇಂಡಿಯನ್ ನೇವಿ ಎಫ್‌ಟಿ ತಂಡವನ್ನು ಮಣಿಸಿತ್ತು. ಮಂಗಳವಾರ ಮೊಹಮದನ್ ಎಸ್‌ಸಿ ತಂಡವನ್ನು ಎದುರಿಸಲಿದೆ.